ಅರಳು-ಮರಳು



ಸಾಹಿತ್ಯ
ಅಕಾಡೆಮಿಯಿಂದ
ಪುರಸ್ಕೃತ ಕೃತಿ

ಅಂಬಿಕಾತನಯದತ್ತ



ದತ್ತಾತ್ರೇಯ ರಾಮಚಂದ್ರ ಬೇಂದ್ರೆ

ಅರಳು - ಮರಳು

ಅರಳು-ಮರಳು

(ಪಂಚಕಾವ್ಯಗುಚ್ಛ)

★

ಅಂಬಿಕಾತನಯದತ್ತ

★

ಪ್ರಕಾಶಕರು :

ಸಮಾಜ ಪುಸ್ತಕಾಲಯ, ಶಿವಾಜಿ ಬೀದಿ

ಧಾರವಾಡ

ಬೆಲೆ :

ಸಾದಾ ಪ್ರತಿ : ೧೦.೦೦ (ಲೈಬ್ರರಿ ಪ್ರತಿ : ೧೨.೦೦)

ಪ್ರಥಮ ಮುದ್ರಣ : ೧–೧೧–೧೯೫೭

ದ್ವಿತೀಯ ಮುದ್ರಣ : ೧–೧–೧೯೬೯

ಪ್ರಕಾಶಕರು :

ಮನೋಹರ ಘಾಣೇಕರ, ಬಿ. ಎ., ಬಿಕಾಂ.

ಸಮಾಜ ಪುಸ್ತಕಾಲಯ, ಧಾರವಾಡ–೧

ಮುದ್ರಕರು :

ರವೀಂದ್ರ ಘಾಣೇಕರ, Dip. in Print. (Tech.)

ಪ್ರತಿಭಾ ಮುದ್ರಣ, ಧಾರವಾಡ–೧

ಅ ರ್ಪ ಣ

ಶ್ರೀಮಾತೆಗೆ—

ಧಾರವಾಡದ ತಾಯಿಗೆ—

ಕವಿ ವಿಶ್ವವಿದ್ಯಾಲಯದ ಕುಲಪತಿಗಳಿಗೆ—

ಸವಿನಯ ಸಮರ್ಪಿತ

—ಅಂದತ್ತ

ಮುನ್ನುಡಿ

೧

ಅಂಬಿಕಾತನಯದತ್ತರ **ಅರಳು-ಮರಳಿಗೆ** ಈ ಮುನ್ನುಡಿಯನ್ನು ಬರೆಯುವದು ದೊಡ್ಡ ಹೊಣೆಗಾರಿಕೆ. ಈಗ ಮೂವತ್ತು ವರ್ಷಗಳಿಗೆ ಮೇಲ್ಪಟ್ಟು ಅವರ ಕಾವ್ಯದ ಆಳದಲ್ಲಿ ಮಿಂದಿದ್ದರೂ ಅದರ ಗಭೀರತೆ ಇನ್ನೂ ಹೆಚ್ಚುತ್ತಿದೆ. ಅದರ ಆಳವನ್ನೆಲ್ಲ ನಾನು ಅಳೆದಿದ್ದೇನೆಂದು ಹೇಳಲಾಗುವದಿಲ್ಲ. ಅವರ ವಿಸ್ತಾರಗಳನ್ನೆಲ್ಲ ವಿಚಿಕಿತ್ಸಿಸಿದ್ದೇನೆಂದು ನಾನು ತಿಳಿಯಲಾರೆ. ಏಕೆಂದರೆ ಆಳದ ಅರಿವು ನನ್ನಲ್ಲಿ ಹೆಚ್ಚಾದಂತೆ ಅವರ ಕಾವ್ಯದ ಆಳ ಇನ್ನಿಷ್ಟು ಆಳವಾಗತೊಡಗಿ ಅದರ ವಿಸ್ತಾರ ಇನ್ನೂ ವಿಸ್ತೃತವಾಗಹತ್ತಿದೆ.

ಇಲ್ಲಿ ಮುಖ್ಯವಾದುದು ಕವಿಯ ಆರ್ಷದೃಷ್ಟಿ. ಹೀಗೆಂದೊಡನೆ ಬೇಂದ್ರೇಯವರನ್ನು ಋಷಿಗಳೆಂದು ನಾನು ಕರೆದೆನೆಂದು ನೂರೂ ಆಕ್ಷೇಪಣೆಗಳು ಏಳಬಹುದು. ಬೇಂದ್ರೆಯವರು ಸಾಧಕರು ನಿಜ. ಅದಕ್ಕಿಂತಲೂ ಹೆಚ್ಚೆಂದು ಅವರೇ ಒಪ್ಪುವದಿಲ್ಲ. ಆದರೆ ಅವರಲ್ಲಿ ಅಂಬಿಕಾತನಯದತ್ತನೆಂಬ ವರಕವಿ ಗೂಡುಗಟ್ಟಿದ್ದಾನೆ. ಬೇಂದ್ರೆಯವರ ಸಾಧನೆಯಲ್ಲಿ ಸಿದ್ಧವಾದುದೆಲ್ಲ—ಉಂಡ, ಕಂಡ ಬದುಕೆಲ್ಲ—ಈ ಕವಿಯ ಸ್ಫೂರ್ತವಾಣಿಯಲ್ಲಿ ಕಾವ್ಯವಾಗಿ ಉಕ್ಕಿ ಬರುತ್ತದೆ. ಒಂದು ರೀತಿಯಿಂದ ಅಂಬಿಕಾತನಯದತ್ತನೇ ಬೇಂದ್ರೆಯವರನ್ನು ಸಾಧನೆಯ ಮಾರ್ಗದಲ್ಲಿ ಮುಂದುವರಿಸಿದ್ದಾನೆ. ಇನ್ನೊಂದು ದೃಷ್ಟಿಯಿಂದ ಬೇಂದ್ರೆಯವರೇ ಅಂಬಿಕಾತನಯದತ್ತನ ಸಿದ್ಧಿಗೆ ಸಾಧನಗಳನ್ನು ಒದಗಿಸುತ್ತಿದ್ದಾರೆ. ಬೇಂದ್ರೆಯವರು ಸೂತ್ರಧಾರನಾದ ಬಾಲಕ. ಅಂಬಿಕಾತನಯದತ್ತ ಅಂತರಿಕ್ಷದಲ್ಲಿ ತೂಗಾಡುವ ಗಾಳಿಪಟ. ಬೇಂದ್ರೆಯವರು ಇಪ್ಪತ್ತನೆಯ ಶತಮಾನದ ಭಾರತದ—ಕನ್ನಡನಾಡಿನ—ನಾಗರಿಕರು. ಅಂಬಿಕಾತನಯದತ್ತ ವಿಶ್ವಮಾನವ, ವಿಶ್ವದ ನಾಗರಿಕ. ಆತ ಹೇಳಿದ ಪ್ರಯೋಗಗಳನ್ನು ಬೇಂದ್ರೆಯವರು ಜೀವನದಲ್ಲಿ ನಡೆಯಿಸುತ್ತಾರೆ. ಇವರು ತಿಳಿಸಿದ ಫಲಿತಾಂಶಗಳನ್ನು ಅಂತರಿಕ್ಷದಲ್ಲಿ ಸಿರ್ಪಿಕಾರವಾಗಿ ಪರೀಕ್ಷಿಸಿ ಉಳಿಯಬಲ್ಲ

ನನ್ನಿಗಳನ್ನು ಅಂಬಿಕಾತನಯ ಉಕ್ತಿಸುತ್ತಾನೆ; ಅಳಿಯುವಂಥವನ್ನು ತೂರಿ ಬಿಡುತ್ತಾನೆ. ಇಷ್ಟೇ ಅಲ್ಲ, ಅಂತರಿಕ್ಷದಲ್ಲಿ ಅಲೆದಾಡುವ ದಿವ್ಯ ಸಂದೇಶ ಗಳನ್ನು ಗ್ರಹಿಸಿ ಬೇಂದ್ರೆಯವರಿಗೆ ಅವುಗಳನ್ನು ಬರೆದುಕೊಳ್ಳಲು ಹೇಳುತ್ತಾನೆ. ಇವನ್ನೆಲ್ಲ ಲಕ್ಷಿಸಿಯೇ 'ಆರ್ಷದೃಷ್ಟಿ' ಎಂಬ ಮಾತನ್ನು ಇಲ್ಲಿ ನಾನು ಬಳಸಿ ದ್ದೇನೆ.

ಬೇಂದ್ರೆಯವರ ಅರವತ್ತರ ಅರಿವನ್ನು ಅಡಿನೆಲವಾಗಿರಿಸಿಕೊಂಡು ಇಲ್ಲಿ ಅಂಬಿಕಾತನಯದತ್ತನ ಅರಳು-ಮರಳು ಹಬ್ಬಿದೆ. ಅನಂತ್ಯದ ದೃಷ್ಟಿಕೋನ ದಿಂದ ಇಲ್ಲಿ ವಿಶ್ವದ ಹಾಗು ನಿಸರ್ಗದ ಚೆಲವು-ಗೆಲವುಗಳ ಹಾಗು ನೋವು-ಪಾಪಗಳ ನಿರೂಪಣೆಯಿದೆ. ಇದೇ ದೃಷ್ಟಿಯಿಂದ ವಿಶ್ವಮಾನವನು ಇಲ್ಲಿ ಜಗ ತ್ತಿನ, ಭಾರತದ ಹಾಗು ಕನ್ನಡ ನಾಡಿನ ಪ್ರಶ್ನೆಗಳನ್ನು ಪರಿಕಿಸಿದ್ದಾನೆ; ವ್ಯಕ್ತಿ-ಸಮಾಜಗಳ ದೈವ-ದುರ್ದೈವಗಳ ಮೇಲೆ ಬೆಳಕು ಕೆಡವಿದ್ದಾನೆ. ನಮ್ಮ ಸುತ್ತು-ಮುತ್ತಣ ಪ್ರಶ್ನೆಗಳನ್ನು ಇಂಥಹ ದೃಷ್ಟಿಯ ಬೆಳಕಿನಲ್ಲಿ ನೋಡುವ ಅವಕಾಶ ದೊರೆತಿರುವದು ನಮ್ಮ ನಾಡಿನ ಹಾಗು ನಮ್ಮ ತಲೆಮಾರಿನ ಪುಣ್ಯ. ಉಳಿದ ಪ್ರಾಂತಗಳಲ್ಲಿಯ ಜನತೆ ಅಲ್ಲಲ್ಲಿ ಈ ಕಾವ್ಯದ ರಸಸ್ಪರ್ಶವನ್ನು ಪಡೆ ದಿದೆ. ಇದಕ್ಕೂ ಮುಂದಿನ ಈ ಕಾವ್ಯದ ಕೀರ್ತಿ ನಮ್ಮ ನಾಡಿನ ಜೀವನದ ವಿಕಾಸವನ್ನೇ ಅವಲಂಬಿಸಿದೆ.

ಅಂಬಿಕಾತನಯದತ್ತರು ಹಾಡಲು ದನಿಯೆತ್ತಿದಾಗ ಇಂದಿನ ಕಾವ್ಯವು ಇನ್ನೂ ಮೂಡುವದರಲ್ಲಿತ್ತು. ಈಗ ನೂರು ಸ್ವರಗಳಾಗಿ ಆ ಗಾನ ಕೇಳಿ ಸುತ್ತಿದೆ. ಕನ್ನಡನಾಡು ಅಂದು ಹರಿದು ಹಂಚಿತ್ತು; ಇಂದು ಅದು ಬಹು ಮಟ್ಟಿಗೆ ಏಕೀಕೃತವಾಗಿದೆ. ಅಂದು ಕನ್ನಡದ ಸರ್ವತೋಮುಖ ಪ್ರಗತಿಗಾಗಿ ದುಡಿಯುವವರೇ ಇರಲಿಲ್ಲ. ಇಂದು ನೂರಾರು ತರುಣರು ಆ ಕೆಲಸಕ್ಕಾಗಿ ವೀರ್ಯವೆತ್ತಿದ್ದಾರೆ. ಅಂದು ಭಾರತ ಪರತಂತ್ರವಾಗಿತ್ತು. ಇಂದು ಅದು ದೇವಕರುಣೆಯಿಂದ ಸ್ವತಂತ್ರವಾಗಿದೆ. ಈ ಎಲ್ಲ ಘಟನೆಗಳಿಂದ ಬೇಂದ್ರೆ ಯವರಿಗೆ ತಮ್ಮ ಜೀವನದಲ್ಲಿ ಒಂದು ಸಫಲತೆ ಕಂಡಿದ್ದರೆ ಆಶ್ಚರ್ಯವಲ್ಲ. 'ನೆನಪು' ಎಂಬ ಕವಿತೆಯಲ್ಲಿ ಸಫಲತೆಯ ಈ ಭಾವ ಪ್ರಸನ್ನವಾಗಿ ತಲೆ ಯೆತ್ತಿದೆ.

೨

ಅಂಬಿಕಾತನಯದತ್ತರ ಕಾವ್ಯ ತನ್ನದೇ ಆದ ಒಂದು ಪರಂಪರೆಯನ್ನು ಕನ್ನಡದಲ್ಲಿ ನಿರ್ಮಿಸಿಕೊಂಡಿದೆ. 'ಗರಿ', 'ನಾದಲೀಲೆ', 'ಕನ್ನಡ ಮೇಘ ದೂತ' ಮೊದಲಾದ ಅವರ ಕವನಸಂಗ್ರಹಗಳನ್ನು ಓದಿ ಇಲ್ಲವೆ ಕೇಳಿ ಸವಿದ ನಾಡೆಲ್ಲ ಈ ಪರಂಪರೆಯನ್ನು ಬಲ್ಲದು. 'ಅರಳು-ಮರಳು' ಸಂಗ್ರಹದಲ್ಲಿಯ ಕಾವ್ಯ ಈ ಪರಂಪರೆಯಲ್ಲಿಯೂ ಮುಂದುವರಿದಿದೆ. ಷಟ್ಪದಿಯಲ್ಲಿ ಬೇಂದ್ರೆ ಯವರು ಬರೆಯಲು ಪ್ರಾರಂಭಿಸಿದ್ದರು. ಇಲ್ಲಿ ಒಂದೆರಡು ವಾರ್ಧಕ ಷಟ್ಪದಿ ಕವನಗಳೂ ಇವೆ. ಅಕ್ಷರವೃತ್ತವೂ ಒಂದೆರಡು ಎಡೆಗೆ ಲಹರಿ ಲಹರಿಯಾಗಿ ಬಂದಿದೆ. ಅವರ ಅಷ್ಟಷಟ್ಪದಿಗಳ ಕ್ಷುರಧಾರೆಯ ಪರಿಚಯವಿದ್ದವರಿಗೆ 'ಸಕಲ', 'ವಸುಧಾ', 'ಸ್ಥಿರೆ-ತಿರೆ' ಮೊದಲಾದ ಅಷ್ಟಷಟ್ಪದಿಗಳಿಂದ ಒಂದು ವಿಶೇಷ ಆನಂದವಾಗುವುದರಲ್ಲಿ ಸಂಶಯವಿಲ್ಲ. ಜಾನಪದ ಗೀತಗಳ ಚಕ್ರವರ್ತಿ ಗಳಾದ ಬೇಂದ್ರೆಯವರು 'ಟೊಂಕದ ಮ್ಯಾಲ ಕೈಯಿಟಗೊಂಡು' ಮೊದ ಲಾದ ಉತ್ತಮ ಕಾಣಿಕೆಗಳನ್ನು 'ಕುಬ್ಬಳ್ಳಿಯಾಂವಾ'ದ ದಾರಿಯಲ್ಲಿ ನೀಡಿ ದ್ದಾರೆ. ಓರ್ವ ವ್ಯಕ್ತಿ ಇಲ್ಲವೆ ಒಂದು ಸನ್ನಿವೇಶದ ವರ್ಣನೆ ಸರ್ವಾಂಗ ಸುಂದರವಾದಾಗ ಪ್ರತೀಕಮಯವೂ ಆಗುತ್ತದೆಂಬುದನ್ನು ನಾವಿಲ್ಲಿ ಲಕ್ಷಿಸ ಬೇಕಾಗಿದೆ. 'ಹುಚ್ಚನ ಹಾಡು' ಹಾಗೂ 'ಬಿಚ್ಚುಮಾತು' ಇದೇ ದಾರಿ ಯಲ್ಲಿಯ ಹೊಸ ಪ್ರಯೋಗಗಳನ್ನು ಸೂಚಿಸುತ್ತವೆ. 'ಕಗ್ಗ' ಎಂಬ ಕವಿತೆ ಈ ಜಾಡಿನಲ್ಲಿಯೇ ತೀರ ಸ್ವತಂತ್ರವಾದ ಕವಿತೆಯಾಗಿದ್ದು, ಸಿದ್ಧಹಸ್ತನಾದ ಕವಿ ಜಾನಪದದ ಧಾಟಿ-ಶೈಲಿಗಳನ್ನು ತನ್ನ ದರ್ಶನದ ಅಭಿವ್ಯಕ್ತಿಗೆ ಹೇಗೆ ವಿಲಾಸಪೂರ್ಣವಾಗಿ ಉಪಯೋಗಿಸಬಹುದೆಂದು ನಾವಿಲ್ಲಿ ಕಾಣಬಹುದು. 'ಬಿದಿಗೆಚಂದ್ರ ಬಂದ ನೋಡು' ಹಾಗೂ 'ಚಿಟ್ಟಗುಬ್ಬಿ ಚಿಂವು ಚಿಂವು' ಎಂಬ ಬಾಲಗೀತಗಳು 'ಕರಿಮರಿನಾಯಿ', 'ಪಾತರಗಿತ್ತಿ ಪಕ್ಕಾ' ಮೊದಲಾದ ಕೃತಿಗಳ ವರ್ಗವನ್ನು ಸಿಂಗರಿಸಿವೆ. ಬಾಲಗೀತಗಳು ಬಾಲಿಶವಾಗುವ ಭಯ ಅಷ್ಟಿಷ್ಟಲ್ಲ. ಆದರೆ ಎಂತಹ ಪ್ರೌಢರೂ ತಲೆದೂಗುವಂತೆ ಈ ಕವಿತೆಗಳ ತಿರುಳು ಮೂರ್ತಿಗೊಂಡು ನಿಂತಿದೆ. ಕಾಲಿದಾಸನ ಪ್ರತಿಭೆಯನ್ನು ಕನ್ನಡಕ್ಕೆ ತಿರುಗಿಸಿದ ಬೇಂದ್ರೆಯವರು 'ರಮಣಹೃದಯ', 'ಅಮೃತಾನುಭವ',

‘ಆನಂದಲಹರಿ ’ ಹಾಗೂ ‘ಓಮರ’ ಮೊದಲಾದ ಕವನಗಳಲ್ಲಿ ಇನ್ನೂ ಅನೇಕ ಪ್ರತಿಭಾಶಾಲಿಗಳ ಸಾರಸ್ವತ ಸಂಪತ್ತನ್ನು ಕನ್ನಡಕ್ಕೆ ತಿರುಗಿಸಿದ್ದಾರೆ. ಈ ಅನುವಾದಗಳಲ್ಲಿ ಪ್ರಸರವತಾರದ ಕಳೆಯಿದೆ. ಬೇಂದ್ರೆಯವರ ಶ್ಲೇಷಪ್ರಿಯತೆ ಇಂತಹ ಕವನಗಳ ತಲೆಕಟ್ಟಿನಲ್ಲಿಯೂ ವ್ಯಕ್ತವಾಗದೆ ಇಲ್ಲ. ‘ಓಮರ’ ಎಂದರೆ ಅವರಿಗೆ ಸಮಾಧಾನವಿಲ್ಲ. ‘ಓ–ಮರ’ ಎಂದು ವಿಂಗಡಿಸಿ ತೋರಿಸಿದಾಗ ಅವರಿಗೆ ಪೂರ್ತಿ ಸಮಾಧಾನವಾಗುತ್ತದೆ. ಚೈತ್ಯಾಲಯ ಎಂಬ ಭಾಗ ಶ್ರೀ ಅರವಿಂದರ ಅನೇಕ ಕವನಗಳ ಅನುವಾದಗಳಿಗಾಗಿ ಮೀಸಲಾಗಿದೆ ಎನ್ನಬಹುದು. ಕಾಳಿದಾಸನ ರಸವಂತಿಕೆಗಿಂತ ಮಿಗಿಲಾದ ಒಂದು ರಸಪಾಕ ಇಂತಹ ಕವನಗಳಲ್ಲಿದೆ. ಇಲ್ಲಿಯ ಅನುವಾದಗಳಲ್ಲಿ ಬೇಂದ್ರೆಯವರು ಅದೃಶ್ಯಮಯವಾದುದನ್ನು ಅನ್ಯಾದೃಶವಾಗಿ, ದೃಶ್ಯಮಯವಾಗಿಸುವ ಪವಾಡವನ್ನು ಮೂಲದಲ್ಲಿಯಂತೆ ಸಾಧಿಸಿದ್ದಾರೆ. ಶ್ರೀ ಅರವಿಂದರ ‘ಸಾವಿತ್ರಿ’ ಎಂಬ ಮಹಾಕಾವ್ಯದ ಕೆಲವೊಂದು ಸಾಲುಗಳ ಅನುವಾದವೂ ಇಲ್ಲಿದೆ. ಆದರೆ ನವೋನವವಾದ ಈ ಮಹಾನಿರ್ಮಿತಿಯ ಫಲ ಅಂಬಿಕಾತನಯದತ್ತರಿಗೂ ಸಿಲುಕಲಿಲ್ಲ. ವಿಸ್ಮಿತರಾದ ಅವರ ಉದ್ಗಾರ ಈ ವಿಷಯವನ್ನು ಕುರಿತು ಕೆಲವೊಂದು ಕವನಗಳಲ್ಲಿ ಮೂಡಿದೆ. ‘ಸಾವಿತ್ರಿ’ ಮಹಾಕಾವ್ಯದ ಯುಗ ಇನ್ನೂ ಬರಬೇಕಾಗಿದೆ. ಬೇಂದ್ರೆಯವರಿತ್ತ “ಪರುವಾನಸ ಕೆಂದಾವರೆ” ಮೊದಲಾದ ಕಾಣಿಕೆಗಳನ್ನು ಅರಗಿಸಿದರೂ ನಮ್ಮ ನಾಡಿನ ಪ್ರತಿಭೆ ಇನ್ನಿನ್ನು ಉಜ್ವಲವಾದೀತು.

ಬೇಂದ್ರೆಯವರ ವಿನೋದ ವಿಡಂಬನೆಗಳು ಮೊದಲಿನಂತೆ ಇಲ್ಲಿಯೂ ಕೆಲವೊಂದು ಕೃತಿಗಳಲ್ಲಿ ಬಂದಿವೆ. ‘ಬೀದಿ ನಾಯಿ ರಾಧೆ’, ‘ಗಿರಡಿ–ಬುರಡೀ ಅವರ ಸಾಮಾಜಿಕ ತತ್ತ್ವಜ್ಞಾನ’, ‘ಅಪಾರ್ಥ ಸಮೀಕ್ಷಕರಿಗೆ’, ‘ನಿರ್ಮಕ್ಷಿಕಾ’, ‘ವಾರಪತ್ರಿಕೆ’ ಮೊದಲಾದ ಕವನಗಳು ಆದರ್ಶಮಯದ ದೃಷ್ಟಿಯಿಂದ ಇಂದಿನ ಅಪೂರ್ಣತೆಯನ್ನು ಅಳೆಯುತ್ತವೆ. ತೀರ ಸುಲಭವಾದ ರೀತಿಯಲ್ಲಿ ಒಂದು ಪ್ರತೀಕವನ್ನು ಆರಿಸಿಕೊಂಡು ಅದನ್ನು ಸುಂದರವಾಗಿ ನಿರೂಪಿಸುವ ಮಾದರಿಯೂ ಬೇಂದ್ರೆಯವರ ಕವನಗಳಲ್ಲಿ ದೊರೆಯುತ್ತದೆ. ‘ನವಯುಗಾರಂಭ’, ‘ದೀಪದ ಮಲ್ಲಿ’, ‘ಪಾದಪದ್ಮಕೆ ಪ್ರಾರ್ಥನೆ’,

'ನೃಸಿಂಹ ಪಾಹಿ ಮಾಂ' ಮೊದಲಾದ ಕವನಗಳಲ್ಲಿ ಇದನ್ನು ನಾವು ಕಾಣಬಹುದು. 'ಪ್ರತಿ ವರ್ಷದಂತೆ ಬಂತು ಶ್ರಾವಣಾ', 'ಗಾಳಿಗಳೇ' ಮೊದಲಾದ ಕವಿತೆಗಳಲ್ಲಿ ಬೇಂದ್ರೆಯವರ ಮೊದಲಿನ ಗೀತಿಕಾಮಣಿಗಳ ವಿಲಾಸವೇ ಮುಂದುವರಿದಂತೆ 'ಜಯಜಯಾ ಗಾಂಧಿಮೋಹನ', 'ಮಧ್ವ', 'ಕಾಲಿದಾಸ' ಮೊದಲಾದ ಕವಿತೆಗಳಲ್ಲಿ ಮಹಾವ್ಯಕ್ತಿಗಳ ವಿಮರ್ಶೆ ಹಾಗೂ ಉತ್ತಮ ತಿಳುವಳಿಕೆ ಇದೆ. 'ಯೌವನದ ಕನಸಿನಂತೆ' ವಚನಪುಂಜಗಳೂ 'ಕರುಳಿನ ವಚನ'ಗಳಂತೆ ಅಲ್ಲಲ್ಲಿ ಇಲ್ಲಿ ಕಣ್ಣಿಗೆ ಬೀಳುತ್ತವೆ. ನೇರವಾದ ಭಾಷೆಯಲ್ಲಿ ಮಂತ್ರದ ಮಾಂತ್ರಿಕತೆಯನ್ನು ರುದ್ರವೀಣೆಯಲ್ಲಿಯಂತೆ ಕಾಯ್ದುಕೊಂಡು ಹೋಗುವ ಭವ್ಯೋಕ್ತಿಯ ಒಂದು ಮಾದರಿ, "ಸಹಸ್ರತಂತ್ರೀ ನಿಸ್ವನದಂತೆ" ಎಂಬಲ್ಲಿ ಭವ್ಯತರವಾಗಿದೆ.

ಬೇಂದ್ರೆಯವರ ಕಾವ್ಯಪ್ರಕಾರಗಳ ವೈವಿಧ್ಯ ಎಷ್ಟೊಂದು ಸಂಕೀರ್ಣವಾಗಿಯೆಂಬುದು ಇದರ ಮೇಲಿಂದ ಗೊತ್ತಾಗಬಹುದು. ಈ ಸಂಕೀರ್ಣತೆ ಅವರ ಇಂದಿನ ಕವನಗಳಲ್ಲಿಯೂ ತಪ್ಪದೆ ಮುಂದುವರಿದಿದೆಯೆಂಬುದು ಮೇಲಿನ ಉಲ್ಲೇಖಗಳಿಂದ ಸ್ಪಷ್ಟವಾಗಬಹುದು. ಆದರೆ ಕವಿ ತಾನು ರಚಿಸಿದ ದಾರಿಯಲ್ಲಿಯೇ ಯಾವಾಗಲೂ ಮುಂದುವರಿಯುವದಿಲ್ಲ. ಪ್ರತಿಭಾಪಂತ ಕವಿ ಯಾವಾಗಲೂ ಪ್ರಯೋಗಪ್ರಿಯ, ಪ್ರಗತಿಪರ. ಮೊದಲು ಕಾಣದಿದ್ದ ಸೊಬಗಿನ ಸಾಹಸಕ್ಕೆ ಅವನು ಮತ್ತೆ ಕೈ ಹಾಕುತ್ತಾನೆ. ಅನೇಕ ನವೀನ ಕಾವ್ಯಮುಖಗಳಲ್ಲಿ ಈ ಪ್ರಗತಿಯು ಕಾಣಿಸಿಕೊಳ್ಳುತ್ತದೆ. ಬೇಂದ್ರೆಯವರ 'ಅರಳು–ಮರಳಿ'ನಲ್ಲಿ ಮರಳುವಿಕೆಯನ್ನು ಮೀರಿನಿಂತ ಅರಳುಗಳ ಚೆಂದವನ್ನೂ ನಾವೀಗ ನೋಡಬೇಕಾಗಿದೆ.

೩

'ಹೃದಯಸಮುದ್ರ', 'ಮಹಾಪ್ರಸ್ಥಾನ', 'ಇಂದ್ರಜಾಲ', 'ಚೈತ್ಯಾಲಯ', 'ಕಣಸು' ಮೊದಲಾದ ಕವನಗಳಲ್ಲಿ ನವೀನವಾದ ಅಂತರ್‌ದೃಷ್ಟಿಯೊಂದು ಫಲಿಸಿದೆ. 'ಹೃದಯಸಮುದ್ರ'ದ ಅನೇಕ ಚಮತ್ಕಾರಗಳನ್ನು ಪ್ರಜ್ಞೆಯ ಅಂತರ್‌ಲೋಕದಲ್ಲಿ ಅನುಭವಿಸಿ ಹೊಸದೊಂದು ಪ್ರತಿಮಾ ಸೃಷ್ಟಿಯನ್ನೇ ಬೇಂದ್ರೆಯವರು ಇವೇ ಮೊದಲಾದ ಕವನಗಳಲ್ಲಿ ನೀಡಿದ್ದಾರೆ.

'ಚತುರ್ಮುಖ ಸೌಂದರ್ಯ', 'ಹಸಿ ಹಂಬಲ' ಮೊದಲಾದ ಕೃತಿಗಳಲ್ಲಿ ಈ ಅಂತರ್ಲೋಕ ಅಲ್ಲಲ್ಲಿ ಕಾಣಿಸಿಕೊಂಡಿತ್ತು. ಆದರೆ ಅವರ ಕಾವ್ಯದಲ್ಲಿ ಈವೀಗ ಬರಿ ಒಂದೊಂದು ಮೂರ್ತಿಯು ಆಲಯವಾಗದೆ, ಮೂರ್ತಿಶಿಲ್ಪದ ಒಂದು ಶಿಲ್ಪ ಶಾಲೆಯಂತೆ ಸಮೃದ್ಧವಾಗಿದೆ. ಎರಡನೆಯದಾಗಿ, 'ಇರುವೆ', 'ಅರಿವೆ', 'ಅದೇ ದೇವ', 'ಕೇಳಿರೊಂದು ಸೋಜಿಗ', 'ಪಾರ್ವತಿ ಸೀನೇ ಸಲುಹು', 'ಕೇಳಿ ನುಡಿ', 'ಕಣಿಕೆ' 'ಕಿಡಿಕಿಡಿ', 'ಬಿಡಿಮುತ್ತು' 'ವೈತಂಡವಾದ' ಮೊದಲಾದ ಕವಿತೆಗಳಲ್ಲಿ ಪರಿಣತ ಜ್ಞಾನದ ಮಿತ್ರಸಮ್ಮಿತ, ತಿಳಿತಿಳಿಯಾಗಿ ನಿಂತು ಹಿತವಾಗಿ ಬುದ್ಧಿಗೆ ಬೆಳಕಾಗಿದೆ. ಮೂರನೆಯದಾಗಿ, ವೈದಿಕಛಂದದ 'ಸಪ್ತಕಲಾ', 'ಸ್ವಪ್ನಸೌಕೆ' 'ಪ್ರತೀಕ್ಷಾ-ಸಮಾಧಿ' ಮೊದಲಾದ ಕವಿತೆಗಳಲ್ಲಿ ಕವಿಯು ತಾಳಲಿರುವ ಹೊಸತೊಂದು ನೆಲೆಯನ್ನು ಗುರುತಿಸಿದ್ದು ನಮಗೆ ಅವಗತವಾಗುತ್ತದೆ. ಈ ನವೀನ ಛಂದಸ್ಸಿಗೆ ಅನುರೂಪವಾಗಿ ಭವ್ಯವಾದ ಒಂದು ಕಾವ್ಯವಸ್ತುವನ್ನು ಹೊಂದಿಕೊಂಡು 'ಸಪ್ತಕಲಾ' ಎಂಬ ಅವರ ಕವನವು ತಲೆಯೆತ್ತಿದೆ. 'ಹೆಣದ ಹಿಂದೆ'. 'ತುತ್ತಿನ ಚೀಲ', 'ದಶಾವತಾರ', 'ಮೊದಲಗಿತ್ತಿ' ಮೊದಲಾದ ಕವನಗಳ ವಸ್ತುಗಳಲ್ಲಿ ಕಂಡುಬರುವ ಭವ್ಯತೆಯೂ ವಿಶ್ವವಿಶಾಲತೆಯೂ ಈ ಕವನದಲ್ಲಿ ರೂಪ ತಾಳುತ್ತವೆ. ಒಂದು ಕಾವ್ಯಶೃಂಗದಿಂದ ಇಷ್ಟೇ ಉನ್ನತವಾದ ಇನ್ನೊಂದು—ಆದರೆ ನವೀನವಾದ—ಕಾವ್ಯಶೃಂಗಕ್ಕೆ ಕವಿಯು ಹೇಗೆ ಕ್ರಮಿಸಬಲ್ಲನೆಂಬುದು 'ಸಪ್ತಕಲಾ' ಎಂಬ ಕವನದಿಂದ ನಾವು ತಿಳಿಯಬಹುದು. ನಾಲ್ಕನೆಯದಾಗಿ, 'ಸಂಖ್ಯಾಂಕಿತ' ಎಂಬ ಕವನದಲ್ಲಿ ಸಾಂಖ್ಯವನ್ನೇ ಉತ್ತಮ ಕಾವ್ಯವಾಗಿ ಪರಿವರ್ತಿಸುವ ಇನ್ನೊಂದು ಪವಾಡ ನಮ್ಮ ಕಣ್ಣಿಗೆ ಬೀಳುತ್ತದೆ. ಕಾವ್ಯವು ಅಲಂಕೃತಸೌಂದರ್ಯವಾಗಿದ್ದರೆ ಭೂಮಿತಿಯು ನಿರಾಭರಣ ಸೌಂದರ್ಯವೆಂದು ಒಬ್ಬ ಅಮೇರಿಕನ್ ಕವಿ ಸೂಚಿಸಿರುವದುಂಟು. ಈ ನಿರಾಭರಣ ಸೌಂದರ್ಯ ಸಂಖ್ಯಾಂಕಿತದಲ್ಲಿ ತಾನೆತಾನಾಗಿ ನಿಂತಿದೆ. ಐದನೆಯದಾಗಿ, 'ಊರು ಮತ್ತು ಖಾಲ್ಡಿಯಾ', 'ಮಧುವಾತಾ ಋತಾಯತೇ' ಹಾಗೂ 'ದರಿದ್ರನಾರಾಯಣ' ಎಂಬ ಕವನಗಳಲ್ಲಿ ಇನ್ನೊಂದು ಕಾವ್ಯಪ್ರಕಾರವನ್ನು ನಾವು ಕಾಣುತ್ತೇವೆ. ಇಲ್ಲಿ ಭಾವಗೀತದ ಚೆಲುವಿನೊಡನೆ ವಿಡಂಬನೆಯ ಒಗರು ಅವಿರಳವಾಗಿ ಬೆರೆತುಕೊಂಡಿದೆ. ಬೆರಕೆ ಶೈಲಿಯಲ್ಲಿಯೂ ಚಿತ್ರ

ಸೃಷ್ಟಿಯಲ್ಲಿಯೂ ಸಹ ಕಂಡುಬರುತ್ತದೆ. ಈ ಕವನಗಳಲ್ಲಿ ಪರಿಯ ಮೇಲೆ ಪರಿಯಿದ್ದು ಒಂದು ವಿಧದ ಲಹರಿಯಿಂದ ಇನ್ನೊಂದು ಮೂಡಿನ ಲಹರಿಗೆ ಸಹಜವಾದ ಸಂಕ್ರಮಣವಾಗಿ ನವೋನವವಾದ ಒಂದು ಕಾವ್ಯಸಿದ್ಧಿ ಸಂಭವಿಸುತ್ತದೆ. ನವ್ಯಕಾವ್ಯದ ಮಾದರಿಯನ್ನು ಅಂಬಿಕಾತನಯದತ್ತನ ಪ್ರತಿಭೆ ಅರಗಿಸಿಕೊಂಡ ರೀತಿ ಇದು.

ತನ್ನ ಮಾನಮ್ಮಿಯ ದಿಬ್ಬದ ಮೇಲೆ ಕುಳಿತು ಪ್ರತಿಭಾವಂತನಾದ ಕವಿ ಬರಿ ತನ್ನ ಹಿಂದಿನ ವಿಜಯದಶಮಿಗಳನ್ನು ನೆನಸಿಕೊಂಡು ಕಾಲಕಳೆಯುವದಿಲ್ಲ. ಬೇರೆ ದಿಗ್ವಿಜಯಗಳ ಸಾಹಸಕ್ಕೆ ಕೈಹಾಕುತ್ತಾನೆ. ಇಂತಹ ಅನೇಕ ಹೊಸ ಹೊಂಚುಗಳನ್ನು ಈ ಸಂಗ್ರಹದಲ್ಲಿ ನಾವು ಕಾಣುತ್ತೇವೆ.

೪

ಕವಿಯ ಜೀವನದೃಷ್ಟಿ ಕಾಲಾಂತರದಲ್ಲಿ ಹೇಗೆ ವಿಕಾಸಗೊಂಡಿದೆ ಎಂಬುವನ್ನು ನಾವಿಲ್ಲಿ ಕಾಣಬಹುದು. ಕವಿಯ ಶ್ರದ್ಧೆ ಇನ್ನಿಷ್ಟು ಆಳವಾಗಿ ಬೆಳೆದು ನಿರ್ಭರತೆಯನ್ನು ಪಡೆದು ಇಲ್ಲಿಯ ಅನೇಕ ಕವನಗಳಲ್ಲಿ ಗುಡಿಗಟ್ಟಿದೆ.

" ಮಾರ್ತಂಡಮಂಡಲದ ಅಂಡವನು ಪುಟಗೊಳಿಸಿ
ಹಂಸಜಾತಿಯ ಜೀವ-ಜಾತಿ ತೆರೆದವಳು "

ಎಂದು ಅವರು ಮಹಾಮಾತೆಯವರನ್ನು ಸಂಬೋಧಿಸುತ್ತಾರೆ.

" ವೇದಕ್ಕು ಹಿರಿದು ವಚನಕ್ಕು ಕಿರಿದು
ನುಡಿಕಟ್ಟ ಒಟ್ಟಬಹುದು "
" ಆ ಇರವನಿರದ ಅರಿವಾಗದೇಯೆ
ಶ್ರುತಿಯೆಂತು ಹುಟ್ಟಲಹುದು "—ಎಂದು ಅವರು ದಿವ್ಯಜೀವನದತ್ತ ಹೊರಳಿದ್ದಾರೆ. ಪ್ರಕೃತಿಪುರುಷರ ಆಟದ ರಹಸ್ಯವನ್ನು ತಿಳಿದು ಗಿರಿಶಿಖರದ ಕಡೆಗೆ ತಲೆಯೆತ್ತಿದ್ದಾರೆ. ಜೀವದೀ ತತ್ತಿಯಲ್ಲಿ ದೇವನೆಂಬ ಹಕ್ಕಿ ಕಾದುಕೊಂಡು ಕುಳಿತಿದೆಯೆಂಬುದನ್ನು ಅವರು ಅರಿತಿದ್ದಾರೆ. 'ಬಲವೆಲ್ಲ ನಂಬಿಗೆಯಲ್ಲಿ ಸೆಲೆಯುವ'ದೆಂಬ ಮಾತು ಅವರ ಅಂತರಾಳದಲ್ಲಿ ಮೂಡಿದೆ.

" ತಾಸಿನೊಂದು ತಾಸಿನಂತೆ

ಅವನು ನೀನು ನಾನೊ "— ಎಂದು ತಾನು ಎಂಬ ಸರ್ವನಾಮದಲ್ಲಿಯೂ ಅವರು ವೇದಾಂತದ ಕಾವ್ಯವನ್ನು ಇಳಿಸಿದ್ದಾರೆ.

"ಯಾವ ಪ್ರೀತಿಗಿದನಾರು ಹಡೆದರೋ
ಸೃಷ್ಟಿಕರ್ತ ಬಲ್ಲ "— ಎಂದು ಅವರು ಸೃಷ್ಟಿಯ ಗೂಢವನ್ನು ಕುರಿತು ಘೋಷಿಸುತ್ತಾರೆ. ಜಗತ್ತಿಗೆ ಹೊಸದೊಂದು ಉಷಃಕಾಲ ಬಂದಿದೆಯೆಂಬ ಅವರ ಶ್ರದ್ಧೆ ಅಚಲವಾಗಿದೆ. ನಾದದಲ್ಲಿ ಛಂದವಡಗಿರುವಂತೆ ಛಂದದಲ್ಲಿ ಜೀವವೂ, ಜೀವದಲ್ಲಿ ದೇವನೂ ಅಡಗಿದ್ದಾರೆ.

"ಅವರವರ ಕಾಲಕ್ಕೆ ಅದರದರ ಫಲವಹುದು" ಎಂಬ ತಿಳಿವು ಅವರ ಅಂತರಾಳಕ್ಕೆ ಒಂದು ಸಂತೃಪ್ತಿಯನ್ನು ತಂದಿದೆ.

"ಕಡ್ಡಿಯಲುಗದು ಆಕಸ್ಮಾತ್ತಿನಿಂದ
ಗುಡ್ಡ ಉರುಳೀತೇನು ಗುಂಡಿನಿಂದ"— ಎಂದು ಗಾಂಧೀಜಿಯವರ ಮರಣವಾರ್ತೆಯನ್ನು ಕೇಳಿದಾಗ, ಘಟನೆಗಳು ದೇವಸಂಕಲ್ಪ ಬಾಹಿರವಲ್ಲವೆಂದು ಅವರು ಸಾರುತ್ತಾರೆ.

"ಶಕ್ತಿಯಿಲ್ಲದ ಶಿವವು ಹುಸಿಯ ಶ್ರವವು" ಎಂದು ಶಿವಗರ್ಭಶಕ್ತಿಯನ್ನೂ ಅವರು ಆಹ್ವಾನಿಸುತ್ತಾರೆ.

ಸಮಾಜದ ವೈಷಮ್ಯಗಳನ್ನು ಕಂಡಾಗ ಕವಿಯ ಅಂತಃಕರಣ ಕರಗಿ ನೀರಾಗುವದುಂಟು.

"ಅನ್ನ ದಾಟಿ, ಮುಪ್ಪ ಮೀರಿ, ಸತ್ಯ ಸೇರಿದಾಗ ಆತ್ಮದ ಉದಯ" ಎಂದು ಹೇಳಿ ಈ ಕೆಳಗಿನ ಸತ್ಯಗಳನ್ನು ಸಹ ಸಮಾಜವು ಅರಗಿಸಿಕೊಳ್ಳದಿರುವದನ್ನು ನೋಡಿ ಕವಿಯು ವಿಹ್ವಲನಾಗುತ್ತಾನೆ.

"ಕಾಯಕವು ಕೈಲಾಸ, ಭಕ್ತರಿಗೆ ಉಪವಾಸ
ಶರಣರಿಗೆ ವನವಾಸ ಉಳಿವಿಹಾದಿ"— ಎಂದು ಸಮಾಜದ ಮೌಢ್ಯವನ್ನು ಕಂಡು ಅವರು ಸಂತಪ್ತರಾಗುತ್ತಾರೆ. ಜಗದಂಬೆಯನ್ನು ಈಚಲ ಮರದಮ್ಮನಾಗಿಸಿ ಜನ ಮೊರೆಹೋಗುವುದನ್ನು ಕಂಡು ಅವರು ಅಸಹ್ಯಪಟ್ಟುಕೊಳ್ಳುತ್ತಾರೆ.

"ತಾಳಿದವ ಬಾಳ್ಯಾನು, ಬದುಕಿದವ ಉಂಡಾನು
ಸರ್ವೋದಯದ ಕೊನೆಯ ಪ್ರಸ್ಥದೂಟ"—ಎಂದು ಇಂದಿನ ಯೋಜನೆಗಳ ಸಫಲತೆಗಳನ್ನು ಅವರು ಬಲವಾಗಿ ಶಂಕಿಸುತ್ತಾರೆ.

"ಇದ್ದ ಜಗಳ ಸಾಲವೆಂದು
ಹಳೆವ ಹಡ್ಡಿ ತರುವರು"—ಎಂದು ಇಲ್ಲದ ಸಲ್ಲದ ಇತಿಹಾಸವನ್ನು ಅಗಿದು ತೆಗೆಯುವ ಸಂಶೋಧಕರ ಮೇಲೆ ಅವರು ಹರಿಹಾಯುತ್ತಾರೆ. ಇಂದಿನ ಮಾನವ ಬುದ್ಧಿಯು ಕುಣಿತ ಕರಡಿ ಕುಣಿತದಂತೆ ಅನ್ನದ ದಾಸ್ಯದಲ್ಲಿದೆ.

ಆದರೆ ಒಂದು ಬಲವಾದ ಶ್ರದ್ಧೆ ಈ ವೈಷಮ್ಯಗಳೊಳಗಿಂದ ಸಹ ಕವಿಗೆ ದಾರಿಯನ್ನು ತೋರಿದೆ. ಲೋಕರಾಜ್ಯ ಉದಯವಾಗಿದೆ. ನವಯುಗ ಆರಂಭವಾಗಿದೆ. ಭಾರತಹುಣ್ಣಿಮೆ ಬಂದಿದೆ. ಮಧುವಾತಗಳು ಬೀಸಲಾರಂಭಿಸಿವೆ. ಆಗೀಗ ಯುದ್ಧ ಮನೆಯ ವರೆಗೆ ಬಂದರೂ, "ನರಮನುಷ್ಯ ಒಂದೆ ಜಾತಿ ಎಲ್ಲ ಜನಕೆ ಒಂದೆ ನೀತಿ" ಎಂಬ ನವ್ಯಜೀವನ ಬರಲಿರುವದೆಂಬುದನ್ನು ಅವರು ನಂಬಿದ್ದಾರೆ. ಅಷ್ಟದಳವಾದ ಕನ್ನಡದ ಕಮಳ ಅರಳತೊಡಗಿದೆ, ಕನ್ನಡದ ಪಾವನಪರಂಪರೆ ಮಾತೃಭೃತ್ಯನಾದ ಕನ್ನಡದ ಹುಗುವನ್ನು ಔತಣಿಸಿದೆ. ಸಿರಿಗನ್ನಡ ಭಾರತಿ ಮತ್ತೆ ತಲೆಯೆತ್ತಿದ್ದಾಳೆ.

"ಜಿನ ಹರಿ ಅಲ್ಲಾ ಶಿವನೇ ಬಲ್ಲಾ
ಒಬ್ಬನಲ್ಲದೇ ಎರಡಿಲ್ಲಾ"—ಎಂಬ ಮಾತು ಜನರ ಚಿತ್ತಭಿತ್ತಿಯಲ್ಲಾದರೂ ಮೂಡತೊಡಗಿದೆ. ಹೀಗಾಗಿ ಸಪ್ತಕಲೆಗಳು ಸಮೃದ್ಧಿಯನ್ನು ಸಂಖ್ಯಾಂಕಿತದಲ್ಲಿ ಉಕ್ತವಾದ ಅಮೃತ ತತ್ತ್ವವನ್ನು, ಜೀವನದಲ್ಲಿ ತರದೆ ಮಾಣದೆಂದು ಕವಿಯ ವಿಶ್ವಾಸವಾಗಿದೆ.

"ಸಿಂಹಮುಖಕ್ಕಿದೆ ನವಿಲಿನ ಸೋಗೆ
ಶಕ್ತಿಶಾರದೆಯ ಮೇಳದ ಹಾಗೆ!"—ಎಂದು ಒಂದು ಹೊಸ ಮೇಳವನ್ನು ಕಂಡು ಕವಿಯು ಆನಂದಿಸುತ್ತಾನೆ.

೫

ಬೇಂದ್ರೆಯವರ ಶಬ್ದಸೃಷ್ಟಿಯಲ್ಲಿ ಕೆಲವೊಂದು ಚಮತ್ಕಾರಗಳು ಜರುಗುತ್ತವೆ. ಅವುಗಳನ್ನೆಲ್ಲ ಇಲ್ಲಿ ಕ್ರೋಢೀಕರಿಸುವದಾಗದಿದ್ದರೂ ದಿಗ್ದರ್ಶನ

ಸಾಕ್ಷ್ಯ. ಶ್ಲೇಷವಿಲ್ಲದ ಭಾಷೆಯೇ ಅವರಿಗಿಲ್ಲ. 'ಸಾವಿರದ ಮನೆ' ಎಂದಾಗ ಸಾವಿರವೆಂಬ ಸಂಖ್ಯಾವಾಚಕದೊಡನೆ ಸಾವು+ಇರದ ಎಂಬ ಸಂಧಿಯು ನಮ್ಮನ್ನು ಸಂಧಿಸುತ್ತದೆ. ಪ್ರಾಸದ ಪ್ರೀತಿ ಶ್ಲೇಷದೊಡನೆ ಸೇರಿಕೊಂಡು ಪದ ಗುಂಫಗಳನ್ನು ಕಟ್ಟುತ್ತದೆ. ಎಲ್ಲೆಲ್ಲಿಯ ಕಥೆಗಳೋ ಸಂಬಂಧಗಳೋ ಬಂದು–ಬೇಂದ್ರೆಯವರನ್ನು ಆಕರ್ಷಿಸುವ ವಿಷಯವಿಲ್ಲ—ಶಬ್ದಗಳ ಆವರಣಗಳಾಗುತ್ತವೆ. ನಮಗೆ ಹೊಳೆಯುವ ಅರ್ಥಕ್ಕಿಂತ ಬೇಂದ್ರೆಯವರು ಹೇಳುವ ಅರ್ಥ ವಿಶಾಲವಾದುದು. ಅದನ್ನು ಕೇಳಿದ ಮೇಲೆ, ಇದು ನಮಗೇಕೆ ಹೊಳೆಯಲಿಲ್ಲ? ಎಂದು ನಾವು ವಿಹ್ವಲರಾಗುತ್ತೇವೆ. ಹೀಗೆ ಅವರ ಶಬ್ದಗಳಿಗೆ ಪ್ರತಿಮಾ ಮಯತೆಯಲ್ಲದೆ ಒಂದು ಬೌದ್ಧಿಕ ಉತ್ಕರ್ಷವಿದೆ. ಅದನ್ನು ತಿಳಿಯದೆ ಅವರ ಕೃತಿಗಳು ಪೂರ್ಣವಾಗಿ ತಿಳಿಯಲಾರವು. ಸಂಸ್ಕೃತದಲ್ಲಿಯ ಎಲ್ಲ ಶಾಸ್ತ್ರಗಳನ್ನೂ, ಸಿದ್ಧಾಂತಗಳನ್ನೂ ಅರಗಿಸಿಕೊಂಡು ಆ ಭಾಷೆಯೊಳಗಿನ ಸಾಂಕೇತಿಕ ಶಬ್ದಗಳನ್ನು ಒಂದು ಶಾಸ್ತ್ರದಿಂದ ಇನ್ನೊಂದು ಶಾಸ್ತ್ರಕ್ಕೆ ಹೋಗುತ್ತ ಅನಾಯಾಸವಾಗಿ ಅವರು ಉಪಯೋಗಿಸುತ್ತಾರೆ. ಮಿಲ್ಟನ್ನನ ಪಾಂಡಿತ್ಯ ಪ್ರಚುರ ಭಾಷೆಯಂತೆ ಬೇಂದ್ರೆಯವರ ಶೈಲಿಯ ವಿಶಿಷ್ಟತೆಯಿದೆ.

ಇದನ್ನೇ ಅವರ ಕಾವ್ಯರಚನಾಕ್ರಮದಲ್ಲಿಯೂ ನಾವು ಕಾಣುತ್ತೇವೆ. **ಮಧುವಾತಾ ಋತಾಯತೇ** ಮೊದಲಾದ ಕವಿತೆಗಳನ್ನು ಓದುವದೆಂದರೆ ಒಂದು ಆಳದಿಂದ ಅದರ ಕೆಳಗಿನಾಳಕ್ಕೆ ಹೋಗುವಂತೆ ನಮಗೆ ಭಾಸವಾಗುತ್ತದೆ. ಶಬ್ದಗಳು ಚಿನ್ನದ ಇಟ್ಟಿಗೆಗಳಾಗುವಂತೆ ರಚನಾಕ್ರಮ ಅದ್ಭುತ ವಾಸ್ತುಶಿಲ್ಪದ ಒಂದು ಮಂದಿರವಾಗುತ್ತದೆ. ಇದು ಹೊಳೆಯದೆ ಕಾವ್ಯದ ಪೂರ್ಣ ರಸವಂತಿಕೆ ನಮ್ಮದಾಗಲಾರದು. **ಮಧುವಾತಾದ** ಮೊದಲನೆಯ ಭಾಗದಲ್ಲಿ ಕಾವ್ಯದ ಆದರ್ಶವನ್ನು ಕುರಿತು ಅವರು ಮಾತನಾಡುತ್ತಾರೆ. ಅದ್ಭುತದ ಉದ್ಭವ, ಅದನ್ನು ಭಾಷಾಂತರಿಸುವ ಭಾವ, ಹೊಸ ಒಸಗೆಗನುವಾಗಿ ವೇಷಾಂತರಿಸುವ ಶೈಲಿ, ಕರ್ಮನಟಿಯ ಪದಹತಿಗೇಳುವ ಛಂದದ ಬಳ್ಳಿ—ಹೀಗಿದೆ ಕಾವ್ಯದ ಉಗಮ ಹಾಗು ವಿಕಾಸ. ಬರಿವಿನಲ್ಲಿ ಹೀಗೆ ಅರಿವು ಕಣ್ತೆರೆಯಲು ಇರವು ಹಿಗ್ಗಿನ ಹರವಾಗುತ್ತದೆ. ಹೊಸ ಕಾಲ ಈಗ ಬಂದಿದೆ. ಮಧು ಕ್ಷರಂತಿ ಸಿಂಧವಃ!

ಎರಡನೆಯ ಭಾಗದಲ್ಲಿ ಈ ಸೂತ್ರವನ್ನು ತಪ್ಪಿ ನಡೆದ ಜೀವನ ಹೇಗೆ ಅವ್ಯವಸ್ಥಿತವಾಗಿದೆಯೆಂಬುದನ್ನು ಅವರು ತೋರಿಸುತ್ತಾರೆ. ಈ ವಸಂತಕಾಲದಲ್ಲಿ ಮಕ್ಷಿಕಾಮಾಲೆ ನಡೆದಿದೆ ನಿಜ. ಆದರೆ ಯಾವ ಹುಟ್ಟಿಗೆ? ನವ್ಯಕಾವ್ಯದ ಶೈಲಿಯನ್ನು ಬಳಸಿಕೊಂಡು ಇಂದಿನ ಜೀವನದಲ್ಲಿದ್ದ ಅವ್ಯವಸ್ಥೆಯನ್ನೂ, ನೀರಸತೆಯನ್ನೂ ಬಣ್ಣಿಸುತ್ತಾರೆ. ಇಂತಹ ಗೊಂದಲವನ್ನು ಇಂತಹ ಶೈಲಿಯಲ್ಲಿಯೇ ಮೂಡಿಸುವದು ಸಾಧ್ಯ.

ಈ ಫಾಲ್ಗುಣ ಹೋಗಿ ಚೈತ್ರೋದಯ ಬರಲಿದೆ. ತೆರೆಮರೆಯ ಕೆಳಗೆ ಗಂಭೀರ ಭಾವಸಿಂಧುವಿದೆ. ಅದರ ಉಪಾಸನೆಯೇ ಮುಖ್ಯ.

" ಅನಿರುದ್ಧ ಶಾಂತಿ ತಳಹದಿಯು ಅದುವೆ ಸಾಕ್ಷಿತ್ವ ಪ್ರಾಣಲಿಂಗ
ಪ್ರದ್ಯುಮ್ನಕೃತಿಯು ಮೂಡಿತು ಮುಂದೆ ನಿಃಸಂಗ ಶರಣರಂಗ.
ಸಂಕರ್ಷಣಾಖ್ಯ ಜಯದೇವ ತರುವ ಮಹಲಿಂಗ ಭಾಗಭೋಗಿ.
ಶ್ರೀ ವಾಸುದೇವ ಮಾಯಾವಿ ಬರಲು ಲೀಲಾವತಾರಿಯಾಗಿ. "

ಎಂದು ಅವರು ಬೇರೆ ಬೇರೆ ಮತಗಳ ತಿರುಳಿನ ಸಮನ್ವಯದ ದ್ವಾರವಾಗಿ ಜೀವನದ ಮೂಲಸೂತ್ರದೆಡೆಗೆ ನಮ್ಮನ್ನು ಕರೆದೊಯ್ಯುತ್ತಾರೆ. ಅವರ ಕವಿತೆಗಳಿಗೆ ಪ್ರತಿಮೆಗಳ ಸೂಕ್ಷ್ಮದೇಹವಿದ್ದಂತೆ ತತ್ತ್ವದ ಸಮುಕಟ್ಟೂ ಇದೆ.

ಇಲ್ಲಿಯ ಕಾವ್ಯಸೃಷ್ಟಿಯ ಸ್ಥೂಲ ನಕಾಶವೊಂದನ್ನು ಇಲ್ಲಿ ತೆಗೆದಿದ್ದೇನೆ. ಇದು ಒಂದು ನಕಾಶ ಮಾತ್ರ. ಈ ಕಾವ್ಯದ ಮಲೆನಾಡಿನಲ್ಲಿ ಸಂಚರಿಸಲು ಇಲ್ಲವೆ ವಿಹರಿಸಲು ಇದರಿಂದ ಅಲ್ಪ ಸಹಾಯ ದೊರೆತರೆ ಈ ಮುನ್‌ನುಡಿಯ ಕಾರ್ಯ ಮುಗಿದಂತೆ.

—ವಿ. ಕೃ. ಗೋಕಾಕ

ಎರಡನೆಯ ಆವೃತ್ತಿಗೆ ಪ್ರಸ್ತಾವನೆ

'ಅರಳು-ಮರಳು' ಇದು ೧೯೫೬-೫೭ ಈ ಎರಡು ವರ್ಷಗಳಲ್ಲಿ ಪ್ರಕಟವಾದ ಕವನಗಳ ಪಂಚಾಂಗಸಿದ್ಧ ಸಂಕಲನವಾಗಿದೆ. ಸಾಹಿತ್ಯ ಅಕಾಡೆಮಿಯ ಪುರಸ್ಕಾರವು ಇವಕ್ಕೆ ದೊರೆಯಿತು. ಬಿಡಿಬಿಡಿಯಾಗಿ ಇದರೊಳಗಿನ ಸಂಗ್ರಹಗಳೂ ಮತ್ತೆ ಮುದ್ರಣವನ್ನು ಕಂಡಿವೆಯಾದರೂ ಈ ಬೃಹದಾಕಾರದ ಹೊತ್ತಿಗೆ ೧೯೬೮ರ ಹೊತ್ತಿಗೆ ಬರುತ್ತಿದೆ. ಇದೂ ಒಂದು ಯೋಗ.

೧೯೫೮ರಿಂದ ೧೯೬೮ರ ವರೆಗೆ ಮತ್ತೆ ಏಳು ಕವನಸಂಗ್ರಹಗಳು ಪ್ರಕಟಗೊಂಡಿವೆ. ಎಂಟನೆಯದು ೧೯೬೯ರ ಪ್ರಾರಂಭದಲ್ಲಿ ಪ್ರಕಟವಾದೀತು. ಇನ್ನೂ ನಾಲ್ಕೈದು ಕವನಸಂಗ್ರಹಗಳಾಗುವಷ್ಟು ಸಾಮುಗ್ರಿ ಇದೆ. ಅದು ಕಾಲ ಕಾಲಕ್ಕೆ ಅನುಕೂಲಿಸಿದಂತೆ ಪ್ರಕಟವಾದೀತು.

ವಾಲ್ಮೀಕಿರಾಮಾಯಣ, ಕಾಲಿದಾಸನ ರಘುವಂಶ, ತೊರವೆರಾಮಾಯಣ ಇವುಗಳನ್ನು ಸಂಸ್ಕಾರವಂತರು ಇಂದಿಗೂ ಓದಿಕೊಳ್ಳುತ್ತಾರೆ. ಸಾಹಿತ್ಯವು ಸಮರ್ಥವಿದ್ದರೆ ಹಳಸಿಹೋಗುವುದಿಲ್ಲ; ಅಭಿರುಚಿಯಂತೆ ತಾರತಮ್ಯವನ್ನು ಮಾಡಿಕೊಳ್ಳುವುದು ಸಹಜವೆ ಇದೆ.

ಪ್ರಿಯ ಘಾರ್ಗೇಕರ ಅವರು ಈ ಸಂಗ್ರಹ ಮತ್ತೊಮ್ಮೆ ಬರಬೇಕೆಂದು ಈ ಮೊದಲು ಕೆಲವು ಸಲ ಸೂಚಿಸಿದ್ದರು. ನಾನೇ ಏಕೋ ತಡಮಾಡಿದೆ. ಚಿ. ವಾಮನ ಇವನೂ ಇದಕ್ಕೆ ಸಮ್ಮತಿಸಿ ಮಾಡತಕ್ಕ ಕೆಲಸವನ್ನು ಮಾಡಿದನು. ಘಾರ್ಗೇಕರ ಅವರ ಚಿರಂಜೀವರಿಬ್ಬರೂ ಪೂರ್ಣ ಉತ್ಸಾಹದಿಂದ ಇವಕ್ಕಾಗಿ ದುಡಿದರು. ಇವರೆಲ್ಲರಿಗೂ ನನ್ನ ಪ್ರೇಮದ ಆಶೀರ್ವಾದಗಳು.

ಪ್ರಿಯ ದಾದಾ (ವಿನಾಯಕ ಗೋಕಾಕ) ಅವರ ಮುನ್ನುಡಿ ಪ್ರಾರಂಭದಲ್ಲಿ ಇದೆ. ಕೊನೆಯಲ್ಲಿ ಚಿ. ವಾಮನ ಕಾಲಕಾಲಕ್ಕೆ ಕೇಳಿದ ಕೆಲವು ಪ್ರಶ್ನೆಗಳಿಗೆ ಕೊಟ್ಟ ಉತ್ತರಗಳನ್ನೇ ಸಾಮುಗ್ರಿ ಮಾಡಿ ಅವನೇ ಬರೆದ ಟಿಪ್ಪಣೆಗಳಿವೆ. ಅವು ಉಪಯುಕ್ತವಾದಾವು.

ಹಿಂದೆ 'ಅರಳು–ಮರಳು' ಪ್ರಕಟವಾದಾಗ ಸಹೃದಯರಾದ ಚೆನ್ನವೀರ ಕಣವಿ, ಶ್ರೀ. ಬಾಲಸುಬ್ರಹ್ಮಣ್ಯಂ ಇವರು ಒಳ್ಳೆಯ ಮಾತು ಬರೆದರು. ಶ್ರೀಗಳಾದ ಸಿಂಪೀ ಲಿಂಗಣ್ಣ, ಕೀರ್ತಿನಾಥ, ಮೊಕಾಶಿ, ಬಿ. ಎಚ್. ಶ್ರೀಧರ ಗೌರೀಶ ಕೈಕಿಣಿ, ದತ್ತಮೂರ್ತಿ, ವಸಂತರಾವ ಮೊದಲಾದ ಗುಣಪಕ್ಷಪಾತಿಗಳು ನೀಡಿದ ಸ್ವಾಗತವನ್ನು ನಾನು ಮರೆಯಲಾರೆ.

ಮರುಳಲ್ಲ ನಾನು, ಮರುಳಾದೆನಯ್ಯ
    ನನ್ನೆದೆಯು ಮರುಳುಸಿದ್ಧ
ನಿಮ್ಮರುಳಿನಿಂದ ಮರಮರಳಿ ಅರಳಿ
    ಸ್ಫುಟವಾಗಿ ಭಾವಶುದ್ಧ–
ನಿಮ್ಮಡಿಗೊ ಮುಡಿಗೊ ಮುಡಿಪಾಯ್ತು ಮಾತು
    ಸಂತತದ ಏಕನಾದ
ಈ ಕೊರಳು–ಬೆರಳು, ಆ ಕರುಳು ಅರುಳು
    ಮರುಳೂನು ತಂಪ್ರಸಾದ.

'ಶ್ರೀಮಾತಾ'
ಸಾಧನಕೇರಿ, ಧಾರವಾಡ–೧
ಶ್ರೀಗುರುದತ್ತ ಜಯಂತಿ
೧೯೬೮

ದ. ರಾ. ಬೇಂದ್ರೆ

ಪರಿವಿಡಿ

೧. ಸೂರ್ಯಪಾನ

೩. ಮುಕ್ತಕಂಠ

೪. ಚೈತ್ಯಾಲಯ

೫. ಜೀವಲಹರಿ

ಸೂರ್ಯಪಾನ

ಸೂರ್ಯಪಾನ

ಏನಿದರ ಔನ್ನತ್ಯ ಏನಿದರ ಔದ್ಧತ್ಯ
ಕುಕ್ಕಿಸುವ ಕಣ್ಣುಗಳ ದಿಟ್ಟಿಸುವದು.
ಬಾನಗಣ್ಣಿನ ಬಿಸಿಯ ಹಸಿಯಾರದಲೆ ಕುಡಿದು
ಬೆಳಕ ನೀರಡಿಕೆಯನು ಹುಟ್ಟಿಸುವದು.

ಗಿರಿನಾರ ಕೋಡಿನಲೊ ಕೈಲಾಸ ಶಿಖರದಲೊ
ವಿಶ್ವದೀಪಕ ದೃಷ್ಟಿ ಮೂಡುವಂತೆ
ದಿಂಬಿನಲಿ ಮೊಗದೋರಿ ಎಸಳನಾಯಾಳಿಸುತ
ಸಿಂಹಾವಲೋಕನದಿ ನೋಡುವಂತೆ.

ಸೂರ್ಯಪಾನವ ನೋಡು ಹೇಗೆ ನಿಂತಿಹುದು.
ಎನುವಂತೆ–ದಿವ್ಯತೆಯ ದೀಕ್ಷೆ ಇಂತಿಹುದು.
ಮೇರುದಂಡವು ಚಿಗಿತು ಹೂತ ಹಾಗೆ.
ಹೃದಯದಾಕೂತಿಗಿದೆ ಕಣ್ಣು ಮೇಗೆ.

ಸಪ್ತ ಕಲಾ

೧

ಸ್ಪಂದಽ ಬಂಧಾ ಸ್ವಚ್ಛಂದಾ
ಸ್ಫುರಾಽ ಸ್ಫುರಾಽ ಸಹಜಽ ಅಂದಾಽ
ಆಡಲೂ ಬರದಾ; ಸುಮ್ಮಸಿರದಾಽ
ಕಾದುಽ ಕಾದುಽ ನಾದಾಽ
ಭೇದಾಽ ಅಭೇದಾ, ಮೀರಿ
ಭಾವಽ ನೋವಽ ತಾಳದೇ
ತನ್ನಽ ತಾ ನುಂಗೀ
ಎದೆಯೊಳಗಿಂಗೀ
ಸ್ವಾತಂತ್ರ್ಯಽ ಪಾಯುವದಣ್ಣಽ
ಅರ್ಕಽ ಚಂದ್ರಽ ಸಾಂದ್ರವಾಗಿಽ
ವಾಚಾತೀತಽ ಗೀತಽ
ಸ್ವರಮೇಳಽ—ತಾಳಽ—ರಾಗಽ
ರೀತಿಯಲ್ಲಿ
ಆತ್ಮಽ ಪ್ರೀತಿಯಲ್ಲಿ.

೨

ಇದೋ ಅರಿವೋ ಮರೆವೋ
ಅವಳಿಽ ಜವಳಿಽ ತೆರವೋ
ಧ್ರುವಾಸ್ಮೃತಿಯಾ ಕರೆವೋ

ಆಕಾಶ ರೇಖಾ ಲೇಖಾ
ಹೃದಯಾಂತರ್ಕೇಕಾ
ಭಾವಽ ನೋವಽ ತಾಳದೇ
        ಅದೃಶ್ಯಽ ಹೊಳೆದೂ
        ಕಾಣ್ಕೆಽ ರೂಪಽ ತಳೆದು
ಸ್ವಾತಂತ್ರ್ಯ ಪಡೆಯುವದಣ್ಣಽ
ಟಂಕಾಽ ಆತಂಕಾ ಸರಿಸಿಽ
ವ್ಯಂಗ್ಯಾಽ ವಕ್ರಽ ಬೆರೆಸಿ,
ಎಲ್ಲೂಽ ಕಲ್ಲೂಽ ಚಿತ್ರಽ
        ಮೂರ್ತಿಯಲ್ಲಿ
        ಕೀರ್ತಿಽ ಆರ್ತಿಯಲ್ಲಿ.

೩

ತಂತ್ರಽ ಅರಿಯದೇಽ
ಮಂತ್ರಽ ಮಣಮಣಗುಟ್ಟೇ
ಕೆಟ್ಟಽ ಯಂತ್ರದಂತೇ
ಕೈತಪ್ಪಿಽ ಎತ್ತೆತ್ತೊ
        ತತ್ತರಿಸುತ್ತಿರಲು
ಭಾವಽ ನೋವಽ ತಾಳದೆ,—
        ಮೌನಽ ಕೂಡಿಽ
        ಮೌನ-ಮೂಡಿಽ
ಸ್ವಾತಂತ್ರ್ಯಽಪಡೆಯುವದಣ್ಣಽ
ಆವೇಶಽ-ಅಂಗಾಂಗಽ-ತುಂಬಿಽ

ನರನರಽ ನಲುಗಿಽ. ಅಲುಗೀಽ
ಗೊಂದಣಽ—ತಾಂಡವಽಲಾಸ್ಯಽ
ನೃತ್ಯದಲ್ಲೀ
ಇಲ್ಲೀಽ ಮರ್ತ್ಯದಲ್ಲಿ

ಕರ್ಮಾಽ ಅಕರ್ಮದ ತಂತ್ರಽ
ಫಲವಿಫಲತೆಯೊಳತಂತ್ರಽ
ಈಶ್ವರೀ ಯಂತ್ರಃ
ಸ್ವರೂಪಽ ತೋರ್ಽ ದೀಪಽ
ಮಿಂಚಿಗೂ ಸಮೀಪಽ
ಭಾವಽ ನೋವಽ ತಾಳದೇಽ
ಪ್ರಕೃತಿಯೂಽ ದುಡಿದೂಽ
ದೈವಽ ತಣಿದೂಽ
ಸ್ವಾತಂತ್ರ್ಯಽ ಪಡೆಯುವದಣ್ಣಽ
ಅವಿದಿತಽ ವಿದಿತಃ ಉದಿತಾಽ
ಸಾತ್ವಿಕಾಽ–ಭಾವಾಽ–ಜೀವಾಽ
ಅಭಿನಯಽ ಪಚಪಽ–ನಾಟ್ಯಽ–
–ಕೃತಿಯಲ್ಲಿ
ದೃಷ್ಟೀಽ ಶ್ರುತಿಯಲ್ಲಿ.

ಶಾಂತಾಽ ಶಿವಾಽ ಸೀಮಾತೀತಾಽ
ಸತ್‌ಶಕ್ತೀ ಸಹಿತಾ

ಚೇತಾಽ ಜಗನ್ನೇತಾ
ಸ್ವಾಲಿಂಗಿತ ದ್ವೈತಾ ಅದ್ವೈತಾ
ಸಂತತಾಽ ಅನಂತಾಽ
ಭಾವಽ ನೋವಽ ತಾಳದೇ
ಬಯಕೆಽ ಬೇನೆಗೆಽ ಬೆಂದು,
        ತನ್ನೊಳು ತಾ ನಿಂದು
ಸ್ವಾತಂತ್ರ್ಯಽ ಪಡೆಯುವದಣ್ಣಽ
ಬೀಜಽ ಬಿಂದೂದ್ಭೂತಾ
ಕಲಲಾ ಜಾತಾ
ಇದು ಅಕಲಽ ವಿಕಲಽ ಸಕಲಽ
        ಸುಕಲೆಯಲ್ಲಿ
        ಈಽ ಕಳೇವರದಲ್ಲಿ

೬

ಜನ್ಮಾಽ ಜನ್ಮಾಂತರ ತರತಮಭಾವಾ
        ಪ್ರಕಟಸ್ವಭಾವಾ
ಪ್ರತಿಸರ್ಗೋತ್ಸುಕತಾ ಪ್ರತಿಭಾ
ನಿರಾಲಂಬಾ ಸ್ವಯಂಭಾ
ಕಲ್ಪನಾಗರ್ಭಿತ ಬಿಂಬಾ
ಭಾವಽ ನೋವಽ ತಾಳದೇ
ಅನನ್ಯಾ ಈಶ್ವರ ಪ್ರಭವಾ
        ಕಲಾ ವಿಭವಾ
ಸ್ವಾತಂತ್ರ್ಯಽ ಪಡೆಯುವದಣ್ಣಽ
ಲೋಕಾಽ ಲೋಕ ಪ್ರಕಾರಾ
        ದೇವತಾಕಾರಾ

ಇದು ದರ್ಶನ ಮುಖರಾ ಶಿಖರಾ
        ವಾಸ್ತುವಲ್ಲಿ
        ಗುಡಿ ಗೋಪುರದಲ್ಲಿ

೭

ಸಕಲಾಽ ಸಿದ್ಧಾಽ ಸರಸ್ವತಿ ವೀಣಾಪಾಣಿ
ಪಶ್ಯಂತಿಯ ವಾಣಿ
ಛಂದಾರೂಢಾ ನವೋಢಾ
ಮುಗ್ಧಾ, ರಸಿಕಾ, ಅನೂನಾ
        ಧ್ವನಿತ ಪ್ರಾಣಾ
ಭಾವಽ ನೋವಽ ತಾಳದೇ
ಸ್ಫೂರ್ತಾ ಅಮೂರ್ತಾ, ಅವಿರ್ಭೂತಾ
ಭವಮಂಥನ ಮಂತ್ರಾ
ಸ್ವಾತಂತ್ರ್ಯಽ ಪಡೆಯುವದಣ್ಣಽ
ಅಕಾಮ್ಯಾ ರಮ್ಯಾ
ಶ್ರೋತ್ರಿಯಗಮ್ಯಾ
ಭವ್ಯಽ ನವ್ಯಽ ಹೃದಯದ್ರವ್ಯ,
        ಕವಿಯಲ್ಲಿ
        ದಿವ್ಯಽ ಕಾವ್ಯದಲ್ಲಿ

ವಿಶ್ವರೂಪ ದರ್ಶನ

ವಿಶ್ವರೂಪ ನೋಡುತ್ತಿರೆ ಸ್ವಮರೆತರ್ಜುನನು
ಎಚ್ಚತ್ತನು ಮೈ ಅರಿವಿಗೆ ಕಂಪಿಸಿತೆಲ್ಲ ತನು
‘ ಭೀಷ್ಮಂಚ ದ್ರೋಣಂಚ ಜಯದ್ರಥಂಚ ಕರ್ಣಂಚ ’
ಅಬ್ಬಬ್ಬಾ ತನ್ಮಧ್ಯೇಽ ತಾ ನೋಡುವದೇನು ?

ಇದ ನೋಡಲು ಕಣ್ತೆರೆದೆನೆ? ಅದ ಬೇಡಿದರಾರು?
ಈ ಧಗೆಯಲಿ ನಗೆಯಾಟದ ಹಗೆ ಹೂಡಿದರಾರು?
ಧರ್ಮಾ, ಭೀಮಾ, ನಕುಲಾ, ಮತ್ತಾ ಸಹದೇವಾ
ನಾನಿರುತಿರೆ, ನೀನಿರುತಿರೆ, ವಧೆ ಮಾಡಿದರಾರು ?

ಕೃಷ್ಣಾ, ಹರಿಹರಿ, ಕೃಷ್ಣಾ ಹರಿಹರಿ ಈ ಕಣಸು
ಎಚ್ಚರದಾ ಭ್ರಮೆಗಿಂತಲು ಹಿರಿ ಹುಚ್ಚೀ ಕನಸು
ಕನಸೋ ಕಣಸೋ ನನಸೋ ಹರಿ ಹರಿ ಹರಿ ಕೃಷ್ಣಾ-
ಸತ್ತಿಲ್ಲವು ಇನ್ನೂ ಈ ನರಸಾ ನರಮನಸು.

ನನಗೊಲ್ಲದ ಬದುಕನು ನಾನೆಂದೆಂದೂ ಒಪ್ಪೆ
ಎಂಬೆನೆ? ಕಾಂಜಿನೆ ಸಿಸಿಪಸು ? ಸುಳ್ಳಿನ ಈ ತಿಪ್ಪೆ
ಸುತ್ತೂ ಮುತ್ತೂ ಮತ್ತೂ ಸುತ್ತುತ್ತಿದೆ ಹಾಗೇ
ಹೇಳದೆ ಕೇಳದೆ ತಾವೇ ಮುಚ್ಚಿದವೀ ರೆಪ್ಪೆ

ಕಣ್ಮುಚ್ಚಿದರೂ ಕಾಂಬುದು ಏನೀ ವಿ-ಚಿತ್ರ
ಕಣ್ತೆರೆದರು ಕೆತ್ತಿದ್ದಿದೆ ಪ್ರಳಯದ ಸ್ಮೃತಿ ಮಾತ್ರ
—ಖೂಳರು, ಹೂಳರು, ಕೀಳರು, ಇದು ನಾಚಿಕೆಗೇಡು—
ಕರುಳನೆ ಹೊತ್ತಿಸಿ ಯಾಕೋ ಉರಿವುದು ಒಳಗಾತ್ರ

ಕಣ್ಣೀರಿಗೆ ತೊಳೆದಿಳಿವುದು ಕಾಡಿಗೆ ಎಂಬಂತೆ
ದಿವ್ಯಾಂಜನವೂ ಹಾರಿತು, ರಣ ಮರಣದ ಸಂತೆ
ಮಾರಾಟಕೆ, ಏರಾಟಕೆ, ಹೊರಚಲ್ಲಿದೆ ಇಲ್ಲಿ
ನಾರಾಯಣನಾ ಮಾಯೆಗೆ ನರನಾಗುತ ನಿಂತೆ.

ಒಪ್ಪಿದೆ ಒಪ್ಪಿದೆ ಕೃಷ್ಣಾ ನೀ ನಾಟಕಕಾರಾ
ಮೊದಲೇ ತೋರಿಸು ಎಂದೆನೆ ನಾಟಕದಾಧಾರಾ
ನೋಟಕ, ಬೂಟಕ, ಮಾಟಕ ಏನೇನೋ ಮಾಡಿ
ಸೂತ್ರವ ಹಿಡಿದೂ ರಂಗವ ತುಂಬಿದೆ ಹೇ ಧೀರಾ !

ನೈಜವ ನೋಡಲು ನಿಜವೂ ಬೇಕಿವೆ ಸನ್ನೇತ್ರಾ
ಹುಟ್ಟೂ ಇರವೂ ಸಾವೂ ಅಲ್ಲಿವೆ ಚಿನ್ಮಾತ್ರಾ
ಕಥೆ ನಿನ್ನದು, ವ್ಯಥೆ ನಿನ್ನದು, ನಿನ್ನದೆ ಉಸಿರಾಟಾ
ಆಡುವ, ನೋಡುವ, ಮೂಡುವದೊಂದೇ ಶ್ರೀಪಾತ್ರಾ.

ಎಳೆನಗೆಯಲಿ ಇಳೆ ಚಿಗಿಯಲಿ ಮುರುಕೊಳಿಸಲಿ ಹೂವು
ಹಿಮ ಶಿಶಿರದ ಸ್ಮೃತಿ ಕಳಚಲಿ, ಇದೊ ಇಗೊ ಈ ಠಾವು
ತುಂಬಲಿ ತುಳುಕದೆ ಸೂಸಲಿ, ಮೀಸಲು ಮುರಿಯದೆಯೆ
ಮಿಕ್ಕಲಿ, ಒಕ್ಕಲುಗೊಳ್ಳಲಿ ಆ ನಾವೂ ನೀವೂ.

ಕೃಷ್ಣಾ ಆಡೈ ಆಟವ ನಿನ್ನಾಕ್ರಮದಂತೆ
ಸುಳ್ಳೇ ಬಣ್ಣವ ಕೊಡದಿರು ನಮ್ಮೀ ಭ್ರಮದಂತೆ
ಉಡುಗಿಸು, ನಡುಗಿಸು, ಅಡಗಿಸು, ದಿವ್ಯದ ತಾಳದಲಿ
ನೀನೋ ಗುರು, ನಾ ಶಿಷ್ಯನು, ರಣ ಆಶ್ರಮದಂತೆ.

ಕೇಳಿರೊಂದು ಸೋಜಿಗ

ಹೀಗು ಉಂಟು ಈ ಜಗ
ಕೇಳಿರೊಂದು ಸೋಜಿಗ !
ಗಾಂಧಿ ದೇಹ ಬಿಟ್ಟರಂತೆ
ಜನರು ಅದನು ಸುಟ್ಟರಂತೆ
ಹೌದು, ಗಾಂಧಿ ಸತ್ತರಂತೆ
ಜನರು, ನಿಜವೆ, ಅತ್ತರಂತೆ.
ದಿನದ ದಿನದ ದಿನದ ಹಾಗೆ
ಗಾಂಧಿಜೀಗೆ ಬಿನದವಾಗೆ
ಪ್ರಾರ್ಥನೆಗೇ ಬಂದರಂತೆ
ಆಗದವರು ಕೊಂದರಂತೆ
ಗಾಂಧಿಯವರು ಬಿದ್ದರಂತೆ
ನೋಡುವವರು ಇದ್ದರಂತೆ.
ಪಾಪ, ಪಾಪ, ಅಯ್ಯೊ ಪಾಪ
ಇದಕು ಇರಲಿ ಉಶ್ಶಾಪ !
ಗಾಂಧಿಜೀ ಮಹಾತ್ಮರಂತೆ
(ಆದರೂನು) ಅಂತು ಒಮ್ಮೆ ಸತ್ತರಂತೆ !
ಕೇಳಿರೊಂದು ಸೋಜಿಗ !

ಶಾಂತಿದೂತನಾಗಿ ಬಂದ
ಮಹಾಧೀರ ಶಿವನ ಕಂದ
ಪ್ರೇಮಮಂತ್ರವನ್ನು ತಂದ
ಅದೇ ಅಂದ ಅಂದೆ ಅಂದ.
ಕೈಯ ಮುಗಿದು ಕಣ್ಣು ಮುಚ್ಚಿ
ವೈಯನೊಗೆದ ಹೃದಯ ಬಿಚ್ಚಿ
ಹೊರಟಿತೊಂದು ಶಬ್ದವು
ಅದರ ಧ್ವನಿಯು ಅಬ್ದವು.
ಬಾನುಲಿಯೇ ಕಂಪಿಸಿ
ವಿಶ್ವವೆಲ್ಲ ಝೊಂಪಿಸಿ
ಏನನರ್ಥ ಏನನರ್ಥ
ಎಂದು ಕೂಗೆ ಕೂಗಿತು.
ಅದರ ಬೆನ್ನಿಗೊಂದೆ ಅರ್ಥ
ಒಂದೆ ಭಾವ ಸಾಗಿತು.
ಜೀವಕ್ಕೆಲ್ಲ ಧಾವತಿ
ಪ್ರೇಮಕೊಂದು ಆಹುತಿ !
ಕೇಳಿಪೊಂದು ಸೋಜಿಗ !

ಸಾಕ್ರೆಟೀಸ ಆತ್ಮವೀರ
ಕುಡಿದನಲ್ಲ ವಿಷದ ನೀರ !
ಧೀರ ಕ್ರೈಸ್ತ ಇದ್ದನೆಲ್ಲಿ ?
ಅವನ ದೇಹ ಸಿಲುಬೆಯಲ್ಲಿ !
ನ್ಯಾಯದೊಂದು ನೆಪವ ಮಾಡಿ
ವಿಚಾರಣೆಯ ಆಟ ಆಡಿ

ಕೊಂದರಾಗ ಧೂರ್ತರು.
ಅದೂ ಬೇಡವಾಯ್ತೆ ಇಲ್ಲಿ?
ಮುಗಿಸಿದರೋ ಮೂರ್ಖರು.
ಇನ್ನು ಗುಂಡು ತಾಕದಲ್ಲಿ
ಕೊಲೆಪಾತಕ ಸೋಕದಲ್ಲಿ
ದೃಶ್ಯ ತೀರಿ ಅದೃಶ್ಯದಲ್ಲಿ
ಆದರಿಲ್ಲೆ ಭೂಮಿಯಲ್ಲಿ
ನಡೆವುದದರ ಪರಿಣತಿ
ಗಾಂಧಿಗಂಧಸಂಗತಿ.
ಕೇಳಿರೊಂದು ಸೋಜಿಗ!

ದೇವನುಂಟು ದೈವವುಂಟು
ಅದಕು ನಮಗು ಇಹುದು ನಂಟು
ದುರ್ವಾಸನೆ ನಾರದಲ್ಲಿ
ಅಹಂಕಾರ ಸೇರದಲ್ಲಿ
ವಿಶ್ವಹೃದಯ ಹಾರದಲ್ಲಿ
ಪ್ರೇಮದೊಂದು ರತ್ನವು
ಅದಕೆ ವಿಶ್ವಯತ್ನವು.
ಅದೇ ನಮ್ಮ ನಿಮ್ಮ ಗುರಿಯು
ಅದು ಇಲ್ಲದ ವಿಶ್ವ ಉರಿಯು
ದ್ವಂದ್ವ ಮೀರಿದೊಂದಿದೆ
ದ್ವಂದ್ವ ಎಂದೊ ಕೊಂದಿದೆ
ಸಾವಿನಲ್ಲಿ ಸಾವಿದೆ
ನೋವಿನಲ್ಲಿ ನೋವಿದೆ.

ಸಾವು ನೋವು ಮೀರಿದಾ
ಗಾಂಧಿ ಹೇಗೆ ತೀರಿದಾ?
ಕೇಳಿರೊಂದು ಸೋಜಿಗ!

ಬಾಳು ಜಗವೆ ಬಾಳಿಲೋ
ಪ್ರೇಮದಿಂದ ತಾಳಿಲೋ
ಎಂದು ಕೊನೆಗು ಸಾರಿದಾ
ಗಾಂಧಿ ಸ್ವರ್ಗಕೇರಿದಾ.
ಅದನೆ ಇಲ್ಲಿ ತರುವನೋ?
ಮತ್ತೆ ಮರಳಿ ಬರುವನೋ?
ಏಕೆ ಹರಟೆ? ಏಕೆ ಪ್ರಶ್ನೆ?
ಬೇಕು ಜೀವಮುತ್ತರ.
ಜೀವನದೊಳು ಎತ್ತರ.
ಗಾಂಧಿ ಅಲ್ಲೆ ಸಾವು ಇಲ್ಲೆ
ಹಳೆಯ ವಾದ ನಡೆದರೆ
ಗಾಂಧಿ ರಾಮ ಕೃಷ್ಣ ಅಲ್ಲಾ
ಕ್ರೈಸ್ತ ಬುದ್ಧ ಎಲ್ಲ ಎಲ್ಲಾ
ಪ್ರೇಮಮಾರ್ಗ ಹಿಡಿದರೆ
ಒಂದೆ, ಶಾಂತಿ ಪಡೆದರೆ?
ಕೇಳಿರೊಂದು ಸೋಜಿಗ!

ಶ್ರದ್ಧಾಂಜಲಿ

ಹಿಂಸೆ ಕೊನೆಗಹಿಂಸೆಯನ್ನು ಗುಂಡುಹಾಕಿ ಕೊಂದಿತೋ ?
ತನ್ನ ಕೊಲೆಯು ಕೊನೆಗಾಣಿಸೆ ಇವಗೆ ಶರಣು ಬಂದಿತೋ ?
' ಅಯ್ಯೊ ಇವನು ಅಮರ, ನಾನೆ ತಾನೆ ಸತ್ತೆ ' ಎಂದಿತೋ ?–
' ನಾನೆ ಸತ್ತೆ ' ಎಂದಿತೋ ?

ಗಾಂಧಿದೇಹ ಸುಟ್ಟ ಬೆಳಕು ಜಗದ ತಮವ ಕಳೆದಿದೆ,
ಗಾಂಧಿ ಹೋದರೆಂಬ ಸುದ್ದಿ ಜಾನ ತುಂಬಿ ಉಳಿದಿದೆ,
ಗಾಂಧಿಗಂಧ ದಿಗ್–ದಿಗಂತ ಕೀರ್ತಿರೂಪ ತಳೆದಿದೆ—
ಕೀರ್ತಿರೂಪ ತಳೆದಿದೆ !

ತೀರ್ಥಗಳ ಪವಿತ್ರ ಮಾಡಿದಂಥ ತೀರ್ಥರೂಪನು
ಯಜ್ಞವಾದ ಬಾಳಿನಲ್ಲಿ ತಾ ಸುಖಸ್ವರೂಪನು
ಸೋಲನೆಲ್ಲ ಗೆಲವುಗೊಳಿಸಿ ಮುಕ್ತನಾದ ಭೂಪನು—
ಮುಕ್ತನಾದ ಭೂಪನು.

ಬತ್ತಿ ಸುಟ್ಟುಹೋದರೇನು ಬೆಳಕು ನಂದಿತೆಂಬರೆ ?
ಹಾಕಿ ಬತ್ತಿ ದೀಪವೆತ್ತಿ ಇರುವ ಜ್ಯೋತಿ ಕಾಂಬರೆ !
ಎಣ್ಣೆ ತೀರಿತೆನ್ನಬೇಡ ಬೇರೆ ನೇಹ ತುಂಬರೆ—
ಬೇರೆ ನೇಹ ತುಂಬರೆ ?

ಹಿಂಸೆ ಕೊನೆಗಹಿಂಸೆಯನ್ನು ಗುಂಡುಹಾಕಿ ಕೊಂದಿತೊ ?
ತನ್ನ ಕೊಲೆಯು ಕೊನೆಗಾಣಿಸೆ ಇವಗೆ ಶರಣು ಬಂದಿತೊ ?

ಅಮರ ಮರಣ

ಆ ಯುಗಾದಿ ಬರುವಂತೆ ಮರಳಿ ಓ ಶ್ರಾದ್ಧದಿನವೆ ಬಂದೆ
ಮರೆತ ಮರಣವನು ನೆನೆದ ಮರದಿ ಚೈತನ್ಯವನ್ನು ತಂದೆ
ಹರಿಜನರ ಬಳಗ ಉಳಿದವರ ಒಳಗೆ ಬಳಸಿದೆಯೊ ನಾಡತಂದೆ
ಮಾನವತೆ ಒಂದು, ಭಾರತಿಯರಿಲ್ಲ ಒಂದಲ್ಲವೇಕೆ ಎಂದೆ.

ಬರಿಯಮೈಯ ಬಾಳುವೆಯ ಮರ್ತ್ಯ ಮೈ ಕಳಚಿಬೀಳಲಾಗಿ
ಅವನ ನೆನಪೆ ಅಳಿಯುವದು ಅವನ ಮೈಯೊಡನೆ ಮಾಯವಾಗಿ
ಸತ್ಯವಂತನವ ಸತ್ತನೆಂದು ಪರಮಾರ್ಥದಲ್ಲಿ ನಂಬೆ.
ಪ್ರೇಮಧರ್ಮವನು ಸಾರಿದವಗೆ ಎಲ್ಲಿಹುದು ಮರಣವೆಂಬೆ.

ಸಾವು ಯಾರಿಗಿದೆ? ನೋವ ಧಿಕ್ಕರಿಸಿ ನಿಂತ ಧೀರಗೇನೇ
ಮೃತ್ಯುಮುಖದಲ್ಲಿ ರಾಮನಾಮವನು ಬಿತ್ತಿದವಗೆ ತಾನೇ?
ಸಾವುಗೀವು ಉಂಟೆಂಬ ಮಾತು ನಂಬುವವು ಯಾರು ತಾನೇ?
ಆಡ ಹಾಲನುಂಡವನು ಕಾವ, ಕಾದಾಡಿದಂತೆ ಆನೆ.

ನಿಃಶಸ್ತ್ರವೀರ, ಸಾಮ್ಯೈಕಶೂರ, ದಾಂತವಿನಯಧೀರ,
ವ್ಯಾಪಾರಚತುರ, ಉತ್ತೀರ್ಣನಾದ ಶಾಂತಿಯ ಅಪಾರತೀರ
ಇಲ್ಲವರ ಕೂಡ ಉಳ್ಳವರ ಜೋಡಿ ಸೀಸಮುದ್ರ ಇವಗೆ ನಂಟು
ಇವನ ವರ್ಣನೆಯೆ ಅಮರವಹುದು, ಇಂಥವನು ಮರ್ತ್ಯನೆಂತು?

ಕುಂಭಮಾಸದೀ ಗಾಳಿ ತಾನೆ ವೈತಾಳಿಯಾಗಿ ಬಂದು
ಕಳೆವ ಎಲೆಗಳಲಿ ಚಿಗುರುವೊಳೆಗಳಲಿ ಉಲಿಯುತಿಹುದು ನಿಂದು
ಅಳಿವುದಷ್ಟೆ ಅಳಿದೀತು ಬದುಕುವುದು ಪ್ರಾಣಜಾತ ಸತ್ಯ
ರೂಪಕಳಿವುಂಟು ಆ ಸ್ವರೂಪ ಆಕಾಶಕಿಂತ ನಿತ್ಯ.

ಕೀರ್ತಿದೇಹಿಗೆಲ್ಲಿಹುದು ಮರಣ? ಸತ್ಕೀರ್ತಿಯೊಂದು ಬೆಳಕು.
ಕಳೆವ ಬಟ್ಟೆ ತೊಳೆವಂತೆ ಹರಿದುಹೋಗುವದು ಮಲೆತ ಕೊಳಕು.
ಹಗಲು ಬಂದೀತು ಹಗಲು ಹೋದೀತು ಚಿಕ್ಕೆ ಬೆಳಗುತಿಹುದು.
ಜೀವ ಜೀವ ಸಂಗ್ರಾಮಗಳಲಿ ಆ ಶಾಂತಿ ಮೊಳಗುತಿಹುದು.

ನೆಲವ ಮುದ್ದಿಡುವ ಚಾರಿಯಲ್ಲಿ ಪದಚಾರಿಯಾಗಿ ಹೊರಟ.
ಕೈಯಲ್ಲಿ ಕೋಲು, ಅದಕಿಲ್ಲ ಸೋಲು, ಗೆಲುವೊಂದೆ ಬಲ್ಲ ಅಧಟ.
ಸ್ವಾತಂತ್ರ್ಯದುಪ್ಪು ಸಾಗರದಡ[illegible]ರಿಗೆ ಮುಟ್ಟಿಸುವ ಪಂಥ ತಳೆದ.
ಅಂಥ ಉಪ್ಪಿನಲೆ ಜೀವ ರುಚಿಗೊಳಿಸಿ ಸಪ್ಪೆತನವ ಕಳೆದ.

ನಿನ್ನ ತಪ್ಪುಗಳೆ ಒಟ್ಟಿ ನಿಂತು ಆ ಹಿಮಾಲಯವೆ ಆಗೆ,
ಅದರ ತಲೆಯನ್ನೆ ಮೆಟ್ಟಿ ಮುಂದೆ ಹಾದಿಯನು ಹಿಡಿದು ಸಾಗೆ,
ಶಾಂತಿಧ್ರುವದಿ ಕಣ್ಣಿಟ್ಟಿ ಹೆಜ್ಜೆಹೆಜ್ಜೆಯಲಿ ಗುರಿಯು ತಾಗೆ,
ಬುದ್ಧಬೋಧ ಪ್ರಸರಿಸಲು ಹೊರಟ ಆ ಪ್ರವಾಸಿಕರ ಹಾಗೆ.

ಜನಕೆ ಬಯಲು ಕಂಡಲ್ಲಿ ತೆರೆದೆ ಜೀವನದ ರೂಪರೇಖೆ,
ಉಷೆಯು ಸ್ವಪ್ನದನಿರುದ್ಧನನ್ನು ಬರೆದಂತೆ ಚಿತ್ರರೇಖೆ.
ಬಣ್ಣ ಬಳಸದೇ ಬರೆದ ಚಿತ್ರದಲಿ ಬೇರೆಯೊಂದು ಚೆನ್ನು.
ಶಾಂತಿಶ್ರದ್ಧೆ ಬದುಕಿರುವವರೆಗೆ ಮರೆತಾರು ಯಾರು ಇನ್ನು ?

ಇವ ಬಿಳಿಯ ಕರಿಯ, ಇಸ್ಲಾಮಿ ಹಿಂದು, ಆರ್ಯನು ಅನಾರ್ಯನೆಂದು,
ಜೀವಬಾಂಧವ್ಯ ಒರೆಗೆ ಹತ್ತಿರಲು ಪರಸ್ಪರರ ಕೊಂದು,
ಮೃತ್ಯುಧ್ಯಾನವನೆ ಮಾಡುತಿರುವ ರೌದ್ರಿಕರ ನಡುವೆ ನಡೆದೆ;
ದಾಯಾದಿತನದ ಸಾಗರದ ಮಥನದಿಂವೆದ್ದ ವಿಷವ ಕುಡಿದೆ.

ನಿನ್ನ ಹಿಂಸೆಗಾ ಹಿಂಸೆ ಕಾಣಿಕೆಯೆ? ಯಾವ ನ್ಯಾಯನೀತಿ?
ಎಂಥ ಪೌರುಷದ ಏನು ನೀತಿಯೆಂದು? ಯಾರ ವೀರಜಾತಿ?
ಸಾಧು ಸಾಧು ಜಗ ಕೂಗುತಿಹುದು ತವ ಮರಣ ಸಾರ್ಥವಹುದು.
ಸತ್ತರೇನು ಸಾರ್ಥಕತೆ ದಸ್ಮ್ರನಲಿ ಕೆಮ್ಮ್ರನವಿದು ನವಿದು.

ಇಂದ್ರಿಯದ ತೃಪ್ತಿ ಉಳಿದೆಲ್ಲ ಸುಪ್ತಿ ಜೀವನದ ಆಸರಾಗಿ
ಅಲ್ಲಗಳೆದು ಆತ್ಮವನು ಬಾಳುತಿಹೆ ಬಲಿಯು ದಾಸರಾಗಿ
ಸ್ವಾರಾಜ್ಯದೊಂದು ಘನಕನಸು ಕಂಡು ಕಟಿದಿಟ್ಟೆ ಆಗಿ ತ್ಯಾಗಿ.
ಕಾರುಣ್ಯದಲ್ಲಿ ಮಾನವರ ಮರ್ಮ ಮೂರ್ತಿಸುವ ಶಿಲ್ಪಿಯಾಗಿ.

ನಿನ್ನ ಕೃತಿಯು ಸ್ಮೃತಿ ಕ್ರಾಂತಿಕೃತಿಯು ತಂತಿಯನು ಮೀಟುತಿಹುದು.
ಮನದ ಜನ್ಮಗಳ ಕಳೆವ ಹಾಗೆ ತನ್ನನ್ನೆ ದಾಟುತಿಹುದು.
ನಿನ್ನ ಮೂರ್ತಿ ಪ್ರೇರಿಸುವದಯ್ಯ ದಿಗ್ದರ್ಶಿ ನೇತ್ರದಂತೆ,
ಆಕರ್ಷಿಸುವದು ಒಳಹೊರಗೆ ನಮ್ಮ ಸ್ಮೃತಿರೂಪ ಚಿತ್ರದಂತೆ.

ಏನನಾದರೂ ಹೇಗೊ ತಿಂದು ಬದುಕುವದೆ ಬಹಳರಾಸೆ.
ಸತ್ಯದನ್ನವನೆ ಉಂಡು ಬಾಳಿ ಎನ್ನುವನು ಪುರುಷಭಾಷೆ.
ಅಮರವಾವುದೆಂಬುವದನೇನು ಅವಿವೇಕಿ ತಾನು ಬಲ್ಲ?
ದೇಹಧರ್ಮಕೋ ಸಾವು ಉಂಟು, ಆತ್ಮಕಗೆ ಸಾವು ಇಲ್ಲ.

ಜಯ ಜಯಾ ಗಾಂಧಿ ಮೋಹನಾ

ಜಯ ಜಯಾ ಗಾಂಧಿ ಮೋಹನಾ
    ರಾಷ್ಟ್ರದೋಹನಾ
    ಸತ್ಯ ಶರಣಾ—ಸತ್ಯ ಶರಣಾ
ಕಾದಿದಿರಿ ಶಾಂತಿಗೆ ಅಂತು
    ಅಂತಸ್ಸ ಬಂತು
    ಭೀಷ್ಮ ಮರಣಾ— ಭೀಷ್ಮ ಮರಣಾ

ಅಸರಂತ ನಿಮ್ಮ ಜೀವನಾ
    ಒಂದೆ ಸಮ ರಣಾ
    ಆತು ಕೊನಿಗೂ—ಆತು ಕೊನಿಗೂ
ಸೀಳಿದಿರಿ ಸಾವಿನ ತಲೀ
    ಕೊಟ್ಟರಿ ಬಲೀ
    ಕೀರ್ತಿಶನಿಗೂ—ಕೀರ್ತಿಶನಿಗೂ

ಒಡದರ ನಿಮ್ಮ ಒಡಲೋ
    ಬಂತು ಸಿಡಿಲು
    ರಣಬೊಬ್ಬಿ ನಿಮ್ಮ ಹೆಸರೋ
    ಏನು ಕುಸುರು
ಮಿಡಿದಿತ್ತು ಮಿಂಚಿನ ಕಾಂತಿ
    ಮುಗಿಲಿನ ತಂತಿ
ಬಯಲಾತು ಮಾತಿನ ಭ್ರಾಂತಿ
    ತಣ್ಣಿಸಿತು ಶಾಂತಿ
ಊದ್ಯಽದ ಕಾಳಿಯ ಕ್ರಾಂತಿ
    —ಮಾನವೋತ್ಕ್ರಾಂತಿ

ಸ್ವಾತಂತ್ರ್ಯದೂತ ಜಯಜಯಾ
ಜಾತ ನಿರ್ಭಯಾ
ರಾಷ್ಟ್ರಹವನಾ—ರಾಷ್ಟ್ರಹವನಾ
ಕವಿಹೃದಯ ಜಾತ ಪ್ರೇರಣಾ
ಪ್ರೇಮಕಾರಣಾ
ಇಗೋ ಕವನಾ—ಇಗೋ ಕವನಾ
ಕರ್ನಾಟಕ ದೇಶದ ಜನಾ
ಕನ್ನಡಿಸಿತು ಮನಾ
ಹಾಡಿತು ಕವಿಗಣಾ
—ಜಯಜಯಾ....

* * * *

ನೆನಸೇವು ನಿಮ್ಮ ಆ ನಗೀ
ಒಳಗ ಇಲ್ಲ ಧಗಿ
ಬರೇ ಬೆಳಕು—ಬರೇ ಬೆಳಕು
ನಿಂಮಾತು ಮಿಂಚಿನ್ಹಂಗೆರಿ
ಎಲ್ಲಿ ಸರಿದ್ಹೋರಿ
ಇಲ್ಲ ಅಳಕು—ಇಲ್ಲ ಅಳಕು
ನಿಮ ಕಾರ್ಯ—ಕಿರಿಬೆಳ್ಳಿನಾ ಸೆಲಿ
ಹಿಗ್ಗಿಧಾಂಗ ಹೊಳಿ
ಮುಂದ ಹರವು—ಮುಂದ ಹರವು
ನಿಮ್ ಹೃದಯದಾಗ ಇಲ್ಲ ಪಾಪ
ಶುದ್ಧಸಿರ್ಲೇಪ
ಸದಾ ತೆರವೋ—ಸದಾ ತೆರವು
ನಿಮ ಚರಿತವಾಯಿತೋ ಕಥೀ
ಧರ್ಮನ ಗತೀ

ನಿನ್ನೊಳುಮಿಗಿಲ್ಲವೋ ನೆಲೀ
ಎಲ್ಲಿಯ ಬೆಲೀ
ವೈರಿಯನು ಕೂಡ ಒಳಗೊಂಡು
ಪ್ರೇಮವ ಕಂಡು
ಅಬಲೆಯರ ಬಾಲಕರ ಹಿಂಡು
ಮಾಡಿದಿರಿ ದಂಡು
ಮುರಿದಿರಿ ಭೇದದ ಸಂದು
ವಿಶ್ವದ ಬಂಧು
ನಿಮ ಸೋಲಿಗೂ ಕೊನೆಗೂ ಜಯಾ
ಯಾರಿಗಿದೆ ಭಯಾ
ನಿತ್ಯಕರುಣಾ—ನಿತ್ಯಕರುಣಾ
ನೀವಿಟ್ಟ ಒಂದೊಂದs ಅಡಿ
ಮುಕ್ತಿಯ ಗಡಿ
ಬಂಧಹರಣಾ—ಬಂಧಹರಣಾ
ರಾಮನಾಮದಾಗ ನಿಮ್ಮ ಪ್ರೇಮಾ
ಅದೇ ನಿಂ ನೇಮಾ
ಕೊನೀಮೊದಲು—ಕೊನೀಮೊದಲು
—ಜಯಜಯಾ....

* * * *

ಎಲ್ಲರಿಗು ಅವರವರs ರೀತಿ
ಬೇರೆ ಬೇರೆ ಪ್ರೀತಿ
ಇಲ್ಲ ತೊದಲು—ಇಲ್ಲ ತೊದಲು
ಬಟಾಬಯಲಿನ್ಯಾಗ ಸಿಂರಾಜ್ಯ
ಮೋಸದ ಕೂಡ ವ್ಯಾಜ್ಯ
ಸುತ್ತು ದಾಳಿ—ಸುತ್ತು ದಾಳಿ

ನಿಂ ಚಥಾಯಿ ಮಾಡುವ ನೀತಿ
ಅಸಲ್ ನಿರ್ಭೀತಿ
ಹೇಳಿಕೇಳಿ—ಹೇಳಿಕೇಳಿ
ಛಲಬಲ ಇದ್ದು ಧೀರಾ
ಎಂಥ ಶೂರಾ
ಆಸಕ್ತಿ ಇಲ್ಲದಾ ವೀರಾ
ಪುಟ್ಟ ಪೂರಾ
ನಿಂ ಸ್ಮರಣ ಸ್ವರಾಜ್ಯದ ಹರಣಾ–
ದೀನ ಉದ್ಧರಣಾ
ನಿಂ ಚರಣ ದಾಸ್ಯ ಸಂತರಣಾ–
ದೃಷ್ಟಿ ವಿಸ್ತರಣಾ–
ಸುತ್ತಿರಲು ತಿಮಿರದಾವರಣಾ–
ಆಶೆಯಾ ಕಿರಣಾ
ವರುವರುಷದ ಶ್ರಾದ್ಧದ ದಿನ
ಶ್ರದ್ಧೆಯು ಧನ
ಉಪ್ಪಿನ ರಿಣಾ—ಉಪ್ಪಿನ ರಿಣಾ
—ಜಯಜಯಾ....

* * * *

ತಿರಗತ್ಯದ ನೂಲಿನ ರಾಟಿ
ಕವನ ಹೊಸ ಥಾಟಿ
ಕೇಳು ಸುಗುಣಾ—ಕೇಳು ಸುಗುಣಾ.
ನಿಂಗುಣ ಆಕಾಶದ ಚುಕ್ಕಿ
ಪಡೆಧಾಂಗ ರೆಕ್ಕಿ
ಕುಣಿತಾವ ಮುಂದ—ಕುಣಿತಾವ ಮುಂದ
ಅಂಬಿಕಾತನಯನ ಬಂಧ
ಸಮುದ್ರದ ಅಂದ

ಭಾವ ಭವನಾ—ಭಾವ ಭವನಾ
ಸ್ವಾತಂತ್ರ್ಯಜೇತ ಜಯಜಯಾ
ಹುಟ್ವಾ ನಿರ್ಭಯಾ
ದೇವಹವನಾ—ದೇವಹವನಾ
ಕವಿಹೃದಯ ದೀಪ್ತ ಭಾವನಾ
ಪ್ರೇಮ ಜೀವನಾ
ಕರುಣ–ಕವನಾ–ಸ್ಮರಣಕವನಾ.

ನವಯುಗಾರಂಭ

ಸಂಕ್ರಾಂತಿಗೆ ಮರ ಬಿರಿಯೆ,
ಪಡುವಲ ಗಾಳಿಯು ಹರಿಯೆ,
ನನೆದೋರಲು ಮೈ ಮುರಿಯೆ,
ಶಿಶಿರದ ಮಾಗಿ.

ರಥವೇರಿದನಿನ್ನು ರವಿ.
ಕಣ್ತೆರೆಸಿದ ಯುಗದ ಕವಿ
ಬೇವಿನಲ್ಲು ಮೂಡಿತು ಸವಿ
ಅಮೃತವು ತಾಗಿ.

ಭಾರತಹುಣ್ಣಿವೆ ಬಂತು :
ನಾನು ಮುಂತು ನೀನು ಮುಂತು
ಕಡಲು ಮೂರು ಮೊರೆವವಿಂತು
ಊದಿದೆ ಗಾಳಿ.

ಉತ್ತರೋತ್ತರೋತ್ತರೊಂದು
ಕೂಡಿ ಮೂಡಿ ಚಿಗುರು ಬಂದು
ತುತ್ತುತ್ತೂಽತುದಿಗೆಂದೂ
ಮುಗುಳ್ನಗೆ ತಾಳಿ.

ಅಗಸ್ತ್ಯದೊಡನೆ ಆದುದುದಯ
ಸಂಕ್ರಾಂತಿಗೆ ಇದೆ ವಿಜಯ
ಮಾಘವು ಸಾರುವದಭಯ
ಹೊಸದೋ ದಿನದಿನವು.

‘ಮಾತೆ ಕೃತಿಯು ರೂಪ ತಾಳಿ
ಘೋಷ ಸಿದ್ಧಿಯಾಗಿ ಬಾಳಿ’
ತನ್ಮ್ರ ತಾವೆ ಮೊದಲು ಆಳಿ
ಏಳಲಿ ಜನವು.

ಜ್ಞಾನದಿ ಮತಮತವು ಕೂಡಿ
ರಸವು ಭಾವದಲ್ಲಿ ಮೂಡಿ
ದೈವಪೌರುಷಗಳ ಜೋಡಿ
ತಳಹದಿ ಕೃತಿಗೆ.

ಹಳ್ಳಿ ಹಳ್ಳಿ ಸಕಲ ಭೋಜ್ಯ
ಭಾರತವಿದು ಅವಿಭಾಜ್ಯ
ಜಗತ್ತೆಲ್ಲ ಏಕರಾಜ್ಯ
ಸಾರಲಿ ಶ್ರುತಿಗೆ.

ಅವರವರಿಗೆ ಅವರ ಹಾದಿ
ಪ್ರತಿಕಿರಣಕು ರವಿಯೆ ಆದಿ
ಸಪ್ತಸ್ವರಕು ಶ್ರುತಿ ಸನಾದಿ
ಸಂಗತಿಗೀತ.

ಸೌಜನ್ಯವ ಶಕ್ತಿ ಬೆಳೆದು
ಸತ್ಯದಲ್ಲಿ ಪ್ರೀತಿ ಮೊಳೆದು
ಆನಂದವೆ ರೂಪ ತಳೆದು
ಆಗಲಿ ಸುಪ್ರೀತ.

ಹೃದಯಸಮತೆ ಮೊದಲ ಪಾಠ
ಬಾಂಧವ್ಯವೆ ಜೀವದಾಟ
ನೂರು ಮುಖಕು ಒಂದೆ ಪೀಠ
ಸಿಂಹದ ದಾರಿ.

ಆನೆಯಹಂಕಾರ ತುಳಿದು
ಕಾಮನ ಬಿಲ್ಲನ್ನು ಹಿಳಿದು
ಜಯಮಾಲೆಯ ಕರದಿ ತಳೆದು
ಬರುತಿರಲೇರಿ.

ತಕ್ಕಡಿಗೋ ಬೇಡ ಕಾಣೆ
ತೂಗುತಿರಲಿ ಸತ್ಯವಾಣಿ
ಕಣ್ಮುಚ್ಚಿಸು ನ್ಯಾಯರಾಣಿ
ಭಾಗ್ಯವ ಕೊಡಲಿ.

ಹೃದಯಕಮಲದೇಕಚಕ್ರ
ಮುರಿಯಲಿ ವಾಸನೆಯ ವಕ್ರ
ಉಷೆಯ ಹಣೆಗೆ ಬೆಳ್ಳಿ ಶುಕ್ರ
ತಿಲಕವನಿಡಲಿ.

ತಾಯಿ ಸಿಂಹವಾಹಿನೀ
ಗಜಾಂತಲಕ್ಷ್ಮಿ ಪ್ರದಾಯಿನೀ
ಅತುಲೆ ಸರ್ವಸಾಹಿನೀ
ವಿಶ್ವಮೋಹಿನೀ.

ಅರಳಿಸು ಹೃದಯಾರವಿಂದ
ಸಾವಿರದೀ ಏಕಬಂಧ
ಕುಣಿಯಲಿ ಸ್ವಚ್ಛಂದದಿಂದ
ನವಯುಗದಂದ.

ಸಂಖ್ಯಾಂಕಿತ

ಹತ್ತಾಗೆ ಅಯ್ದುಕ್ಕೆ ಅದರ ತೋಳ್ ತೊಡೆ ಅದಕೆ.
        ನೀರರು ಪರಸ್ಪರರ ತಿರುಳು ನೆರಳು.
ಪಾಡುಪಟ್ಟಿತು ಕರುಳು, ರಾಗರಂಜಿತ ಕೊರಳು.
        ತಂತಿಯಲಿ ಮೂಡಿಸಿತು ಒಲಿದ ಬೆರಳು.

ಕಳೆದರೂ ಕೂಡಿಸಿಯು ಗುಣಿಸಿಯೂ ಭಾಗಿಸಿಯು
        ಒಂಬತ್ತು ಇಹುದು ಒಂಬತ್ತರಂದ.
ಅಂಕೆಯಲಿ ಸಂಖ್ಯೆಯಲಿ ಕೂಡಿಸಿಯು ಗುಣಿಸಿಯೂ
        ಒಂಬತ್ತು ಏಗಳೊಂಬತ್ತರಂದ.

ಸೊಲ್ಲು ಎಂಬುದು ನಾದ, ಭಾವದಲ್ಲಿದೆ ಸ್ವಾದ
        ಸ್ವಗತವಿಲ್ಲದ ವೋದ ಹೊಳಲುಗೊಡದು
ಓಹೋ ನವೋನವದ ಸೊಬಗ ಬಣ್ಣಿಸಬಹುದೆ
        ಒಂಬತ್ತು ತನ್ನತನ ತಾನು ಬಿಡದು.

ಎಂಟರಲ್ಲುಂಟು ದಿಗ್ಬಂಧವೆಂಬುವ ಚೆಂದ
        ಘನವೆಷ್ಟೆ ಆದರೂ ಅಷ್ಟಕೋಣ.
ಮಲ್ಲಿಗೆಯ ಅಂಟು ಇದ್ದಂತೆ ನೇಹದ ನಂಟು.
        ಮೈತುಂಬ ಅದಕುಂಟು ಮುಳ್ಳುತಾಣ.

ಏಳು ನೆಲೆಯಲ್ಲಿ ನೆಲಸಿಹುದು ನಿಲುವಿನ ನಲುಮೆ
ನಿದ್ದೆಗನಸುಗಳಲ್ಲಿ ಬಗಿಯಿತೇನು?
ಎದ್ದವರು ಗೆದ್ದವರು ಬಾನುಂಬ ಕಾಣುವರು
ಚುಕ್ಕೆ ತೋಟಗುಟ್ಟುತಿಹ ಜೇಕು-ಜೇನು.

ಆಸರೆ ಎನಬೇಡಣ್ಣ! ಆದರೇ ಆರಾರೆ?
ಕಣ್ಣಾರೆ ಮನವಾರೆ ಬಾಳಬೇಕು.
ನಾಡನ್ನು ಕಾಡೆಂದು ಬೀಳುಗಳೆವರೆ ಬೇಡ
ಕಟ್ಟಿ ಪಟ್ಟಣವನ್ನು ಆಳಬೇಕು.

ಕೈಯೊಳಿಲ್ಲವೆ ಕೈದು ಬದುಕು ಗೈಮೆಯು ಗೈದು.
ಅಯ್ದಕ್ಕೆ ಅಯ್ದು ಜತೆ ಹತ್ತಲುಂಟು.
ಮುತ್ತಯ್ದ ಮುತ್ತಯ್ದೆ ದಾಂಪತ್ಯವನ್ನೆರೆದೆ
ಮರಮರಳಿ ಬೀಜವನೆ ಬಿತ್ತಲುಂಟು.

ನಾಲ್ಕು ಮೂಲೆಗು ಹಬ್ಬಿ ಸಲಿವು ನಳನಳಿಸುವದು
ಚಾತುರ್ಯ ಚಾರುತ್ವ ಚರಿತವೆಂದು,
ಒಂದೆ ನಾಲಿಗೆಯಲ್ಲಿ ರಸವಿಸರ ಪಸರಿಸಿದೆ
ಪ್ರಕೃತಿ ಪೌರುಷ ಜಗದ್ಭರಿತವೆಂದು.

ಮೂರರೊಳಗಿದೆ ಒಂದು. ಕೇಂದ್ರದೊಳು ಬಾ ಹೊಂದು
ಸಂದು ಬಿಡದಂತೆ ಕಲೆಗೂಡಿಕೊಂಡು,
ಅಧಮ ಉತ್ತಮ ಮಧ್ಯಮವನು ಬೇರ್ಪಡಿಸಿವರು
ಓಂಕಾರ ಮಂಡಲದಿ ಶೂನ್ಯಚೆಂಡು.

ಎರಡಿಲ್ಲದೊಂದಿಲ್ಲ, ಒಂದಿರದ ಎರಡಿಲ್ಲ
ಎರಕದಲಿ ಹುಟ್ಟುವುದು ಒಂದೆ ಮೂರ್ತಿ.
ಅವಿಭಕ್ತ ಭಕ್ತಿಯಲಿ, ಸಮರಸದ ಶಕ್ತಿಯಲಿ
ಭಕ್ತ ಭಗವಂತರಲಿ ಒಂದೆ ಕೀರ್ತಿ.

ಒಂದರಲಿ ಹಲವುಂಟು, ಬೀಜಫಲಗಳ ಗಂಟು
ಪ್ರಸ್ತಾರ ವಿಸ್ತಾರ ಆಗುಹೋಗು.
ಕಂದ ಮಾಕಂದಗಳ ತೋಪಿನಲಿ ಮೆರೆಯುವದು
ಅಂಬೆಯಮ್ಮಾಯೆಂಬ ಕರೆವ ಕೂಗು.

ಯಮನಿಯಮಗಳ ಗಂಟು ಪ್ರಾಣಾಯಾಮದ ನಂಟು
ವಾಮನಾಕಾರದಾ ಕುಬ್ಜನಂತೆ
ಹತ್ತೆಂದು, ನೂರೆಂದು ಸಾಸಿರದ ಲಕ್ಷವೋ
ಜೀವಕೋಟಿಯು ಕೊನೆಗೆ ಅಬ್ಜದಂತೆ.

ಮಾತುಮೌನ

ದಿನದ ರವಿಯು ಪ್ರಭೆ ಚುಕ್ಕೆ ಚೂರಾಗಿ ದಿಕ್ಕು ದಿಕ್ಕಿನಲ್ಲಿ
ಸಿಕ್ಕಿಕೊಂಡಿತ್ತೋ ಕತ್ತಲಲ್ಲಿ ಇನ್ನೂ ನಿಶೆಯು ನಕ್ಕಿತಿಲ್ಲಿ.

ದುಂದುಗಾರ ಚಂದಿರನು ಇಣುಕಿದನು ಬೆಳಕೆ ಸಾಲದಾಗಿ
ರಸಿಕ ನೀತಿಯಲಿ ಬೆರೆಸಿ ಬಳಸುವನು ತನುವ ಸಾಲವಾಗಿ.

ನಿದ್ದೆಯುಸಿರ ಶ್ರುತಿ ಹಿಡಿದು ಮೀಟುತಿದೆ ಮಾನಸವೀಣೆಯನ್ನು
ಕನಸು ಕುಣಿಸುವದು ಮನೋಮದಿರೆ ಪ್ರಜ್ಞಾಪ್ರವೀಣೆಯನ್ನು.

ಇರುಳ ಗಸಿ ಇಳಿದು ನಸುಕು ಮುಸುಕಲಿದೆ ತುಪ್ಪ ತೇಲುವಂತೆ
ಕಸರು ಕಳೆದು ತನು ಹಿಂಜಿ ಬಂತು ರವಿಕಿರಣ ನೂಲುವಂತೆ.

ಕೂಸು ಹಾಸಿನಲಿ ಹಕ್ಕಿ ಉಲಿಯುತಿವೆ ಜೋಲಿ ಜೋಲಿಯಲ್ಲಿ.
ಕುಸುಮ ಸೌರಭಕೆ ಭಾವ ನವಿಗೆರೆಸಿ ಉಷೆಯು ಸಾಲೆಯಲ್ಲಿ.

ಮನವು ಮೌನದಲಿ ಹೆಪ್ಪುಗೊಂಡಿರಲು ಮಂಜು ದಿಣ್ಣೆಯಂತೆ
ರವಿಯ ಬಿಸಿಯು ಕಡೆಗೋಲ ಕಡೆಯೆ ಸಿಡಿದಿತ್ತು ಬೆಣ್ಣೆಯಂತೆ.

ನಿನ್ನ ಕುರಿತು ಮಾತಾಡದಿರುವುದೇ ಮೌನ ಯಜ್ಞವೆಂಬೆ.
ನನ್ನ ಬಣ್ಣನೆಯು ಸಣ್ಣ ಮಾತಿನಲು ನೀನೆ ಪೂಜೆಗೊಂಬೆ.

ನೃತ್ಯಯಜ್ಞ

ಗಿರಿಶಿಖರದಿ ಶಿಖೆಯನೆತ್ತಿ ಶಿಖಿಯು ಕೇಕೆ ಕರೆವುದು :
" ನೋಡ ಬಂತು ಮಿಂಚಿತಂತು ಗುಡುಗು ಮಳೆಯು ಬರುವುದು. "
ಜಗವೆಲ್ಲವು ಮೊರೆಯಿಡುತಿರೆ ಕುಣಿಯುತ್ತಿದೆ ಕೇಕೀ
ಸಖಿ ಸಂಮುಖ ತಲ್ಲೀನತೆಯಲಿ ಏಕಾಕಿ
ಹೇ ಶಿಖಂಡಿ ಹೇ ತ್ರಿದಂಡಿ ನಿನ್ನೊಡ ಚಾಮುಂಡೀ.
ತಾಂಡವಕ್ಕೆ ಹಾಸ್ಯಲಾಸ್ಯ ಬೆರಸುವ ರಣಚಂಡೀ.
" ದಿಕ್ಕು ದಿಕ್ಕು ಕತ್ತಲಿಸಿತು ಪ್ರಳಯವೆ ಇದು ಬಂತೇ
ಮುಳುಗಿಸುವದೊ ತೇಲಿಸುವದೊ ಕಾಲವೆ ಎಂಬಂತೆ. "
" ಥಕ ಥೈ ಥೈ ಧಿಕಿ ತಟತೋಂ ಇದೇ ತಾಲ ಮಳೆಯದೋ
ಹಳ್ಳಕೊಳ್ಳಗಿರಿದರಿಯಲಿ ಹರಿಯುತ್ತಿಹ ಹೊಳೆಯದೋ ?
ಬರಲಿಹ ಬೆಳೆ ಪಯಿರಿನಲ್ಲಿ ಕುತುಕದಿಂದ ಕುಣಿವುದೋ
ಋತುರಾಜನ ಋತಜಾತದ ಜೀವನದಲಿ ಋಣವಿದೋ!
ಓ ಕುಮಾರ, ಬೇಗ ಬಾರ, ತುಂಬಿ ತಾರ, ಬೆಳೆಯನು.
ಕಾರ್ತಿಕದಲಿ ಭೂಮಿ ಕಾಂಬ ಶಾರದೀಯ ಕಳೆಯನು
ಆಹಾ ಸಖಿ, ಆಹಾ ಸುಖಿ, ಸಾವಿರ ಶಿಖಿ ಹೊತ್ತಿವೆ. "
" ಕುಣಿಯೊ ಕುಣಿ ಸಹಸ್ರಮುಖೀ ಆಸೆ ತಲೆಯನೆತ್ತಿವೆ
ಅನ್ನ ಅನ್ನ ಬುಸುಗುಡುತಿದೆ ಮಾನವನಾಗರವು
ತೆರೆತೆರೆಯಲಿ ತೆರೆಯಿತು ನವ ದುಃಖದ ಸಾಗರವು
ತಾರಕ ಸಂಹಾರಕನಾಗುತ ಆಗೊ ಕಂದರ್ಪ
ದರ್ಪದಿಂದ ಹೆಡೆ ಸೆಡೆಯುತ ತಾಂಡವಿಸಿತು ಸರ್ಪ.
" ಶಕ್ತಿಕಂದ ಶಿವನಂದನ ಶಿಖಿ ಸ್ಕಂದನ ಕರೆವೆ
ವಾಹನವಾಗಲು ಅರ್ಪಿಸಿ ಅವನಲಿ ಮೈದೆರೆವೆ.

ಅಗ್ನಿದೇಹಿ ಆತ್ಮಸ್ನೇಹಿ ಬಾರೋ ಬಾ ಷಣ್ಮುಖಾ
ಚತುರಂಗದ ಚಾತುರ್ಯದ ಜ್ಞ ಸಕರ್ಪಸಮಸುಖಾ
ಶಿಖಿಗಂಡನೆ ಮೈಗೊಂಡನೆ ಕೆಂಗೆಂಡನೆ ತೋರೈ
ದೇವತೆಗಳ ಸೇನಾಪತಿ ಭೂರಂಗಕೆ ಬಾರೈ."
"ಶಿಖೀ ಶಿಖಿ ಸಹಸ್ರನಖೀ ಪಕ್ಷಾವೀಕ್ಷೆಯುನೆ
ಬಾಜಿಸಿ ಪರ್ಜನ್ಯವ ಕರೆ ಅಂತರ್ಜ್ಞಾನಿಸಿಯೆನೆ."
ಕಣಕಣದಲಿ ಕಣ್ ಕಾಣೆಯಲಿ ಪರಮೇಷ್ಠಿಯು ಕಂಡು
ಸಾಮುಷ್ಟಿಕ ಕ್ಷೇತ್ರದಲ್ಲಿ ವ್ಯಕ್ತಿಯು ಸುಖವುಂಡು
ಐಕ್ಯಸಮುದ ತಾಯಿಯಲ್ಲಿ ಒಡುವಘು ಉದ್ದೀಪ್ತ
ಆ ತುರಾಯಿ ಕುಣಿಸಿ ಕುಣೀ ಓ ಪ್ರಜ್ಞಾ ಸುಪ್ತಾ.
ಅಕ್ಷರದೀ ಬ್ರಹ್ಮಕೃತ್ಯ ನಿತ್ಯದ ಈ ನೃತ್ಯ
ಚಿತ್ತದಲ್ಲಿ ಚಿತ್ರಿಸುತಿರೆ ಮರ್ತ್ಯವಹುದಮರ್ತ್ಯ.
ಪುರುಷನಿದಿರು ಪ್ರಕೃತಿ ಕುಣಿವುದೆಂದು ಸಾಂಖ್ಯಸೂತ್ರ
ಪ್ರಕೃತಿ ಸಾಕ್ಷಿ ಪುರುಷನಾಟ್ಯ ನಮ್ಮೀನವ ವಿಚಿತ್ರ.
ಇದೆ ಪೌರುಷ, ಇದೆ ಸೌರಸ, ಇದೆ ಚೌರಸವೆಂದು
ನೆತ್ತಿ ಹೊತ್ತ ಆತ್ಮಶಿಖಿಯು ಪರಿಣಾಮವ ಕಂಡು
ಬೇಸಗೆ ಸಟೆ ಶಿಖಿಗಂಡಿತು ಶತದಳಮುಖ ಉರಿಯೋ
ಹುಬ್ಬಿನ ಮಬ್ಬಿನ ಬಸಿರ್ ಬಂಗಾರದ ಬಾಯ್ದೆರೆಯೋ
ಗೌರೀಶಂಕರ ತಲೆಯೆತ್ತಿದೆ ಕೇತುವೆ ಎಂದೋ
ಧಿಮಕಿಡುತಿದೆ ಆ ಕುಮಾರಿ ಆ ಸೇತುವೆಯಿಂದೋ?
ಹಾ ಭಯವೋ ಓ ಸಿದ್ಧಿಯೊ ಸಿಂಧುನದ ಒಲವೋ
ರೌದ್ರದ ಮೊರೆ ಹೇಸಿಗೆ ಮೊರೆ ಮಾನವ ದಳವೋ.

ನಾಳೆ ಎಂಬುವದು ನಿನ್ನಿನ ಮನಸು

ನಾಳೆ ಎಂಬುವದು ನಿನ್ನಿನ ಮನಸು
ಮುಂದೆ ಎಂಬುವದು ಇಂದಿನ ಕಣಸು.
ಭೂತದಿಂದಲೇ ಭಾವವು ಬಂತು
ಭಾವವಿಲ್ಲದೇ ಉದ್ಭವವೆಂತು ?
ಕರ್ಮವಿಲ್ಲದಾ ಧರ್ಮವದೇಕೆ ?
ಧರ್ಮಧಾರಣೆಯು ಹಣಕ್ಕೆ ಬೇಕೆ ?
ಸತ್ ಎನ್ನುವದು ಸತ್ತವಗಲ್ಲಾ
ಇರುವ ಭಾಗ್ಯವದು ಅರಿವವಗೆಲ್ಲಾ
ಪೊಳ್ಳು ಜೊಳ್ಳು ಅದು ಅಭಾವ ಶೂನ್ಯ
ಅದನ್ನು ತುಂಬಿದೆ ಪೂರ್ಣದ ಪುಣ್ಯ
ಗೊಳಲಿಯು ಒಳಗಿದೆ ಬೆಳೆಯುವ ಬೀಜ
ಕತ್ತಲನ್ನೆ ಬಣ್ಣಿಸುವಾ ತೇಜ.
ಮೌನದಲ್ಲಿಯೆ ರಾಗವ ಬೆರೆಸಿ
ಛಂದದಲ್ಲಿಯೇ ಜಗವನು ಹರಸಿ
ಅನಂಗರಾಗದಿ ಅಂಗವ ಕುಣಿಸಿ
ಭೌಮದ ಪಾದಕೆ ಅಲ್ಪವ ಮಣಿಸಿ
ಒಲವಿಗೆ ನಲಿಯುವ ಅನಾದಿ ಮಿಥುನ
ಒಂದನೆ ನೂರೊಂದೆನಿಸುವ ರತುನ.
ತನ್ನನೆ ತಾನೇ ತಿಳಿಗೊಂಡಂತೆ
ಶಿವನ ಶಕ್ತಿಯೇ ಎಳಿಗೊಂಡಂತೆ

ಭಕ್ತಿಯಲ್ಲಿ ಭಗವಂತನ ಕಂಡಂತೆ
ವಿಯೋಗವೆಂಬುದು ವಿರಹದ ಬೆಂಕಿ
ಯೋಗರಹಸ್ಯದ ಮೊದಲನೆ ಅಂಕಿ
ಶಿವಕಲ್ಯಾಣವು ಕೂಡಲ ಸಂಗ
ರುದ್ರವಿಲಾಸವು ಜೀವನಭಂಗ.

ಅಆ

“ ಜನಕೆ ಶಾಂತಿಯನು ನೀಡಲೆಂದು ಹೊರಟಿರುವ ಹಸಿಯ ಹುಡಗ!
ಗಾಳಿಗೆಷ್ಟು ಹರಿದೀತು ಹಾಹೆ ಹುಟ್ಟಿಲ್ಲದಾಗೆ ಹಡಗ?
ಕ್ಷೋಭೆಗೊಂಡು ಹುಚ್ಚೆದ್ದು ಹರಿವೆ ಹೇಳೆಲ್ಲಿ ನಿನ್ನ ನಲ್ಲೆ ?
ದಿಕ್ಕಿಲ್ಲದಂತೆ ಹರಿದಾಡುವವಗೆ ಚುಕ್ಕಾಣಿ ಬೇಡ, ಬಲ್ಲೆ.”

“ ಆನೆಯೆತ್ತರಕೆ ಎದ್ದ ತೆರೆಗಳನು ನಾನು ಇದಿರುಗೊಂಡು
ನೂರು ಅಲೆಗಳಲಿ ಚಂದ್ರಕಲೆಗಳನು ಚೂರು ಚೂರು ಕಂಡು
ಪೂರ್ಣಬಿಂಬವನು ಕಾಣಲೆಂದು ಹಾಡಿದೆನು ಹೃದಯವೇದ;
ಬ್ರಹ್ಮನಾದ ತುಂಬಿರಲು ದನಿಯ ಕೂಡಿಸಿತು ಬ್ರಹ್ಮವಾದ.”

“ ರಾಗದಲ್ಲಿ ಮೂಡುವನು ರವಿಯು ಅನುರಾಗದಿಂದ ಮುಳುಗಿ
ನೆಲದ ಜೆಂಬಲಕೆ ನಿಲುವ ಕತ್ತಲವ ತಿಂಗಳಾಗಿ ಬೆಳಗಿ
ಧ್ರುವದ ನೆಲೆಗೆ ತಲೆಗೊಟ್ಟು ತಿರುಗೆ ತಿರುಗುವದು ತಿರೆಯ ಪ್ರೀತಿ
ಮಣ್ಮರದ ಕೆಚ್ಚು ಪ್ರತಿ ಸುಗ್ಗಿಯಲ್ಲಿ ಪಲ್ಲವಿಸೆ ಜಾತಿ ಜಾತಿ.

‘ ಆ ’ ಎಂದು ಬಾಯು ತೆರೆವುದಕು ಮೊದಲು.‘ ಅ ’ ಮೂಡಬೇಕು ಒಳಗೆ
ಈಶಪ್ರಣಯದಲಿ ಸೃಷ್ಟಿಯಾಗುವದು ಪ್ರಣವನಾದ ವೊಳಗೆ.”

ಆಹನೆ

ಆಹ, ಆಹಹ ಆಹನೆ! ಗಹಗಹಿಸಿತೆಲೆ [illegible] ದಿಗಂತದಲ್ಲಿ;
ಕುಲುಕುಲನೆ ನಗುತ ಕಿಲಿಬಿಲಿಸಿ ಉಲಿದು ಕಲರವವು ಮೂಡಿತಲ್ಲಿ.

ಕೋಗಿಲವ ಮೊದಲ ಕುಕಿಲೊಂದ ಕೇಳಿ ಕೂಗುವದು ಕೋಳಿಯೊಡನೆ;
ಬೆಳ್ಳಿ ಕರಗಿ ಬೆಳಗಾಯ್ತು ಏಳು ಹಗಲಾಗಿ ಭಗನು ಸುಡನೆ?

ಗಂಡು ಹೆಣ್ಣು ದಿನದಂತೆ ಎದ್ದು ದಿನದಾಟವಾಡುತಿರಲು
ನಿನ್ನೆ ನಾಳೆಗಳ ಸಂಧಿಯಲ್ಲಿ ಜನ ನೋಟ ನೋಡುತಿರಲು.

ಗಂಗೆ ಯಮುನೆ ಕರ್ಣಗೊಸೆಗೆ ಇಳಿದು ಕುಣಿಕುಣಿದು ಹರಿಯುತಿಹುದು
ಸರಸ್ವತಿಯು ಸಾಹಿತ್ಯದಲ್ಲಿ [illegible] ಹರಿಯುತಿಹುದು.

ಸಂಜೆಗೆಂಪ ನಾಚಿಸುತ ಬಂತು [illegible] ಬಂಬ ಒಂದು
ಚಿನ್ನಸಕ್ಕರೆಯು ಬೆರೆಯೆ ಭರತಿ ಉಕ್ಕುವದು ಕ್ಷೀರಸಿಂಧು.

ಹಗಲುಗನಸುಗಳು ದಿಗಿಲುಗನಸುಗಳು ಬರಲು ಜಾತ್ರೆಗಾಗಿ
ಹೃದಯ ಹೃದಯಗಳ ಕೂಡಲಾಗು[illegible] ದೇವಯಾತ್ರೆಗಾಗಿ.

ಮಣ್ಣು ಮೈಯ ಮಗು ಮೂಡಿದಾಗ ಸುಗಮಾಗಿಸಿತಣ್ಣ ಮುಗಿಲು
ಸೊಕ್ಕುಜವ್ವನದ ರಾತ್ರಿರಾಣಿ ಮುಸುಕ[illegible]ಡಿಸೆ ಆಯ್ತು ಹಗಲು.

ಗೋವತ್ಸಲೀಲೆ

ಗೋವತ್ಸಲೀಲೆ ತೊರೆಕರೆಯು ಮೇಲೆ । ನವಾಟಿ ಸಜ್ಜೆ ಸಾಲೆ.
ಕೊಳಲೆಲ್ಲೊ ಉಲಿಯೆ ಹರಿನೀರು ನೇಯೆ ಎಲ್ಲೆಲ್ಲು ಭೃಂಗಮಾಲೆ.
ಇದು ಭೋಗಭೂಮಿಯೋ ಯೋಗಭೂಮಿ ಅರಿದೆಂದು ನೋಡುತಿದ್ದೆ.
ಕಲ್ಪನೆಯ ಬೊಗರಿ ತುದಿಬೆರಳ ತಿಗರಿ ಓ ಆಡುತಿತ್ತು ನಿದ್ದೆ.
ಹಸಿ ಹಾಲು ಕೂಡ ಬಿಸಿ ಎಂದು ಬಂದ—ತಾ ಬಾಲ, ಕೃಷ್ಣನಾಗಿ
ಕೆನೆಕೆನೆಯು ಎಂದು ಮುಖ ಚಾಚಿ ನಿಂದ ಆ ತಾಯಿ ಕೆನ್ನೆಗಾಗಿ.
ಬೆನ್ನೆ ಒರಗಿ ಹೆಗಲಲ್ಲಿ ಬಾಗಿ ಚಾಚಿತ್ತು ವತ್ಸವಲ್ಲಿ.
ಹೃದಯ ಕಂಚುಕವ ತೊಯ್ದು ಹನಿಸುತಿದೆ ತೊರೆದ ಹಾಲಿನಲ್ಲಿ
ಸೋಮ ತಾರೆಯುರ ಮೈತ್ರಿ ಕೂಡಿತ್ತು ಶಕ್ತಿ ನೇತ್ರದಲ್ಲಿ.
ಪುಷ್ಪದತ್ತ ಅರಳಿದನು ಒಲವಿನಲಿ ವಿಶ್ವದ ಪಾತ್ರವಲ್ಲಿ.
ಸತಿ ಮುಖದ ಸುಖಕೆ ಶಿವನಟ್ಟಹಾಸ ಕಡಲಾಗಿ ಉಕ್ಕುತಿತ್ತು.
ಧರ್ಮರೂಪ ವಾಕ್ಕರಣದಿಂದ ಶಿವಚರಣ ನೆಕ್ಕುತಿತ್ತು.
ಮಲ್ಲಿಕಾರ್ಜುನನ ಶಿಖರದಲ್ಲಿ ಮೂಡಿತ್ತು ಚಂದ್ರಬಿಂಬ.
ಬಯಲಾಗಿ ನಿಂತ ನಿರ್ವಾಣಮೂರ್ತಿ ನಗುತಿತ್ತು ಬಾಯಿತುಂಬ.

ಅಪಾರ್ಥ–ಸಮೀಕ್ಷಕರಿಗೆ

ನನ್ನೀ ನುಡಿ ನನ್ನೀ ನುಡಿ
ದೇವರ ಒಡನಾಡಿ.
ಕಿಡಿ ಉದಿರಿಸಿ ಸಿಡಿವಿರಿಗೋ
ನೆರಳಿಗೆ ಬಡದಾಡಿ.
ಕೇಳದ ನುಡಿ, ಕಾಣದ ನಡೆ, ಒಳಿತಿಗೆ ಕಿಡಿಗೇಡಿ.
ಕನ್ನಡವಿದೆ ಕನ್ನಡಿಯಿದೆ
ಕಣ್ಣಿದ್ದರೆ ನೋಡಿ.
ಮುನಿಯದಿರಿ ಮೌನವಿರಿ
ಕಿವುಡರಿರಾ, ಕುರುಡರಿರಾ, ಮೂಕತ್ವವು ಲೇಸು.
ಮೊಂಡರಿರಾ, ಹೆಳವರಿರಾ,
ಕುಂಟುತ ಕುಣಿಯದಿರಿ.
ಸಗ್ಗ ಸಗ್ಗ ಸಗ್ಗವದೋ ಅದು ಉರುಲಿನ ಹಗ್ಗ.
ನರಪೇತರ ನರಕವಲ್ಲಿ ಹೊಸೆಯದಿರೀ ಕಗ್ಗ.
ದುರ್ಮತಿಯಲಿ ಬಯ್ದಾಡುವ
ಓ ನಾಡಿನ ಬಂಧು!
ತಲೆಯಿದ್ದರೆ ಹೇಳುವೆನಿಗೊ
ಕವಿಮಾತನ್ನೊಂದು:
ಕಾಲಕ್ಕೂ ಕೊನೆಯೊಂದಿದೆ
ಉಳಿಸಿರಿ ಉಸಿರನ್ನು.
ಉದ್ಧತರೊಲು ಕೆಡಿಸುವುದೇ
'ಪ್ರಗತಿ'ಯ ಹೆಸರನ್ನು?

ತಿಮ್ಮನೆ ಬೊಮ್ಮನೆ ಸಮ್ಮನೆ
ಒರಲಿದರೇನರ್ಥ?
ವ್ಯರ್ಥವದೋ ಅದು ಅನರ್ಥ ಅಯ್ಯ! ಅಪಾರ್ಥ!
ನನ್ನೀ ನುಡಿ ತೆರೆ ಎದೆ—ಗುಡಿ
ದೇವರ ಬರವಾಡಿ;
ಕಡಿದಾಡುವಿರೇತಕ್ಕಿದು ದೆವ್ವನ ಮುಂದೂಡಿ,
ನಾಗನ ನಾಲಿಗೆಯಾಡಿಸಿ ಅಣಗಿಸಿ ಹಿಂದಾಡಿ?
ಒಕ್ಕಟ್ಟದು ಬಿಟ್ಟು ಚೌಕಟ್ಟಿನ ಗುಟ್ಟು.
ತಿಳಿಯದೆ ನಾಡನು ಕಟ್ಟುವೆ
ಜೀವವ ಒಕ್ಕೊಟ್ಟು.
ಒಣಹಿಂಡಿಯ ಕೂಳುಣ್ಣುವೆ
ಎಳ್ನೆಯ್ ರಸಬಿಟ್ಟು.
ಗೆಳೆಗೆಳೆಯರ ಕನ್ನಡವಿದು
ಕನ್ನಡಿಗರ ನಾಡು.
ಜೀವಾಳದ ಉಸಿರೆತ್ತುತ ರಸನೇತ್ರದಿ ನೋಡು.

ಭಕ್ತನಲ್ಲ ರಾಗಿ ವಿರಾಗಿ

ಭಕ್ತನಲ್ಲ ರಾಗಿ । ವಿರಾಗಿ ।
ಭಗವಂತನ ಭೋಗಿ ॥
ಅಹೋಹೋ । ಮಹಾವಿಶ್ವಯೋಗಿ ।
ಅಂತರಂಗವನೆ ನಾಟ್ಯರಂಗವನು ಮಾಡಿದ ನಟ ಜೋಗಿ !
ಸಮುತಳಕದ ರಂಗಿನಲ್ಲಿ ತಣಿಸಿದೋ ನೀ ಪ್ರೇಕ್ಷಕನಾಗಿ !
ಅಹಾ ರಸಿಕ ಜಾಣಾ ।
ಎಲ್ಲಿಯು ಹುಸಿ ದುಃಖವ ಕಾಣಾ ।
ಸಾತ್ವಿಕ ಸ್ವ[illegible] ಸಾಕಾರವಾಗುತಿಹೆ ನಾಟಕದ ಸವಿಬಾಳು.
ಕತಕತ ಕುಣಿವುದು ಕದನಸದನದಲಿ ಅಜ್ಞಾನದ ಗೋಳು.
ನೋಟವೋ ಆಗಿ ಹೋಯಿತು ಹೋಳು.
ಹೊರಳಿ ನೋಡು ಮರಮರಳಿ ನೋಡು ಒಳಗರಳಿ ನೋಡು ನೋಟ.
ಅಮೃತವನ್ನೆ ಬಸಿದಲ್ಲಿ ತುಂಬಿ ಕಂಡಿಹುದು ಕಾಲಕೂಟ
ಅಹಾಹಾ ಏನಿದು ಹೊಸ ಆಟಾ ॥
ಹಮ್ಮು ಬಿಮ್ಮು ತೊರೆ ಯೋಗಿ ಇಳಿದು ಬಾ ವೇದಿಯಿಂದದಿ ಬಾಗಿ.
ತಲೆಯು ದಿಮ್ಮು ಇಳಿಸಿತು ನಮ್ಮನೀ ನೀ ಕಟ್ಟೆರೆ ತಾಗಿ
ಎಲೋ ಕ್ಷುದ್ರ ತ್ಯಾಗಿ ॥

ಊರು ಮತ್ತು ಖಾಲ್ಡಿಯಾ

ಊರು ಮತ್ತು ಖಾಲ್ಡಿಯಾ
ಬಾಬಿಲೋನ ಅಸೀರಿಯಾ
ಮಡಕೆಚೂರು ಬಳೆಯ ಚೂರು
ಮಣ್ಣ ಗುಪ್ಪೆ ಸೇರಿಯಾ?

ಪೃಥು ಮೇದಿನಿ ಪರ್ಶಿಯಾ
ಆರ್ಯಪುರಾಣ ಹಿಂದಿಯಾ
ದೇವ ಅಸುರ ಆರ್ಯನಾರ್ಯ
ನಿನ್ನ ನೀನೆ ಕೊಂದೆಯಾ?
ಮತ್ತೆ ಬಂಧು ಎಂದೆಯಾ?

ಎಲೋ ಎಲೋ ಯುಲೋ ಚೀನು
ಮೊಸಳೆಬಾಯ್ಗೆ ಸಿಕ್ಕ ಮೀನು
ಪ್ಯಾಸಿಫಿಕ್ಕಿನಾಚೆಗೆ
ಶಾಂತಿಯನ್ನು ಕಳೆದುಕೊಂಡು
ಎಸರು ಕುದಿವ ವೀಚಿಗೆ
ಎರಡು ಕಡೆಗೆ ಬೀಚಿಗೆ.

ಕುರುಕ್ಷೇತ್ರದೆರಡು ಬಣ
ವಿಜ್ಞಾನದ ತಟಿತ್ ಕಣ.

ಮಾನವತೆಯ ಕೊರಳ ಸೂತ್ರ
ಹರಿಯಲು ಕಟಿಬದ್ಧರು.
ಗೆದ್ದರೋ ಬಿದ್ದರೋ
ಸತ್ತು ಬದುಕಿ ಇದ್ದರೋ.

ಸಿವಿಲಿಸೈೞೇಶನ್ ವ್ಹಲ್ಚರು
ಕಲ್ಚರೋ ಸೆಪಲ್ಚರು.
ನೆಲವೆಲ್ಲವು ಮಸಣ ಮಸಣ
ನೋಡಿದಲ್ಲಿ ಇಲ್ಲ ಹಸನ.

ಅತಳಾಂತಿಕ ಸಾಗರ
ಕುದಿಯುತಿದೆ ಸಳಮಳಾ
ಅತಳ ವಿತಳ ತಳತಳಾ
ಪಾತಾಳ ರಸಾತಳಾ
ಇದ್ದವರೂ ಸತ್ತವರೂ
ಅತ್ತರಲ್ಲೋ ಗಳಗಳಾ!

ಹುಗಿದುವೆಂದು ಬಗೆವರು
ನಾಳೆ ಅಗಿದು ತೆಗೆವರು.
ಅದು ಸಂಸ್ಕೃತಿ ದರ್ಶನ.
ಪಾಂಡಿತ್ಯ ಪ್ರದರ್ಶನ.

ಇದ್ದ ಜಗಳ ಸಾಲವೆಂದು
ಹಳೆದ ಹೆಡ್ಡಿ ತರುವರು.
ಈ ಕುರುಬರು ಬರುವರು.

ಎಲೊ ದುಷ್ಕೃತಿ ಮಾನವಾ
ಹೊಗಳಿಕೊಳುವೆ ದಾನವಾ
ನಿಲಿಸು ಕ್ಷುದ್ರಗಾನವಾ.

ಮರೆವಿನ ಮಾಗಡಲಿನಲ್ಲಿ
ತೇಲುತಿಹುದು ವೇದವು
ಆ ಅನಂತ ಭೇದವು.
ನೆತ್ತಿಯಲ್ಲಿ ಎತ್ತಿಕೊಂಡು
ನಡುಗುತಿಹ ವಿಶೇಷನು.
ಅವನೆ ಜೀವಶೇಷನು.

ಸಮೃದ್ಧ

ತುಂಬಿ ತುಂಬೌ ಗಂಗೆ ಲೋಕಲೋಪವ ತುಂಬು
ಶಿಷ್ಟದುಷ್ಟರ ಕೊಡುಗೆಗಿರ ಬಾವುಲಿ ಕರ್ಣ
ಜಗದಂತರಾಳದಲಿ ನೀನೆ ಸ್ಕಾರ್ತ್ ಪೂರ್ಣ
ಜೀವದಾನದ ದೀಕ್ಷೆ ತೊಕ್ಕಿ ಕುದು ನಿನ್ನಂಬು
ಹಳೆ ಕಪಳೆ ಆರ್ಭಟಿಸಲೀ ? ಈ ಹೊ ರೊಂಬು
ನಿನ್ನಡಿರು ಜೀಕೆ ? ' ಗಂಗಾ ದೇವಿ ಎಂದೇ ಪರ್ಣ
ಮಿಡಿದೊಡನೆ ಬಯಲು ದ ನಾ ಎಂದು ಮಿಂಚಿತು ಸ್ವರ್ಣ.
ಮಗುವಾಗಿ ಆಡುವೆನು ವ ಗ್ಧ ಸಾಕ್ಷಿಯು ನಂಬು.
ಆಹುದು ನೀನೆ ' ಸಮೃದ್ಧ ' ಎಂಜೆ, ಅಬ್ಬಾ ಬಂಜೆ
ಬಯಲಲ್ಲಿ ತೂರುತಿದೆ ಉ ಂಕು, ಕಣ್ಣೊಳು ಮಣ್ಣು–
ಅಂತರಿಕ್ಷಕ್ಕೆ ಸಾವಿರದ ಸ ಿರ ಕಣ್ಣು
ನಿನ್ನ ನೆನಪೇ ಬೆಳಕು ನನ ಮೂರೂ ಸಂಜೆ
ನಿನಗುಪಮೆಯೇ ತಾಯಿ ನು ಕಳಿಯದ ಹಣ್ಣು.
ಸವೆಯದೀ ಸವಿ ಇದರ ವ ಂದೆ ಅಧರವು ನಂಜೆ.

ಸೌಭಾಗ್ಯ

ಭಗವಂತ! ಭಗಭಗನೆ ಉ ಯುತಿದೆ ಪಡುವಲವು
ಶಾಂತಿಯನು ಕರೆಯುವದ ಹೇಗೊ ಹುಸಿ ಮುಸಿ ನಕ್ಕು
ಗೋಲಭೂಮಿಯ ನೆಲಕೆ ಇಲ್ಲಿ ಎಲ್ಲಿದೆ ದಿಕ್ಕು?
ಎರಡು ಕಡೆಗೂ ಪ್ರೊತ್ತ ಳ ಾ ಪುರಾಣಚ್ಛಲವು.
ಸಾರ್ವಭೌಮಿಕ ಕಾಕದೃ ; ಶಾಕ್ರನ ಒಲವು
ಎದೆಗೆ ಎದೆಗೊಟ್ಟು ಬದು ವಗೆ ಬಾಳುವ ಹಕ್ಕು.
ನಿನ್ನ ವಿಜ್ಞಾನ ಪಾನವ ಮಾಡಿ ಉಳಿದರೆ ನೆಕ್ಕು
ಜಗವು ಹಾಳಾದರೂ ನಿನ ಬೇಕಿದೆ ಗೆಲುವು.
ಸೌಭಾಗ್ಯಪದಕೆ ನೆಲೆ? ಅದಕು ಕೋಶಕು ಗಂಟು.
ಭೂವಸುಂಧರೆ! ನೀನು ಅ ುಲ ಸೌಭಾಗ್ಯನಿಧಿ.
ಕಾಯಲಿಟ್ಟದ್ದ ಕೈ ಕೊಲ್ಲ ರೆ. ಯಾವ ವಿಧಿ?
ಕಂಡಿಲ್ಲ ಕೇಳಿಲ್ಲ ಭೀತಿ ಪ್ರೀತಿಯನಂಟು,
ಜಗದ ಸೌಭಾಗ್ಯಕ್ಕೆ ನೀನ ಬ್ಬಳೇ ಸಾಕು.
ಉತ್ತಮರ ಬೆಳೆ ಬರಲು ಜ–ಮನು ಬರಬೇಕು.

'ಸಕಲ'

ಎಷ್ಟು ಶಕಲವ ಕೂಡಿಸಿದರೆ ಇಡಿ ಒಂದಾದೀತು?
ಕಂಸಕಂಸಾತ್ಮರಿಗೆ ಕೃತ್ಸ್ನನಾಮಪಥ್ಯ;
ಆದರೂ ಇಂದಿಗೂ ಜಗವಖಂಡಿತ ಸತ್ಯ,
ಕಿಡಿಗೇಡಿ ಕಿಡಿ ಬಂತು ತಿಕ್ಕಿ ಮಾತಿಗೆ ಮಾತು.
    ವಿಕಲ ಬುದ್ಧಿಗೆ ಸಕಲ ಎಟುಕದಿದೆ. ಅದು ಸೋತು
    ಕಟುಕ ಬುದ್ಧಿಗೆ ಶರಣು ಮಾಡಿ ಕುಳಿತಿದೆ ಸದ್ಯ.
    ವಿಜ್ಞಾನಿಗಳ 'ಅಕಲು' ಹೃದ್ಯವಿದ್ದರು ವಧ್ಯ.
    ಸೌರಪಥದಲಿ ಧೂಮವೆದ್ದು ಮೂಡಿದೆ ಕೇತು.
ಭೂ ವ್ಯೋಮ ಪಾತಾಳ ಒಂದಾಗಿ ಹೆಣೆದಿರುವೆ
ಓ ಗಂಗೆ, ರಸಲಹರಿ ಸಹಜ ಸಹಜ ಅಭಂಗಿ
ಈ ವಿಶ್ವಮಾನವರ ದೃಷ್ಟಿಯೇ ಏಕಾಂಗಿ
ಕಲಿಸು ನಿನ್ನಾ ಕಲೆಯ ವಿಶ್ವಂಭರೇ ಗುರುವೆ!
    ಭಣಿತಿ ಭಂಗಿಗಳಲ್ಲಿ ಮುಗಿದು ಕುಂಠಿತ ಮತಿಯು
    ಮತ್ತೆ ತಲೆಯೆತ್ತಿ ನಿಂತಿಹುದು ದಿತಿಸಂತತಿಯು.

ವಸುಧಾ

ನೀ ವಸುಂಧರೆ ನಿನ್ನ ಪ್ರಿಯನೆ ಆ ವಸುದೇವ
ಈಶ ವಸತಿಗೆ ಇಳಿದುಬಂದ ನಿನ್ನುದರದಲಿ
ವಾಸುದೇವನು ಆಗೆ. ಮುತ್ತುದುರಿ ಅಧರದಲಿ
ಸರ್ವಸಂತಾಪಹರವಾಯ್ತು ಗಂಗಾ-ಭಾವ.
ನೆಲಕೆ ನೀರೇ ಗತಿಯು; ನೆಲ ನೀರಿಗಾಧಾರ.
ಮಣ್ಣು ನೆಲವಲ್ಲಿ ಭವ ಬರಲು ಮಾಸುವದೆ ಗುಣ?
ನೀರೆ ಮಡಿ; ಅದರಲ್ಲಿ ದೋಷ ಕಂಡವ ಪಿಸುಣ.
ಇಬ್ಬರೀ ಜತೆ ಸಖ್ಯ ವತ್ಸಲತೆಯಾ ಹಾರ.
ನೆಲ ಒಂದು ಜಲ ಒಂದು, ಬೆಳಕು ಗಾಳಿಯು ಒಂದು
ಬಾನೊಂದು ತಾನೊಂದು, ಮಡಕೆ ಹುಟ್ಟಾ ಒಡಕು.
ಒಡಲೊಡವೆಗಳ ತೊಡಕು ಜಗಕೆ ಮಾಡಿದೆ ಕೆಡಕು.
ನಿನ್ನಂತೆ ಪರಮಾತ್ಮ ಕಂಡು ಘನತೆಯ ಹೊಂದು—
ನೀರು ನೆಲಗಳ ಕರುಳ ಬಳ್ಳಿ ಹರಿದೀತೆಂದು
ಈ ಉಸಿರು ಕಂಡೀತು ಒಂದೆ ಬೆಳಕನ್ನಂದು.

'ಕಿಮಪಿ ತತ್'

ಅಹುದು ಏನೆಂದು ವರ್ಣಿಸಲಿ ಆ ಮಹಿಮೆಯನು
ಅನುಭವಿಸಿದಾ ಕವಿಯೆ 'ಕಿಮಪಿ ತತ್' ಎಂದಾಗ್ಗೆ
ಜಿಹ್ವೆ ಲಾಲಾಲೋಲ, ಕಂಪ ಜೊಂಪಿಸಿತು ತನು
ನಿಸಗು ತಿಳಿದೀತು ಆ ಅನುಭವವು ಬಂದಾಗ್ಗೆ.
ಶಿವನುತ್ತಮಾಂಗದಲಿ ಶಶಿಯು ಬದಿ ನಿಂದಾಗ್ಗೆ
ಶುದ್ಧಕೂ ಅದು ಶುದ್ಧ ಮುಗ್ಧಕೂ ಪರಿಶುದ್ಧ
ನೀಲವನು ಹರಿದು ನೆಲವನು ತೆರೆದ ಈ ಬುದ್ಧ.
ಸಿರಿಗಂಗೆಯಲ್ಲಿ ಒರಿ ನೀರು ಸೋರುವ ಬುಗ್ಗೆ.
ನೆನೆನೆನೆಸಿದಂತೆ ಈ ಧ್ಯಾನ ಯೋಗ ಸುಯೋಗಿ
ಅರಿವಿನ ರಸಾತಳವ ಸೋಕಿ ಬಂದಿತು ಕರಣ.
ಉದಯಾಸ್ತವಿಲ್ಲದಿರೆ ಮೂರು ಲೋಕದ ಹರಣ.
ಹಗಲು ಚುಕ್ಕೆಯು ಹಾಗೆ ಆ ಸಮಂತಾತ್ ಬೆಳಗಿ.
ಪ್ರಿಯನಿದಿರು ಬಂದಾಗ ಮೂಕ ಮಧುರವು ಭಕ್ತಿ
ಈ ಬೆಳಕ ಬಣ್ಣಿಸಲು ಯಾವ ವರ್ಣಕೆ ಶಕ್ತಿ?

ಸ್ಥಿರೆ—ತಿರೆ

ಇವಳು ಸ್ಥಿರೆ, ಇವಳೆ ತಿರೆ. ಸಂಸಾರದಲಿ ಸ್ಥಾಯಿ,
ಬೆಳೆಯುತಿರೆ, ರಸ ಒಸರಿ ಬರೆ, ಸೃಷ್ಟಿ ಹಿಗ್ಗುತಿದೆ.
ಅಗೊ ಅಲ್ಲಿ ಆ ಧ್ರುವನೆ ತಾ ಪ್ರದಕ್ಷಿಣವಾಗಿ
ಜಗದ ನಾರಾಯಣಗೆ ನಮಿಸುವನು ಭಕ್ತಿಯಲಿ.
ಅನಿಮಿಷರ ಗಣ ಸುತ್ತುಗಟ್ಟಿ ಕಾಯುತ್ತಲಿವೆ,
ಗ್ರಹಗತಿಯು ಯುಗಯುಗಗಳ ವಿಶ್ರಾಂತಿ ದೊರೆ-
ಯದೆ ತಿರುಗುತಿದೆ, ತನ್ನ ಸಂವಾದ ಸೌಂದರ್ಯ
ಧರ್ಮಕ್ಕೆ ಸೋಲುತಿದೆ, ಸತ್ಯವೆ ತೇಲುತಿದೆ.

ಧರ್ಮ ಸೋತಿತು! ಮಾನವಮುಳುಂಗಿದ ಹಾಗೆ ತೋರಿತ್ತು
ಆ ಸತ್ಯ. ನಾವೆ ಮುಳುಗಿದ ಮೇಲೆ ಹೆಣಗಳೇ
ತೇಲಿವರು, ಯಾವನೊಬ್ಬನು ಈಸಿ ಜೈಸಿದರೆ
ಅದು ಹಬ್ಬ. ಅವನೆ ಮುಂದಿನ ಮನುವು ಓ ಜನವೆ
ದಿನವುದಿಸಿದಂತೆ ಮರಳೀಕು ಸುಚಿರಂತನವು.

ಮಧುವಾತಾ ಋತಾಯತೇ!

೧

ಬರಿವಿನಲ್ಲರಿವು ಕಣ್ತೆರೆವುತಿರೆ
ಮೈದೋರಿತ್ತು ಜಗವು. ಹಿಗ್ಗಿನ ಹರವು.
ಬರಡು ಹಯನಾಗಿ,—ಕರುವ ಪಡೆದಿತು ಆವು.
ಭೌತವ ಹರಳು ಹರಳು ವಿಶ್ವವಲ್ಲಿಯ ಹೂವು.
ಆ ಆಮೋದ ಆ ಎಂದು ಮೂಸುವರು ನಾವೂ ನೀವು.

ಓ ಯಕ್ಷಿ, ದೇವತಾನಾಟ್ಯಮಂದಿರದ ಅನಿಮಿಷ ಸಾಕ್ಷಿ.
ಮೌನಿ ಶಿವಸೌಧನೆ ಬಾ ರಸವ ಯಾಚಿಸುವ ಪಕ್ಷಿ!
ಹಿಡಿಸದನುಭಾವಕ್ಕೆ ಬೆರಗು ಪಡೆದಿತು ಅಕ್ಷಿ.

ಅಮೃತವ ಉದ್ಭವದ ಭಾವ ಭಾಷಾಂತರಿಸಿ,
ಹೊಸ ಒಸಗೆಗನುವಾಗಿ ಒಗ್ಗಿ ವೇಷಾಂತರಿಸಿ,
ತಾ ಶೈಲಿ ಎಂದೊರೆವೆ ಕರ್ಮನಟಿಯನುಕರಿಸಿ;
ಅವಳ ಪದಹತಿಗೆ ಎದ್ದಾವು ಛಂದದ ಬಳ್ಳಿ.

ಭಾವಸೋಪಾನವನ್ನೇರಿ ಬಾ ಪ್ರಾಣಸಖಿ,
ದರದಲತ್ ಅರವಿಂದ–ಸ್ಮೇರಮುಖಿ,
ಖಗವು ಸುಖಿ, ಮೃಗವು ಸುಖಿ, ಜಗವು ಸುಖಿ, ನಗವು ಸುಖಿ.

ನಕ್ಷತ್ರ ಕಣ್ ಚಿವುಟುತಿವೆ, ಗ್ರಹಗೋಲ ಕುಣಿವುತಿವೆ.
ಆಗೊ ಕಂಪಿಸಿತು ಕಡಲು ಧ್ರುವಪದದ ಶ್ರುತಿಯನು ಹಿಡಿದು
ವಸಂತಾದಿಯಾಗಿ ಋತುಮಾಸ ಬರುತಿವೆ ನಡೆದು,
ಅಲ್ಲಲ್ಲಿ, ವಿಲಾಸ ಲಾಸ್ಯದಿ ತಡೆದು.

ಶ್ರುತಿಗಗೋಚರ ರಾಗ ತಾನಪೂರ್ವಕೆ ಉದಿಸಿ
ಗುಮ್ ಗುಮ್ ಗುಮ್, ಓಹ್ ಘೂರ್ಮಿಸುತ್ತಿದೆ ಮದಿಸಿ.
ಮಧುರಾಣಿ! ಸಂಭ್ರಮದಿ ಮಕ್ಷಿಕಾಮಾಲೆ
ಅಕ್ಷರ ಮಾಲೆಯಂತೆ ವರ್ಣವರ್ಣದಿ ಗುಣಿಸಿ ಕುಣಿಸಿ.
ಯಾವ ವೃಕ್ಷಕೆ ನಡೆದೆ ಎಲ್ಲಿಹುದು ಆ ಹುಟ್ಟು?
'ಗುಟ್ಟು! ಗುಟ್ಟು!' ಒಟಗುಟ್ಟು, ನಾನಿರೆನು ನಿನ್ನನು ಬಿಟ್ಟು
—ಮಧುವಾತಾ ಋತಾಯತೇ ಮಧುಕ್ಷರಂತಿ ಸಿಂಧವಃ—

ಏನಲ್ಲಿ ಝುಂಝಾವಾತ, ಓ ಏನೋ ಅಧಃಪಾತ!
ಎಂಥದೋ ಉತ್ಪಾತ! ಸೈಂಧವರ ಲಾವಣ್ಯ
ಮಣ್ಮಣಸು. ಮಣ್ಣುಗೂಡಿತು ಕಣಸು.
ಹೈಕಿ ನೈ! ಹೈ ಕಿ ನೈ! ನಹಿ! ನಹಿ! ಹಯ್ ಹಯ್—
ಅಲ್ಲದುದನಹುದೆಂಬ ಅಜ್ಞಾನಿಯೊಡನಾಟ
ಕಲ್ಲು ಹಾಯ್ದಂತೆ —'ಸೈ' ಎಂದಿತಾಗ.
ಏಕಾಕ್ಷ ಒಂಟಿಯ ಸಂಘ, ವಿಶ್ವಕೋಳಿಯ ಕೇಂದ್ರ-
ದೀಶ್ವರನು ಪ್ರಾತವನನುಕರಿಸಿ ಕುಕ್ಕುಕ್ಕೂ ಎಂದ.
ಸರ್ವೋದಯಕೆ ಇದುವೆ ಛಂದ.
ಬಂತು ಸೇಂಟಿನ್ನ ಗಂಧ, ಚುಯ್ ಎಂದ ದೋಸೆಯ ಅಂದ.
ಏನು ಕೋಲಾಹಲವು? ಓ, ವರ್ತಮಾನದ ಸುದ್ದಿ!

ಎಲ್ಲೋ ಗಲಾಟೆ, ಖೂನು, ದರೋಡೆ,
ಚಕ್ರಬಂಧದ ಒಗಟು, ರಾಶಿಭವಿಷ್ಯ, ಲೂಟಿ, ಲಾಟರಿ,
ಪಾನನಿರ್ಬಂಧ, ಬಂಧಿತರ ಕೈಚಿಸಿಯಾಟ,
ಚುನಾವಣೆ, ಅಧ್ಯಕ್ಷ, ಇಲಿ-ಬಲೀ-ಸಾಹೇಬ
ಬೂಟು ಹ್ಯಾಟಿನ ಸೂಟು ಒರಸಿಲ್ಲ; ಅದೆ ಥೇಟು;
ಪಾಟೀಲು, ಹಾಡಿದ ಹಾಡು, ಬಾನುಲಿಯ ಕಿರಿಚಾಟ,
ಸಿನಿಮಾ ಬ್ಯಾಂಡು, ಒಂದೆ ಹುಡುಗರ ದಂಡು.
ಸೇದಬೇಡಿ,-ಸೇದಿದರೆ ಬೇಂದ್ರೇ ಬೀಡಿ—
Pay your fare, Do not spit.
ಕಿರ್ ಎಂದು ಖಡ್ ಎಂದು ಥಡ್ ಎಂದು
ತಪ್ಪಿತು,-ಎಕ್ಸಿಡೆಂಟು-ತಪ್ಪಿದ್ದದೂ ಎಕ್ಸಿಡೆಂಟು.
ಯಾರೊ ಯಾರನೊ ನೋಡುವಾಗ ಮೂಡಿತು ನಂಟು
ಹಾದಿಯಲ್ಲಿ ಬಿದ್ದಿತು ಗಂಟು-ದೊತ್ತರಗೂ ಗಂಟು
ಬಡಿಯಬೇಡೀ ಪಂಟು, ಬೇಡಲ್ಯ ಕಂಪ್ಲೇಂಟು
ಹೋದಷ್ಟೆ ಸಾಲದೇ? ಸಾಲ ಹುಟ್ಟದು ಈಗ
ಸಾವುಕಾರನ ಕೂಡ ಸಾಲಗಾರನು ಸತ್ತ;
ಅದಕೆ ಕಮ್ಯುನಿಸ್ಟ್ ಅತ್ತ! ನೋಡಿತ್ತ:
ಅಬ್ಬಬ್ಬ ಏನು ಕ್ಯೂsss ಒಬ್ಬರಾ ಮೇಲೊಬ್ಬ.
ಇದುವೆ ಹುಚ್ಚರ ಹಬ್ಬ! ಎಚ್ಚರ! ಕ್ಷಮಿಸಿ
ಅಯ್ಯಾ, ಸ್ವಾಮಿ, ನಿಮ್ಮಂತೆ ನಾನೊಬ್ಬ.
ನಡೆ ಮುಂದೆ 'ಶೋ' ಮುಗಿದೀತು. ಕೇಳು ಗಾಡಿಯ ಕೂಗು.
ಆಯ್ತು ನಿನ್ನಿನ ತೇದಿ, ನಾಳಿನ ಹಾದಿ ನಿನ್ನೆ ತರೀಖು.
ಹಾದೀs ಗೀದೀs ಓ ಅಪ್ಪಾ ತಟ್ಟಾಗು....
ಇಲ್ಲೋ ಮಲಗು, ಇದ್ದವಗೆ ಎಚ್ಚರ ಚಿಂತೆ—
ಮನಚಿತ್ರಪಟವು ಮಸಣದ ಪಾಟಿ.

ಹಿಡಿ ಮತ್ತೆ ಹಿಂದಿನ ಧಾಟಿ, ಗಿರಣಿಯ ಬಂಬು ಕರೆಯುವದು
ಏಳು ! ಆಯಿತು 'ಏಳು.'
'ಲಟಿಪಟೀ ಸಂಸಾರ'–ಲಾವಣಿ ಹೇಳು—
Interval ಓ ಏನು ಕಲ್ಲೋ !
ಕಲ್ಲುಕೋಳಿಯು ಕೂಗುವನಕ ಕಲ್ಕಿಯು ಬರನು.
ಖೇಲ್ ಖಲಾಸ್. ಚಪ್ಪಾಳೆ ಬಡಿಯಿರಿ ಇನ್ನು.
ಸಭ್ಯತೆಗೆ ಹತ್ತಿದೆ ತೊನ್ನು. ಮಣ್ಣು–ಹೆಣ್ಣೂ–ಹೊನ್ನು.
ಥ್ರೀ ಚಿಯರ್ಸ್ ಫೊರ್ ಪೀಸ್ ಆ್ಯಂಡ್ ಫ್ರೀಡಮ್ ಅನ್ನು
ಇಲ್ಲವೋ ಕಾಸಿರು ಬೆನ್ನು.

೩

ಅನಿರುದ್ಧ ಶಾಂತಿ ತಳಹದಿಯು ಅದುವೆ ಸಾಕ್ಷಿತ್ವ ಪ್ರಾಣಲಿಂಗ.
ಪ್ರದ್ಯುಮ್ನ ಕೃತಿಯು ಮೂಡೀತು ಮುಂದೆ ನಿಃಸಂಗ ಶರಣರಂಗ.
ಸಂಕರ್ಷಣಾಖ್ಯ ಜಯದೇವ ತರುವ ಮಹಲಿಂಗ ಭಾಗಭೋಗಿ.
ಶ್ರೀ ವಾಸುದೇವ ಮಾಯಾವಿ ಬರಲು ಲೀಲಾವತಾರಿಯಾಗಿ.
ಬಿಡಿಗಾಳು ಬದ್ಧ; ಇಡಿ ಹಣ್ಣು ಸಿದ್ಧ; ಬಯಲಲ್ಲೆ ಇರುವ ಬುದ್ಧ.
ಏಕಾಕ್ಷ–ಪಕ್ಷ, ಕೌಟಿಲ್ಯದಕ್ಷ ನಡೆಸಿಹರು ಭೂಮಿಯುದ್ಧ.
ಹಳೆಯವನು ಬಿದ್ದ ಹೊಸಹೊಸಬ ಗೆದ್ದ. ಕೋಡಂಗಿ ನಡುವೆ ಎದ್ದ.
ನವೋನವದ ಬಯಲಾಟ ಭಾರಿ ತಾಂಡವವೆ ರಾಷ್ಟ್ರದುದ್ದ.
ಫ್ರೂಡು, ಮಾರ್ಕ್ಸರ್, ಆಡ್ಲರು, ಜುಂಗು, ಮೇಲೀಗ ಐನಸ್ಟೀನು.
'ಕ್ಯಾಪಿಟಲ್ಲು' ಏನು ? ಆ್ಯಟಮ್ಮು ಬಾಂಬು, ತಲೆತುಂಬ ತಿಂಡಿ, ಹೇನು !
ಬಾಯಲ್ಲಿ ಶಾಂತಿ, ತಲೆಯಲ್ಲಿ ಭ್ರಾಂತಿ, ಸಂಕ್ರಾಂತಿ ಎದೆಯ ತುಂಬ.
ಚಂಡಮುಂಡರಾ ಹಳೆಯ ದಂಡು ಅಭಿನವ ನಿಕುಂಭ ಕುಂಭ.
ಸುಂದೋಪಸುಂದರಾಖ್ಯಾನ ಮತ್ತೆ ಜಢಜಾತ್ರೆ ಯಕ್ಷಗಾನ
ನವಭಾಗವತರೆ ಬಲ್ಲವರು ಅವರ ಆ ಹಿಡಮ ತಾನಮಾನ.

ಹೊಡೆಗಾಡಿ ಮುಂದೆ, ಫಾಲ್ಗುನವು ಹಿಂದೆ, ಆ ಮುಂದೆ ಚೈತ್ರದುದಯ.
ನೀ ನಗುವೆ ನನಗೆ, ನಾ ಬಿಗಿವೆ ನಿನಗೆ, ಇಬ್ಬರಿಗು ಸುಪ್ತ ಹೃದಯ.

ಕ್ಷಣವೊಂದು ಮೌನ ಇಹದೆಂದು ನಿನಗೆ ತಿಳಿದೀತು ಎಂದು ಬಂಧು.
ತೆರೆಮರೆಯ ಕೆಳಗೆ, ಇಲ್ಲಿಪರ ಒಳಗೆ, ಗಾಂಭೀರ ಭಾವಸಿಂಧು.
ಇದು ಯಾವ ಘಾಟಿ ಕಿರಿಚಾಟ ಪಾಟಿ ಪೈಶಾಚ್ಯನೃತ್ಯಬಂಧ.
ಹುಳಿಜೊಟ್ಟ ಮಧ್ಯ, ನಿನಗಹುವೆ ಹೃದ್ಯ?–ಗಂಧಕದ ಸುಡುವ ಗಂಧ?

ಓ ಚಾರ್ವಾಕು !

ಚಾರ್ವಾಕು ! ನೀನು, ಕಾರ್ಮಿಕರ ಗಂಡ, ಧಾರ್ಮಿಕರ ಮಿಂಡ, ಅಬ್ಬಾ !
ಕಳ್ಳಸಂತೆ ಸಿರಿವಂತ ಸಭ್ಯರಾ ಸರ್ಮಸಚಿವನೊಬ್ಬಾ
ಅಪ್ಪ ಶಿಕ್ಷಿತನು, ಅವ್ವ ಧೂರ್ತೆ, ಅಂಥವರ ಮಗನು ನೀನು.
ಕ್ಷಣಿಕ ಬಾಳು ತಾತ್ಪೂರ್ತೆ ತರ್ಕ! ಆ ನಿಜದ ಗೊಡವೆ ಏನು ?

ದಂಡ ತಪ್ಪಿಸುತ ಪಿಂಡ ಗಳಿಸಿ ಉಂಡಾಡಿ ಭಟ್ಟನಾಗಿ,
ಯಾರ ಮಂತ್ರಿಯೋ, ಯಾರ ತಂತ್ರಿಯೋ, ಶಿಷ್ಟಧಿಟ್ಟನಾಗಿ,
ಕೀರ್ತಿಯಿರಲಿ ಅಪಕೀರ್ತಿಯಿರಲಿ ದಿನ ವರ್ತಮಾನವಲ್ಲ,
ದಪ್ಪ ಅಕ್ಷರದ ಪದವಿ ಪಡೆದು ಇಹೆ ಮೇಲುಸಾಲಿನಲ್ಲಿ.

ಹವಿನೆಂಟು ಜಾತಿ ಹದಿನೆಂಟು ನೀತಿ ಹದಿನೆಂಟು ಕಾರಭಾರಾ
ಅಠರಾ ಕಚೇರಿ ಅಠರಾ ವಿಚಾರಿ ತೀಂತೀರ ನೌ ಅಠಾರಾ.
ಚೌಯ್ರ್ಯಾಂಶಿ ಲಕ್ಷ ಯೋನಿಯಲಿ ತಿರುಗಿ ಆಸನವ ಕಲಿತೆ ನೀನು.
ಚೌಸಷ್ಟಿ ಕಲೆಯ ತಿರಸಷ್ಟಿ ನಿನಗೆ ನಾ ಬೇರೆ ಹೇಳಲೇನು ?

ಛಪ್ಪನ್ನ ದೇಶ ಛಪ್ಪನ್ನ ಭಾಷೆ ಏನೇನೊ ಗಂಟುಹಾಕಿ,
ಹಿಂದಿಯನು ಮುಂದೆ ಗುರಿಮಾಡಿ ಹಿಡಿದೆ ಬೆದರಿಕೆಯ ಆ ತುಪಾಕಿ;
ಬ್ರಹ್ಮಾಂಡವಾದಿ ಗೃಹಭೇದಿ ನೀನು ಕಾಂಬುದಕೆ ಅತಿ ಉದಾರ;
ಬಲೆಯೊ ಉರಲೊ ಬೀಸಿರುವೆ ಸುತ್ತ ನವನೀತಿ ಸೂತ್ರಧಾರ.

ಕರಡಿ–ಕುಣಿತ

ಕಬ್ಬಿಣ ಕೈಕಡಗ, ಕುಣಿಕೋಲು, ಕೂದಲು
ಕಂಬಳಿ ಹೊದ್ದಾಂವ ಬಂದಾನ—
ಗುಣುಗುಣುಗುಟ್ಟುತ ಕಡಗವ ಕುಟ್ಟುತ
ಕರಡಿಯನಾಡಿಸುತ ನಿಂದಾನ!

ಯಾವ ಕಾಡಡವಿಯಲಿ ಜೇನುಂಡು ಬೆಳೆದಿದ್ದ
ಜಾಂಬುವಂತನ ಹಿಡಿದು ತಂದಾನ?
'ಧಣಿಯಾರ ಮನಿಮುಂದ ಕಾವಲು ಮಾಡಣ್ಣ
ಧಣಿ ದಾನ ಕೊಡುವನು' ಅಂದಾನ.

ತ್ರೇತಾಯುಗ ರಾಮನ್ನ ದ್ವಾಪರದ ಕೃಷ್ಣನ್ನ
ಕಲಿಯುಗದ ಕಲ್ಕಿನ ಕಂಡಾನ
ಜಾಂಬು ನದಿ ದಂಡೆಯ ಜಂಬುನೇರಲ ಹಣ್ಣು
ಕೃತಯುಗದ ಕೊನೆಗಿಂವಾ ಉಂಡಾನ.

ಬಂದಾರೆ ಬರ್ರೆವ್ವ, ಕಂದನ್ನ ತರ್ರೆವ್ವ.
ಅಂಜಿಕಿ ಗಿಂಜಿಕಿ ಕೊಂದಾನ.
ರೋಮ ರೋಮಗಳಲ್ಲಿ ಭೀಮಶಕ್ತಿಯ ಬಲ
ಕೊರಳಾಗ ಕಟ್ಟೆರಿ ಒಂದಾನ.

‘ ಕುಣಿಯಲೆ ಮಗನೆ ನೀ ’ ಅನ್ನೊದೊಂದೇ ತಡ
ತನ್ನಽಽನ ತಾನಽನ ತಂದಾಽನ
ಮುಮ್ಮು ಕೂಸಿನ ಹಾಗೆ ಮುಸುಮುಸು ಮಾಡುತ್ತ
ಕುಣಿದಾನ ಕುಣಿತಽವ ಛಂದಾನ.

ಹೊಟ್ಟೆಗಿಲ್ಲದವರ ಹೊಟ್ಟೆಗೆ ಹಾಕಲು,
ನಡೆದಾನ ಪಡೆದಾನ ಬಂಧಾಽನ.
‘ ಕುಣಿಸುವವರ ಹೊಟ್ಟೆ ತಣ್ಣಗಾಗಲಿ ’ ಎಂದು
ಮುಗಿಲಿಗೆ ಕೈಮುಗಿದು ನಿಂದಾನ.

ಮನಬಲ್ಲ ಮಾನವ ಕುಣಿದಾಗ ಕುಣಿಸ್ಯಾನ
ಪ್ರಾಣದ ಈ ಪ್ರಾಣಿ ಹಿಂದಾಽನ
ಕರಡಿಯು ಹೆಸರೀಲೆ ಚರಿತಾರ್ಥ ನಡಿಸ್ಯಾನ
ಪರಮಾರ್ಥ ಎಂಬಂತೆ ಬಂದಾನ.

ಈ ಮನುಷಾ ಎಂದಿಂದೊ ಕವಲೆತ್ತು ಕೋಡಗ
ತನಗಾಗಿ ಕುಣಿಸುತ್ತ ನಡದಾನ
ಕರಡೀ ಕುಣಿತಕ್ಕಿಂತ ನರನ ಬುದ್ಧಿಯ ಕುಣಿತ
ಮಿಗಿಲಹುದು ಕವಿ ಕಂಡು ನುಡಿದಾನ.

ಚೆನ್ನಕೇಶವನ ಸಾಕ್ಷಿಯಲ್ಲಿ

ಒಂದೆ ಸತ್ವಕ್ಕೆ ಹಲವು ಹೆಸರು ಬಲ್ಲವರ ಬಾಯಿಯಿಂದ
ಒಬ್ಬ ದೇವ ಹಲವಾರು ನಾಮ ಎಂದೊಬ್ಬ ಶರಣನೆಂದ.
ಒಂದೆ ನೂಲಿನಲಿ ಹಲವು ಹೂವು ಕೋದಂತೆ ಸೃಷ್ಟಿಮಾಲೆ.
ಕಲ್ಲು ಬಲ್ಲದೇ ಮಾತು! ನಾವು ಮರೆತಿಹುದು ಯಾವ ಲೀಲೆ?

ಆ ಚೆನ್ನಕೇಶವನ ಸಾಕ್ಷಿಯಲ್ಲಿ ಚೆನ್ನೆಯರು ಕುಣಿಯುತಿಹರು
ದಣಿವಿಲ್ಲ ಮೈಗೆ ತಂತಾನೆ ಒಳಗೆ ತಣಿತಣಿಸಿ ತಣಿಯುತಿಹರು.
ಇದು ಯಾವ ಶಿಲ್ಪಿ ಕಲ್ಪಿಸಿದನೇನೊ ಅಲ್ಪರಿಗೆ ಸಾಧ್ಯವಲ್ಲ.
ಈ ಭೂಮಿತುಂಬ ಭೂಮತ್ವ ಬಿಂಬಿಸಿದ ಸಾರ್ವಭೌಮ ಬಲ್ಲ.

ಏನು ಗೋಪುರದ ಗೌರವೋನ್ನತಿಯಲೆತ್ತಿ ನಿಂತ ನಿಲವು!
ಒಂದೆ ತೆಕ್ಕೆ ಬ್ರಹ್ಮಾಂಡ ಹಿಡಿಸಲೆಂದೆಂದು ತೆರೆದ ಹರವು.
ನಡುವೆ ಗುಡಿಯು ನೆಲೆಗೊಂಡು ಇಹುದು ಸೌಂದರ್ಯಕೇಂದ್ರದಂತೆ
ಸುರರ ನಡುವೆ, ನಕ್ಷತ್ರಗಳಲಿ ಮೆರೆವಿಂದ್ರಚಂದ್ರರಂತೆ.

ಇಲ್ಲಿ ಇಡಿಕಿರಿದು ತುಂಬಿಕೊಂಡ ಸೌಂದರ್ಯ ನೋಡಲೆಂದು!
ದೇವಲೋಕದಾ ಚೆಲುವೆ ನೆಲಸಿತೋ ಇದನು ನೋಡಬಂದು,
ಕಂಡ ಕಣಸೇನು? ಎಷ್ಟು ಎಣಸೇನು? ಇಲ್ಲಿ ಲೆಕ್ಕವಿಲ್ಲ.
ಸೃಷ್ಟಿಯನ್ನೆ ಕಡುವಿಟ್ಟ ಬೇಕು ಬೆಡಗಾಗಿ ಬಿಟ್ಟಿತಲ್ಲ.

ಮೈಮುರಿದು ಬಿರಿದ ದಾಳಿಂಬದಂತೆ ಜೀವನದ ಪ್ರಭೆಯು ನುಗ್ಗಿ
ಹಣಿಕುವದು ಇಲ್ಲಿ ಬಿರುಬಿರುಕಿನಲ್ಲಿ ಕಣ್ಸೆಳೆಯುವಂಥ ಸುಗ್ಗಿ.
ಸೌಂದರ್ಯಪೂರ ಪ್ರಳಯಕ್ಕೆ ಘೋರ ಬರ್ಬರನು ಕೈಯ ಚೆಲ್ಲಿ
ಮಣ್ಣಾಗಿ ಹೋದ; ಸಂಹಾರ ಕಾಲ ಕಲ್ಲಾಗಿ ನಿಂತಿತಿಲ್ಲಿ.

ರಾಜಮನದಲಿ ವಿರಾಜಮಾನ ಸಂಕಲ್ಪಸಿದ್ಧಿಯೊಂದು
ಶಿಲ್ಪಪುಣ್ಯವೇ ಪುಂಜವಾಗಿ ಕೈಬಿಟ್ಟು ರೂಪುಗೊಂಡು
ಪಾಪ ತೊಳೆಯಲೆನೆ ಹರಿವ ಗಂಗೆಯೊಲು ಹಿಂದೆ ಎಂದೊ ಬಂದು
ಜನರ ಕಣ್ಣ ಕಶ್ಮಲವ ಕಳೆಯೆ ಕೇಶವನು ನಿಂತನಂದು.

ನೀ ತಾಯಿಯೆನಲೊ ನೀ ಮಾಯಿಯೆನಲೊ ಮೋಹಿನಿಯ ಮೋಹನಾಂಗ?
ಸುಡುವವರ ಸುಟ್ಟೆ, ಕೆಡುವವರ ಬಿಟ್ಟೆ ಅವರವರಿಗವರ ಸಂಗ.
ತೆರೆದ ಹೊತ್ತಿಗೆಯ ಮರೆಗೆ ಏನು ಶೇಂಕರಿಸುತಿಹುದು ನಿತ್ಯ?
ಭಗ್ನವಾದ ಚೆಲುವಿನಲೆ ನಿಂತಿಹುದು ನಗ್ನವಾದ ಸತ್ಯ!

ಕಪ್ಪು ನೆಲದಲ್ಲಿ ಹತ್ತಿಹೂವರಳಿ ನಕ್ಕು ನಲಿಯುವಂತೆ
ಚಿತ್ರಭೂಮಿಯಲಿ ಎಂದೊ ಬಿತ್ತಿದಾ ಬೀಜ ಮೂಡಿ ಬಂತೆ?
ಮನದ ಮನನಗಳು ಸೂಸುತಿರಲು ಸುಮನಸರ ಸಂತೆಯಂತೆ
ಸೃಷ್ಟಿಯಲ್ಲಿ ಈ ಶಿಲ್ಪಸೃಷ್ಟಿಯಲಿ ಚಿತ್ರದಂತೆ ನಿಂತೆ.

ಕುದುರೆಸಾಲು, ಆಗೊ ಆನೆಸಾಲು, ಕಾಲಾಳು ಸಾಲುಸಾಲು
ಜೀವಲೋಕದಾ ದೇವಲೋಕದಾ ಮೂರ್ತಿ ಕೆಳಗು ಮೇಲು.
ಯಾವ ರಿಣವ ತೀರಿಸಿದರಿಲ್ಲಿ? ಅದು ಯಾವ ಸಾಲವೆಂದು?
ಮುಡಿಪನಿಟ್ಟರೋ ಎಲ್ಲ ಕೊಟ್ಟರೂ ಮತ್ತೆ ಸಾಲದೆಂದು.

ಮೂರ್ತಿಸಾಗರದ ತೆರೆಗಳಿಲ್ಲಿ ಕಲ್ಲೋಲ ಮಾಲೆಯಾಗಿ
ನೆಕ್ಕ ಬರುತಿಹುದು ನಯನತೇಜವೇ ರೂಪಜ್ವಾಲೆಯಾಗಿ
ಇಂದ್ರಮೋಹಿನಿಯೊ ಯಾವಹಲ್ಯೆಯೋ ಕಲ್ಲ ಬಾಲೆಯಾಗಿ
ಬಿದ್ದಳಿಲ್ಲಿ ಕನ್ನಡರ ಕೈಗೆ ನವಶಿಲ್ಪಶಾಲೆಯಾಗಿ.

ಹಗಲಿರುಳು ಬಿಡದೆ ಕಣ್ಸೆರೆಯ ಹಿಡಿದ ಅದು ಯಾವ ಚೆಲುವೆಯನ್ನೋ
ಈ ಕಲ್ಲಿನಲ್ಲಿ ಕಟೆದಿಲ್ಲಿ ಇಟ್ಟನೋ ಯಾವ ರತಿಯ ಸ್ಮರನೋ?
ಇದು ಶಿಲ್ಪವಲ್ಲ, ಮಟಮಾಯ ಮೋಡಿ. ಮಯಕಲ್ಪ ಸೃಷ್ಟಿಸಿಹುದು.
ಮೈಮುಟ್ಟದೇನೆ ಮೈದುಂಬುತಿಹುದು ಮಾಯೆಯು ಅಗಾಧವಹುದು.

ಯಾವ ಚೆನ್ನೆಯದು ಎಂತು ಕುಣಿದರೂ ಹಿಡಿಸಬಹುದೆ ಮರುಳು?
ಚೆನ್ನಕೇಶವನ ತುಟಿಯ ಎಳನಗೆಯು ನಮ್ಮ ಕಾಯುತಿರಲು.
ಮೂಲೋಕ ಕಾದ ಮಾಯಾಪಿಯಾದ ಮಾತೆಯ ಅಗಾಧಹೃದಯ
ಮುದ್ದನಿಟ್ಟು ಅಪ್ಪುಗೆಯ ಕೊಟ್ಟು ಬಲಪಡೆಸುತಿಹುದು ಎದೆಯ.

ಇಗೊ ಇಲ್ಲಿ ಯಾವುದೋ ಪೂರ್ವಸೃಷ್ಟಿ ಪ್ರಳಯಕ್ಕೆ ಈಡು ಆಗಿ
ವೇದ ತಮದಿ ಮುಳುಗಿತ್ತು, ಮನುಜಮನ ತಮದ ಬೀಡು ಆಗಿ.
ಓಹೊ ದೇವರಿವರಹುದು ಇತ್ತಲೋ ಇಹುದು ಅಸುರವರ್ಗ.
ಗುಡ್ಡದಿಂದ ಕಡಲೊಡಲ ಕಡೆವುದೀ ಯಾವ ಭೂತಸರ್ಗ.

ಕಡಲಿನಲ್ಲಿ ನೆಲದೊಡಲ ನೋಡಿ ಶ್ರೀ ಮೀನದೇವ ಕಾದ.
ಒಂದು ಕೈಲಿ ಮಾನವನ ಕುಲವ ಇನ್ನೊಂದು ಕೈಲಿ ವೇದ.
ರತ್ನ ದೊರಕಿಸಲು ಯತ್ನ ನಡೆಸಿರಲು ರಾಜಕೀಯ ವಾದ.
ಜೀವಜೀವದಾ ಹೊಟ್ಟೆಕಿಚ್ಚು ಕಾರಿತ್ತು ವಿಷಪ್ರಸಾದ.

ಬುದ್ಧರಿರಲಿ ನಿರ್ಬುದ್ಧರಿರಲಿ, ಅನ್ಯಾಯಿ ನ್ಯಾಯಿ ಇರಲಿ,
ಬ್ರಹ್ಮ ಇರಲಿ ಬ್ರಹ್ಮೇತ್ರಿ ಇರಲಿ, ಆ ಭೋಗಿ ಯೋಗಿ ಬರಲಿ,
ಈ ಮಾತು ಸತ್ಯ ಈ ಮಾತು ನಿತ್ಯ. ಇದು ಒಂದೆ ದೇವನಾಟ
ಬೇಲೂರ ಕಲ್ಲು ಕನ್ನಡಿಸಿದಂತೆ ನಡೆದೀತು ಎಂದು ಮಾಟ?

ಒಂದೆ ಕಲ್ಲಿನಲಿ ಕಟೆದರಣ್ಣ ಈ ಕೋಟಿ ಮೂರ್ತಿಗಳನು
ಕೀರ್ತಿಕಳಶ ಕಟ್ಟಿದರು ಮೂಡಿಸುತ ವಿವಿಧ ಅರ್ತಿಗಳನು.
ಅಡಿಯಲ್ಲಿ ಬೆರಳು ಮುಡಿಯಲ್ಲಿ ಕುರುಳು ತೀಡಿಹುದು ಒಂದೆ ಕೈಮೆ;
ದೇವಮಾನವರ ಭಂಗಿ ಬೇರ್ಪಡಿಸಿ ತೋರಿಸಿಹುದೆ ವೈಮೆ.

ಅಣ್ಣನೊಡನೆ ಹಿಂದೊಮ್ಮೆ ನೋಡಿದೆನು ಇದೇ ಸ್ಥಾನವನ್ನು
'ಕಣ್ಣು ತೆರೆಸು ನಗೆ ತೋರು ತಮ್ಮಸಿಗೆ' ಎಂದ ಧ್ಯಾನವನ್ನು
ನೆನೆದೆ, ಕಂಡೆ ವಿಗ್ರಹ ವಿಭೂತಿ ವೈಭವ ವಿಲಾಸದಲ್ಲಿ
ವಾಸ್ತುಶಿಲ್ಪ ವಿಸ್ತಾರಗೊಂಡ ಹೊಸಟೊಂದು ನ್ಯಾಸದಲ್ಲಿ.

ಯುದ್ಧ ಬಂತು ಮನೆಯುವರೆಗೆ

ಯುದ್ಧ ಬಂತು ಮನೆಯವರೆಗೆ
ಬನ್ನಿ ಒಂದಾಗಿರಿ.
ಒಳಜಗಳವ ಕ್ಷಣವೆ ನಿಲಿಸಿ
ನಮ್ಮ ಜನವ ಒಲಿದು ಒಲಿಸಿ
ತಾಯಿನೆಲಕೆ ಸೇವೆ ಸಲಿಸಿ
ನಿಮ್ಮ ಹಗೆಯು ತಾಗಿರಿ.

ನರಮನುಷ್ಯ ಒಂದೆ ಜಾತಿ
ಎಲ್ಲ ಜನಕೆ ಒಂದೆ ನೀತಿ
ಹಾಡಿರಿ ನವಕರ್ಮಗೀತಿ
ಹಾಡಿ ಮುಂದೆ ಸಾಗಿರಿ.
ನೋವ ಕಂಡು ನೋಯಿರಿ
ಕೊಲೆಯಿಂಪಲು ಕಾಯಿರಿ
ಅಮೃತರಾಗಿ ಸಾಯಿರಿ.

ಯಾರ ಮಕ್ಕಳೇನು ಒಂದು
ಎಲ್ಲ ಹೆಣ್ಣು ನಮಗೆ ಬಂಧು.
ಇಲ್ಲಿ ಇಲ್ಲ ನಂದು ನಿಂದು
ಬಗೆದು ಇದನು ತೂಗಿರಿ.

ಫಲಿಸಿ ಬಂತು ಪೂರ್ವಕರ್ಮ
ವಿವಿಧ ಮತದ ಒಂದೆ ಮರ್ಮ
ಮೂಲಕಿರುವ ಆತ್ಮಧರ್ಮ

ಬಾಳ ಗೆದ್ದು ಬಾಳಿರಿ.
ನಿಮ್ಮ ನೀವೆ ಆಳಿರಿ.
ಬಂದ ಕಷ್ಟ ತಾಳಿರಿ.

ಜಗಕೆ ಬಂತು ಮಹಾಪ್ರಳಯ
ಹಿಡಿಯಾಯಿತು ಭೂಮಿವಳಯ
ಇಳಿಯಲಿಲ್ಲಿ ಸ್ವರ್ಗನಿಳಯ
ದೇವಜಾತಿಯಾಗಿರಿ.

ಶಕ್ತಿ ಬಹಳು ಇಳೆಗೆ ಇಳಿದು
ಮಹಾದೇವ ದೇಹ ತಳೆದು
ತಮ್ಮ ಅಡಿಗಳಿಂದ ಆಳೆದು
ಆs ಅಡಿಗೆ ಬಾಗಿರಿ.
ಎದೆಗಳನ್ನು ತೊಳೆಯಿರಿ
ಮಿಂಚಿನಂತೆ ಹೊಳೆಯಿರಿ
ಒಲವಿನೊಲವ ಬೆಳೆಯಿರಿ.

ಯಮದೇವನ ಒಕ್ಕಲು

ಕೋಣವೇರಿ ಬರುವ ಯಮಾ
ಎಲ್ಲಿ ಇಲ್ಲೊ ಸಂಯಮಾ.
ಕಾಮಕಿಲ್ಲ ಅಂತವು
ಅರ್ಥವಿಹುದಪಾರವು
ಅಂತೆಯೇನೊ
ಅಂದರೂನೊ

ಈ ಎದೆಗಳು ಯಾರವೂ
ಇನ್ನೂನೂ ಆರವು.
ಬೇಕು ಬೇಕು ಎನುತಿವೆ
ಸುಟ್ಟರೂನು ಬೇಯವು
ಅಂತೆಯೇನೊ
ಅಂದರೂನೊ

ಸತ್ತರೂನು ಸಾಯವು
ಸಾವಿನಾಚೆ ಹಾಯುವು.
ಭೂತಕಾಲ ದೆವ್ವವು
ಬಲಿ ಬೇಡುವದಿಂದಿಂಗು
ಅಂತೆಯೇನೊ
ಅಂದರೂನೊ

ಯುದ್ಧ ಇಹುದು ಎಂದಿಗೂ
ಕಾಲ ಸಂಧಿಸಂಧಿಗೂ.

ಎಂದು ಇದಕೆ ಮೋಕ್ಷವು?
ಏನನಾದಿ ಕರ್ಮವೋ!
ಅಂತೆಯೇನೊ
ಅಂದರೂನೊ

ಹೊಳೆಯದಿದರ ಮರ್ಮವೋ!
ಜಗಕೆ ಯಮನೆ ಧರ್ಮವೋ?
ಯಮದೇವರ ಒಕ್ಕಲು
ನಿತ್ಯ ಮರಣಸಿದ್ಧರು
ಅಂತೆಯೇನೊ
ಅಂದರೂನೊ

ಗೆದ್ದು ಇವರು ಬಿದ್ದರು
ಎದ್ದು ಅಪ್ರಬುದ್ಧರು.
ನರದೇಹದ ಪಶುಗಳು
ಇವರ ವೈರ ಮಾಣವು
ಅಂತೆಯೇನೊ
ಅಂದರೂನೊ

ಇವರ ಕಣ್ಣು ಕಾಣವು
ಇವರ ದೃಷ್ಟಿ ಕೋಣವು.

ಬೀದಿ ನಾಯಿ ರಾಧೆ

ಬೀದಿ ನಾಯಿ ರಾಧಿಗೆ
ಹೊಟ್ಟೆ ತುಂಬ ಮೊಲೆಗಳು.
ಹೊಟ್ಟೆ ತುಂಬ ಎದೆಯತುಂಬ
ಜೋಲು ಮೊಲೆಯ ಸಾಲ್ಗಳು.

ಬೀದಿ ನಾಯಿ ರಾಧಿಗೆ
ಊರ ತುಂಬ ಗೆಳೆಯರು
ಸರ್ವಸಾಕ್ಷಿ ಇವಳ ಪ್ರಣಯ
ನೋಡುವವರು ಎಳೆಯರು.

ಬೀದಿ ನಾಯಿ ರಾಧಿಗೆ
ಅಸರಂತವು ಮರಿಗಳು
ಹೊಟ್ಟೆಗೆಂಬ ಚಿಂತೆ ಇಲ್ಲ
ಇವಳೆ ಅವರ ಹೊರೆವಳು.

ಬೀದಿ ನಾಯಿ ರಾಧಿಗೆ
ಬೇಕು ಅವಳಿಗೆಲ್ಲರು
ಹರಕ ತಿರುಕ ಹಾದಿಹೋಕ
ಚೋರ ಪೋರ ನಲ್ಲರು.

ಬೀದಿ ನಾಯಿ ರಾಧಿಗೆ
ಇಲ್ಲ ಕೆಲಸ ಸಂಬಳ
ಊರ ತಿಪ್ಪೆ ಮುಸಣ ಕುಪ್ಪೆ
ಅದೇ ಅವಳ ಉಂಬಳಿ.

ಬೀದಿ ನಾಯಿ ರಾಧಿಗೆ
ಮಳೆ ಬಿಸಿಲಿಗೆ ಸಾಧನ
ಹುಣಿಸೆ ಮರದ ನೆರಳು ಹೊವರು
ಎವ್ವನ ಆರಾಧನ.

ಬೀದಿ ನಾಯಿ ರಾಧಿಯು
ಮೊನ್ನೆ ಹೇಗೊ ಸತ್ತಳು.
ದುರುಳನೊಬ್ಬ ಏಕೊ ನಕ್ಕ
ಹೊಲಸೂಳೆಯು ಅತ್ತಳು.

ಜೀವನ–ಕಲ್ಯಾಣ

[ಕೋಲುಹಾಡು]

ಜೀವನ ಒಂದು ನಾಽಟಕಽ
ಹೂವು ಹಣ್ಣಿನಾ ಕೂಟಕಽ || ಪಲ್ಲ ||

ಮಲ್ಲಿಗಿ, ಮಲ್ಲಿಗಿ, ಅಲ್ಲಿಗಿ, ಇಲ್ಲಿಗಿ
ಎಲ್ಲಾನು ಮಲ್ಲಿಗಿ ನೋಡಣ್ಣಾ ||
ಮಾವು ಮಾವು ನಾವು ನೀವು
ಎತ್ತಾನು ಮಾವು ನೋಡಕ್ಕಾ ||ಅನುಪಲ್ಲ||

ಜೀವಂಬೋದು ಅಧರದ ಮ್ಯಾಲಿ
ನೋವಂಬೋದು ಉದರದ ಒಳಗ
ಜೀವಂಬೋದು ಮಕ್ಕಳ ನೋಟ
ಮಾಯಾದೇವಿ ಮಾಟಕಽ || ಜೀವನ ಒಂದು....

ಹರೆಯೆಂಬೋದು ತೆರೀಹಾಂಗ
ಬಂತ ಅಂತ ಹೊರಟಿತು ಬ್ಯಾಗ ||
ಬಾ ಸಿಂಗಾರದ ಬ್ಯಾಟಕಽ
ಮುಗಿಯುವ ಆಟಕಽ || ಜೀವನ ಒಂದು...

ಮರಣದ ಹಡದಿ ತೀಳಿದೂ ತುಳಿದೂ
ಶರಣರ ಹಾದಿ ಹುಡುಕತೇವಿ ||
ಕರುಣದ ಕಣ್ಣು ಕಂಡಿತಕ್ಕಽ
ಗಂಗೀ ಗೌರೀ ನೋಟಕಽ || ಜೀವನ ಒಂದು....

ನಂಜುಂಡೇವ ಅರುವಿಗೆ ಕದ್ದು
ಕೈಲಾಸಂಬೋದು ಮುಗಿಲ ಮುದ್ದು ||
ಜನ್ಮಜನ್ಮಕೂ ಒಂದ್ಸ ಹಣ್ಣು
ಶಿವ ಶಿಂಗಾರದ ತ್ವಾಟಕ್ಸ || ಜೀವನ ಒಂದು....

ಆ—ಸ್ಮೃ—ತಾ

ಬೇಟೆಗಾರಿಕೆ ಕಣ್ಗೆ ಮಣ್ ಹೊಯ್ದು ಎಂದಾರೆ
ಹಕ್ಕಿಗಳ ಕೇಳಿರುವೆಯಾ ?
ಬಣ್ಣರೂಪದ ಮಾಲೆ ಬದಿಗಿರಿಸಿ ನರುಗಂಪ
ಹಾಡನ್ನು ಹೇಳಿರುವೆಯಾ ?
ಪಂಚ ಪಕ್ವಾನ್ನವನು ಚಿಕ್ಕೆಯು ಕಂಡಾಗ
ಅಮೃತಾನ್ನ ಉಂಡಿರುವೆಯಾ ?
ಸಿಂಗಾರ ಭಂಗಾರ ಪಾಂಗಾರೆ ಭಂಗಿಸಿರೆ
ಕಣ್ಮುಚ್ಚಿ ಕಂಡಿರುವೆಯಾ ?
ಮಿತುಮಾನ ಜಿಸವಾಗಿ ಬಿಗುಮಾನ ಹಿರಿದಾಗೆ
ಶಾಂತತೆಯ ತಳೆದಿರುವೆಯಾ ?
ಹಸಿನಾತ ರಾಕ್ಷಸಿಯು ಭಕ್ಷಣೆಗೆ ಹೊರಗಾಗಿ
ತೃಪ್ತಿಯಲಿ ಕಳೆದಿರುವೆಯಾ ?
ಕಲ್ಲ ಕಂಬನಿ ಸುರಿಸಿ, ಚೆಲ್ಲಿ ಸಪ್ಪಗೆ ಇರಿಸಿ,
ಮೆಲ್ಲಿದೆಯ ಮುಟ್ಟಿರುವೆಯಾ ?
ಏರಿಳವುಗಳ ದಾರಿ ಉದಯಾಸ್ತಗಳ ಮೀರಿ
ರವಿಯಾಗಿ ಹುಟ್ಟಿರುವೆಯಾ ?
ಭೀತ ರುದ್ರನ ಇದಿರು ನಿರ್ಭೀತ ಶಿವನಂತೆ
ಎಂದಾರೆ ನಿಂತಿರುವೆಯಾ ?
ಅಲೆವಲೆಮ ದಣಿದರೂ ನೆಲೆನಿಂತ ಅಡಿಗಳಲಿ
ಕ್ಷಣವಾರೆ ಕುಂತಿರುವೆಯಾ ?
ತಾಯಿ ಕೂಸಿನ ಮುದ್ದು ಮೌನವಲಿ ಮಿಡಿದಾಗ
ಶ್ರುತಿಯನ್ನು ಹಿಡಿದಿರುವೆಯಾ ?

ಧ್ಯಾನ ಪಕ್ವತೆ ಪಡೆಸು ಮೌನ ಬೀಜವು ಸಿಡಿದು
'ಓಂ' ವೇದ ಪಡೆದಿರುವೆಯಾ?
ಬಾ ತಾಯಿ ಬಾ ಗುರುವೆ ಬಾ ಗೆಳೆಯ ಬಾ ಒಡೆಯ
ಬಾ ನಲ್ಲೆ ನಾನೆ ಬರಲೆ?
ನಾದ ತಂತಿಯಲೊರಗಿದಂತೆ ಸಹ–ಭವನಾಗಿ
ಬಾಯ್ದೆರೆಯ ನಗೆಯೊಲಿರಲೇ?
ಸ್ಮಿತವೆ ವಿಸ್ಮಿತವಾಯ್ತು ಅಸ್ಪರ್ಶ ಸ್ಪರ್ಶದಲಿ
ಅಸ್ಮಿತೆಯು ಸ್ಫೂರ್ತಿಸಿತ್ತು.
ವಿಸ್ಮಿತದ ಸ್ತಿಮಿತದಲಿ ಮೌನವೇ ಧ್ವನಿಸುತಿರೆ
ಸ್ಮಿತವಾಗಿ ಮೂರ್ತಿಸಿತ್ತು.

ಅಂತೆವೋಲ್

[ಉಪಮಾನಿಷ್ಠಾಃ ಕವಯಃ]

ಅಂತೆವೋಲ್ ಅಂತೆವೋಲ್
ನಾನು ನಿನ್ನಂತೆವೋಲ್
ನೀನು ನನ್ನಂತೆವೋಲ್
ಅಂತೆಗಂತೆ ಕೂಡಿ ಸಂತೆ
ಕೊಡುಕೊಳೆ ನಡೆದಂತೆವೋಲ್
ನಾನು ಹೇಳಿ ನೀನು ಕೇಳಿ
ನೀನು ಆಡಿ ನಾನು ನೋಡಿ
ಒಂದು ಇದ್ದಂತೆವೋಲ್
ಎರಡು ಆದಂತೆವೋಲ್
ಎದುರುಗೊಂಡು ಇದಿರುಗೊಂಡು
ನಮ್ಮ ನಾವೆ ತಿಳಿದುಕೊಂಡು
ಭಾವವೆಂಬ ಹೂವಿನಲ್ಲಿ
ಹುರುಳುಗೊಂಡ ತಿರುಳಿನಲ್ಲಿ
ನನ್ನ ರುಚಿಯ ನೀನು ಕಂಡು
ನಿನ್ನ ಸವಿಯ ನಾನು ಉಂಡು
ಎರಡರಲ್ಲೆ ಎಲ್ಲವಾಗಿ
ಎರಡೆಂಬುದೆ ಅಲ್ಲವಾಗಿ
ದ್ವಂದ್ವದಲ್ಲಿ ದಂಪತಿ
ವಿಶ್ವವಾದ ಶಿವಸತಿ
ಹಿಗ್ಗಿನಲ್ಲಿ ದೇವವಸತಿ

ರೂಪ ರೂಪ ಸರಸತಿ
ಕೆಳಗೆ ಮೇಲಿನಂತೆವೋಲ್
ಹೊರಗೆ ಒಳಗಿನಂತೆವೋಲ್
ಅಂತೆವೋಲ್ ಅಂತೆವೋಲ್
ತಿಳಿದಮಾತೆ ಹೊಳೆಸಿದಂತೆ
ಎದೆಯ ಬೀಜ ಬೆಳೆಸಿದಂತೆ
ಭಾವನಾದದಂತೆವೋಲ್
ದೃಷ್ಟಿಯೆ ಹೊಸ ಸೃಷ್ಟಿಯಂತೆ
ಮಾತೇ ಮಧು ವೃಷ್ಟಿಯಂತೆ
ತಾನೆ ಗಾನದಂತೆವೋಲ್
ದನಿಯೇ ನದಿಯಾದ ಹಾಗೆ
ನಾದವೆ ಜಗದಗಲವಾಗೆ.

ಗಾಳಿಗಳೇ

ಗಾಳಿಗಳೆ, ಮರುಳರಿರಾ, ಶಿವಗಣಂಗಳಿರಾ
ಬನ್ನಿ ಬೀಸಿರಿ ಮರುಳು ಕಾಡಿನಿಂದ
ನಿಮ್ಮ ಗೂಡಿನಿಂದ

ಮೂಡಲಿದೆ ಹೊಸ ಚಿಗುರು
ಮೂಡಲಿದೆ ಹೊಸ ಪೊಗರು
ಮೂಡಲಿದೆ ಹೊತ್ತು
ಕುಡಿಯೊಡೆದು ಕಣಕಣವು
ಕುಣಿಯೆ ರುದ್ರರ ಗಣವು
ಕುಣಿಯಲೆದ್ದಿತು ಹೆಣವು
ಪರ್ವವೀಕ್ಷಣವು.

ಸುಡುಗಾಡುಗಳ ಬೂದಿ
ಬಾನ ಬಟ್ಟೆಯೊಳೂದಿ
ತೆರೆಯಲಿದೆ ಹೊಸ ಹಾದಿ
ತಮ್ಮಗಳಿಗೆ.

ಕೊಳ್ಳಿದೆವ್ವಗಳದುರೆ
ಮರ ಹೊದರುಗಳು ಒದರೆ
ಮಿಸುಕಲಾರದೆ ಬೆದರೆ
ಬಿದ್ದಿಹವು ಹಮ್ಮು.

ಬರಲಿ ಝುಂಝಾವಾತ
ರುದ್ರಗಣಸಂಜಾತ
ಅಲ್ಲಾಡಲೆಲ್ಲೆಲ್ಲು ಭೂತಜಾತ
ಓ, ಹೋ, ಹೋ,

ಕಡಲು ಕದಲಾಡಿತ್ತು
ನೆಲವು ನಡುಗಾಡಿತ್ತು
ಬೆಳಕು ಸಿಡಿಲಾಡಿತ್ತು
ಸುತ್ತು ಮುತ್ತು.

ಊರೂರೆ ರಣಕಣವು
ತಾಂಡವವು ಗೊಂದಣವು
ರಕ್ತದೋಕುಳಿ ಮಾಡೆ ಜೀವಗಣವು
ಚಿಮ್ಮಿತ್ತು ಕೈಲಾಸ
ಹೊಮ್ಮಿ ರುದ್ರನ ಹಾಸ
ಒಮ್ಮೆ ಸಿಮ್ಮ ವಿಳಾಸ
ನೋಡಿ ನೋಡಿ.

ಮರುಳರಿರಾ, ಮರುತರಿರಾ
ಒಂದುಗೂಡಿ
ಏನು ಆಡುವಿರೀವ ಆಟ ಹೂಡಿ?
ಬನ್ನಿ, ಶಿವನ ಕೂಡಿ.

ಜೀವನನಾಟ್ಯ

ಇದ್ದುದಿಲ್ಲವನು ಒಂದೆ ಶೂನ್ಯದಲಿ ಸುತ್ತಿಕೊಂಡ ಸಿದ್ದೆ.
ಎನ್ನ ಮೇಲೆ ಎರಡೊಂದ ಮಾಡಿ ಬೆಳೆಸುವದು ಸೃಷ್ಟಿವಿದ್ಯೆ.
ಗಂಡುಸೆಂತೊ ಸಂತಯಿಸಿಕೊಳಬಹುದು ಪರಬ್ರಹ್ಮದಂತೆ.
ಮಕ್ಕಳಿಲ್ಲದೀ ಬಾಳನೆಂತು ಸಹಿಸುವಳು ಪ್ರಕೃತಿಕಾಂತೆ?

ಹೆರಲು ಹೊರಲು ಹೊಟ್ಟೆಯನೆ ತೆರೆದು ತಂಸೇರನಲ್ಲೆ ಕಟ್ಟೆ
ಹುಟ್ಟೆಯಲ್ಲಿ ಹಸಿಜೇನಸೊಟ್ಟೆದೊಲು ಒಲುಮೆಯನ್ನೆ ಒಟ್ಟೆ
ಮುಟ್ಟೆ ಕಟ್ಟೆ ತನಿ ಮೂರ್ತಿಗೊಳಿಸಿ ಮುತ್ತಿಡಲು ಹೊರಕೆ ತಂದು
ಬಯಲನೊಂದು ಗುಡಿಗೊಳಿಸುತಿಹಳು ಒಳುಬಾಳ ಹರಕೆ ಎಂದು.

ಮಣ್ಣಗೊಂಬೆ ಒಳಗಣ್ಣಗೊಂಬೆಯಲಿ ನಾಟಿ ಮುದ್ರಿಸಿರಲು
ತನ್ನ ನೆನೆವನೇ ತಾನೆ ನೆನೆಸಿ ಒಳಪ್ರೋಳಗೆ ಸಿದ್ರಿಸಿರಲು
ಹೃದಯ ಮುದ್ರೆಯನು ಬಿಚ್ಚಿ ನಾಡಿಯಲಿ ಬೀಜ ಬಿಂದುಗೂಡಿ
ನಾಟ್ಯವಾಡಲನುವಾಗುತಿಹವು ಅವು ಏನೋ ಆಟ ನೋಡಿ.

ನಾನು–ನೀನು

ನಾನು ಸರಸಿ ನೀನು ಅಗಸ
ಆಳಿ ನೋಡ ಬಾ.
ನಾನು ನೀರೆ ನೀನು ನಲ್ಲ
ಬಾಳಿ ನೋಡ ಬಾ.

ನಾನು ಹಣ್ಣು ನೀನು ಗಿಳಿಯು
ಕುದುಕಿ ನೋಡ ಬಾ.
ನಾನು ಗೆಳತಿ ನೀನು ಗೆಳೆಯ
ಬದುಕ ಮಾಡ ಬಾ.

ನಾನು ನೋಟ ನೀನು ಕಣ್ಣು
ಬೆಳಕು ನೀಡ ಬಾ.
ನಾನು ಮಾಯೆ ನೀನು ಈಶ
ಮೋಡಿ ಆಡ ಬಾ.

ನಾನು ಹೊರಗು ನೀನು ಒಳಗು
ಪಟ್ಟುಪಡೆಯೆ ಬಾ.
ನಾನು ನೆಲವು ನೀನು ನೀರು
ನಟ್ಟು ನಡೆಯೆ ಬಾ.

ಗಾಳಿ ನಾನು ಬಾನು ನೀನು
ಮೂಡಿ ನೋಡ ಬಾ.
ಗೀತ ನಾನು ಪ್ರೀತ ನೀನು
ಕಟ್ಟಿ ಹಾಡ ಬಾ.

ಹಿಗ್ಗು ತರಲಿ ಬಿಡುಗಡೆ

ಹಿಗ್ಗು ತರಲಿ ಬಿಡುಗಡೆ
ಹಿಗ್ಗು ತಿರಲಿ ಬಿಡುಗಡೆ.
ಅಲ್ಲಿ ಇಲ್ಲಿ ಎಲ್ಲೆ ಏಕೆ?
ಎಲ್ಲ ಇರಲಿ ಒಳಗಡೆ;
ಮೇರೆ ಬೇರೆ ಕೊರೆಯಬೇಡ
ಬೆರೆಯಬೇಕು ಬಿಡುಗಡೆ.
ಹಿಗ್ಗದಿದ್ದರೊಳಗಡೆ
ಅಯ್ಯೊ ಕಷ್ಟ ಬಿಡುಗಡೆ!
ಕಟ್ಟಬೇಡ; ಅಟ್ಟಬೇಡ
ಬರಲಿ ಬಿಡು ಬಿಡುಗಡೆ.
ಒಬ್ಬನೊಬ್ಬ ತಿಳಿಯಬೇಕು
ಅದುವೆ ಹಬ್ಬ ಭಾವಕೆ.
ಕೊಲ್ಲುವ ಕೋಲಾಹಲದಲಿ
ಸಾವೆ ಬಹದು ಜೀವಕೆ.
ಅನ್ಯರನ್ನು ಕಟ್ಟಿಹಾಕಿ
ಕಟ್ಟಿಕೊಂಡೆ ನಿನ್ನನು.
ಬಿಡಿರಿ ಎಂದು ಕಿರಿಚುತಿರುವೆ
ನೀನೆ ಬಿಡಲು, ಧನ್ಯನು.
ಬಿಚ್ಚಲಾರೆ ಹಿಗ್ಗಲಾರೆ
ಎದೆಯೊಳಿಹುದು ಡವಡವ.
ಕೊಡುಗೆಯಲ್ಲೆ ಕೊಳುವೆಯಿದೆ
ರಚಿಸಬೇಡ ರೌರವ.

‘ ಬಿಡೋ, ಬಿಡು, ಬಿಡು ಬಿಡೂ, ’—
    ಎದೆಯ ಸೊಲ್ಲು ನಿಶಿದಿನ.
ಕಟ್ಟೆಂಬೆ ಕಡೀ ಎಂಬೆ
    ನೀನು ಮಾತ್ರ ಅನುದಿನ.
ಎಲ್ಲರಿಗೂ ಅದೆ ಕಾದಿದೆ
    ಬೇಕಾಗಿದೆ ಬಿಡುಗಡೆ.
ಅದು ಇಲ್ಲದೆ ಹಿಗ್ಗು ಇಲ್ಲ
    ಬೇರೆ ಇಲ್ಲ ನಿಲುಕಡೆ.

ನಲ್ತಾಯಿ

ತಿಳುವಳಿಕೆಯಂಥ ತಿಳಿಗೇಡಿ ಎಲ್ಲಿಯು ಇಲ್ಲ ।
ಕಳಕೊಂಡ ಹೊರತು ಬೆಲೆಯರಿಯದದು. ಫಲವಿಲ್ಲ ॥
        ಇದ್ದಾಗ ತಿಳಿಯಲಿಲ್ಲೆನ್ನ ತಿಳಿವು ।
        ಮುದ್ದಾಡಿಕೊಳುವಷ್ಟರಲಿ ಬಂದಿತಳಿವು ॥
        ಯಾವ ಜನ್ಮದಲಿನ್ನು ರಿಣವ ತೀರಿಸಲಿ ।
        ಯಾವ ಸೇವೆಯ ಮಾಡಿ ಹೆಸರ ಬೀರಿಸಲಿ ॥

ಹೊತ್ತು ಹೊತ್ತಿಗೆ ನಿನ್ನ ಯೋಗವನು ಕ್ಷೇಮವನು ।
ಗೊತ್ತುಪಡಿಸೌ. ನಿನ್ನ ನೆನವಿನಲಿ ಯಾಮವನು ॥
        ಕಳೆಯುವದೆ ನೇಮವಾಗಿದೆ ಜೀವಕಿನ್ನು ।
        ಬಳಿಕೆ ಉಳಿಯಲಿ ತಾಯೆ ಇನ್ನು ಮುನ್ನು ॥

ವ್ರಣ ನೋಡಿ ಬಂದದರ ಮೇಲ್ಕೂತ ನೊಣದಂತೆ ।
ರಿಣಗೇಡಿ ಜೀವವಿನ್ನೇಕೆ ಮಮಕೆಯ ಚಿಂತೆ ? ॥
        ಕಕ್ಕುವಿಯೆ ? ನೆಕ್ಕುವಿಯೆ ? ಮಾಯದಾ ಗಾಯ ।
        ಬಿಕ್ಕಿಲ್ಲ ಬಿಕ್ಕಿದರು ನೂರಿಂಥ ಕಾಯ ॥
        ಧರಿಸಿವರು ನಿನ್ನಂಥ ತಾಯಿ ಸಿಕ್ಕಾಳೇ ? ।
        ಹರಸೆನ್ನ 'ಬಾ ಮಗುವೆ' ಎಂದು ನಕ್ಕಾಳೇ ? ॥
        ಮುಂಗೆಟ್ಟ ಖೋಡಿ ! ಮರಣವ ನೋಡಲಿಲ್ಲ !
        ಕಂಗೆಟ್ಟು ಆಶಿಸವ ಬೇಡಲಿಲ್ಲ ॥
ಅಯ್ಯೊ ! ಬಾಗಿ ಆಶೀರ್ವಾದ ಬೇಡಲಿಲ್ಲ ।
ಅಯ್ಯೊ ! ಕಡೆಯು ಆಶೀರ್ವಾದ ಬೇಡಲಿಲ್ಲ ॥

ಆಡಿ ಫಲವೇನು ?

ಆಡಿ ಫಲವೇನು ಆಗದ ಮಾತ? ಬಿಂಬವೇ,
ತೋಡಿ ಫಲವೇನು ತೀರದ ದುಃಖವ? || ಪಲ್ಲ ||
ನೋಡಿ ಫಲವೇನು ಸಿಲುಕದ ನೆಲೆಯ? ಬಿಂಬವೇ,
ಮಾಡಿ ಫಲವೇನು ಮುಗಿಯದ ಯತ್ನವಾ? ||
ಕಾಡಿ ಫಲವೇನು ಕರಗದ ಕರುಳ? ಬಿಂಬವೇ,
ಹಾಡಿ ಫಲವೇನು ಹಿಗ್ಗದ ಬಗೆಗಳ? ||
ಬಾಡಿ ಫಲವೇನು ಬಯಲಿನ ಮುಂದೆ? ಬಿಂಬವೇ,
ಬೇಡಿ ಫಲವೇನು ಬಾರದ ವಸ್ತುವ? ||
ಮೂಡಿ ಫಲವೇನು ಮುಸುಕಿನ ಹಿಂದೆ? ಬಿಂಬವೇ,
ಹೂಡಿ ಫಲವೇನು ಹೊಳೆಯದ ಆಟವ? ||

'ಫಲವೇಂ ಫಲವೇಂ' ಎಂದು ಕೇಳುವೇ ಖೋಡಿ ಜೀವಕೆ |
'ಒಲವೇ ಹಲವೇಂ' ಎಂದು ಹೇಳಬಾರದೆ ದೇವನೆ ||

ಕನ್ನಡದಪ್ಪನ ಕೋಲು

ಕೋಲುಕೋಲಿನ ಆಟ, ಕೂಡಿ ಕೋಲಿನ ಕೂಟ,
ರಾಸಲೀಲೆಯ ಕೋಲ ।
ಬಾಲಬಾಲೆಯರಾಟ, ಸೂತ್ರ ತಾಯಿಯ ನೋಟ,
ಹಾಸಶೀಲೆಯ ಕೋಲ ॥
ನವ್ಯನಂದನ ಮಾಟ, ದಿವ್ಯ ಹೃದಯದ ತೋಟ,
ಕರುಳವಳ್ಳಿಯ ಕೋಲ ।
ಕಾವ್ಯರಸದ ಕೂಟ, ನೇಹದುಸುರಿನ ತೀಟ,
ತಿರುಳು ಮಲ್ಲಿಗೆಯ ಕೋಲ ॥
ಕೂಟರಾಜನ ಗಾಡಿ, ನಟರಾಜನ ನೋಡಿ,
ಚಿದಂಬರದಿ ಕೋಲ ।
ಬೇಟದಾಟವನಾಡಿ, ಬೆಳ್ಳದಿಂಗಳು ಮೂಡಿ
ಹೃದಂಬರದಿ ಕೋಲ ॥
ತಂತ್ರಯುಕ್ತಿಯ ಕೋಲ, ರಾಗಮುಕ್ತಿಯ ಕೋಲ,
ಪ್ರೇಮಭಕ್ತಿಯ ಕೋಲ ।
ಯಂತ್ರಶಕ್ತಿಯ ಕೋಲ, ತ್ಯಾಗಭುಕ್ತಿಯ ಕೋಲ,
ಲೀಲಾಮುಕ್ತಿಯ ಕೋಲ ॥

ಚೆನ್ನಲಿಂಗವೇ

ಮಾತಾಡೋ ಮಾತಾಡೊ ಲಿಂಗವೇ | ನೀ |
ಮಾತಾಡಲೊಲ್ಲೇಕೊ ಲಿಂಗವೇ ||
ಮಾತಿನ ತಾಯಾದ ಮೌನದ ಬಸುರಲಿ |
ಹೂತೆಯೊ ಹೇ ಚೆನ್ನಲಿಂಗವೇ || ಪಲ್ಲ ||

ಪರೆಯ ಮರೆಯಲ್ಲಿಹ ಲಿಂಗವೇ | ನೀ |
ಪರೆಯುಚ್ಚಿ ಬಹೆಯೆಂದು ಲಿಂಗವೇ ||
ಹರಿಯ ಪರೆಯನ್ನಾದಿ ಹಿರಿದು ಹಿಗ್ಗನ್ನೆಂದು |
ಹರಹುವಿ ಹೇ ಚೆನ್ನಲಿಂಗವೇ || ೧ ||

ಕೇಳಿ ಬಲ್ಲೆನು ಕೇಳು ಲಿಂಗವೇ | ನೀ |
ಹೇಳುವೆಯಾ ಹೇಳು ಲಿಂಗವೇ ||
ಆಳು ತಿಳಿಯದ ಯಾವ ಬಾಳಿನಲ್ಲಾ ದೇವಿ |
ಆಳುವಳು ಹೇ ಚೆನ್ನಲಿಂಗವೇ || ೨ ||

ಆಡಿದ ನುಡಿಗಿಂತ ಲಿಂಗವೇ | ನೀ |
ಹಾಡಿದ ನುಡಿ ಲೇಸು ಲಿಂಗವೇ ||
ನೋಡಿದ ಕೂಡಿದ ಎದೆಯಲ್ಲಿ ಆ ರೂಪು |
ಮೂಡೀತು ಹೇ ಚೆನ್ನಲಿಂಗವೇ || ೩ ||

ರಾಮುರಾಮಾ !

ಕರುವಿನ ಕರೆ ಕೇಳಿ ತೊರೆಗರೆಯದ ಹಸು ।
ಇರಬಹುದೇನೆಲ್ಲಿ ರಾಮುರಾಮಾ ॥
ಮರುಗುವ ಮರಿಗಾಗಿ ಎರೆಪನೆರೆಯದ ।
ಮರುಕವು ಮರುಕವೆ ರಾಮುರಾಮಾ ॥

ಮರುಗು ಮರುಕವು ಕೂಡಿ ಎರಡಲ್ಲ ಒಂದಹುದು ।
ಎರಕ ಹೊಯ್ದಂತಿದು ರಾಮುರಾಮಾ ॥
ಮರುದನಿ ಸರದಂತೆ ನೆರವಾಗಿ ಇರುವವು ।
ಎರವಾಗಬಹುದೇನು ರಾಮುರಾಮಾ ॥

ಮಗುವು ನೀರಡಿಸಿರೆ ಶರದಿಂದ ಕರೆಯಲು ।
ಲಗುಬಗೆಯಿಂದಲಿ ರಾಮುರಾಮಾ ॥
ಮುಗಿಲಿಗೆ ಪಾರ್ವಂತೆ ಪಾತಾಳಗಂಗೆಯು ।
ನೆಗೆದಳೂಟೆಯಾಗಿ ರಾಮುರಾಮಾ ॥

ಅಂಬುವನೆಸೆದರು ಅಂಬುವನೆ ಕರೆಯುವ ।
ಅಂಬೆಯ ಅಂಬೆಯು ರಾಮುರಾಮಾ ॥
ಜೆಂಬಲವಿಲ್ಲದ ‘ ಹಂಬಾ ’ ಎಂಬಾ ಕರೆಯ ।
ಹಂಬಲದರ್ಥವೇನ್ ರಾಮುರಾಮಾ ॥

ತುಂಬಿಯಂತಂಬೆಯು ಮರುಗಿನ ಹೂನೀರ |
ಚುಂಬಿಸಿದೊಡನಲ್ಲಿ ರಾಮರಾಮಾ ||
ತುಂಬೆಲ್ಲ ಮರುಕವ ಜೇನು ತುಂಬುವದೇನ– |
ಸಂಭವವೇ ಪೇಳು ರಾಮರಾಮಾ ||

ಮಡಿ ನೀಡು ಎಂದೆಂದೂ ಅಡಿಗಡಿಗೆ ನುಡಿಯುವ |
ಕಡುಮುಮತೆಯ ತಮ್ಮ ರಾಮರಾಮಾ ||
ಮಡುವಾಗು ನಲ್ಲಮ್ಮ ಒಕ್ಕಲಿಹ ಮಡಿವಳಿತಿ |
ಮಡಿಗೊಳಿಸೆನ್ನೆಂದೆ ರಾಮರಾಮಾ ||

ತೀರ್ಥರೂಪಳು ನೀನು ತೀರ್ಥವಾಗುವದೇನು |
ಸಾರ್ಥಕವಲ್ಲವೆ ರಾಮರಾಮಾ ||
ಸಾರ್ಥಪರಮಾರ್ಥದ ವೀಥಿಯ ತೋರೆಂದು |
ಪ್ರಾರ್ಥಿಸಿದೆನವಳ ರಾಮರಾಮಾ ||

ಕಲೆ ತೊಳೆದು ಬೆಳಗುವ ಕೈಯು ಕೆಸರೆಂಬಂತೆ |
ಮಲಿನವಾಗಲು ಬಹುದೆ ರಾಮರಾಮಾ ||
ಮಲಿತದ್ದು ಮಾಸಿದ್ದು ಕಳೆಯುವ ಮಡಿವಳ |
ಹೊಲೆಯಾಗಿ ಸಾಗೀತೇ ರಾಮರಾಮಾ ||

ಮುಟ್ಟು ಮೈಲಿಗೆಯುಳ್ಳ ತಟ್ಟು ಮೈಲಿಗೆಯಾದ |
ಕೆಟ್ಟ ಮೈಲಿಗೆಯಿರುವ ರಾಮರಾಮಾ ||
ಮೊಟ್ಟೆಯು ಮಡಿವಳ ಜಗದ ಪಾತಕಗಳ |
ಕೊಟ್ಟ ಪರಮೇಶ್ವರಿ ರಾಮರಾಮಾ ||

ಕಲುಷದ ತವರೂರು ಮಣ್ಣಿನ ಬಸುರಲಿ ।
ಸೆಲೆನೀರಿನಂತಿಹಳು ರಾಮರಾಮಾ ॥
ಮಲಿನದ ನೆಲೆವೀಡು ಮಾಂಸದ ಮನೆಯಲಿ ।
ಮೊಲೆಹಾಲಿನಂತಿಹಳು ರಾಮರಾಮಾ ॥

ಮೈಲಿಗೆ ಎಂಬುವನು ಮೈದಾಟಗೊಡದಂಥ ।
ಕೈಲಿಯುಸು ಕಲಿಸೆಂದೆ ರಾಮರಾಮಾ ॥
ಕಾಲಿಗೆ ಬಿದ್ದೆನು ಕೈಮುಗಿದು ಇದ್ದೆನು ।
ನಾಲಿಗೆ ಬಿಗಿದಿಟ್ಟು ರಾಮರಾಮಾ ॥

ಉಟ್ಟ ಬಟ್ಟೆಯೊಂದೇ ತೊಟ್ಟ ಬಟ್ಟೆಯೊಂದೇ ।
ಮುಟ್ಟುಬೇಕಾದಂಥ ರಾಮರಾಮಾ ॥
ಬಟ್ಟೆಯೊಂದೇ ಉಂಟು ಜಗವೆಲ್ಲ ಮುಡಿವಳರ ।
ಬಟ್ಟೆಯೊಂದೇ ಐಸೆ ರಾಮರಾಮಾ ॥

ಕಡೆಯ ಲೋಕಮೋಹ ಕರುಳ ಮಡಿವಳ ಗಂಗೆ ।
ಜಡಬಟ್ಟೆ ಕೇಗಳೆದು ರಾಮರಾಮಾ ॥
ಅಡಿಯ ಉಂಗುಟದಿಂದ ಮುಡಿಯ ಬಾಗಿಲು ತೆರೆದು ।
ಕುಡಿವಾಲಿನಂದದಿ ರಾಮರಾಮಾ ॥

ಮೀಸಲ ತೊರೆಯಾಗಿ ಈಸಲಿ ಬಂದಿಹ ।
ಸೋಸಲ ನೆರೆಯಲ್ಲಿ ರಾಮರಾಮಾ ॥
ಬೀಸಲು ಮನಸಿಲ್ಲ ಉತ್ಸಾಹ ಜೀವಾಳ ।
ಈಸಲು ಬಿದ್ದಿತು ರಾಮರಾಮಾ ॥

ಪಕ್ಷಿತೀರ್ಥದ ಮೇಲೆ ಪಾಯಸವಿಡುವಂತೆ ।
ಪಕ್ಷಿಗಳಿಗಾಗೆಂದು ರಾಮರಾಮಾ ॥
ನಕ್ಷತ್ರದೊಡೆಯನು ನಿನಗಿಲ್ಲಿ ಪಾವಿತ್ರ್ಯ ।
ಅಕ್ಷಯವಾಗಿಡಲಿ ರಾಮರಾಮಾ ॥

ಅಣ್ಣಿಯಗಡಲಿನ ತಣ್ಣನ್ನ ತಡಿಯಲ್ಲಿ ।
ಬೆಣ್ಣೆಯಾಗುತ ತೇಲು ರಾಮರಾಮಾ ॥
ಅಣ್ಣನ ಮಣ್ಣಿನ ಮೈಯಂತು ಮೈಯೆಲ್ಲ ।
ಕಣ್ಣಾಗಿ ಹೊಳೆಹೊಳೆ ರಾಮರಾಮಾ ॥

ತಾಯ್ಗರೆದ ಕಂಬನಿ ಬಾಯ್ದೆರೆವ ಸಿಂಪಿಸಲಿ ।
ಕಾಯ್ಗೊಂಡು ಹಣ್ಣಾಗಿ ರಾಮರಾಮಾ ॥
ಮೈಗರೆದ ಮುದ್ದಲ್ಲಿ ಮೈದೆರೆದು ಮುತ್ತಹುದು ।
ಕೈಯ್ಗಾರಿಯಾರಿವಳು ರಾಮರಾಮಾ ॥

ಕಡಿಯಂತು ಕಡಿಯೆಲ್ಲ, ಹುಡಿಯಂತು ಹುಡಿಯೆಲ್ಲ ।
ಹುಡಿಯು ಗೂಡಹುದೈಸೆ ರಾಮರಾಮಾ ॥
ಗುಡಿಯೆ ಮಡಿಯ ನಾಡು ಎಂದೆಂಬ ಜಾಣರ ।
ನುಡಿಯು ಒಳವೇನಿಹುದು ರಾಮರಾಮಾ ॥

‘ಮಡಿಯ ಕುಡಿಗೇ ಗುಡಿ ಗುಡಿಯ ಅಡಿಗೇ ಮಡಿ’ ।
ನುಡಿಯೊಂದು ದಿಟವುಂಟು ರಾಮರಾಮಾ ॥
ಕಡೆಮುಟ್ಟುವೀ ಮಾತು ನಿನ್ನ ಪಾಡಿನ ಪಲ್ಲ ।
ಕಡೆವರೆಗಾಗಿರಲಿ ರಾಮರಾಮಾ ॥

ಮೀಟಾದ ಮುಡಿಯೊಂದು ಶಿಥಿಲ ಪಂಥಕ್ಕೆಲ್ಲ ।
ಕೂಟಿಸಂತಿರುವದು ರಾಮರಾಮಾ ॥
ಕೂಟಕೂಟಿಗಳಂಟು ಜೀವ ಜೀವಾಳದ ।
ಜೀಟದ ಪರಿಯಂತೆ ರಾಮರಾಮಾ ॥

ಹರಕೆ

ಎರೆಯುವೆನು ಬಾ ನಿನ್ನ, ನಮ್ಮ ಪಟ್ಟದ ಮರಿಯೆ
ಸಕಲ ತೀರ್ಥದ ಕ್ಷೀರ ನೀರ ತಂದು.
ಬೆರಗಾಗಿ ಬೆರೆತು ಆ ಶಿವನಲ್ಲಿ, ದೇವನಲಿ
'ಪಡೆದಪ್ಪನಾಗು' ಎಂದು.

ನಿಃಸಂಗಳಿದ್ದ ಈ ಗುಪ್ತಗಂಗೆಯು ನನ್ನ
ಶಾಲ್ಮಲೆಯ ನೀರ ತಂದು.
ನಿಃಶಂಕನಾಗಿ ಬೆರೆಯೆಂದು ಎರೆಯುವೆನಿಂದು
'ಪಡೆದಪ್ಪನಾಗು' ಎಂದು.

ಹರಿಹರರ ಕಾಲ್ತೊಳೆವ ದಕ್ಷಿಣದ ಗಂಗೆಯೀ
ತುಂಗಭದ್ರೆಯ ಪುಣ್ಯಜಲವ ತಂದು.
ಎರೆಯುವೆನು ನಿನ್ನನ್ನು ಸಮರಸಿಯು ಆಗೆಂದು
'ಪಡೆದಪ್ಪನಾಗು' ಎಂದು.

ನಮ್ಮ ತಾಯಿಯ ಸೆರಗಿನಂಚಾಗಿ ಹರಿದಿದ್ದ
ಭವ್ಯಗೋದೆಯ ದಿವ್ಯಜಲವ ತಂದು
ತಮ್ಮ ಎರೆಯುವೆ ಸೆರಗುಬೆರಗಿಲ್ಲದಂಥ ಕಲಿ–
'ಪಡೆದಪ್ಪನಾಗು' ಎಂದು.

ನಮ್ಮ ತಾಯಿಯು ದಿವ್ಯ ಶ್ರೀರಂಗ ಪಾದವನು
ತೊಳೆವ ಕಾವೇರಿಯಾ ನೀರ ತಂದು
ತನ್ಮ ಎರೆಯುವೆನು ಶ್ರೀಗೊಮಟೇಶನೆ ಬಾರೊ
‘ಪಡೆದಪ್ಪನಾಗು’ ಎಂದು

ಇಟ್ಟಿಗೆಯ ಮೇಲೆ ಅಡಿಯಿಟ್ಟ ವಿಠ್ಠಲನನ್ನು
ಬಿಟ್ಟು ಮುಟ್ಟುವ ನದಿಯ ನೀರ ತಂದು
ಮೆಟ್ಟು-ಭಕ್ತಿಯ ಮೆಟ್ಟು-ಎರೆಯುವೆನು ನಾನಿಂದು
‘ಪಡೆದಪ್ಪನಾಗು’ ಎಂದು.

ಘಟ್ಟ ಮಲೆಗಳ ಬಿಟ್ಟು, ತಾರಕರ ಬಿರುದಿಟ್ಟು
ಹರಿವ ನದಿಗಳ ಮಡಿಯ ನೀರ ತಂದು
ಬಿಟ್ಟ ಬಿಡದಲೆ ನಾನು ಎರೆಯುವೆನು ನಿನ್ನನ್ನು
‘ಪಡೆದಪ್ಪನಾಗು’ ಎಂದು.

ಕರಿನಾಡ ಕನ್ಯೆ ಈ ಕೃಷ್ಣೆ ಕೇಳುವದೇನು?
ನಿನ್ನ ಕೂಡಲದಿಂದ ನೀರ ತಂದು
ಎರೆಯುವೆನು-ಅರಿವಾಗು-ತಾನೆ ತಾನಾಗಿನ್ನು
‘ಪಡೆದಪ್ಪನಾಗು’ ಎಂದು.

ಕನ್ನಡದ ನಾಡ ಕವಿಕುಲತಿಲಕರಾ ಕಾವ್ಯ
ಗಂಗಾಪ್ರವಾಹವೆಲ್ಲಿಂದ ಬಂತೋ
ಘನ್ನ ತೀರ್ಥಂಕರರ ಆ ಪೂಜ್ಯಪಾದಗಳ
ತೀರ್ಥದಿಂದೆರೆಯುವೆನು ನಿನ್ನನಿಂತೋ.

ಕಲ್ಯಾಣದಧ್ಯಕ್ಷನಾದ ಪ್ರಭು ಅಲ್ಲಮನ
ಗುರುಪಾದ ತೀರ್ಥ ತಂದು
'ಕಲ್ಯಾಣ ಕಲ್ಯಾಣ' ಎರೆಯುವೆನು ಶಿರಬಾಗು
ಶಿವಶರಣನಾಗು ಎಂದು.

ಉಡುಪಿಯೊಡೆಯನ ಅಡಿಯನುಡುಪು ಮಾಡುವ ನಮ್ಮ
ಆನಂದತೀರ್ಥ ತಂದು
ಮುಡಿಯಲ್ಲಿ ಧಾರೆಯಾಗಿಡುವೆ ಪುರುಷೋತ್ತಮನ
ದಾಸ ನೀನಾಗು ಎಂದು.

ಹಂಪುಗೊಳಿಸುವ ದೇವಿಯೊಲಿದ ಮಾಧವನ ವಿ-
ದ್ಯಾತೀರ್ಥವನ್ನು ತಂದು
ಹಂಪು ಪಡೆಯೆಂದು ನಾ ಎರೆಯುವೆನು ನೀ ಸರ್ವ-
ಸಂನ್ಯಾಸಿಯಾಗು ಎಂದು.

ಈ ನಾಡು ಅವರ ಹೊಲ! ಇವರವೊಕ್ಕಲಿಗನವ
ನಾ ನೀನು ರಂಟೆ ಕುಂಟೆ.
ಏನಾದರೇನು ಗೆಲವಿಹುದು ನೀನಿರಬೇಡ
ಸೋಲೆಂಬ ಚಿಂತೆಗಂಟೆ.

ಜಗದ ಪಟ್ಟವನೇರಿ ಕುಳಿತಿಹ ಜಗದ್ಗುರುವು
ನಮ್ಮ ಕನ್ನಾಡಿನಲಿ ಕಾಲನಿಟ್ಟು
ಮುಗಿದು ಎದೆಮುಗುಳನ್ನು ಅಡಿಯ ಹುಡಿಯಾಗೋಣ,
ಇಲ್ಲ ಸಲ್ಲದ ಬಗೆಗಳೇಕೆ ಇಷ್ಟು?

‘ಸೋಲು’ ಎಂಬುದು ಕೇಳು ಮೃತ್ಯುಲೋಕದ ಸೊಲ್ಲು
‘ಗೆಲವು’ ಒಂದೇ ಬಲ್ಲ ನಮ್ಮ ನಲ್ಲ.
‘ಸೋಲು’ ಹುಂಬರ ಗುಲ್ಲು ‘ಗೆಲವು’ ಕಾಣ್ಬರ ಸೊಲ್ಲು
ಸೋಲುವವ ತಾನೆಂದು ಕಾಣನಲ್ಲ.

ಉಸುರು ಉಸುರಿಗೆ ಅವನ ಹೆಸರ ಸಾರುತ್ತಿರುವ
ಗಾಳಿಯಂದದಿ ನಾವು ಚರಿಸಬೇಕು.
ಹೆಸರು ಹೆಸರಿಗೆ ಅವನ ಉಸುರು ತೋರುವ ಹಾಗೆ
ಬೆಳಕನ್ನು ಸುರಿಸಬೇಕು.

ತಾಪ ಕಂಡಲ್ಲೆಲ್ಲ ನಮ್ಮ ಸಂಪ್ರೀತಿಯನು
ನೀರಾಗಿ ಹರಿಸಬೇಕು.
ಪಾಪ ! ಪತಿತರ ಕಂಡು ಕೈನೀಡಿ ನೆಲೆಗೊಟ್ಟು
ನೆಲವಾಗಿ ಧರಿಸಬೇಕು.

ಅಣುರೇಣು ತೃಣಕಾಷ್ಠ ಪತಿತಪಾವನರ ಮುಗಿ-
ಲಾಗಿ ಆವರಿಸಬೇಕು.
ಅಣುವಿಗೂ ಅಣುವಾಗಿ ಮುಗಿಲಿಗೂ ಮುಸುಕಾಗಿ
ಅವನ ಆಜ್ಞೆಯ ನಾವು ಸ್ಮರಿಸಬೇಕು.

ಪಡೆದಪ್ಪನಾಗದೇ ದುಡಿದಪ್ಪನಾದವಗೆ
ಚಿಂತೆ ನೆರೆಯುವದೊಂದು ಸಂತೆಯಾಗಿ.
ಪಡೆದು ದುಡಿದವ ಜಾಣ ವ್ಯಸ್ತನಾದವ ಕೋಣ
ಆಗಬಾರದು ಪಿಂತೆ-ಮುಂತೆಯಾಗಿ.

ದೇವನಲ್ಲಿ ನಿವೃತ್ತಿ, ದೇವನಿಂದೆ ಪ್ರವೃತ್ತಿ
ಈ ಹಾದಿಯರಿಯಬೇಕು
ಜೀವಬಂಧುವೆ! ಕೇಳು, ಉಳಿದ ಜಂಜಾಲವನು
ತಾನಾಗಿ ಮರೆಯಬೇಕು.

* * * *

ಗುರುವಂ ಮರೆಯಬೇಡೈ ಗೆಳೆಯಾ! ಗುರುಬಂಧುವೇ ।
ಅರುಹಂ ತೊರೆಯಬೇಡೈ ಒಲವೇ! ಸ್ನೇಹಸಿಂಧುವೇ ॥

ಚಳಿ ಇರಲಿ ಮಳೆ ಬರಲಿ

ಚಳಿ ಇರಲಿ ಮಳೆ ಬರಲಿ
ಮಂಜು ಸುರಿಯುತಲಿರಲಿ
ಬಿಸಿಲು ಕುದಿಸುತಲಿರಲಿ
ಮುಮ್ಮುಖದ ಋತುಮಾನ ಹೇಗು ಇರಲಿಽಽ
ನಗುತ ಒಲಿವೆವು ನಾವು
ನಗುತ ಒಲಿಸುವೆವುಽಽಽ

ಏನೆ ಕಷ್ಟವು ಬರಲಿ; ಎಂಥ ನಷ್ಟವೆ ಇರಲಿ
ಇಷ್ಟವು ಅನಿಷ್ಟವೂ ಕೂಡಿ ಬರಲಿಽಽ
ದುಮ್ಮಾನ ಕಳೆವಂತೆ ಸುಮ್ಮಾನ ತೊಳೆವಂತೆ
ಹಾಡಿ ನಲಿವೆವು ನಾವು
ಹಾಡಿ ನಲಿಸುವೆವುಽಽಽ

ನೃಸಿಂಹ ಸ್ತೋತ್ರ

ಡಿಂಭದ ಈ ಕಂಭದೊಳಗೆ ತಾವು ಅಡಗಿ ಇರುವಿರಿ
ನಂಬಿರುವೀ ಎದೆಹೂವನೆ ಆಸನ ಮಾಡಿರುವಿರಿ
ವೈರಿಯಿಂದ ಕಾಯಬೇಕು ಕರುಣಿಸುತ್ತ ಸದ್ಗುರೋ
ನಾರಾಯಣ ನಾರಾಯಣ ಹೇ ನೃಸಿಂಹ ಪಾಹಿ ಮಾಮ್ ॥

ದೋಷವನ್ನು ನಾಶಗೈದು ಭಕ್ತಿಯನ್ನು ಪೋಷಿಸೆ
ಭಕ್ತಹೃದಯದಲ್ಲಿ ಸದಯನಾಗಿ ನಿಂತ ದೇವನೇ
ಏನು ಬಂದರೇನು ತಾವೆ ಕಾವಿರೆಂಬ ಭಾವನೆ
ನಾರಾಯಣ ನಾರಾಯಣ ಹೇ ನೃಸಿಂಹ ಪಾಹಿ ಮಾಮ್ ॥

ಮರೆವಿನಿಂದ ಇದ್ದೆ ನಾನು ಅರಿವ ಹರಡಿ ಬಂದಿರಿ
ಅರಿವಿನ ಅರವಿಂದವಾಗ ಹೊರಳಿ ಅರಳಿ ಬಂದಿತು
ಅಂದಿನ ಮಕರಂದವಿಂದಿಗಾನಂದವ ಕೊಡುತಿದೆ
ನಾರಾಯಣ ನಾರಾಯಣ ಹೇ ನೃಸಿಂಹ ಪಾಹಿ ಮಾಮ್ ॥

ಮರೆವುದೇನು ಜಡದ ಧರ್ಮ, ನಾನು ಮರೆತೆನೆನ್ನಿರಿ
ಅರಿವು ಮಾಡಿ ಕೊಡಿರಿ ಎನಗೆ, ತಾವು ನನ್ನ ಬಿಡುವಿರೆ?
ತಾವೆ ಕೈಯ ಬಿಟ್ಟಮೇಲೆ ದೆಸೆಯಾವುದು ಹಸುವಿಗೆ?
ನಾರಾಯಣ ನಾರಾಯಣ ಹೇ ನೃಸಿಂಹ ಪಾಹಿ ಮಾಮ್ ॥

ನಾನು ಒಡಲು ತಾವು ತ್ರಾಣ, ನಾನು ಉಸಿರು ಆಗಿರೆ
ತಾವು ಪ್ರಾಣವಾಗಿ ಕಾದು, ನಾನು ಚಿತ್ತವೆಂದೆನೆ
ತಾವು ಧ್ಯಾನವಾಗಿ ನಿಂತು ಹತ್ತಿರೆಳೆದುಕೊಳ್ಳಿರೇ
ನಾರಾಯಣ ನಾರಾಯಣ ಹೇ ನೃಸಿಂಹ ಪಾಹಿ ಮಾಮ್ ॥

ಮುಡಿಪಿನ ಸಂಕಲ್ಪವನ್ನು ಜೀವಸಿಂದ ಮಾಡಿಸಿ
ಜನ್ಮಜನ್ಮದಿಂದ ಬಂದ ಕರ್ಮಗಳನು ಓಡಿಸಿ
ದೇಹಪ್ರಾಣಮನಗಳನ್ನು ತಮ್ಮ ವಶಕೆ ಕೊಳ್ಳಿರಿ
ನಾರಾಯಣ ನಾರಾಯಣ ಹೇ ನೃಸಿಂಹ ಪಾಹಿ ಮಾಮ್ ॥

ನಾನು ಕಾಲುಮಣೆಯು ತಮ್ಮ ಮಹಾಪಾದ ಪೀಠಿಕೆ
ತಮ್ಮಡಿಗಳು ಮುಟ್ಟಿದೊಡನೆ ಅರಳಿ ಕಮಲವಾದೆನು
ಆ ಕಮಲದಲ್ಲಿ ತಾವು ಕಮಲೆಯೊಡನೆ ವಾಸಿಸಿ
ನಾರಾಯಣ ನಾರಾಯಣ ಹೇ ನೃಸಿಂಹ ಪಾಹಿ ಮಾಮ್ ॥

ಅಣುರೇಣುವು ತಮ್ಮದಿಹುದು, ‘ನಾನು’ ಎಂಬುದಾಟವು
ತಾವೆ ಜೀವನಾವೆಯಲ್ಲಿ ಕ್ರೀಡೆಯಾಡುತಿರುವಿರಿ
ತಾವು ನಮ್ಮ ರೀವು ನಾವು ಎತ್ತ ಹೋಗಿಬಂದರು
ನಾರಾಯಣ ನಾರಾಯಣ ಶ್ರೀನೃಸಿಂಹ ಪಾಹಿ ಮಾಮ್ ॥

ಶ್ರೀ ಗುರುಪ್ರಸಾದೋಽಸ್ತು । ಶ್ರೀ ಮಾತೃಪ್ರಸಾದೋಽಸ್ತು ।
ಭದ್ರಂ ಶುಭಂ ಮಂಗಳಂ.

ದರಿದ್ರನಾರಾಯಣ

೧

ಗಾಂಧೀಜಯಂತಿ ದಿನ ಸತ್ಯವನ್ನಾಡೋಣ
ಸುಳ್ಳಿಗೋ ಇಡಿ ವರುಷ ತೆರನೆ ಇಹುದು.
ಬಡತನವು ಬದುಕಿಹುದು, ಯಾರು ಇಲ್ಲೆನಬಹುದು,
ಯಾವ ತಂತ್ರಕ್ಕೆ ಅದು ಅಡಗಲಹುದು?

೨

ನದಿನೀರು ಹರಿಯುತಿದೆ, ನೆಲಹುಲ್ಲು ಬೆಳೆಯುತಿದೆ,
ಮಾನವನ ಸಂತತಿಗೂ ಲೆಕ್ಕವಿಲ್ಲ.
ಬಲುದೊಡ್ಡ ಹೆಸರಿನಲಿ ಸಣ್ಣ ಕೆಲಸಗಳೇಕೆ?
ಬಡತನವು ಇದ್ದುದಕೆ ದುಃಖವಿಲ್ಲ.

೩

ಸರ್ವೋದಯವು ಹೌದು, ಪರ್ವೋದಯವು ಹೌದು,
ಗರ್ವೋದಯವು ಮಾತ್ರ ಅಸ್ತಿಭಾರ.
ಕೆಲಸವಿಲ್ಲದ ಬಡವ ಕೈಗೊಂಬೆಯಾಗುವನು
ಕಿಳ್ಳಿಕೇತನ ಹಿಂದೆ ಸೂತ್ರಧಾರ.

೪

ಗಾಂಧಿ ಹುಟ್ಟಿರಬಹುದು, ಯೇಸು ಸತ್ತಿರಬಹುದು,
ಬುದ್ಧ ಅತ್ತಿರಬಹುದು ಧರ್ಮ ಪೇಳಿ.
ಜೈನವುಳ್ಳವರು. ಅಹುದು, ದಯವುಳ್ಳವರು ಅಹುದೊ?
ಬಡತನವು ಬದುಕಿಹುದು ಹೇಳಿಕೇಳಿ.

೫

ರಾಮರಾಜ್ಯವು ಆಯ್ತು, ಧರ್ಮರಾಜ್ಯವು ಹೋಯ್ತು,
ಬಳಿರಾಜ್ಯವಿಹುದು ಪಾತಾಳದಲ್ಲಿ.
ರುದ್ರತಾಂಡವದಲ್ಲಿ ಪ್ರೇತಗಳೆ ಕುಣಿಯುವವು
ಭೂತಗಳ ಮೇಳದಲಿ ತಾಳವೆಲ್ಲಿ?

೬

ಕೂಲಿಕುಂಬಳಿ ಕಷ್ಟ, ಅನ್ನವೋ ಅಪರೂಪ,
ಮಾನಕ್ಕೆ ತೆರೆ ಸಾಕು ಲಾಂಗು ಲಂಗೋಟಿ.
ಸಾವಿರದ ಲೆಕ್ಕದಲಿ ಬದುಕುವವರ ಬಾಳು
ಲಕ್ಷದೊಳಗೇ ಬರದು ಕೋಟಿ ಕೋಟಿ.

೭

ಕಳ್ಳರಿಗೆ ಸೆರೆಮನೆಯು, ಸೂಳೆಗೋ ಅರಮನೆಯು,
ಜೈರಾಗಿ ದಂಪತಿಗೆ ಧರ್ಮಶಾಲೆ.
ಬಡವರಿಗೆ ಬಯಲೆ ಗತಿ ಜನನ-ಮರಣಕ್ಕೆಲ್ಲ,
ಉಳ್ಳವರ ಲೋಭ ಬಡತನದ ಮೂಲೆ.

೮

ಬಡತನದ ಸಸಿಗೆ ಸೀರೆರೆಯುಪೇಡೆಲೂ ಗೆಳೆಯ!
ಬಡತನಕೆ ಉಪಕಾರಿ, ಸಾಕು ಜಂಭ.
ನಿನ್ನ ಸೇವೆಯ ಪುಣ್ಯದಿಂದ ಹಬ್ಬಿಹುದಣ್ಣಾ
ಬಡತನದ ಹುಲುಸುಬೆಳೆ ಜಗದ ತುಂಬ.

೯

ಬಹುಜನರ, ಬಡಜನರ, ಅಜ್ಞಾನಿ ದುಡಿತವನೆ
ಬಂಡವಾಳವ ಮಾಡಿ ಶ್ರೇಷ್ಠಿಯೆನಿಸಿ
ದಾನಧರ್ಮವು ಎಂದು ಸೇವೆ ತ್ಯಾಗವು ಎಂದು
ಈ ಆಟ ಹೂಡದಿರು ಕೀರ್ತಿ ನೆನಿಸಿ.

೧೦

ಕಾಯಕವು ಕೈಲಾಸ, ಭಕ್ತರಿಗೆ ಉಪವಾಸ,
ಶರಣರಿಗೆ ವನವಾಸ ಉಳಿವಿ ಹಾದಿ.
ಎಲ್ಲೆಲ್ಲೊ ಇದ್ದವರಿಗಲ್ಲಲ್ಲೆ ಮಣ್ಣಾಯ್ತು,
ಬಸವಣ್ಣನವರಿಗೋ ಜಲಸಮಾಧಿ.

೧೧

ಮುಸಲನಾದರು ಏನು, ಕ್ರೈಸ್ತನಾದರು ಏನು,
ಸುಡುಗಾಡು ಸೇರಿದರು ಬಿಕ್ಕೆ ಬಿಡದು.
ದಾನಕ್ಕೆ ಪಾತ್ರಗಳು ಹಲಕೆಲವು ಇರಲೆಂದು
ದೈವಪೂಜಕರ ಕೈ ಭಿಕ್ಷೆ ಕೊಡದು.

೧೨

ಧನಪತಿಯು ಎಂದಿಗೂ ರಾಜನು ಮಹಾರಾಜ
ಶಕ್ತಿಪತಿ ಶಿವನಿಗೋ ತಿರುಕ ರೂಪ.
ಮೂಲೋಕ ತುಂಬಿದವ ಶೂನ್ಯನಾದನು ಬೇಡಿ
ಕೊಡುವವನ ಕೈ ಮೇಲು ಒಲಿಯೆ ಭೂಪ !

೧೩

ಕಣ್ಣು ಇದ್ದೂ ಕುರುಡು. ಕಿವಿಯು ಇದ್ದೂ ಕಿವುಡು,
ಎದೆಯು ಇದ್ದೂ ಕೂಡ ಜೊಳ್ಳುಪೊಳ್ಳು,
ದುಡ್ಡು ದುಡಿವವರ ಕುಣಿಸುತ್ತಲಿದೆ ಇದು ಸತ್ಯ
ಬಡತನದ ತತ್ತ್ವ ಅಪ್ಪಟಿಯು ಸುಳ್ಳು.

೧೪

ಜನತಾಜನಾರ್ದನಾ! ದರಿದ್ರ ನಾರಾಯಣಾ!
ಅಳಬುರುಕ ರಾಮಾನುಜಾ! ಮತ್ತೆ ಮತ್ತೆ ಪಾರಾಯಣಾ!
ಶಿವ ಶಿವಾ ಮಹಾದೇವ ಶಿವಾ! ಕಣ್ಣಿಲ್ಲವರಿಗೆ ನೀನೆ ಶಿವಾ!
ಯಾ ಅಲ್ಲಾ! ಬಡತನದಷ್ಟು ಸಿರಿತನವಿಲ್ಲಾ!
Oh God! if thou art
Tell man, if he has a heart.

೧೫

ಯಾವ ಭಾಷೆಯಲಿ ಎಷ್ಟು ಕೂಗಿದರು
ಬಡತನವಾಗದು ನಿರ್ಬೀಜ!
Virus, Parasite ಸಂಪತ್ ವೃದ್ಧಿಗೆ
ಪ್ರಾಣಿಗೊಬ್ಬರವು ಇದೇ ನಿಜ.

೧೬

ದಾರಿದ್ರ್ಯವನೇ ನಷ್ಟಗೊಳಿಸೆ ಬಾ
ಬೇಡ ದರಿದ್ರರ ಸೇವೆ!
ಪರೋಪಕಾರಕೆ ಅದಸಿರಿಸಿರುವಾ
ಹೃದಯದರಿದ್ರರು ನಾವೇ.

೧೭

ದುಡಿವವಗೆಲ್ಲಾ ಕೆಲಸವ ನೀಡು
ಹಸಿದವರಿಗೆ ಅನ್ನ.
ಹೆಣ್ಣಿಗೆ ಕೂಸಿಗೆ ಆಸರ ನೀಡು
ಈ ವಿದ್ಯೆಯೆ ಚೆನ್ನ.

೧೮

ಶೀಲಕೆ ಬೆಲೆ ಕೊಡು, ವಶೀಲೆ ನಿಲ್ಲಿಸು,
ಗುಣಗೌರವ ಮಾಡು.
ದೊಡ್ಡಸ್ತಿಕೆಯಲಿ ಮೆರೆಯದಿರಣ್ಣ,
ಸಹೃದಯತನ ಬೇಡು.

೧೯

ಇಕೋ ನೆಲ—ಅಕೋ ಜಲ
ಅದರ ಮೇಲೆ ಮರದ ಫಲ
ಮನದೊಳಿದೆ ಪಡೆವ ಛಲ
ಬೆಳೆವಗೆ ನೆಲವೆಲ್ಲ ಹೊಲ
ಜಲಧಿವರೆಗು ಒಂದೆ ಕುಲ
ಅನ್ನವೆ ಧರ್ಮದ ಮೂಲ
ಪ್ರೀತಿಯೆ ಮೋಕ್ಷಕ್ಕೆ ಬಲ
ಇದೇ ಶೀಲ ಸರ್ವಕಾಲ
ಇಕೋ ನೆಲ—

೨೦

ಲಕ್ಷ್ಮೀಪತಿಯನು ಜ್ಯೇಷ್ಠಾದೇವಿಯ ಗಂಡನ ಮಾಡದಿರಣ್ಣ
ವಸುಂಧರೆಯನೇ ಬಂಜೆಯು ಎನಿಸಿ ಏನೋ ಹಾಡದಿರಣ್ಣ
ಮೋಹನದಾಸ ವಿವೇಕಾನಂದರು ಎಂದರು ಏನೋ ತಾವೇ
ಬಡವರ ಕಟ್ಟುವ ಕೆಲಸವು ನಡೆದಿದೆ, ಎನಿಸುತ ಬಡವರ ಸೇವೆ.

೨೧

ದರಿದ್ರನಾರಾಯಣನ ಸೇವೆಯೊ ಅದುವೇ ದೃಷ್ಟಿಯ ಗೊಂಬೆ
ಬಡತನ ಕಣ್ಣಿಗೆ ಬೀಳುವವರಿಗೂ ಈ ತಿರುಮಂತ್ರವ ನಂಬೆ
ಅಮೇರಿಕೆಯ ಧನತತ್ತ್ವವೆ ಇರಲಿ, ರಸಿಯದ ಜನಹಿತತತ್ತ್ವ
ಮಾನವ ಮನತತ್ತ್ವವೆ ಹೀರುತ್ತಿದೆ ಬಡವರ ಪ್ರಾಣದ ಸತ್ತ್ವ.

ಯೌವನದ ಕನಸು

‘ಭೂವೈಕುಂಠ’ ‘ಭೂಕೈಲಾಸ’ ಎಂದು ಹಾಡಿ ಹೋದವರುಂಟು;
ನೋಡಿ ನಲಿದವರಿಲ್ಲ.
ಹಸಿವೆಯ ಸೆರೆಯಿರುವವರೆಗೆ, ಮೈಗೆ ಬಿಡುಗಡೆಯಿಲ್ಲ;
ಅನ್ನವು ಸ್ವಾಧೀನವಾಗಲಿ.
ಸಾವಿನ ಸೆರೆಯಿರುವವರೆಗೆ, ಸಂತತಿಗೆ ಬಿಡುಗಡೆಯಿಲ್ಲ;
ಪ್ರಾಣವು ಸ್ವಾಧೀನವಾಗಲಿ.
ಸಂಶಯದ ಸೆರೆಯಿರುವವರೆಗೆ, ತಿಳುವಳಿಕೆಗೆ ಬಿಡುಗಡೆಯಿಲ್ಲ;
ಸತ್ಯವು ಸ್ವಾಧೀನವಾಗಲಿ.
ಅನ್ನದ ಮೇಲೆ ಅನ್ಯರ ಅಧಿಕಾರ ಬೇಡ; ಅನ್ನವು ಸ್ವತಂತ್ರವಾಗಲಿ.
ತನ್ನ ಅನ್ನವ ಪಡೆಯುವದೇ–ಒಕ್ಕಾಲು ಧರ್ಮ!
ಜೀವದ ಮೇಲೆ ಮುಪ್ಪಿನ ಒತ್ತಾಯ ಬೇಡ; ಜೀವನವು ಸ್ವತಂತ್ರವಾಗಲಿ.
ಇಚ್ಛೆಯ ಮರಣ ಹೊಂದುವದೇ–ಇಕ್ಕಾಲು ಧರ್ಮ!
ಸತ್ಯದ ಮೇಲೆ ಒತ್ತೆಯ ಮುದ್ರೆ ಬೇಡ; ಸತ್ಯವು ಸ್ವತಂತ್ರವಾಗಲಿ.
ನಿಜ ಸತ್ಯದಂತೆ ನಡೆಯುವದೇ–ಮುಕ್ಕಾಲು ಧರ್ಮ!
ಇನ್ನುಳಿದುದು–ಅಧರ್ಮ! ಅಧರ್ಮ! ಅಧರ್ಮ!
ಅನ್ನ ದಾಟಿ, ಮುಪ್ಪ ಮೀರಿ, ಸತ್ಯ ಸೇರಿದಾಗ ಆತ್ಮದ ಉದಯ.
ಅಲ್ಲಿಯ ವರೆಗೆ—
ಯೌವನದ ಕನಸು; ಪುರಾಣದ ಸ್ವರ್ಗ.

ಧ್ರುವಮಾರ್ಗ

ದೇಹವಲ್ಲಿ ವೈದೇಹಲೀಲೆ ಘುಣಘಾರ್ಣಭಾವುದೆಡೆಯೆ.
ಶ್ರೇಯಪ್ರೇಯಗಳ ದ್ವಂದ್ವ ಸರಿದು ನಿರ್ದ್ವಂದ್ವ ಐಕ್ಯಪಡೆಯೆ.
ಸುರುಚಿಯಲ್ಲಿ ಉತ್ತಮನ ಪಡೆದನುತ್ತಾನಪಾದ ರಾಜ.
ಆ ಸುನೀತಿ ಧ್ರುವನನ್ನು ಹಡೆದು ವನವಾಸಿಯಹುದು ಸಾಜ.

ಗಗನಗಾಮಿ ನಾರದನ ವೀಣೆಗಾ ಧ್ರುವನ ಸ್ಪರ್ಶವಾಗಿ
ಬಂದ ನಾರದನು ಬಾಲಮುನಿಯನೆಡೆ ದಿವ್ಯ ಹರ್ಷವಾಗಿ.
ಆಹುದಹುದು ಮೀರಿ ವಿಜ್ಞಾನಧೀರೆ, ಅರವಿಂದ ತೆರೆದಿತಣ್ಣ.
ಪಾಟಲದ ಪಟಲ ನವಸ್ಫೋಟವಾಗಿ ಹೊಸದಾಗಿ ಏಳು ಬಣ್ಣ.

ಭೂಮಿ ಬೆಳೆವಂತೆ ಸ್ವರ್ಗ ಇಳಿದಂತೆ ಕ್ಷಣವು ಪರ್ವವಾಗೆ
ಆನಂದ ಕಟ್ಟಿ ಹೊಸಜೀವ ಹುಟ್ಟಿ ಅವತಾರವಾದ ಹಾಗೆ
ನರನ ಹೃದಯ ನಾರಾಯಣಾಗ್ನಿ ಒಲಿದೀಯೆ ಬಂತು ವರವು
ಮೂರು ಸಪ್ತಕವ ಮೀರಿ ಇರುವ ಆ ಅಪೂರ್ವ ಸ್ವರವು.

ಸಪ್ತ ಋಷಿಗಳೇಳೆತ್ತು ತಿರುಗುತಿವೆ ಹಾಕಿ ಧ್ರುವದ ಗಾಣಾ.
ಮೇರು ದಂಡದಾ ಇಕ್ಷುರಸವ ಹಿಂಡುತ್ತಲಿಹುದೊ ಜಾಣಾ.
ವಿವಿಧವಾಗಿ ಸಂಚರಿಸಿ ಠಾಯಿಯಲಿ ಬ್ರಹ್ಮದೇಕತಾನಾ
ಕರೆಯುತಿಹುದು ಸ್ವರಮೇಳಕಾಗಿ ಗ್ರಹಗೋಲ ವಿಶ್ವಗಾನಾ.

ಪ್ರತಿವರ್ಷದಂತೆ ಬಂತುs, ಶ್ರಾವಣಾ

ಅಹಹಹಾ ಬಂತು ಶ್ರಾವಣಾ
ಜಗದ ಜೀವನಾ
ಕರುಳ ಹೂವಣಾ.
ಹೊರಳಿ ಬಂತು
ಹಸಿರಾಗಿ ಪಸರಿಸಿಂತು.

ಇದು ವಿಶ್ವಜೀವದಾಕರ್ಷ
ಹೊಮ್ಮಿತೋ ಹರ್ಷ
ಏನು ಪ್ರತಿ ವರ್ಷ–
ದಂತೆ ಬಂತು
ಮೈದಾಳಿದಂತೆ ಕಂತು.

ಈ ಮೋಡದೊಡ್ಡಿನ ಮ್ಯಾಲಾ
ಮಂಜಿನ ಖ್ಯಾಲಾ
ಹೊಚ್ಚಿಕೊಂಡ ಶಾಲಾ
ಗಿರಿಯ ಜಾಲಾ
ನಿಂತsದ ಮಳಿಯ ಮ್ಯಾಳಾ.

ಇದು ನೆಲದ ಗರ್ಭದಾ ಹೊನ್ನು
ನೀಲಿ ನೀರನ್ನು
ಕುಡಿದು ಹಸಿರನ್ನು
ಉಗುಳಿತಿಂತು
ಜಗ ನೋಡತsದ ನಿಂತು.

ಇದು ಎಂಥ ಹಸುರಿನ ಕಂಪ
ತಿಳಿಯದ ತಂಪ
ಮೂರ್ತ ಜಗಜಂಪ
ತೂರ್ತ ಬಂದು
ಮನಪೂರ್ತವಾಗಿ ಸಂದು.

ಬೆಳಿಗೆಲ್ಲಾ ಹಸುರೆ ಕಾರಣಾ
ಹೃದಯದ ಕಣಾ
ಆಗತವ ಹೆಣಾ
ಹಸಿರು ನಂದಿ
ಹಸಿ ಹೀರಿ ಬಿಸಿಯ ಹೊಂದಿ.

ಆಹಾ ಭೂಮಿ ತಾಯಿಯ ಉಸಿರು
ಅವಳ ಆ ಬಸಿರು
ಪಚ್ಚೆಯಾ ಹಸಿರು
(ಕಸುರಾಗಿ) ಬಂತು ಆರತು
ಬುದ್ಧಿಗೇ ಭಕ್ತಿ ಬೆರತು.

ಭಲ ಏನು ಬನದ ಕಾವಣಾ
ಸುಳಿವ ಭಾವನಾ
ಹೊಳೆವ ಹಾವಣಾ
ಶ್ರಾವಣಾ ಹೌದೋ
ಇದು ಹೌದು ಶ್ರಾವಣಾ ಹೌದು.

ಬೀಸ್ತಽದ ಶ್ರಾವಣದ ಗಾಳಿ
ಹಿಡಿದ ಹೆಗ್ಗಾಳಿ
ಹೊರಟದಽ ದಾಳಿ
ಶಿವನ ಗಣಕ
ಹುಟ್ಟ್ಯಽದ ಜೀವ ಹೆಣಕ.

ಮದಗುಣಿಕಿ ಊದಿ ತುತ್ತೂರಿ
ಹೇಳತ್ತಽದ ಗರಿ
ಹಾಡು ಇದು ಭಾರಿ
ಆತು ಜನಕ
ಮೆಚ್ಚ್ಯಾತು ಶಿವನ ಮನಕ.

ಶ್ರಾವಣಕ ತಪ್ಪಿತ ಗ್ಯಾನಾ
ಎಲ್ಲಿದೋ ಧ್ಯಾನಾ
ಹುಚ್ಚ ಆಗ್ಯಾನಾ
ಮದೋನ್ಮತ್ತಾ
ಅಂಬಿಕಾತನಯದತ್ತಾ.

ಪ್ರೇಮಬೀಜ

ಇಳೆಯ ಮಕ್ಕಳೆಲ್ಲ ಬನ್ನಿ
ತಾಯ ತವರುಮನೆಗೆ
ಭೇದ ಬಲಿಸಿ ಬಳಲಬೇಡಿ
ಎಂದು—ನನಗೆ ನಿನಗೆ.

ಇದು ಬಿಳಿವೂ ಇದು ಕರಿವೂ
ಹಗಲು ಇರುಳು ಬಣ್ಣಾ.
ಕೆಂಪನಿವಾ ಹಳದಿಯವಾ
ಅಂದಚೆಂದವಣ್ಣಾ.

ಎದೆಯಾಳದ ರಕ್ತದಲ್ಲಿ
ಭಾವದ ಅನುರಕ್ತಿಯಲ್ಲಿ
ಕಾವಿನ ಚಿತ್‌ಶಕ್ತಿಯಲ್ಲಿ
ಕಂಡ ಶಾಂತಿ ಗೀತ,
ಕರೆದು ಜನ್ಮಮರಣಗಳಿಗೆ
ತಾರಕರಾ ಚರಣಗಳಿಗೆ
ಜೀವಾಂತಃಕರಣಗಳಿಗೆ
ನೀಡಿತು ಸುಪ್ರೀತ.

ಪ್ರೇಮಬೀಜ ಮೂಲ ನನಗೆ
ಪ್ರೇಮಬೀಜ ಫಲದ ಗೊನೆಗೆ.

ಓ ತಾಯೆ

ಉಪಕಾರದ ಹೊರೆ ಹೆಚ್ಚಾಗಿ
ತಲೆ ಕುಸಿಯುತ್ತಿಹುದು.
ಚಿಂತಾಜ್ವರದಲಿ ಏರಾಗಿ
ಎದೆ ಬೆವರುತ್ತಿಹುದು.

ನ್ಯೆಗೇ ನ್ಯೆಯೇ ಜಡವೆನಿಸಿ
ಇಳಿಸಲೊ ಎನಿಸುವದು.
ಜೀವವು ಆಜ್ಞೆಗೆ ಕಾಯುತ ತಾಯೀ
ನಿನ್ನನೆ ನೆನೆಸುವದು.

ಇರುವೆ—ಅರಿವೆ

ಇರುವೆ, ಇರುವೆ, ಅರಿವೆ, ಅರಿವೆ
ಅಸರಂತವು ಎನುವೆ.
ಎಲ್ಲಿರುವೆ ? ಏನರಿವೆ ?
ಏ ತನುವೇ, ತನುವೇ !

ನಿನಗೆ ನೀನನನ್ಯನೆನಲೊ ?
ನನಗೇ ನಾನನ್ಯ ?
ಅಹಂಮನ್ಯ ವಿಶ್ವಜನ್ಯ
ಹೇಳು ಸ್ವಯಂಧನ್ಯ !

ಈಗಿದ್ದರೆ ಈಗಿಲ್ಲಾ
ಅಲ್ಲಿದ್ದರೆ ಇಲ್ಲಿ ?
ಅರಿವಿನೊಳೇ ಇರವಿದೆಯೊ ?
ಇರವಿದೆ ಅರಿವೆಲ್ಲಿ ?

ಇದೇ ದೇವ

‘ ಇದೆ ’ ಇದುವೆ ‘ ದೇವ. ’
‘ ಇದು ’ ಅದರ ‘ ಭಾವ. ’
‘ ಇದಿರ್ ’ ಉಸುರೆ ‘ ವೇದ. ’
ಮಾತದರ ಭೇದ,
ಇದಿರಿಚ್ಛೆ ದೈವ.
ಗೆಲುವೇ ಸದೈವ.
ಇಲ್ಲಿಲ್ಲವಾದ
ಆ ಸುಸಂವಾದ
ಸಪ್ರೀತಿಗೀತ
ನಿರ್ಭೀತಿನೀತ.

ಮೋಡ

ಬೆವತಿತ್ತು ಮೈ ಎಂದು ಕಣ್ಣನೆತ್ತಿದೆ ಮೇಲೆ
ಅದೊ, ಅಲ್ಲಿ ಮುಖದಾಕಾರ ಮೋಡ ಮೂಡಿದೆ ಒಂದು.
ತಲೆಕೆದರಿಕೊಂಡಿದೆ, ಟಗರುಗೂದಲು, ರೀತಿ
ಶುದ್ಧ ರಾಣಿಗನಂತೆ, ಬಾಸು ಕಾಳೆಗ ಬಯಲು—
ಆನೆದಲೆ, ಸರ್ಪಮುಖ, ಲಂಬಕರ್ಣನ ತಂದೆ,
ಅಮ್ಮಮ್ಮ ಮಾಮಾಯಿ ಲಂಗ ಹಾರುತ್ತಲಿದೆ—
ಯಾರದೀ ದಂಡು ಏತಕ್ಕಾಗಿ ಕೂಡಿದೆ ಇಂದು?
ಪ್ರಳಯಪೂರ್ವದ ರೌದ್ರ. ಸದ್ದಿಲ್ಲದೀ ಸಂಚು
ಯುದ್ಧಬಡಕರ ಶುದ್ಧಶಾಂತತಾವಾದದೊಲು
ಪರಿಣಾಮ ಬೇಸುರವಲಾ! ಈ ಮಹಾಕೂಟ—
ನೋಟವೇ ಇಂತಿರಲು ಆಟ ಎಂತದೊ ಮುಂದೆ,
ಮಜ್ಜಿಗೆಯ ಮೇಲ್ ತೇಲಿ ಬೆಣ್ಣೆಯಂತೆ ಸಲೀಲ—
ಕಣ್ಮಿಂಚಿ ಕರೆಯುತಿದೆ ಓಹೊ ಘನ ಘನ ನೀಲ!

ಮಿಂಚು

ಬಾನ ಬರಸಿಡಿಲಲ್ಲ ಕೆಮ್ಮಿಂಚು ಹೊಮ್ಮಿಂಚು
ಅಬ್ಬ! ವಜ್ರದ ಮಿಂಚು, ನೇತ್ರಪಲ್ಲವಿಯ ಈ
ತಂತ್ರ ಬಲ್ಲವರಾರು? ಏನೇನೊ ಬರೆಬರೆದು
ಮತ್ತೆ ಅಳಿಸಿದ ಹಾಗೆ ಮಾಯವಾಗುತ್ತಲಿದೆ
ತತ್‌ಕ್ಷಣಕೆ ಕಾಣದಾಗುವ ಈ ನಿರೀಕ್ಷಣದ
ವೇಗದಲಿ ಆವ ಸಂದೇಶವಿದೆ? ಹಾ! ಮೂಢ
ಮೇಘನಾದನ ಹೆಗಲ ಅಪ್ಸರೆಯಪಾಂಗದೀ
ಪಾಂಗು ಗಗನಾಂಗನೆಯ ಪ್ರಾಯದ ಅಭಿಪ್ರಾಯ!
ನೀರ ಉಗೆಯಲ್ಲಿ ಬೆಂಕಿ ಅಡಗಿರಬಹುದೆ?

ಕಿಡಿ

ಸಾಕು ಒಂದು ಮೊಗ್ಗು ಕಿಡಿ
ವಿಶ್ವಕದುವೆ ಹಿಗ್ಗು ಗುಡಿ.
ಕಡಲುತೆರೆಯು ಕನ್ನಡಿ.

ಬೊಗಸೆ ತುಂಬ ಬಾನು.
ಅದರೊಳಿದ್ದೆ ನಾನು.
ಅಲ್ಲೆ ಇದ್ದೆ ನೀನು.
ಕೋಟಿ ಕೋಟಿ ಕೋಟಿ ಮೀನು
ಉಪ್ಪುನೀರು ಕೊರತೆಯೇನು.
ಪುಟ್ಟ ಬಾಯಿ ಪುಟ್ಟ ತುಟಿ
ಪುಟ್ಟ ಬಾಲ, ಪುಟಿಪುಟಿ
ಒಲಿತ, ಅಲಿತ, ನಲಿತವೊ!
ಎಲ್ಲಿ ಇದನು ಕಲಿತವೊ?

ಒಹೋ ಇಲ್ಲಿ ಪುಟ್ಟುಗಣ್ಣು.
ನಿದ್ರೆ ಇದನು ಮುಚ್ಚದು.
ಇಮವು ಹೊಸತು ಹೊಚ್ಚದು.
ಈ ಕರಾಳ ಆಳದಲ್ಲಿ
ಪ್ರಳಯುದೀ ಪಯೋಧಿಯಲ್ಲಿ
ಏನ ಕಂಡು ಬಾಳಿತೋ
ಯಾವ ಬದುಕನಾಳಿತೋ
ದೂರದಾ ದಿಗಂತದಲ್ಲಿ
ಎಂಥ ಚುಕ್ಕೆ ಕಂಡಿತೋ!

ಪಾರ್ವತಿ ನೀನೇ ಸಲಹು

ಈಶ್ವರ ನಿರ್ಮಿಸಿದೀ ಸೃಷ್ಟಿಯನು
ಪಾರ್ವತಿ ! ನೀನೇ ಸಲಹು.
ನಿನ್ನದೆ ಈ ನೆಲ, ನಿನ್ನದೆ ಈ ಜಲ
ನಿನ್ನದೆ ಕನ್ನಡ ಗೆಲಹು.

ಒಲಿವ ಲಿಂಗವೇ ಚೆಲುವ ಲಿಂಗವೇ
ನಲಿವ ಲಿಂಗವೇ ನೀ ತಾಯಿ.
ಕನ್ನಡ ಬೀಜವ ಹೂವಾಗಿಸಿದೆ
ಹಣ್ಣಾಗುವವರ ನೀ ಕಾಯಿ.

ಪಾರ್ವರ ಪಾರಿಕೆ ತ್ರಿನೇತ್ರಶಿಖೆಯೊಲು
ಉತ್ತರೋತ್ತರವು ಮೇಲು ಮುಖ.
ಪ್ರತಾಪವಿಲ್ಲದ ತಾಪ ಬೆಳೆಸುವಾ
ಹುಸಿ ತಪಸ್ಸಿನಲಿ ಏನು ಸುಖ ?

ಬಡಗಣ ತೆಂಕಣ ಪಡುವಣ ಮೂಡಣ
ನಡುವಣ ಕನ್ನಡ ಪಂಚಶಿಖ.
ಪರಮೇಶ್ವರನೊಲು ಪ್ರಪಂಚ ಪ್ರಕಟಿಸಿ
ಮೈದೋರಿತು ಇಗೊ ಪಂಚಮುಖ.

ಜೈನರ ಕಾವ್ಯದ ಶರಣರ ವಚನದ
ದಾಸರ ಹಾಡಿನದೀ ನಾಡು.
ವಿಶ್ವದ ಕಬ್ಬದ ಹಬ್ಬಹುಣ್ಣಿಮೆಗೆ
ಕನ್ನಡ ಹೃದಯವ ಹದ ಮಾಡು.

ಹಾಡಿಗೆ ತಕ್ಕಾ ರಾಗವು ಬೇಕು
ರಾಗಕೆ ತಕ್ಕಾ ಅನುರಾಗ.
ಹೇಳುವವರಲೂ ಕೇಳುವವರಲೂ
ರಸಪರಿಣಾಮದ ಸಮಯೋಗ.

ಕರ್ನಾಟಕವನು ಕಡೆದರು, ಹೊರಟಿತು
ಕನ್ನಡವೆನ್ನುವ ನವನೀತ.
ಹೃದಯದ ಮರ್ಮವ ಮಿಡಿದರೆ ಬರುವೊಲು
ನಾದದಿಂದ ಅನುಭವಗೀತ.

ಕನ್ನಡ ನುಡಿದಿತು ಕನ್ನಡ ಹಕ್ಕಿ.
ಕನ್ನಡವೆಂದಿತು ಆಗೋದೆ.
ಕಾವೇರಿಯು ತಂಪಾಯಿತು, ಕನ್ನಡ
ಗಾಳಿಯು ಉಸಿರಿತು ಈ ಬೋಧೆ :

ಜಿನ ಹರಿ ಅಲ್ಲಾ ಶಿವನೇ ಬಲ್ಲಾ
ಒಬ್ಬನಲ್ಲದೇ ಎರಡಿಲ್ಲಾ !
ಜೀವದೇವನೊಂದಾಪಣೆ ಇಲ್ಲದ
ನೀರಿಲ್ಲದ ನೆಲ ಬರಡಲ್ಲಾ ?

ಅರ್ಪಣವಿಲ್ಲದೆ ಪ್ರಸಾದವಿಲ್ಲಾ.
ತರ್ಪಣವಿಲ್ಲದೆ ಶ್ರಾದ್ಧ ಗಡಾ?
ದರ್ಪಣವಿಲ್ಲದ ದರ್ಶನವಿಲ್ಲಾ
ಯೋಗದ ತೇರಿಗೆ ಶ್ರದ್ಧೆ ಬುಡ!

ಈಶ್ವರನೊಲುಮೆಗೆ ಶ್ರದ್ಧೆಯೆ ಮೂಲ,
ಅವನೊಡಗೂಡಲು ಶಕ್ತಿ ಬಲ.
ಆತ್ಮದಿ ಶ್ರದ್ಧೆಯು ಪ್ರಸಾವ ಪಡೆಯಲು
ಬೇಕಾಗಿರುವದು ವೀರಛಲ.

ಅಶಿವವು ಎಂಬುದು ಬಾಳುವೆ ಅಲ್ಲ.
ಅಶಕ್ತವೆಂಬುದು ಬದುಕಲ್ಲ.
ಅನೀಶವೆಂಬುದು ರಾಜ್ಯವೆ ಅಲ್ಲ.
ಅಭಕ್ತವಾದರೆ ಇರಸಲ್ಲ.

ಅನೇಕಾಂಗವಿದೆ ಐಕ್ಯದ ಕೀಲ
ಅನೈಕ್ಯವಾದರೆ ಒಂದಲ್ಲ.
'ನಾ' 'ನಾ' ಎನ್ನುತ ನಾನಾ ತೆರದಲಿ
ವಿಭಕ್ತವಾದರೆ ಚೆಂದಲ್ಲ.

ಬಾಂಧವ್ಯವು ಇದು ಬಂಧನವಾದರೆ
ಮುಕ್ತ ಜೀವನಕೆ ತೆರವಿಲ್ಲ.
ಸ್ವಭಾವ ಪರಿಪಾಕಕ್ಕಿಂಬಿದ್ದರೆ
ಸಾಮರಸ್ಯಕದು ಎರವಲ್ಲ.

ನಡೆದಷ್ಟಿದೆ ನೆಲ, ಹರಿವಷ್ಟಿದೆ ಜಲ,
ಏರಿವಷ್ಟು ಇದೆ ಹಿರಿಬಯಲು.
ದುಡಿವಷ್ಟಿದೆ ಬಲ, ಪಡೆವಷ್ಟಿದೆ ಫಲ,
ಪಯರಿಗೆ ತಕ್ಕಷ್ಟಿದೆ ಕುಯಿಲು.

ಶಾಂತಿಯಿಂದ ಪರಿಪುಷ್ಟಿಗೊಂಡು ಸಂ-
ತುಷ್ಟವಾಗಲೀ ನಾಡ ಜನ.
ವಿಜಯ ಹೊಂದಿ, ಕಲ್ಯಾಣ ಪಡೆದು, ಸ್ವ-
ಸ್ವ-ಧರ್ಮ ಕಾಯಲಿ ಚಿರಂತನ.

ಸ್ವಾತಂತ್ರ್ಯದೇವಿಗೆ

ಸ್ವಾತಂತ್ರ್ಯದ ಹುಟ್ಟುಹಬ್ಬ
ಕರೆವುದು ಸಾವಿರದ ಕಬ್ಬ
ಸುರಭಿಯಂತೆ ಇಂದಿಗೂ,
ಅದರ ಪದಕೆ ಗೆಜ್ಜೆ ಬೇಕೆ ?
ಅದಕೆ ಬೇರೆ ರಾಗವೇಕೆ ?
ಅದೇ ಗೀತವೆಂದಿಗೂ.

ಶಾಂತ ಜಲಧಿಯಂತರಂಗ
ಕಾರಿತಣ್ಣ ಬೆಂಕೆಯ;
ಕೋರಿಯಾದ ಕುರುಕ್ಷೇತ್ರ
ಮುರಿಯಿತಗೋ ಶಂಕೆಯ;
ಮರೆಯಿಸುವದೊ ನೆನೆಯಿಸುವದೊ
ರಾವಣನಾ ಲಂಕೆಯಾ !

ಮಹಾಕಾಳಿ ಇಳಿದಳಣ್ಣ
ತನ್ನ ರುದ್ರಲೀಲೆಗೆ,
ಸೋದರರಾ ರಕ್ತ ಕುಡಿಯೆ
ಚಾಚಿ ಒಂದೆ ನಾಲಿಗೆ.
ಬೇರೆ ದೇವಿ ಬರುತಲಿಹಳು
ನೋಡು ಸ್ವಲ್ಪ ಮೇಲಿಗೆ.

ಹಿಗ್ಗಿನೊಂದು ಉರುಳಿಯಂತೆ
ಅವಳ ಮುಖದ ಮಂಡಲ;
ಸಂಜೆಬಂಜೆತನವ ಹರಿಸಿ
ಮೆರೆಯೆ ತುಟಿಯ ತೊಂಡಿಲ;
ಹೆಜ್ಜೆಯಿಟ್ಟ ಅಡಿಅಡಿಯಲಿ
ಅಗೋ ಯಜ್ಞಸ್ಥಂಡಿಲ.

ಮೂರು ಮುಸುಕು ಎಳೆದುಕೊಂಡು
ಮಲಗಿದೇಕೆ ಮಾನವಾ?
ಸುಡಿಸಿ ಸುಟ್ಟು ಕೆಡಿಸಿ ಕೆಟ್ಟು
ಕುಣಿಯುತಿಹನು ದಾನವಾ
ಧೀರೆ ಇಳೆಯ ಸೀರೆ ಸೆಳೆವ;
ಉಳಿಸೊ ಉಳಿಸು ಮಾನವಾ.

ಅದೇ ಅನ್ನ ಅದೇ ನೀರು
ವಿಶ್ವನರನ ಹಸಿವೆಗೆ;
ಬೆಳಕು ಗಾಳಿ ಸುತ್ತು ಒಂದು
ಪ್ರಾಣದ ಒಳ ಅಸುವಿಗೆ;
ಒಂದೆ ಬಯಲು ಬದುಕಲುಂಟು
ವಸುಂಧರೆಯ ಹಸುವಿಗೆ.

ಚುಕ್ಕೆಗಳನು ಮೆಟ್ಟು ಮಾಡಿ
ಬರುತಲಿಹಳು ತಾಯಿಯು.
ಅವಳ ಮಾತ ಕಲಿಯಲೆಂದು
ತೊದಲುತಿಹುದು ಬಾಯಿಯು.
ಅವಳ ಬರವೆ ಕಾಯುತಿಹುದು
ಮರದ ಮರದ ಕಾಯಿಯು.

ಚವಲಂಬವನವಲಂಬಿಸಿ
ನಗೆಯು ಕಣ್ಣಗೊನೆಗಿದೆ;
ಮುತ್ತು ಉರುಳಿ ಹೊರಳಿ ಮರಳಿ
ಬರಲು ತುಟಿಯ ನನೆಗಿದೆ;
ಮುಕ್ತಿ ಉಯ್ಯಲಾಟ ನೋಡು
ಮೂಗ-ಮೂಗತೆನೆಗಿದೆ.

ಏಳೊ ಏಳು ಗೆಳೆಯ, ಕೇಳು
ಕರೆವ ತೂರ್ಯನಾದವ;
ಗೋಳಗುಮುಟದಂತೆ ಸೃಷ್ಟಿ
ನುಡಿಸುವ ಪಡಿಸಾದವ;
ಹೆಜ್ಜೆ ಹಾಕು, ಹಾಡ ಹೇಳು,
ನೀನೆ ನಾಳೆಯಾದವ.

ದೀಪ ದೀಪ ಸಮುಸಮೀಪ
ಇದೊ ಭಾರತಹುಣ್ಣವೆ;
ಜೀವರಥಕೆ ಪ್ರಾಣದಶ್ವ
ತಾವೆ ತಾವು ಹಣ್ಣಿವೆ
ಎಲ್ಲ ಬೆಳಕು ಎಲ್ಲ ಬಯಲು
ಮಣ್ಣು ಕಣಕು ಕಣ್ಣಿವೆ.

ಪ್ರೀತಿ ದೂತಿಯಾಗಿ ಬಂದು
ಕರೆಯುತಿಹಳು ಯಾತ್ರೆಗೆ,
ಎದೆಎದೆಗೂ ಹಬ್ಬವಾಗೆ
ದೇವಿ ದೇವ ಜಾತ್ರೆಗೆ;
ಬಾಳಿರಣ್ಣ ಆಳಿರಣ್ಣ
ಬೆಳಗು ಉಂಟು ರಾತ್ರಿಗೆ.

ಬಾರೆ ತಾಯಿ, ಬಾರೆ ದೇವಿ,
ಓಗರೆವರು ಭಕ್ತರು;
ನಿನ್ನ ಮಕ್ಕಳೆಂದು ನಿನಗೆ
ಒಲಿವ ಜ್ಞಾನಶಕ್ತರು;
ನಿನ್ನ ಮನೆಯ ಕಟ್ಟಲಿಹರು
ದಿವ್ಯ ಕರ್ಮಯುಕ್ತರು.

ಸುಗ್ಗಿರಣ್ಣ ರಣದ ಕಣಕೆ,
ಅಸುರರಿಂದ ಬಿಡಿಸಿರಿ
ತಾಯ ಸೆರೆಯ, ಎಲ್ಲರಿಂದ
ಗೆಲವಿನ ಗುಡಿ ಹಿಡಿಸಿರಿ.
ಭೂಮಿದೇವಿ ನಲಿಯುವಂತೆ
ವಿಜಯಗೀತ ನುಡಿಸಿರಿ.

ಕನ್ನಡವೂ ಕನ್ನಡಿಸಲಿ
ನಾಳೆ ಬಾಳಿನೊಸಗೆಯ;
ಜೀವನ ಕಲೆ ಬೆಳಗಲಲ್ಲಿ
ತಿಳಿದು ಕರಣ ಹಸುಗೆಯ;
ಪೂರ್ಣಪ್ರಜ್ಞರಾಗಿ ಪಡಲಿ
ಜೀವ–ದೇವ ಬೆಸುಗೆಯ.

ಕಣಸು

ಸಿಂಹ ಮುಖಕ್ಕಿದೆ ನವಿಲಿನ ಸೋಗೆ
ಶಕ್ತಿಶಾರದೆಯ ಮೇಳದ ಹಾಗೆ!
ನಾಗವೋಡಿಯಲಿ ನಡೆದಿದೆ ನಾಡಿ
ತಮ ಹಿಂದೂಡಿ, ಪ್ರಕಾಶಕೋಡಿ
ಬಾನ ಕೆದರುತಿದೆ ಕಣ್ಣಿನ ಕದಿರು.
ಅಪಾರ ಅಪಾರ ಸಪಾರದಿದಿರು!

ಸಿಂಹ–ಮಯೂರ! ಯಾವದು ಮೋಡಿ?
ಶಕ್ತಿ–ಸ್ಕಂದ! ಏನನು ನೋಡಿ?
ಆವ ರಣಕ್ಕಿದು? ಏನಿದು ಜೋಡಿ?
ಮಯೂರ ಮಯೂರ ಬಾನೇ ಹಕ್ಕಿ
ಸಿಂಹ ಜಿಹ್ವೆಯಲಿ ಗಲ್ಲವ ನೆಕ್ಕಿ
ಕಾನ–ನಾಗನೊಲು ತಾನೆಕ್ಕೆಕ್ಕಿ
ಎಲ್ಲಿಂದೆಲ್ಲಿಗೆ ಹೊರಟಿದೆ ಏನೋ!
ಜಗಪ್ರವಾಸದ ಖಗಪ್ರಯಾಣ
ಗುಹ್ಯಾತ್ ಗುಹ್ಯತರಂ ಈ ಯಾಣ!
ಆನರಿಯುವೆನೇ ಈ ಬಿನ್ನಾಣ?
ತಾಯಿ! ಸಲಹು ನೀ ನಿನ್ನದೆ ಪ್ರಾಣ.

ಹೃದಯ ಸಮುದ್ರ

ಹೃದಯಸಮುದ್ರ

ಬಂಗಾರ ನೀರ ಕಡಲಾಚೆಗೀಚೆಗಿದೆ ನೀಲ ನೀಲ ತೀರಾ.
ಮಿಂಚುಬಳಗ ತೆರೆತೆರೆಗಳಾಗಿ ಅಲೆಯುವದು ಪುಟ್ಟಪೂರಾ.
ಇದು ನಮ್ಮ ಊರು, ಇದು ನಿಮ್ಮ ಊರು, ತಂತಮ್ಮ ಊರೊ ಧೀರಾ.
ಅವರೊಳಗೆ ನಾವು, ನಮ್ಮೊಳಗೆ ತಾವು, ಅದು ಇಲ್ಲವಣ್ಣ ದೂರಾ.

ಕರೆ ಬಂದಿತಣ್ಣ, ತೆರೆ ಬಂದಿತಣ್ಣ ನೆರೆ ಬಂದಿತಣ್ಣ ಬಳಿಗೆ.
ಹರಿತಽದ ಭಾವ, ಬೆರಿತಽದ ಜೀವ ಅವರೊಳಗೆ ಒಳಗೆ ಒಳಗೆ.
ಇದೆ ಸಮಯವಣ್ಣ ಇದೆ ಸಮಯ ತಮ್ಮ ನಮ್‌ನಿಮ್ಮ ಆತ್ಮಗಳಿಗೆ.
ಅಂಬಿಗನು ಬಂದ ನಂಬಿಗನು ಬಂದ ಬಂದಽದ ದಿವ್ಯ ಗಳಿಗೆ.

ಇದು ಉಪ್ಪುನೀರ ಕಡಲಲ್ಲೊ ನಮ್ಮ ಒಡಲಲ್ಲು ಇದರ ನೆಲೆಯು.
ಕಂಡವರಿಗಲ್ಲೊ ಕಂಡವರಿಗಷ್ಟೆ ತಿಳಿದಽದ ಇದರ ಬೆಲೆಯು.
ಸಿಕ್ಕಲ್ಲಿ ಅಲ್ಲ ಸಿಕ್ಕಲ್ಲೆ ಮಾತ್ರ ಒಡೆಯುವದು ಇದರ ಸೆಲೆಯು.
ಕಣ್ಣರಳಿದಾಗ ಕಣ್ ಹೊರಳಿದಾಗ ಹೊಳೆಯುವದು ಇದರ ಕಳೆಯು.

ಬಂದವರ ಬಳಿಗೆ ಬಂದಽದ ಮುತ್ತು ನಿಂದವರ ನೆರೆಗು
ಬಂದಽದೋ ಬಂದಽದ.
ನವನವವು ಬಂದ ಹೊಸ ದ್ವೀಪಗಳಿಗೆ ಹೊರಟಾನ ಬನ್ನಿ
ಅಂದಽದೋ ಅಂದಽದ.

ಶ್ರೀ ಅರವಿಂದರಿಗೆ

ನಿನ್ನಾ ಹುಬ್ಬಿನ ಇಬ್ಬದಿ
ಗರಿ ಚಾಚಿದ್ಹಾಂಗರುಡ.
ಬಾನ್ಗಣ್ಣಾಗಿಹೆ ನೀ, ನಾ
ಗುರಿಯಿಲ್ಲದ ಕುರುಡ.

ಕಣ್ಣೆವೆ ಚಾಟಿಗೆ ಕಟ್ಟದೆ
ಆನಂದದ ಹುಟ್ಟು.
ಒಳಗಿದೆ ಹೂವರಳಿದವೊಲು
ವಿಶ್ವದ ಇಡಿಗುಟ್ಟು.

ಕೊಡು ತಂದೇ, ಇನ್ನೊಂದೇ
ಒಂದೇ ಬಾಯ್ತುಟುಕು,
ಕೊಡು ತಾಯೇ ಇನ್ನೊಮ್ಮೇ
ಒಮ್ಮೇ ಎದೆಗುಟುಕು.

ಶ್ರೀಗುರುವೆ!

ಶ್ರೀಗುರುವೆ ಅರುವೆ, ಶರಣಾಗಿ ಬರುವೆ, ಕರುಣೆಯನು ಕೋರಿ ಬರುವೆ.
ಹೃತ್‌ಪ್ರಕೃತಿ ತಂದ ಕಿಡಿಹೂವುಗಳನು ಶ್ರೀಚರಣಕೆರೆಯುತಿರುವೆ.

ಆ ಪಾದಪದ್ಮ ಎದೆಗವಚಿ ಹಿಡಿದು ನಡುನೆತ್ತಿಗೆತ್ತಿಕೊಂಬೆ
ಉಸಿರಿಂದಲದನೆ ಬಲಗೊಂಬೆ ನನ್ನ ಕಣ್‌ಗೊಂಬೆಗೊತ್ತಿಕೊಂಬೆ.

ಕಣ್ಣಿಂದ ನಿನ್ನ ನನ್ ಕಣ್ಣ ಸೇರಿ ಎದೆಯೊಳಣ ಬೆಳಕನೆತ್ತಿ,
ತಿರುಮೂರ್ತಿ ಮಾಡು ನನ್ನನ್ನು ನಿನ್ನ ಚಿನ್ಮೋದ–ಬೋಧ ಬಿತ್ತಿ.

ಭವಭವಕೆ ನನ್ನ ಮುಂದೆತ್ತಿ ಒತ್ತಿ ತಂದಂಥ ತಂದೆ ನೀನು.
ಭಾವಕ್ಕೆ ಇಳಿದು ಸದ್ಭಾವ ಬಲಿಸಿ ಖರುವಂತೆ ಮಾಡು ನಾನು.

ಅಂತರ್ಯದೊಂದು ಚೈತನ್ಯ ನಿನ್ನ ಕೈಂಕರ್ಯ ಕರ್ತೃವಾಗಿ
ಕ್ಷೇತ್ರಜ್ಞ ಬರಲಿ ಚೈತ್ಯೇಶನಾಗಿ ಮಧುಬೋಧ ಮೋದ ಮಾಗಿ.

ಹೇ ಭವನೆ ಶಿವನೆ, ಜವನವರ ಜವಕೆ ಶವವಾಗದಂತೆ ಮಾಡು
ಆ ಅಮೃತದೃಷ್ಟಿಯಲಿ ದಿವ್ಯ-ಸೃಷ್ಟಿಯಲಿ ನೆರೆದು ತೆರೆದು ನೋಡು.

ನಾನಲೆಯುತಿದ್ದೆ

ನಾನಲೆಯುತಿದ್ದೆ ನೂರು ಬಗೆಯ ಬಾನ ಬೆಳಕು-ನಸುಕಿನಲ್ಲಿ,
ಕಿರಿಮುಗಿವು ನೆನೆವು ಅರಿಜಿರಿತು ತೆರೆವ ಹೊಸಬಾಳ ಮುಸುಕಿನಲ್ಲಿ.
ಎದೆಹೂವಿನುಸಿರ ನರುಗಂಪಿನೊಂದು ನಸುಸುಳಿಯು ತೇಲುವಂತೆ,
ಒಳಚಿತ್ತ ಅರಳುತಿರೆ ಕಾಯುತಿದ್ದ ಸಚ್ಚಿಂತ ಚಿಂತೆಯಂತೆ

•

ಆಃ ನೀನು ಬಂದೆ ತನಿಮಿಂಚಿನುರುಳಿ ತನ್ನನ್ನೆ ತೂಗುವಂತೆ,
ಕಡುಕಾವ ಮೈಯು ತಡವರಿಸಿ ಮುಸುಕೆ ನಿದ್ದೆಯಲಿ ತಾಗುವಂತೆ,
ಆ ನಮ್ಮ ನಿಮ್ಮ ಒಪ್ಪಂದದೊಪ್ಪ ಕಸ್ತೂರಿಯು ಇಣುಕುವಂತೆ,
ನನ್ನಲ್ಲಿ ಏನೊ ಮಿಸುಗುತ್ತಲಿಹುದು ಬಾನ್ ಮೀನ ಮಿಣುಕುವಂತೆ.

ಮಾತಾಡುವಂತೆ ನಗೆಗಣ್ಣು ತುಳುಕೆ ನಾನೆಲ್ಲೊ ನೋಡಿದಂತೆ;
ಎನಿಸುವುದು: ಚಿತ್ರ ನೆನೆಸುವುದು ಎಂದೊ ನೀನೊಮ್ಮೆ ಹಾಡಿದಂತೆ;
ಆ ಪಲ್ಲವಿಯನೆ ಗುಂಗುಣಿಸಿ ನುಡಿಯನೊಂದೊಂದು ಕಟ್ಟಿದಂತೆ
ಮರವೇರುತಿಹುದು; ಮುದ ಬೀರುತಿಹುದು ಬಾನಟ್ಟ ಮೆಟ್ಟದಂತೆ.

ನೀನೆಲ್ಲೆ ಇರಲಿ ನಾನಿಲ್ಲೆ ಇರಲಿ ಮೈಗಿರಲಿ ಎಲ್ಲೆಗಿಲ್ಲೆ.
ಆ ಸಾವುನೋವಿನೊಳತೋಟಿಯೇಕೆ? ಇದ್ದಲ್ಲೆ ಎಲ್ಲವಿಲ್ಲೆ?

ಶ್ರೀಮಾತೃಚರಣಾರ್ಪಣಮಸ್ತು ೩

ಶ್ರೀಗುರು–ಕರುಣ–ಚರಣ

ಒಳಬಳಗಿನೊಳಗೆ ತಮ ಮಿಂಚಿ ತೊಳಗೆ ಹುಸಿ ಬಯಲೆ ಹೊತ್ತಿ ಬೆಳಗೆ,
ಮೂಡಣವು ಇಲ್ಲ ಪಡುವಣವು ಇಲ್ಲ ಅದಕಿಲ್ಲ ಮೇಲೆ ಕೆಳಗೆ.
ತನಿರನ್ನದೊಂದು ಕೆಂಗಿಡಿಯು ಕುಡಿಯೆ ಸಿಡಿದರಳಿ ಉರುಳಿದಂತೆ
ನೆಲ ಕಾಣದೊಂದು ಹಗಲಿಹುದು ಇಲ್ಲಿ ನವಮುವವೆ ಹೊರಳಿದಂತೆ.

ಸ್ಫೈರಣೆಯ ಸಿರಿಯ ರೇಶಿಮೆಯು ಎಳೆಯು ನಯವಾದ ಹಾಸಿನಲ್ಲಿ
ಒರಗಿರುವ ಕಣ್ಣು ತೆರೆದಿರುವ ಹುಸಿಯೆ ನಗುತಿರುವ ಕೂಸಿನಲ್ಲಿ
ಕಂಡೊಂದು ಅಂದ ತಾಯನ್ನೆ ನಂಬಿ ತುಂಬಿರುವ ಬಿಂಬವಾಗಿ
ಸೆಲೆಯುವದು ಹುಮವನೊಳಗೊಂಡು ತಾನೆ ತಿಳಿಯಾಗಿ ಗುಂಭವಾಗಿ.

ಇದು ಯಾವ ದೆಸೆಯೊ, ಹೆಸರೇನು ಇದಕೆ, ಇದಕಿಲ್ಲ ಹಾದಿ ಹೊರಗೆ.
ಇಲ್ಲಿಂದ ಆದಿ, ಇದು ತಾನನಾದಿ, ಇದಕೇಕ ಬೆಡಗು ಬೆರಗೆ?
ಇಲ್ಲಿಹುದು ನಾನೆ ನಾನಾದ ತಾನೆ ತಾನೆಂಬ ತನ್ನತನವು.
ಇದು ಗುಪ್ತಘನವು ನಿಃಸ್ತಬ್ಧ ಮನವು ಇದು ಪ್ರೊಳ್ಳು, ತುಂಬು, ಘನವು.

ಏನದರ ಮಹಿಮೆ! ನಿಲುಕಿಹುದು ನೋಡ ಗುರುಕರುಣಚರಣದಂತೆ,
ಹಿಮಶಿಖರದಲ್ಲಿ ಕುಡಿಗೊಂಡ ಶಾಂತ ತಂಗದಿರ ಕಿರಣದಂತೆ.

ಅರವಿಂದನಾಭನ ಪಾದಾರವಿಂದಕ್ಕೆ

ಅರವಿಂದನಾಭನ ಪಾದಾರವಿಂದಕೆ ಹಸ್ತಾರವಿಂದವು ಬಾಗುತಿರೆ.
ನಯನಾರವಿಂದವು ಮುಚ್ಚಿಕೊಂಡಿರುವಾಗ ಹೃದಯಾರವಿಂದವು ಅರಳಲಿರೆ
ಆಸ್ಯಾರವಿಂದವು ನಲಿವನು ಸೂಸುವ ತೆರ ನಿನಗೆ ಸೂಸಲಿ ಮಂಗಲವು
ಎಂದಿತು ಅರವಿಂದ ಪದಭೃಂಗ ಅರವಿಂದು! ಅರವಿಂದಮಯವಾದ ಮಾನಸವು.

ಚಿತ್ರಭಿತ್ತಿಯ ಚಿತ್ರ

ಚಿತ್ರಭಿತ್ತಿಯಲಿ ಚಿತ್ರ ಬರೆಯುವ ವಿಚಿತ್ರ ಪುರುಷನಾರು?
ನೋಡನೋಡುತಿರೆ ಜಡವೆ ಜಲದವೊಲು ತೆಳ್ಳನಾರುಪಾರು.
ಕುಣಿವ ಕಣಗಳಲಿ ತೆರೆವ ಅಣುಗಳೊಳು ಬೇರೆ ಏರುಪೇರು.
ಬಣ್ಣ ಒಡೆಯುತಿವೆ ಕಣ್ಣು ಪಡೆಯುತಿದೆ ಸಣ್ಣ ಕನ್ನನಾರು.
ಚಿತ್ರಭಿತ್ತಿಯಲಿ ಚಿತ್ರಬರೆಯುವ ವಿಚಿತ್ರ ಪುರುಷನಾರು?

“ನಮ್ಮ ನಿಮ್ಮ ಗುರುತಿತ್ತೊ ಮೊದಲು? ಬಂದಿಲ್ಲಿ ಗುರುವಿನಂತೆ
ಕುರುಡುಗೊಂಜಿಗೇ ಕಣ್ಣು ಬರೆದೆ ತಿಳಿಗೊಂಡ ಕರುಹಿನಂತೆ.
ಓ ತಾಯಿತಂದೆ ಶಿವವೆಂದೆ ನಿಮಗೆ ಕರುಗೊಳುವ ಅರುವಿನಿಂದೆ
ನೀವಿತ್ತ ಪಾಲು ನಮಗಮವೆ ಹಾಲು ಕರುಳಾಯ್ತು ಕರುವಿನಂತೆ.”

ಈ ಪುಷ್ಟಿ ತುಷ್ಟಿ ಹೊರಹೊಮ್ಮಿ ಚಿಮ್ಮಿ ನಿರಿನಂಬಿ ಗೊಂಬೆಯಾಗಿ.
ಹೊಸ ಜಗದ ಯುಗದ ಚಪಲಂಬ ತೆರೆಮ ಕರೆಯುವದು ಅಂಬೆಯಾಗಿ.
ಒಳಗಿದ್ದ ಗಂಟು ಅರಳುತ್ತಲಿಹುದು ಹೊಸಬಾಳ ಗಂಟೆಯಾಗಿ.
ಗಣಗಣನೆ ಬಂತು ಅಗಣಿತವ ಅಲೆಯು ಹೂಹೂವ ಕಂಟಿಯಾಗಿ.

ಗುರು ನೆನೆದರೆ

ಗುರು ನೆನೆದರೆ ಸ್ಪಂದಿಸುತಿಹ
ನರ್ತಕಿ ಬಾ ಕುಣಿಯೆ.
ನನ್ನೀ ಹೃದ್ರಂಗದ ಜವ-
ನಿಕೆ ತೆರೆ ಚಿನ್ಮಣಿಯೆ.

ಅಂತಃಪುರದೊಳು ಕೇಳಿಸು-
ತಿದೆ ನೂಪುರ ನಾದ.
ಏತರ ಒಸಗೆಯು ಇದು? ಯಾ
ಹಿಗ್ಗಿನ ಪಡಸಾದ?

ಗಂಟೆಯು ನಾಲಗೆಯುಂವದಿ
ಕರೆಯುವದಿಮು ಗುಡಿಗೋ?
ಅಮೃತಾನಾಡಿಯ ಸೂತ್ರಕೆ
ಕುಡಿಯುವ ಸಿನ್ನಡಿಗೋ?

ಮಹಾಪ್ರಸ್ಥಾನ

ಅಗೋ ಜೀವ ಸ್ಫೋಟ ಆ ಸೋಮವಾರದಾ ಮಧ್ಯರಾತ್ರಿಯಲ್ಲಿ.
ಆಕಾಶಗಂಗೆ ಅಭಿಷೇಕ ಮಾಡೆ ಕೈಲಾಸ ಜಾತ್ರೆಯಲ್ಲಿ.
ಮಧುವೇದವಾಣಿ, ಮಧುರಾಜರಾಣಿ ನಕ್ಷತ್ರಪುಂಜ ಕರೆಯೆ.
ಓಂಕಾರದೆದೆಯ ಝೇಂಕರಿಸಿದಂತೆ ನವಜೀವರಾಶಿ ಮೊರೆಯೆ.

ನಾರಾಯಣಾಸ್ತ್ರ ಎಸೆದಂತೆ ಮೆರೆಯೆ ವಿಜ್ಞಾನಚಕ್ರದಲ್ಲಿ
ನವನೀತ ತೇಲೆ, ಘನಮನದ ಮೇಲೆ, ಮನಮಥನ ತಕ್ರದಲ್ಲಿ
ಸಾವಿತ್ರ ಮಂತ್ರ ಯಮತಂತ್ರವನ್ನೆ ಸಂಯಮಿಸಿ ಅಮಲವಾಗಿ
ನಚಿಕೇತ ಅಗ್ನಿ ವಿಚಿಕೇತಿಸಿತ್ತು ನವಕಮಲ ಕಮಲವಾಗಿ.

ಪಾತಾಳ ಶೇಷಮಸ್ತಕದ ಮಣಿಯೆ ಇಗೊ ಸ್ವರ್ಣಗರುಡನಾಗಿ
ದಿಗ್ದಂತಿ ನಾಗ ನೆಗೆದಂತೆ ಮೇಗೆ ಪಾವದ ಹಂಸವಾಗಿ
ಯೋಗೇಶನಿಂದ ಧನುಧಾರಿಯಲ್ಲಿ ಅನಿಮೇಷ ಭೇದವಾಯ್ತು.
ಸುರವ್ಯಾಧನಯನದಾದರ್ಶವಾದ ಮೃಗಶೀರ್ಷ ವೇಧವಾಯ್ತು.

ಆದಿತ್ಯಶಕ್ತಿ ಚಂದ್ರಮನ ಹೊಂದಿ ಕೌಮುದಿಯೆ ಭ್ರಮಿಸುವಂತೆ
ಸಾವಿರದ ಸೂರ್ಯ ನಕ್ಷತ್ರರಾಗಿ ತಮವನ್ನೆ ಶಮಿಸುವಂತೆ
ಶ್ರದ್ಧೆಯಲಿ ಶಿರವು, ಋತಸತ್ಯವರಿವು, ಎದೆ ಯೋಗ ಸಾಕ್ಷಿಯಾಗಿ
ಮಾಸೃಷ್ಟಿಯಿಂದ ಬರುತಿಹವು ಛಂದ ಶಿವಪಕ್ಷಿ ಪಕ್ಷಿಯಾಗಿ.

ಕಳೇವರದ ನೀರಲ್ಲಿ ಶಾರದೆಯ ದೀಪ್ತಿ ತೊಳಗುತಿಹುದು.
ಹಣತೆ ತುಂಬ ನೇಹದಲಿ ನಗೆಯ ಹೂಬತ್ತಿ ಬೆಳಗುತಿಹುದು.
ಎದೆಯ ಹಾಲಿನಲಿ ಬಗೆಯ ಸಕ್ಕರೆಯು ಕರುಳು ಕರಗುತಿಹುದು.
ತೇಜದಲ್ಲಿ ತಮ ಶಮಿಸಿ ಸೋಮ ರಸಿಕತೆಯೊಳರಗುತಿಹುದು.

ದುರ್ಬಲತೆ ಹುಳ್ಳು, ಹುಸಿಯಾಸೆ ಜೊಳ್ಳು. ಸಾವೊಂದು ಪೊಳ್ಳು ಬದುಕು.
ಬಯಲಾಯ್ತು ಬಸಿರು, ಒಲವಾಯ್ತು ಹಸಿರು, ಕುಸುರಾಯ್ತು ಅದಕು ಇದಕು.
ನವಧರ್ಮಮೋಕ್ಷ ಘನಘೋಷಗೊಂಡು ಅವತರಿಸಿ ದೇವ ಸೃಷ್ಟಿ.
ಸುಕ್ಷೇತ್ರಪಕ್ಷಿ ಮೊಗದೋರಲುಂಟು ಆನಂದದೊಂದು ಸೃಷ್ಟಿ.

ಆ ಜ್ಞಾನದಾಚೆ ವಿಜ್ಞಾನ ಉದಯುವಿದೆ ಗಂಟೆ ಬಾರಿಸಿತ್ತು.
ಚಾತುರ್ಥ ಸ್ವರ್ಗ ನೈಸರ್ಗ ಮಾರ್ಗ ಡಂಗುರವ ಸಾರಿಸಿತ್ತು.
ನೆರೆಕೆರೆಯಲುಂಟು ಸೌಂದರ್ಯಸತ್ಯ ಸಜ್ಜನಿಕೆ ಇರುವ ನೆಲೆಯು,
ಸಿರಿಮನದ ವೈಭವದ ಮುಗಿಯಲಿಲ್ಲ ಈಶ್ವರನ ಸೃಷ್ಟಿ ಕಲೆಯು.

ಎಂತು ಬಂತೊ ಜಡದಿಂದ ಪ್ರಾಣ ಉದ್ಭಿಜ್ಯ ಸ್ವೇದವಾಗಿ
ತರುಮರವು ಆಗಿ, ಕ್ರಿಮಿಕೀಟವಾಗಿ, ಪಶುಪಕ್ಷಿ ಭೇದವಾಗಿ?
ಪಾಶವಿಕ ಗ್ರಂಥಿ ಬಿಡಿಸಿತ್ತು ಎಂತೊ ಮಾನವ್ಯದೊಂದು ರೀತಿ
ಮಾನವನ ಹೃದಯವನೆ ಯೋನಿಸಿಗೊಳಿಸಿ ಬರಲಿಹುದು ದೇವಜಾತಿ.

ಈ ದೇಹವಿದಲಿ ಇಗೊ ತರುವೆ ಅಮೃತ ಹೃತ್ಕಲಶಪಾಣಿಯಾಗಿ.
ಬಾನುಲಿಯು ಶ್ರೋತ್ರ ಸಿಡಿಲೆಂದು ಮೊರೆಯೆ ಆಕಾಶವಾಣಿಯಾಗಿ,
ಆಹ ಅರುಣಕಿರಣ ಆವರಣ ಹರಿದ ಸುಸ್ಫಟಿಕ ಕನಕದಂತೆ
ಆಗೊ ಎದ್ದ ಗೆದ್ದ ಋಷಿರಾಜ ತೇಜ ವೈದೇಹ ಜನಕನಂತೆ.

ತಾಪಾರ್ತ ಜನಕೆ ನೆರಳಾಗಿ ನೀಡಿ ವಟವೃಕ್ಷವಾದ ಜೀವ;
ತತ್‌ಬ್ರಹ್ಮದಲ್ಲಿ ಬೇರ್ಬಿಟ್ಟು ಇಳಿದ ಅಶ್ವತ್ಥದಂಥ ಭಾವ;
ಧೀಪ್ರಳಯ ಜಲಧಿ ತೇಲಾಡುತಿಹುದು ಅರಳೆಲೆಯಲೇನೊ ಒಂದು;
ತಾನಾಗಿ ನಾಳೆ ನವಜೀವಕೋಟಿಯನೆ ಮೊಳೆಯಲಿಹುದು ಬಂದು.

ನವಜನ್ಮಯಜ್ಞ ಪರಿಪೂರ್ಣವಾಯ್ತು, ಅಜ್ಞಾನವಾಯ್ತು ಹವಿಯು.
ಅವಭೃತದ ಸ್ನಾನ ಈ ದೇಹಮಾನ, ಗ್ರಹಮುಕ್ತನಾದ ರವಿಯು.
ಪುಷ್ಕರಿಣಿಯಲ್ಲಿ ಅರವಿಂದ ತತ್ತ್ವದವರೋಹವಾಗಿ ಸಾರ್ಥ,
ಶ್ರೀಮಾತೆಯವರ ಗುರುಪಾದವಾದವೋ ವಿಶ್ವಯೋಗತೀರ್ಥ.

ಅರವಿಂದವೆಂಬ ಬರಿ ಹೆಸರಿನಲ್ಲೆ ಸೌಗಂಧ ತುಂಬಿ ಬಹುದು.
ಚಾರಿತ್ರ್ಯವನ್ನು ನೆನೆಸಿದರೆ ಸಾಕು ಬ್ರಹ್ಮಾಂಡ ಬಿಂಬಿಸುವದು.
ಆ ಒಂದೆ ರಾತ್ರಿಯಲಿ ಬಯಲು ತುಂಬಿತ್ತೋ ಪಾರಿಜಾತ ಕೀರ್ತಿ.
ಈ ವಿಶ್ವದೊಡನೆ ಒಂದಾಗಿ ನಿಂತಿತ್ತೋ ಆ ವಿರಾಟ ಮೂರ್ತಿ.

ಪಾರ್ಥಿವದ ಗರ್ಭ ಭೇದಿಸುತ ಬಂತು ಅರ್ಭಕನ ಧ್ವನಿಯು ಒಂದು.
“ವಾಮನನ ಮುಂದಿನಾ ವಾಮದೇವ ಕ್ರಮಯೋಗದಿಂದ ಇಂದು.
ಶ್ರೀಕೃಷ್ಣ ಪಕ್ಷದಲಿ ಕಂಸರನ್ನು ಸಂಹರಿಸಿ ಮುಂದೆ ನಡೆದೆ.
ಅಮವಾಸೆ ಕಳೆದು ಚಿತ್ಕಲೆಯ ತಳೆದು ಪೌರ್ಣಿಮೆಯ ಹಾದಿ ಹಿಡಿದೆ.”

ಶ್ರೀಮಾತೆಗೆ

ಮಾತುಗಳ ಮಾತೆ ನೀನು
ಮಾತಿನಲಿ ಸೋತು ಬರಬಾರದೇನು?
ಉಸಿರುಗಳ ಉಸಿರೆ ನೀನು
ಉಸಿರಿನಲಿ ಹಸಿರಾಗಿ ಹರಿದೆ ನಾನು.

ಕಣ್ಣುಗಳ ಬಣ್ಣ ನೀನು
ಉಣ್ಣನೌ ತನಿಪೇಯ—ಹಣ್ಣು—ಜೇನು.
ಕಿವಿಗಳಿಗೆ ಕಿವಿಯು ನೀನು
ಕೇಳಿಸಲಿ ಬಾನ ಸವಿಯಾದ ತಾನು.

ಬಗೆಯೊಳಿಹ ಜಗವೆ ನೀನು
ಒಗುಮಿಸಿ ಬಾರೆ ಬಾ ಆಗಿ ಭಾನು.
ಜೀವದೊಳು ದೇವಿ ನೀನು
ನೀನಗ್ನಿ ಸೋಮ ನೀ ಭಾನು ನೀನು.

ಬರುವಳು ಬರುವಳು

ಬರುವಳು ಬರುವಳು ಬಂದೇ ಬರುವಳು
ಕಾದಿರಿ ಹಾಗೋ ಹೀಗೋ.
ನಸುಕಿನ ನಗೆಗಣ್ ಸೂಸುತ ಸುತ್ತೂ
ಈಗೋ ಇನ್ನಾವಾಗೋ.

ಕಿಡಿಕಿಯಲ್ಲಿಣುಕುವ ನಗೆಮೊಗದಂತೆ
ತಾರೆಗಳಾಚೆಯ ನೀಲಿಮೆಯಂತೆ
ಹನಿಸದೆ ಬರಿ ಸುರಿಯುವಳು.
ಬೆಳ್ಳಿಯ ಕಿರಣಗಳೇರಿ
ಹೊನ್ನಿನ ಹಡಗವ ಸೇರಿ.

ಜಡಿವಳು ಸುರಿವಳು ತೊರೆಯುವ ಕರುಳು
ಯಾರಾರದೊ ಬಗೆಯರಳಿ,
ಜೀವವು ನಕ್ಷತ್ರವನುಗುಳುವುದು
ತೇಜಃಪುಂಜವು ಕೆರಳಿ.

ಪಾದಪದ್ಮಕೆ ಪ್ರಾರ್ಥನೆ

ಕಂಡುದನೆ ನಾ ಕಂಡು, ಕೇಳಿದ ಕೇಳಿ, ಮರುಳಿಗೆ ಕುಣಿದೆ.
ಉಂಡು ಉಂಡುದ ತಿಳಿಯದೆಯೆ ನಾ ತಣಿಯುದೇನೇ ದಣಿದೆ.
ಬೇರೆ ಬೆಳಕು ಮಣಿಯೆ ನಾ ಜಗೊ ಬಂತು ತಿಳಿವಿನ ಗಳಿಗೆ.
ಮಣಿತನೆಂದೇ ಮಣಿವೆನಮ್ಮನ ಪಾದಪದ್ಮಂಗಳಿಗೆ.

ಪ್ರಿಯರೊಳಗೆ ಮರಸಂದು ಮಸಗಾಡಿದೆನು ಮಿಡುಕಿ ನಾನು.
ಮನದ ಬನದಲಿ ಬಿನದವಾಡಿದೆ ತನ್ನ ತಿಳಿಯದೆ ತಾನು.
ಬಿಗ್ಣ ಹಾಲಲಿ ಪಳುವಂದದಿ ಎತ್ತು ನಿನ್ನ ಬಳಿಗೆ.
ಅಡಿಗಡಿಗೆ ನಾ ಮಣಿವೆ ತಾಯಿಯು ಪಾದಪದ್ಮಂಗಳಿಗೆ.

ಕತ್ತಲಿಸಲಿತ್ತೆತ್ತು ಕಣ್ಣಿನ ಹಾಗೆ ಹೊತ್ತನು ತೆರೆದೆ.
ಅದುವ್ರ ಮಣ್ಣಿನ ಮರೆಗೆ ಅಡಗಲು ತಿಂಗಳನ ಸೀ ಕರೆದೆ.
ಇಲ್ಲಿ ರವಿರಶಿಯೆಸಲು ಬಾನಲಿ ಚಿಕ್ಕೆ ಬಳ್ಳಿಯೊಳರಳಿ,
ಬೆಳಕು ತೋರಿದ ಪಾದಪದ್ಮಂಗಳಿಗೆ ಮಣಿವೆನು ಮರಳಿ.

ತೊಟ್ಟು ಹಸಿ ರಸಕಾಗಿ ಹುಡುಕುವ ಹುಚ್ಚು ಹಿಡಿದಿಹ ಹುಳಕೆ
ಭ್ರಮರವೃತ್ತಿಯ ಬಿಡಿಸಿ ನುಗ್ಗಿಸು ಒಳಗೆ ಬೆಳಕಿನ ಕಳಕೆ.
ಅಳಿಗೆ ಕತ್ತಲು: ಹುಲಿಗೆ! ಹುಲುಸಿರಲಮ್ಮ ಬೆಳಕಿನ ಬೆಳೆಗೆ.
ಮಣಿವೆ ಬೆಳಗನೆ ತೋರಿ ಹರಿವ ಈ ಪಾದಪದ್ಮಂಗಳಿಗೆ.

ಬರಲಿ ಈ ಸಂಕ್ರಾಂತಿಯೊಳಗುತ್ಕ್ರಾಂತಿ ಜೀವದ ಕ್ರಾಂತಿ.
ಭ್ರಾಂತಿಯಳಿಯಲಿ ಬರಲಿ ಕರಣದ ಶಾಂತಿ ಚೈತ್ಯದ ಕಾಂತಿ.
ನಿನ್ನ ಕರುಣಾಕಿರಣ ಚಿಗುರಲಿ ಒಣಗದೆನೆ ನಾ ಚಳಿಗೆ.
ಗಳಿಗೆಗಳಿಗೆಗೆ ಮಣಿವೆನೇ ನಾ ಪಾದಪದ್ಮಂಗಳಿಗೆ.

ಆಹ, ಸ್ವಾಹಾ ಎಂದೆ ಸ್ವಾಮಿಸಿ ಬಂದೆ ತಂದೆಯು ತಂದೆ.
ಇನ್ನು ಸರ್ವಸ್ವವನು ನೀಡುವ ಬೆಂಕಿ ಹೊತ್ತಿಸು ಎಂದೆ.
ಚಿತ್ತವರವಿಂದವಲಿ ಹೊತ್ತಲಿ, ಮಣಿವೆ ಜೀವದ ತಳಿಗೆ.
ಚೈತ್ಯಮಂದಿರದಲ್ಲಿ ನೆಲೆಸಿದ ಪಾದಪದ್ಮಂಗಳಿಗೆ.

ಗಂಗೆಯಂದದಿ ಬಿಳಿದು, ತಿಂಗಳ ಬೆಳಕಿನಂದದಿ ಬಿಳಿದು.
ಕತ್ತಲೆಯ ಹಂದರಕೆ ಹಬ್ಬಿದೆ ಬಿತ್ತು–ಬೆಳಕೇ ಬೆಳೆದು.
ಮಿಂಚಿನಂದದಿ ಬಿಳಿದು, ಅರಿವಿನ ಅಂಚಿನಂದದಿ ಬಿಳಿದು
ತಾಯಿ ತವರಿನ ಪಾದಪದ್ಮಂಗಳಿಗೆ ಮಣಿವೆನು ಇಳಿದು.

ಒಂದೆ ಅಷ್ಟಕ ಬಂದ ಕಷ್ಟವ ನಷ್ಟಗೊಳಿಸಲಿ ತಾಯಿ.
ಬಯಕೆ ಸಿಂಪಿಯ ಹುಳವು ಬಿಡುತಿದೆ ಸ್ವಾತಿಗಾಗಿಯೆ ಬಾಯಿ.
ತುತ್ತು ಮುತ್ತನು ನೀಡು ಸರಸತಿ ಲಕುಮಿ ಕಾಳಿಕೆ ಅಂಬೆ
ಪಾದಪದ್ಮಂಗಳಿಗೆ ಜೀವದ ಹಂಸನಾ ಬಲಗೊಂಬೆ.

ಅದಿತಿ

ಇವಳು ರುದ್ರರ ತಾಯಿ, ವಸುಗಳ ಮನೆಯ ಮಗಳೀಕೆ.
ತಂಗಿ ಆದಿತ್ಯರಿಗೆ ಇವಳಮೃತಕ್ಕೆ ಬಸಿರೀಕೆ.
ದಿವ್ಯಜನ್ಮದ ಮಂತ್ರಜಾತದ ದೈವದುಸಿರೀಕೆ.
ಎಲ್ಲರಿಗು ಅವರಾಕೆ, ಅರಳುವ ಹುವಣಾ ಹಗಲೀಕೆ!

ಪಾಶಮೋಚನೆ ಪಾಪನಾಶಿನಿ. ಬೇರೆ ಯೋಚನೆಯೇ
ನೀನೆ ಅರ್ಪಣತತ್ತ್ವದರ್ಪಣ. ಹುಸಿಯು ಯಾಚನೆಯೆ
ನಸುಕು ಮುಸುಕೋಸರಿಸಿ ಬಯಲಿಗೆ ಬರಲಿ ನೇಸರನು.
ನಮ್ರಸೀಶತೆ ಹರಿದು ಓಡಲಿ, ಮಾಡು ಕರಸನು.

ಶರಣು ಭಕ್ತಿಗೆ, ಶರಣು ಯುಕ್ತಿಗೆ, ಶರಣು ಪರಮುಕ್ತಿ!
ತೊರೆದು ವಿಷಯಾಸಕ್ತಿ, ತೋರಿ ವಿರಕ್ತಿ, ಪರಭುಕ್ತಿ
ಹೊಳೆದು ನಮ್ಮನು ತೊಳೆದು ನಾಡಿಗೆ, ಇಳೆಗೆ ಇಡಿ ಇಳೆಗೆ
ಇಳಿದು ಬಾ, ಎಬ್ಬಿಸಲು ಬಾ. ದಿವ್ಯತೆಯ ಬೆಳೆ ಬೆಳೆಗೆ.

ಬಾರೆ ಭಗವತಿ ನಮ್ಮ ಜಗವತಿ ಕಾತರಿಸುತಿಹುದು.
ನಿನ್ನನೇ ನೆನೆನೆನೆದು ಜೀವವು ಜೋತರಿಸುತಿಹುದು.

ಓ ತಾಯಿ–ಮಾಯಿ

‘ ಓ ತಾಯಿ, ಮಾಯಿ, ಶಿವಜಾಯಿ, ಕಾಯಿ ನನ ! ಯಾಕ ತೆರೆವೆ ಬಾಯಿs?
ಯಾ ಹಾದಿಲಿಂದ ನಾ ಹೋದರೇನು ಆಗ್ತೇನ ಅಲ್ಲೆ ನಾಯಿ.

ಪ್ರತಿರೋಮಕೂಪದಾಗ ಕಾಮ ತುಂಬಿ ತುಳಕ್ಯಾಡತsದ ಇಲ್ಲಿ
ನೀ ಜಪ್ಪಿಸಿರಲು ನಿನ ತಪ್ಪಿಸ್ಯಾರೆ ನಾ ಹೋಗಬಲ್ಲೆನೆಲ್ಲಿ ?’

‘ ಹಾಂಗಲ್ಲೊ ಮಗನ ನೀ ಭೋಗ ಬೇಡಿದಲ್ಲಲ್ಲು ಬಾಗಿಲಾಗಿ
ತೆರಿತಾವ ಹಾದಿ, ಅದಕಂತ ಕಾದಿ, ನಿನ ಮನಸೆ ಕನಸು ಆಗಿ.

ತೆರದೇನಿ ಯೋಗ ನಿನ ಹೃದಯದಾಗ, ಬರಲೊಲ್ಯೊ ಬ್ಯಾಗ ಒಳಗ.
ಈ ಕಲಕುಮಲಕು ಆದಾಗ ನಿನಗ ನಡದsದ ಮ್ಯಾಲ ಕೆಳಗ.

ಬಂದಾನ ಏನ ನನ ಕಂದ ಮನಿಗೆ ಇಂದಾರೆ ಅನತ ಮನಕ
ಎಂದಾರೆ ಬಾರೊ ಕಾದಿರುವೆ ಇಲ್ಲೆ ನೀನಾಗಿ ಬರುವ ತನಕ.

ಅಡ್ಡಡ್ಡ ಹಾದಿ ನೀ ಹೋದ ಮ್ಯಾಲೆ ನಾ ಕಾದೆನೆಷ್ಟೊ ನಿನಗs
ಹಾಲ್ ಹಸಿವು ಹುಟ್ಟಿದಾಗ ನೀನs ಬರತಿಯೋ ಚಿಂತಿ ಯಾಕ ನನಗs ?

ಓಡ್ಯೋಡಿ ಹೊರಟಿ ಎಲೆ ಬಾಲ ! ಕಾಲ ನಿನ ನೋಡಿ ನೋಡಿ ನಗನs
ನಿನ ಕಾಲ ನೊತು ಬರುವಾಗ ಬಾರೊ ನನಗೊಂದೆ ಹಾದ್ಯೊ ಮಗನs.

ನನ ಬಣ್ಣ ನಿನ್ನ ಕಣ್ ಮ್ಯಾಲೆ ಎರಚಿ ಕಟ್ಟೇನೊ ಎಲ್ಲ ಹಾದಿ.
ನಿನ ಕಿವಿಗೆ ನನ್ನ ನಿನಿದನೀ ಕಟ್ಟಿ ಬಿಟ್ಟೇನೊ ಎಲ್ಲಿ ಹೋದೀ !

ಆ ಗಾಳಿ ಜತಿಗೆ ನೀ ಗೂಳಿ ಹಾಂಗ ಅಡ್ಡ್ಯಾಡಿ ಹೇಳು ಏಸು ?
ಮುಸುಗುಡುತ ಹೊರಟಿ ಬಯಲಾಗ ನನ್ನ ಮುಗದಾಣ ಭಾಳ ಬೀಸು.

ನಾಡಾಡಿ ಹಕ್ಕಿ ನೀನಲ್ಲೊ ಮಗನ ಹೊಕ್ಕ್ಯಾಕ ಬೆಳ್ಕ್ಯಾಗಽ?
ನಿನ ತಾಯಿ ಕಣ್-ಹನೀಮುತ್ತ ಸುರಸತಾಳ ಮಾನಸ ಕೊಳ್ಳದಾಗ.

ನಿನ ಹಸೀ ಹಸಿವಿಗೇ ಹೇಸಿ ನೀನೆ ಬಂದಾಗ ನನ್ನ ಮರಿಯೇ
ನನ ರುಚೀ ನಿನಗ ರುಚಿ ಅನಿಸಿ ಹಸಿದು ಬಂದಾಗ ನಿನ್ನ ಮರೆಯೆ.'

'ಓ ಮಾಯಿ ಬಂದೆ ಓ ತಾಯಿ ಬಂದೆ ಓ ಕಾಯೆ ಕಾಯಿ ಬಂದೆ.
ನಿನ ಕಾಲ ನಾತ ಮೂಸಿಡುತ ಬಂದೆ ನಿನ ನಾಯಿಯಾಗಿ ಬಂದೆ.

ಒಳಬಳಕಿ ಬೆಳಸ ಹಸಿವೇನ ತಾಯಿ ಹಣ್ಣಕ್ಕಿ ತಳಸಬೇಕಽ
ಮೈಗಡಗಿ ತೊಳಮು ಒಳಗಡಗಿ ಮಾಡ, ಬಾ ಅಡಗಿ ಕೂತಿರಾಕಽ?

ಕೈತುತ್ತು ಮಾಡಿ ತುತ್ತುತ್ತ ಉಣಸುವಾಗ ಮುತ್ತು ಆಡಬೇಕಽ
ನಡುನಡುವೆ ನಕ್ಕು ಮುತಮುತ್ತ ಕದ್ದು ಕಣ್ ಕುಡಿಲೆ ನೋಡಬೇಕಽ.

ನೀನು ಕೂಡ ಕೈಮುರಿಗೆ ನಕ್ಕು ಕಣ್ ಕೆಂಪು ಮಾಡಬೇಕು.
ಏ ಸುಳ್ಳ ಅಂತ ಅಪ್ಪಿವರ ತೋರಿದು ನನ ತಂಪು ಮಾಡಬೇಕು.

ಓ ತಾಯಿ ಬಂದೆ, ಮಾಮಾಯಿ ಅಂದೆ, ಈ ಬಾಯಿ ತುಂಬು ಬಂದೇ

ಮಕರಂದ ಪಾನದಾ ಝುರೀ
ತೆರಿತೆರೀ ನಿನ್ನ ತಾವರೀ
ಬಂದ್ಽದ ತುಂಬಿಯಾ ಮರೀ

ಅಂಬಿಕಾತನಯನ ನುಡೀ ನುಡಿತಾವ ತೆರೀ ತೆರೀ ಎಂದೇ
ಓ ತಾಯಿ ಮಾಯಿ ಶಿವಜಾಯಿ ಕಾಯಿ ಈ ಬಾಯಿ ತುಂಬು ಬಂದೇ.

ಪ್ರತ್ಯಕ್ಷ

ಪ್ರತಿ ಅಕ್ಷ—ಎಂದರೆ ಕಣ್ಣಿಗೆ ಇದಿರಾಗಿ, ವಸ್ತುವಾಗಿ ಕಾಣುವದು—ಕಣ್ಣಿಗೆ ಪ್ರತ್ಯಕ್ಷ. ಹೀಗೆಯೆ ಬೇರೆ ಬೇರೆ ಇಂದ್ರಿಯಗಳಿಗೆ ಅವವುಗಳ ವಿಷಯ ಪ್ರತ್ಯಕ್ಷವೆ. ಕಿವಿಗೆ ಶಬ್ದ, ನಾಲಿಗೆಗೆ ರುಚಿ, ಮೈಗೆ ಸ್ಪರ್ಶ, ಹಾಗೆಯೆ ಮನಸ್ಸಿಗೆ ಸಂಕಲ್ಪಗಳು ವಿಕಲ್ಪಗಳು ಪ್ರತ್ಯಕ್ಷ. ಬುದ್ಧಿಗೆ ಆಗಿನ ಆ ಆ ಕಾಲದ ನಿಶ್ಚಯವು ಪ್ರತ್ಯಕ್ಷ. ಅಹಂಕಾರಕ್ಕೆ ತನ್ನ ದೇಹಾತ್ಮಬುದ್ಧಿ ಪ್ರತ್ಯಕ್ಷ. ಚಿತ್ತಕ್ಕೆ ತನ್ನ ನೆನೆವು ಮರೆವು ಪ್ರತ್ಯಕ್ಷ. ಅಂತಃಕರಣಗಳಲ್ಲಿಯೇನು ? ಇಂದ್ರಿಯಗಳಿಗೇನು ?—ಒಂದು ದ್ವಂದ್ವ— ಸಂಧಿಪ್ರಕಾಶದಲ್ಲಿ ತನ್ನ ವಿಷಯಜ್ಞಾನವಾಗುತ್ತಿದೆ. ಎರಡು ಕಣ್ಣಿಗೆ ಕಾಣುವ ವಸ್ತು ಒಂದು. ಎರಡು ಕಿವಿಗೆ ಕೇಳಿಸುವ ಶಬ್ದ ಒಂದು. ಅವುಗಳಿಗೆ ದ್ವಿಧಾವೃತ್ತಿಯಿಲ್ಲ ಮೂಲತಃ. ಆದರೆ ಇಂದ್ರಿಯಾರ್ಥಗಳಂತೆಯೆ ಅಂತಃಕರಣಾರ್ಥಗಳೂ, ಕತ್ತಲೆ–ಬೆಳಕಿನ ಸಂತಾನ. ಕತ್ತಲೆ ಬೆರೆಯದ ಬೆಳಕಲ್ಲ ಅದು. ಶುದ್ಧ ಚಿತ್ತಕ್ಕೆಯೆ ಶುದ್ಧಸತ್ತ್ವದ ಪ್ರಕಾಶ ತೆರೆಯುವದು. ಈ ಪ್ರಕಾಶದ ಪ್ರಭುವಾಗಬೇಕಾದರೆ ಸತ್ತ್ವವನ್ನೂ ಅರಲಿನಂತೆ ಮಿದ್ದಿ ಮೂರ್ತಿ ಮಾಡಬಹುದಾದ ತತ್ತ್ವದ ಜಾಗೃತಿ ಬೇಕು.

ಮನೋನ್ಮನೀ

ಬಾರೆ ಬಾ ಮನೋನ್ಮನೀ
ಮಹಾಮುನರ ಕಣ್ಮಣೀ
ನಿನ್ನ ಕಣಿಗೆ ನೀನೆ ಕುಣೀ
ದೇವದೇವ ನಿನ್ನ ಧಣಿ—
ಬಾರೆ ಬಾ ಮನೋನ್ಮನೀ.

ಹುರುಳಿನ ಅರಳರಳಿಸಿ
ಮಾಲೆ ಮಾಡಿ ಕೊರಳಿಸಿ
ಹೃದಯವೀಣೆ ಬೆರಳಿಸಿ
ಕುಣಿಸು ಜಗಕಲಾಪಿನೀ
ಬಾರೆ ಬಾ ಮನೋನ್ಮನೀ.

ಒಲವು ಬಳ್ಳಿಯಾಗಿರೆ
ಜೀವ ಅತ್ತ ಬಾಗಿರೆ
ನಿನ್ನ ಪಾದ ತಾಗಿರೆ
ತುಂಬು ವಿಶ್ವವಾಹಿನೀ
ಬಾರೆ ಬಾ ಮನೋನ್ಮನೀ.

ನಿನ್ನ ಪ್ರಾಣ ಅರ್ತಿಸಿ
ಚೆಲುವನ್ನೇ ಮೂರ್ತಿಸಿ
ಬಯಕೆಗಳನು ಪೂರ್ತಿಸಿ
ಬರಲಿ ದೇವ-ದ್ವೀಪಿನೀ
ಬಾರೆ ಬಾ ಮನೋನ್ಮನೀ.

ಬಾಳಿನ ಒಡಲೊಳಿತಿಗೆ
ಭರತಿಯಾಗಲೊಮ್ಮೆಗೆ
ಪಯಣ ಬೆಳಸೆ ನೆಮ್ಮೆಗೆ
ಧ್ರುವವಾಗುತೆ ಕರೆಯೆ ನೀ
ಬಾರೆ ಬಾ ಮನೋನ್ಮನೀ.

ಒಕ್ಕೊರಲಿನ ಗೀತಿಗೆ
ಪ್ರೇರಕವಿಹ ರೀತಿಗೆ
ಜೀವನದೀ ನೀತಿಗೆ
ಸ್ವಚ್ಛಂದವಿಧಾಯಿನೀ
ಬಾರೆ ಬಾ ಮನೋನ್ಮನೀ.

೮೦—

ದರ್ಶನ

ಜನ್ಮಜನ್ಮದ ಸುಕೃತವೇ ಬಾ
        ನನಗೆ ಬೆಂಬಲವಾಗುತ;
ಜನ್ಮಜನ್ಮದ ದುಷ್ಕೃತವೆ ಬಾ
        ಮಾತೃಚರಣಕೆ ಬಾಗುತ.
ಯುಗಯುಗದ ವಾತ್ಸಲ್ಯವೇ ಬಾ
        ಹೊಮ್ಮಿ ಹೊಸಲಲಿ ಹರಿಯುತ;
ದೈವಗರ್ಭದ ಕೃಪೆಯೆ ಬಾ ಬಾ
        ಕರೆದು ಅಮೃತವ ಕರೆಯುತ.

*   *   *   *

ಕಂಡಿಯಿಂದ ಕಂಡೇವೆ.
        ಕಣ್ ಕಾಣಿಕೆ ಎಂದು
ಜನ ಕಾದಿದೆ
    ಮನ ಕಾದಿದೆ
        ಕಾದಿದೆ ತನುಬಿಂದು.
ಮೈ ಮಣ್ಣಿಗೆ
    ಕುಡಿಗಣ್ಣಿಗೆ
        ಈ ಹಣ್ಣಿಗೆ
        ರಸಗೂಡಿಸು ಬಂದು.
ರಣಘೋಷಕೆ
    ಆಕ್ರೋಶಕೆ
        ಬೇಸತ್ತೆವು ಇಂದು.
ಬಾ ತಾಯಿಯೆ ಬಾರಾ
ಚಂದಿರಮುಖ ತೋರಾ.

ತಾಯಿಗೆ ಪ್ರಾರ್ಥನೆ

ಒಮ್ಮಿದ್ದೆ ನೀನು, ಈಗಿಲ್ಲವೆಂದು ಹೇಗೆನಲಿ ತಾಯಿ ನಿನಗೆ?
ನೀನಿದ್ದರಿರುವೆ, ಇಲ್ಲದಿರೆನಿಲ್ಲ, ಹೀಗೆನುವೆ ನಾನೆ ನನಗೆ.
ನಿನ್ನಿಂದ ಬಂದೆ, ನಿನ್ನಲ್ಲಿ ಜೀವೆ, ನಿನ್ನೊಳಗೆ ಸಾಗುವಂತೆ
ತಾ ಹೊತ್ತಲೆಂದು ಬಂದಂಥ ಬತ್ತಿ ದೀಪಕ್ಕೆ ಬಾಗುವಂತೆ.

ನೀ ಮೈಯನೊಂದೆ ರೂಪಿಸಿದೆಯೇನು ಬಸಿರಲ್ಲಿ ರಕ್ತ ಸುರಿದು?
ಹಸಿದಿರುವ ಬಾಯ್ಗೆ ನೀ ತಾಯಿ ಬಂದೆ ಹಾಲಾಗಿ ಎದೆಗೆ ಹರಿದು.
ಹಸು ಕರುವಿಗಾಗಿ ನಡೆವಂತೆ ನುಡಿವೆ; ನಡೆಗಲಿಸಲೆಂದು ದುಡಿಸಿ.
ಮುದ್ದಿಟ್ಟು ತುಟಿಗೆ ಮುದ್ದಾದ ಮಾತ ಮುದ್ರಿಸಿದೆ ಮನವ ನುಡಿಸಿ.

ಭ್ರಮಿ ನಾನು ಭ್ರಮರ; ನಿಃಶಂಕಿ ನೀನು. ಈ ಜಾತಶಂಕಿಯನ್ನು
ಶಮಿಯಾಗಿ ಶಮಿಸಿ, ನೀನಾಗಿ ಪೊಸೆದು ಹೊತ್ತಿಸಿದೆ ಬೆಂಕಿಯನ್ನು.
ದಮಿ ನೀನು, ನಾನು ದುರ್ದಮ್ಯ, ನಿನ್ನ ಕರುಣೆಯೊಳೆ ನನ್ನ ತೊಯ್ಸಿ
ಶ್ರಮಿ ನೀನು ನಿನ್ನ ಶ್ರಮ ಮಾಡಿಕೊಂಡೆ ಮೈಮುರಿಯೆ ನನ್ನ ಗೈಸಿ.

ನೀ ತೇಜಪುಂಜ, ನಾನೊಂದು ಚುಕ್ಕೆ, ಬಸಿರುಕ್ಕಿ ಹೊರಗೆ ಬಿದ್ದೆ.
ಇನ್ನೂನು ಭ್ರಮಣ ನಡೆದಿಹುದು, ತುಸುವು ಹರೆದಿಲ್ಲ ಹುಟ್ಟುನಿದ್ದೆ.
ಬಾನಗಲದಲ್ಲು ನನ್ನಗಲದಂತೆ ನನ್ನನ್ನು ಕೂಡಿಕೊಂಡು
ಹೊರಟಿರುವೆ ಎತ್ತೊ ಬಿಡದೆನ್ನ ನಿನ್ನ ಆ ರಥಕೆ ಹೂಡಿಕೊಂಡು.

ತಾಯ–ನಗೆ

ಏನು ನಗೆಯೆ ನಿನ್ನ ಮೊಗದ ಮೇಲೆ ಮೆರೆವುದು!
ಕಾಣದೊಂದು ಲೋಕವನ್ನೆ ಕಣ್ಣಮುಂದೆ ತೆರೆವುದು;
ಏನು ಚಿತ್ರ ಇದು ವಿಚಿತ್ರ ಚಮತ್ಕಾರವಾಗಿದೆ;
ನನ್ನ ಕುಡಿದು ಕಣ್ಣಿನಿಂದ ಒಳಗೆ ಹೊಗುವ ಹಾಗಿದೆ.

ಹಾಳೆಯಲ್ಲ; ಬಾಳೆ ಇಲ್ಲಿ ಬೆಳಕುದುಂಬಿ ಬಂದಿದೆ;
ಗೊಂಬೆಯೇ? ಸಜೀವ ಬಿಂಬ ಅರಿವು ತುಂಬಿ ನಿಂದಿದೆ;
ಶಾಂತಿನಿಧಿ ಗಭೀರಮೌನ ಇಲ್ಲಿ ಕಣ್ಣ ತಾಳಿದೆ;
ಮುಚ್ಚಿದೆರಡು ತುಟಿಗಳಲ್ಲಿ ಅರ್ಥವೆಲ್ಲ ಹೂಳಿದೆ.

ನೇಹವೆರೆದು ಏನೊ ತೆರೆದು ಭಾವ ಹೊತ್ತಿದಂತಿದೆ;
ಆಳದೊಳಗೆ ಏನೊ ಒಂದು ಪೊಚ್ಚಮುತ್ತಿನಂತಿದೆ;
ತೆರೆಯೆ ಮರೆಯು, ಮರೆಯೆ ತೆರೆಯು, ಇದರ ಮಾಟ ಹೀಗಿದೆ.
ಕಂಡೆನೆಂಬ ಒಂದು ಕನಸು ಎಲ್ಲೊ ಮಾಯವಾಗಿದೆ.

ಸಾವಿನೊಂದು ಪೊರೆಯು ತೊರೆವ ಜೀವ ಮೆರೆಯುವಂತೆಯೆ
ನೋವು ಗೀವು ಸುಳ್ಳು ಎನಿಸಿ ಹಿಗ್ಗು ಹರಿಯುವಂತೆಯೆ
ಇರವಿನೊಂದು ಸುಳಿಯು ಒಳಗೆ ಬೇರೆ ಸಿರಿಯು ತೆರೆವುದು;
ಇಲ್ಲವೆನಿಸಿದೊಂದು ಬಾಳ ಅಹುದೆನುವೊಲು ಕರೆವುದು.

ನಿನ್ನ ನಗೆಯು ಬೆಳಕಿನಲ್ಲಿ ಜಗಕೆ ಬೇರೆ ಬಣ್ಣವು
ಬರಲು; ನನ್ನ ಜೀವನಯನ ಬೇರೆ ಉಣಿಸನುಣ್ಣವು.

ದಿ ಮದರ್

It is through the Mother that all things are attained

(ಎಲ್ಲ ಸಿದ್ಧಿಗಳು ಮಾತೆಯ ಮೂಲಕ)

Sri—Aurobindo

ಮಾಯೆಯನೆ ಮೊಲೆಗೊಳಿಸಿ ಹಾಲ್ಗುಡಿಸಿ, ಈ ತಾಯಿ
ಗಾಯತ್ರಿ ಮಂತ್ರಕ್ಕೆ ಭಾಷ್ಯ ಬರೆದವಳು
ಅಶ್ವಪತಿಯ ಉಪಾಸ್ಯ ದೇವತೆಯು ಸಾವಿತ್ರಿ
ಸೂರ್ಯನಾಚೆಯ ಸೋಮಹಾಸ್ಯ ಕರೆದವಳು
ಸತ್ಯವಂತರ ಮರ್ತ್ಯ ಡಿಂಭಗಳ ಗೊಂಬೆಯಲಿ
ಶಮರಮಿತ ನವ ಬಿಂಬ ಸೃಷ್ಟಿ ಮೆರೆದವಳು
ಮಾರ್ತಾಂಡ ಮಂಡಲದ ಅಂಡವನು ಪುಟಗೊಳಿಸಿ
ಹಂಸಜಾತಿಯ ಜೀವಜಾತಿ ತೆರೆದವಳು.

ಶ್ರೀಮಾತೃಶ್ರೀಗೆ

ನಿನ್ನ ನೋಟವೆ ಹಾಲು
ತಾಯಿ ನೀನು.
ಕಂಗಳಿಂದಲೆ ಕುಡಿವೆ
ಕೂಸು ನಾನು.

ಕಂಗಳಿಂದಲೆ ನುಡಿವೆ
ತಾಯಿ ನೀನು.
ನನ್ನ ಕಣ್ಣೇ ಕಿವಿಯು
ಕವಿಯು ನಾನು.

ನಾಲ್ವರು ತಾಯಂದಿರು

ಬಾರೆ ಬಾ ಮಹೇಶ್ವರೀ
ಬಾ, ಬಾ, ಬಾ ಬಾ.
ಬಾರೆ ಬಾ ಮಹೇಶ್ವರೀ
ಮಹಾಕಾಳಿ ಮಹಾಲಕ್ಷ್ಮಿ
ಬಾ ಮಹಾಸರಸ್ವತೀ
ಇಹುದು ನಿಮಗೆ ಶಾಶ್ವತಿ ‖ ಪಲ್ಲ ‖

೧

ಹಗಲು ಇರುಳು ನಿಮ್ಮ ಕೂಟ,
ಅರಿವೆ ನಿಮಗೆ ದಿನದ ಊಟ,
ಬೆಳಕೊಗೆವುದು ಒಂದು ಆಟ.
ಚಿದಾನಂದ ಲಹರಿ ಬಾ
ಸದಾಶಿವನ ಗೌರಿ ಬಾ.
ನಿಮ್ಮ ಮುಗುವು, ಹುಸಿಯ ನಗುವು
ಒಗಿಸಿ ಮಿಗಿಸಿ ಬರುತಿರೆ
ನೀವೆ ಕರೆಯದಿರುತಿರೆ
ಛಂದವೇನು ನೀವೆ ಹೇಳಿ?
ಕೂಸು ನಾನು ಹೇಳಿಕೇಳಿ.
ನೀವೇ ನನಗಹುದು ಹಸಿಯು.
ಬೆಳೆದೀತೇ ಒಣಕೆ ಸಸಿಯು?
ನಿಲ್ಲಿರವ್ವಾ ನಿಲ್ಲಿರಿ.
ಕೃಪಾದೃಷ್ಟಿ ಚೆಲ್ಲಿರಿ.

೨

ತಾಳುವೆವೇ ನಿಮ್ಮ ರಾಸ?—
ಕುಣಿಕುಣಿಯುವ ಅಟ್ಟಹಾಸ
ಅಹಾ ಏನು ಮಹಾಭಾಸ!
        ಬಾ ಎನ್ನುವ ಬಾಯಿಯೇ
        ನಮಗೆ ಇಲ್ಲ ತಾಯಿಯೇ.
ನಿಮ್ಮ ಭಯಾ ನಮಗಭಯಾ
        ಮಹಾಕಾಳಿ ಬಂದಿರೇ
        ವಿಶ್ವಪ್ರಾಣಮಂದಿರೇ?
ಕೋಟಿ ಸಲವು ಹುಟ್ಟಿ ಸತ್ತು
ಧಿಮಿತಿಕಿದಿಟ ಎಂದತ್ತು
ಆದರೇನು ನೀವೇ ಬಲ
ನೀವೇ ಹೊಲ ನೀವೇ ಚಲ
        ಕಲಿಸಿರವ್ವ ಕಲಿಸಿರಿ
        ಹಸುಹರಣವ ಬಲಿಸಿರಿ.

೩

ವಿಷಮದಲ್ಲೆ ಇಹುದು ಸಮ
ವಿಶ್ರಾಂತಿಯೆ ನಿಮ್ಮ ಶ್ರಮ
ಸಂಭ್ರಮದೊಳು ತೊರೆಸು ಭ್ರಮ
        ಬಾರೆ ಬಾರೆ ಬಾ ರಮಾ
        ಅಂತರಂಗಪ್ರಿಯತಮಾ.
ನಿಮ್ಮ ಕಂದ ನಿಮ್ಮ ಅಂದ
        ಆಟಪಾಟವಾಡಲಿ
        ನವೀನ ಛಂದ ನೋಡಲಿ.

ಬನ್ನಿರವ್ವ ಬಯಸಿ ಕರೆವೆ
ನಾನು ನಿಮ್ಮನೆಂತು ಮರೆವೆ?
ತನುಮನವೂ ನಿಮ್ಮ ಮನೆ
ನಾನು ಕೂಡ ನಿಮ್ಮವನೇ
    ಅಲ್ಲವೇನೆ? ಬನ್ನಿರೇ
    ಜಯ ಜಯ ಜಯವೆನ್ನಿರೇ.

೪

ನೀನೆ ಪರಾ ನೀನಪರಾ
ನೀ ಭೈರವಿ ನೀ ತಾರಾ
ನೀನು ತ್ರಿಪುರಸುಂದರಾ
    ಬಾರೇ ಬಾ ಭಾರತೀ
    ಎತ್ತು ಆತ್ಮದಾರತೀ.
ನಿಮ್ಮ ಕರ್ಮ ನಮ್ಮ ಧರ್ಮ
    ಕೈಮೈಯೊಳು ಬೆಳೆಯಲಿ
    ಕರಣಗಳಲಿ ಉಳಿಯಲಿ.
ನಾಲಗೆಯಲಿ, ನಾಳದಲ್ಲಿ
ಜೀವಭಾವದಾಳದಲ್ಲಿ
ನೀವೇ ಜಗವಾಳುವಲ್ಲಿ
ನಿಮ್ಮುಸಿರೇ ಬಾಳುವಲ್ಲಿ
    ಅಂಬಿಕಾತನಯನಾ
    ನಿಲಿಸಿರವ್ವ ದಿನ ದಿನಾ.

ಏಳು ಬಯಕೆಯ ಬಳ್ಳಿಯೆ

ಏಳು ಬಯಕೆಯ ಬಳ್ಳಿಯೇ
ಅರಳೇಳು ಹೃದಯದ ಆಳಕೆ.
ಜೀವರಸ ಚಿಮ್ಮೇಳು ಹೂ ಹೊ-
ಮ್ಮೇಳು ದೈವದ ಮಾಳಕೆ.
ಸೂರ್ಯಚಂದ್ರಗೆ ಸ್ರವಿಸಲಿ,
ಕೃಪೆಯೊವ ಕರುಣೆಯು ದ್ರವಿಸಲಿ.
ನಾವಲ್ಲ ಮಣ್ಣಿನ ಹುಡಿಗಳು
ಬರಿಗಂಪ ಬೀರುವ ಕುಡಿಗಳು.
ನಾವು ಇರುವೆವು ದಿವ್ಯಭಾಗ್ಯದ ಚುಕ್ಕಿಗಟ್ಟಿದ ಗುಡಿಗಳು.

ಕರೆಯು ಬಂದಿದೆ ದೂರದಿಂದಲೆ ಬರಲಿ ಮುಂದಕೆ ಸಾಗಲಿ
ಏಳಿ ಹೊತ್ತಿನ ಪೀಳಿಗೆ
ಬಂತು ಬೆಳಕಿನ ಏಳಿಗೆ
ನೇತ್ರಗಳ ಜೀವಂತಜ್ಯೋತಿಯ ತಾಯಿ ಕರೆವಳು ಬಾಳಿಗೆ.
ಏಳು–ಬಯಕೆಯ ಬಳ್ಳಿಯೇ.

ಹೃಜ್ಜಾತೇ–ಚಿನ್ಮಾತೇ

ಹೃಜ್ಜಾತೇ ! ಚಿನ್ಮಾತೇ !
ಹೃನ್ಮಾತೇ ಚಿಜ್ಜಾತೇ ಭಾರತ ನವಶಕ್ತಿ !
ಸನ್ಮಾತ್ಮವೆ ಪರಮಾತ್ಮವೆ ಕರುಣಿಸು ತವ ಭಕ್ತಿ ॥ಪಲ್ಲ॥

ಜಯವೇ ನಯವೇ
ಹೊಸ ಅಭಯವೆ, ಶುಭೋದಯವೆ, ಮಂಗಲಮಯವೇ !
ಎಂದೆಂದೂ ಈ ಮಕ್ಕಳ ಕೈ ನ್ಮೈ ಹಿಡಿದಾಕೇ !
ಯಾರಾರಿಗೊ ಬಾಗಿದರೂ ನಮ್ಮದೆ ಬಿಡದಾಕೇ !
ಆಪತ್ತನು ತಡೆದಾಕೇ, ಜೊತೆ ಜೊತೆ ನಡೆದಾಕೇ !
ಹೊಸ ನಗೆಯಿದೆ ತವ ಮುಖದಲಿ
ಬಿಡುಗಡೆಯಿದೆ ಸಮ್ಮುಖದಲಿ
ನಮಿಸುವೆವಿದೊ ಒಮ್ಮುಖದಲಿ.

ತೆರೆದಿರುವೀ ಬಿಡುಗಡೆಯಾಗಲಿ ಜಗಮುದಯ
ಹಿಗ್ಗುತಿರಲಿ ಸನ್ಮಹಿಮೆಯು ನವದಿಗ್ವಲಯ
ನಾಡ–ನಾಡಿಗಿದು ನೀಡಲಿ ಬಾಳ್ಮಾಣಿಕೆಯ.
ಅನುಗಾಲವು ಹಿರಿಗುರಿಯಲಿ ಭರವಸೆ ಬರುವಂತೆ
ನಿನ್ನಾತ್ಮದ ಒಳುಮೂರ್ತಿಯು ಮೂಡಿಸುತಿರುವಂತೆ
ಜನಜನಕೂ ಗೆಳೆ–ನಾಡಿದು ಆತ್ಮವ ತೆರೆವಂತೆ
ನಡೆ ನಡಿಸೌ ನುಡಿ ನುಡಿಸೌ ಮಾತೆಯ ಮಂತ್ರೋಕ್ತಿ
ಅರವಿಂದರ ಹೃಜ್ಜಾತೇ ಋತತಂತ್ರದ ಯುಕ್ತೀ !

ಶ್ರೀತಾಯಿಗೆ

ಹಾರುಹಕ್ಕಿಯು ತೆರದಿ ಬರುವೆ ಹಾರಯಿಸುತ್ತ
ನಿನ್ನ ನೀಲ ವಿಶಾಲ ಗಗನದಲ್ಲಿ.
ತಾಯಿ ಎನಿತೇ ನೀನು ದೂರವಿದ್ದರು ಏನು ?
ನನಗೆ ಎನಿಸುವೆ ನೀ ಸಮೀಪದಲ್ಲಿ.

ಚಿಕ್ಕ ಬಾನಿನೊಳೊಂದು ಚುಕ್ಕಿ ನಾನೇ ತಾನು
ನಿನ್ನ ಹಿಗ್ಗಿಗೆ ನನ್ನ ಹಕ್ಕಿಗೊಳಿಸಿ,
ಕೂಗೆಂದೆ ಹಾಡೊಂದು ಕಂಠ ಹೃದಯದೊಳಿಕ್ಕಿ
ಆಟಕ್ಕೆ ಗರಿ–ಪೈಯು ತೊಡಿಗೆ ಕೊಡಿಸಿ.

ರೆಕ್ಕೆ ಬಳಲಲು ನಾನು ಮೆಲ್ಲಗಿಳಿಯುತ ಕೆಳಗೆ
ಕೂರುವೆನು ಹೆಮ್ಮರದ ತಲೆಯನೊರಸಿ.
ಸುತ್ತು ಬಳಿಯಂತಿರುವ ನಿನ್ನ ನೀಲದ ನಿಲಯ
ಇಹುದು ಗೂಡಿನೊಲೆನ್ನನೆದೆಯೊಳಿರಿಸಿ.

ಬೆಳಕಿನ ಲಿಂಗ

ಮಾತಾಡೊ ಮಾತಾಡೊ ಲಿಂಗವೇ । ನೀ
ಮಾತಾಡಲೊಲ್ಲೇಕೊ ಲಿಂಗವೇ ?
ಮಾತಿನ ಬಸಿರಲ್ಲಿ ನೆಲೆಗೊಂಡ ಮೌನದಿ
ಹೂತಂಥ ಬೆಳಕಿನ ಲಿಂಗವೇ.

ಗುಡುಗಾಡೊ ಗುಡುಗಾಡೊ ಲಿಂಗವೇ । ನೀ
ಗುಡುಗಾಡಲೊಲ್ಲೇಕೊ ಲಿಂಗವೇ ?
ನಡುಹಗಲ ನೆತ್ತಿಯ ಮೋಡದ ಒಡಲಲ್ಲಿ
ಮಿಡುಕುವ ಮಿಂಚಿನ ಲಿಂಗವೇ.

ಉರಿದೇಳೊ ಉರಿದೇಳೊ ಲಿಂಗವೇ । ನೀ
ಹರಿದೇಳಲೊಲ್ಲೇಕೊ ಲಿಂಗವೇ ?
ಉರವ ಕತ್ತಲೆಯನ್ನು ಹರಿದು ಕಿಡಿಕಿಡಿಯಾಗಿ
ಮೆರೆವಂಥ ಬೆಂಕಿಯ ಲಿಂಗವೇ ?

ಕೂಡು ಬಾ ಕೂಡು ಬಾ ಲಿಂಗವೇ । ನೀ
ಕೂಡಲು ಒಲ್ಲೇಕೊ ಲಿಂಗವೇ ?
ಕೂಡಲದಲ್ಲೊಗೆವ ಮೂಡಲದೊಲವಿನಲಿ
ಮೂಡಿ ಬಾ ಮುತ್ತಿನ ಲಿಂಗವೇ.

ಬೇಕು

ವೈರಿಗೆ ಅನ್ನವು ಸಿಕ್ಕದ ಹಾಗೆ
ಸುಡಬೇಕು, ನೆಲ ಸುಡಬೇಕು ||

ನವಬೀಜದ ಹೊಸ ಬಿತ್ತಿಗೆಗಾಗಿ
ಬಿಡಬೇಕು, ಹೊಲ ಬಿಡಬೇಕು ||

ಬಂದ ಬೆಳೆಯು ತುಸು ಕಳೆಯದ ಹಾಗೆ
ಇಡಬೇಕು, ಕಾದಿಡಬೇಕು ||

ಒಬ್ಬಗೆ ಬಂದುದು ಎಲ್ಲರಿಗುಂಟು
ಕೊಡಬೇಕು, ಹಿಡಿ ಕೊಡಬೇಕು ||

ಕೊಟ್ಟ ದೇವನಿಗೆ ಕೊಡುವೆನು ಎಂದು
ತೊಡಬೇಕು, ಪಣ ತೊಡಬೇಕು ||

ಜೀವ ಜೀವಗಳ ಗೆಳೆಯನು ಆಗಿ
ಪಡಬೇಕು, ಸುಖಬಡಬೇಕು ||

ದೇವದೇವನಿಗೆ ವಾಹನವಾಗಿ
ನೆಡಬೇಕು, ಗುಡಿ ನೆಡಬೇಕು ||

ಅರವಿಂದರ ಮಕರಂದವ ಕುಡಿದಾ
ನುಡಿ ಬೇಕು, ಒಳನುಡಿ ಬೇಕು ||

ಸಹನಾ

ಸಹನಾ, ಸಹನಾ, ಸಹನಾ, ಸಹನಾ!
ಎಲ್ಲಿರುವೆಯೆ ಸಹನಾ?
ಜನನದ ಮರಣದ ನಡುವಿನ ಹೊಳೆಯಲಿ
ಈಸಾಡುವ ಮೀನಾ!

ಅನಂತರೂಪದ ಚಿರಂತನಾ!
(ಸನತ್ಕುಮಾರೀ ಚಿರಯೌವನಾ!)
ತೆರೆ ತೆರೆ ನಿನ್ನ ಅನಿಮಿಷನಯನಾ.
ನೆಲಕೆ ಮೊಲೆಯು ಕುಡಿಸಿದ ತರಳೇ!
ಸಾವಿರ ದೀಧಿತಿ ಸೂಸುವ ಹರಳೇ!
ಸಹನಾ, ಸಹನಾ, ಸಹನಾ!

ನೀನಿಲ್ಲದ ಸುರವೀರನು ಭೀರು
ನೀ ಪ್ರಾಣದ ಬೇರು.
ನಿನ್ನೆದೆಹಾಲನು ಊಡಿಸೆ ಸಹನಾ
(ಹಾಲಿರದಿರೆ ನಾನೆಂಬುವದೆ ಅಸಹನಾ)
ನೀನೇ ಸಹ–ಜೀವದ ಭವನಾ!

ಪ್ರಕೃತಿ–ಪುರುಷ

ಪ್ರಕೃತಿಗೆ ಕೈಕಾಲುಂಟು
ಪುರುಷನಿಗೋ ಅವೆ ಇಲ್ಲ.
ಪ್ರಕೃತಿಗೆ ಕಣ್‌ಕಿವಿ ಇಲ್ಲ
ಪುರುಷನಿಗೋ ಇವೆ ಎಲ್ಲ.

ಈ ಇಬ್ಬರ ಸಂಸಾರ
ನಡೆದಿಹುದು ನಿರಂತರ.
ಬೆಳೆಯುತಿಹುದು ಸಂತತಿ
ಏಕೆ ಅದಕೆ ಇತಿಮಿತಿ !

ಹೊಟ್ಟೆಮಕ್ಕಳನ್ನೆ ತಿಂದು
ಬಾಳುತಿಹರು ಇಬ್ಬರೂ.
ಅಮರರವರು ಹೀಗೆ ಇಹರು,
ಸಾಯಲಾರರೊಬ್ಬರೂ.

ಇಂಥ ಈ ಪ್ರಜಾಪತಿ
ಆ ಪ್ರಾಣೇಶ್ವರಿಗೆ ಗತಿ,
ಸಂತಾನಕೆ ಸಾವೆ ಶರಣ
ನಿತ್ಯ ಜನ್ಮ, ನಿತ್ಯ ಮರಣ.

ಅದರ ಮಧ್ಯೆ ಕನಸಿನಂತೆ
ಜೀವನದೀ ಚಿತ್ರಪಟ
ತೆರೆಮರೆಗಳ ಆಟದಲ್ಲಿ
ಉರುಳುತಿಹುದು ಝುಟಪಟ.

ತಿರುಗ ಮುರುಗ ಮತ್ತೆ ಅದೇ
ಇದ್ದಕಿದ್ದ ಹಾಗೆ ಇದೆ.
ಸಾಕೊ ಕಥೆ, ಸಾಕು ಹಾಡು.
ಏಕೆ ವ್ಯಥೆ ಪಡುವೆ ಪಾಡು?
'ಇದುವು ವ್ಯರ್ಥವಲ್ಲವೆ?'
—'ಅರ್ಥ ಇದ್ದರಲ್ಲವೇ?'

ರೌದ್ರಿ

(ಸ್ವಾಮಿ ವಿವೇಕಾನಂದರ ಕವನ ಒಂದರ ಅನುವಾದ)

ಚಿಕ್ಕೆ ಬಾನೊಳಿಂಗಿವೆಽ
ನೋಡ ಮುಗಿಲ ನುಂಗಿವೆ.
ಜಿರಗುಟ್ಟುವ ದುರಗುಟ್ಟುವ
ಕತ್ತಲೋ ಕತ್ತಲೇ
ಸುಟ್ಟುರಿಯೇ ಬಿರುಗಾಳಿಯೆ
ಲೋಕದತ್ತಲಿತ್ತಲೆ.
ಮುರಿದು ಸೆರೆಽ, ಬಂತೊ ನೆರೆಽ
ಮರುಳ ಪಡೆಯೆ ಬೆತ್ತಲೆ.

ಮರ ಕಿತ್ತಿವೆ ಬುಡ–ತಳಽ
ಹಾದಿ ಉಡುಗೆ ಝಳಝಳಽ
ಕಡಲು ಕುಣಿಯೆ ಗೊಂದಣಽ
ತೆರೆ–ಮುರಿ–ನೊರೆ ಧಂಧಣಽ
ಮಬ್ಬೆ ಮಳೆಯು ನಾಡಿಗೆ
ಮುಗಿಲಿನಂಚು ಕಾಡಿಗೆ.
ಸಾವು ಹೊಂಚು, ಅಯ್ಯೊ ಮಿಂಚು
ಕಣ್ತೆರಿದೆಡೆ ಸುತ್ತಿಗೊಂಡ
ಲಕ್ಷಕೋಟಿ ರೂಪಗೊಂಡ
ಸಾವಿನಿಂದ ಮುತ್ತುತಽ
ಕಷ್ಟನಷ್ಟ ಬಿತ್ತುತಽ
ಹಿಗ್ಗುಗೊಂಡು ಹುಚ್ಚೆದ್ದು
ಕುಣಿವ ತಾಯಿ ಬಾ !

‘ರೌದ್ರಿ’ ನಿನ್ನ ಹೆಸರುs
ಮೃತ್ಯು ನಿನ್ನ ಉಸಿರುs
ನಿನ್ನ ಒಂದು ನಡೆ ಅಡಿ
ಜಗವ ಮಾಡೆ ಪುಡಿಪುಡಿ.
ಪ್ರಳಯಂಕರಿ ಓ ಕಾಳೀ
ಬಾ ತಾಯಿಯೆ ಬಾ !

ಅದ ಬರಿದೆ ನುಡಿಸಬಹುದೆ?

ಕಣ್‌ಹಿಡಿಪುದನ್ನು ಮೈ ಹಿಡಿಸಬಹುದೆ?
ಅದ ಬರಿದೆ ನುಡಿಸಬಹುದೇ?
ಕುಣಿದಿಲ್ಲ ಕೊರಳು, ಮಣಿದಿಲ್ಲ ಬೆರಳು,
ಮರವೀಣೆ ಮಿಡಿಸಲಹುದೇ?

ಹುಲುಗೊಡ್ಡು ಮೋಡ ಹುಸಿಗುಡುಗಿದಾಗ
ಕೆಲಜೀವ ಭೇಕಿಸುವವು.
ಮೈನವಿರ ನವಿಲು ಮೈಯುಣ್ಣದೇನೆ
ಬರಿದೆಂತು ಕೇಕಿಸುವವು?

ವೇದಕ್ಕು ಹಿರಿದು ವಚನಕ್ಕು ಕಿರಿದು
ನುಡಿಕಟ್ಟಿ ಒಟ್ಟಬಹುದು.
ಆ ಇರವನಿರದೆ ಅರಿವಾಗದೇಯೆ
ಶ್ರುತಿಯೆಂತು ಹುಟ್ಟಲಹುದು!

ಶ್ರೀಗೀತೆಗಿಂತ ಮಿಗಿಲಾದ ರಾಗ
ಸ್ವರವೆತ್ತಿ ಹೇಳಬಹುದು.
ಭಗವಂತಗಿಂತ ಎತ್ತರಕೆ ಎಂತು
ಕಿರಿಜೀವ ಬಾಳಬಹುದು?

ಬಾಳಸೆಳೆಯು ನುಡಿಬೇಕು, ಬಣ್ಣ-
-ದೊಳಬಾಳ ಆಳಬೇಕು,
ಅರುಹಾಗಬೇಕು, ಹರುಹಾಗಬೇಕು,
ಬಿಳಿತುದಿಗೆ ಏಳಬೇಕು.

ಇದೆ ಇಲ್ಲಿಯೆ

ಇದೆ ಇಲ್ಲಿಯೆ ಎದೆಯಲ್ಲಿಯೆ
ಎಂದರು ಎಲ್ಲೊ ಇದೆ.
ಹೃದಯವು ನಿರ್ದಯವದು
ಆದೀತೇನು? ಸುಧೆ
ಹುಳಿ ಹಿಡಿದರೆ ಉಳಿದಾವೇ
ಉಳಿದೊಡವೆಗಳೆಲ್ಲಾ ?
ಇಲ್ಲಾ ಇಲ್ಲಾ ಎನಲೇ
ಈ ಕರೆಯೇನಿಲ್ಲಾ ?
ಪ್ರಳಯವು ನೀನಿರದಿರೆ; ನೀ-
ನಿದ್ದುದು ಪ್ರಣಯವಿಧೀ
ಸುಹೃದನೆ ಬಾ ಉದಯಿಸು ನೀ;
ನೀನೇ ಹೃದಯನಿಧೀ.
ಸವಿನುಡಿಗಳ ಒಡನಾಟವೆ
ನಿನ್ನೊಡನಾಟದೊಲು
ನಿನ್ನೊಡನಾಡುತಲಿದೆ ನ-
ನ್ನೆದೆಯೇ ಪಾಟದೊಲು.

ಎಲ್ಲ ಆಟ—ಮಾಟ—ನಗೆ !

ನೆಲವನ್ನು ತಿರುಗುವೊಲು
ತಿರುಗುವಡ ನಿಂತವೊಲು
　　ಮಾಡಿರುವ ನಿನಗೆ
ಯಾವುದಿದೆ ಬಿಗಿ ? ಎಲ್ಲ
　　ಆಟ, ಮಾಟ, ನಗೆ.

ಬಾನಿಗಾವುದು ಕಂಬ ?
　　ಇಳೆಗಾವುದಾಲಂಬ ?
　　ಗಾಳಿ ಸ್ವಚ್ಛಂದ.
ನೀರೇರಿ ಮಳೆಯಾಗೆ
ಬೆಳಕಿಳಿದು ಬೆಳೆಯಾಗೆ-
　　ಚಂದ ಬಿಸವಂದ.

ಯಾರು ಯಾರೊಳಗಿಹರೊ ?
ಯಾರೊಳಗ ಬೆಳಗಿಹರೊ ?
　　ಜೀವ ಜೇನೋ !
ದೇವ, ಜಗದೀ ಹೂವ
ತೆರೆದು ಮುಚ್ಚುವನಾವ ?
　　ನಾನೊ ನೀನೋ ?

ಯಾರು ?

ಯಾರು ತಳಕೆ ನೆಲದ ಹಾಗೆ
 ಸುತ್ತುತಿಹರು ಸುಮ್ಮನೆ?
ಕಾಲಕೆಳಗೆ ತುಳಿದು ಅದನು
 ನಾನು ಇಹೆನು ಬಿಮ್ಮನೇ.

ಬೆಂಕಿ ನುಂಗಿ ಬೆಳಕ ಸೂಸಿ
 ಕತ್ತಲಲ್ಲಿ ಯಾರಿದು?
ಅಳಿದು ಬೆಳೆದು ಬೆಳಗುತಿಹದು
 ಇದರ ನೆಲೆಯೆ ತೋರದು.

ಕೋಟಿ ಚುಕ್ಕೆ ಬರುವವಣ್ಣ
 ಇರುಳ ಮೈಯ ನೆಕ್ಕುತ
ಹಗಲಚುಕ್ಕೆಗೀಡೆ ಅದುವು
 ಬಹದು ಕಣ್ಣ ಕುಕ್ಕುತ.

ನಸುಕು ಬೈಗು ಜೀಕು ಮಬ್ಬು
 ಕಲೆತು ಬೆರೆತು ಆಡುತ
ಎತ್ತೊ ಹೊತ್ತಿನತ್ತ ಸುಗ್ಗು-
 ತಿಹವು ಯುಗವ ದೂಡುತ.

ಚಿರಂತನದ ಪಥಿಕ ನಾನು
 ಹೊರಟೆ ತಿರುಳ ಹುಡುಕುತ,
ನೆರಳಿನಂತೆ ಹುರುಳಿನಲ್ಲಿ
 ಕರಗಿದರೂ ದುಡುಕುತ.

ನೆಲವೆಲ್ಲಾ ನೀರಾಗಿದೆ

ನೆಲವೆಲ್ಲ ನೀರಾಗಿರೆ
ಸೃಷ್ಟಿಯು ಎತ್ತೊ ಸಾಗಿರೆ
ಒಡೆದವು ಆನಂದಕೆ ರೆಕ್ಕೆ
ಬಾನಗಲದ ಕಡಲಾಳದ
ಒಂದೇ ಮೌನಕ್ಕೆ.

ಎಲ್ಲೆಲ್ಲೂ ಅಲ್ಲೋಲದ
ಕಲ್ಲೋಲದ ಮಾಲೆ
ಮಿಂಚಿನ ನೀರೆಯು ಪಾಂಗಿದೆ
ನೀರ್ಮಂಚದ ಮೇಲೆ
ಬಯಲಗಲದ ಬಾನ್ಗನ್ನಡಿ ಕನ್ನಡಿಸಿದ ಹಾಗೆ.

ಬಂದ ಸ್ವಸ್ಥತೆ ನಿಲಲಿ

ಬಂದ ಸ್ವಸ್ಥತೆ ನಿಲಲಿ ಮಲೆಯೊಲು, ನೆಲವು ನೆಲೆ ಬಿಡದಂತೆ.
ಧಾತು-ಸ್ಥಿರತೆಯು ಗೂಡ ಕಟ್ಟಲಿ ಇಲ್ಲೆ ತಳ ಹಿಡಿದಂತೆ.
ತಮ್ಮ ಒಲುಮೆಯೆ ತೆರೆದ ಸ್ಮರಣೆ ಹರಕೆಯೊಲು ನೆರಳಾಗಿ
ತಮ್ಮ ಬೆಳಕನು ಈಂಟಿ ಕಟ್ಟಲಿ ಜೀವವೇ ಹರಳಾಗಿ.
ನಸುಕು ತೆರೆದರೆ ನೇಸರಗೆ ತಡವೇನು? ಅಪ ಬಂದಂತೆ.
ತಮ್ಮ ನುಡಿ ಗುಡಿಗಟ್ಟಿದರೆ ಸರಿ ಜಗವೆ ಸೀಸಂಡಂತೆ.

ಅವತರಿಸು ಬಾ

ಅವತರಿಸು ಬಾ ನಾರಾಯಣಾ ॥
ಎತ್ತೆನನ್ನ ಮೇಲಕೆ ಚಿದ್ಘನಾ ॥
ಈ ಜೀವವಾಗಲಿ ಪಾವನಾ ॥

ಈ ಪ್ರಾಣ ತನು ಮನ ದೇವನಾ ॥
ಹಗಲಿರುಳು ಮಾಡಲಿ ಸೇವನಾ ॥
ಆಗಹುದು ಭಗವಜ್ಜೀವನಾ ॥

ಅತ್ಯಂತ ನಿರ್ಮಲ ಪ್ರೇಮವು ॥
ಅದು ಸಹಜ ಜೀವನ ಧಾಮವು ॥
ಅಲ್ಲಿರುವ ಅನ್ನವೆ ಸೋಮವು ॥

ಕಂಡುದನೆ ಒಳಗೊಂಡು

ಕಂಡುದನೆ ಒಳಗೊಂಡು ಉಂಡು ಗರ್ಭೀಕರಿಸಿ
ಹೊರಬರುವ ಮೈಗೊಂಡ ಪಿಂಡ ಬೆಳೆವಂತೆ
ಆಕಾಶಗಂಗಾತಟಾಕ ತೇಜಃಪುಂಜ-
ದಲ್ಲಿ ಒಳಗಿನ ಬೆಡಗೆ ಚುಕ್ಕೆ ಹೊಳೆವಂತೆ.

ಕಾವಾಗಿ ಬೆಳಕಾಗಿ ಮಿಂಚಾಗಿ ಸೀಮೆಯಲಿ
ತಾನು ವಿಶ್ವಂಕರ್ಮ ಘನಸವಾಗಿ
ಬಾನೆ ಮೈ, ನವಿರೆ ನಕ್ಷತ್ರಪಂಕ್ತಿರೆ, ಎಂದು
ಉಸಿರು ಮೈದುಂಬುವದೊ ಕನಸವಾಗಿ?

ಗುರುವೆ, ನಿನ್ನಲ್ಲಿರುವ ಅರುವೆ ತಿಳಿಹಾಲಾಗೆ
ತರುವೆ 'ಕರುವೇ ಬಾರ ತೊರೆವೆ' ಎಂದು,
ಕರೆವಂದು ನವಿಯ ತವಸಿದ್ಧಿಯಾಗಿ ಕರಿಗೊಂಡು
ಈ ಇರುವೆ ತುಂಬುವದು ದಿನ ತುಂಬುವದು.

ಇಂದ್ರಜಾಲ

ಎವೆಯನಿಕ್ಕಿ ಕಣ್ಣಿಂದ ಕಂಡೆ ನಾ ರವಿಯ ತೇಜದಾಟ
ಬಣ್ಣಬಣ್ಣದಾಕೃತಿಗಳಲ್ಲಿ ಕುಣಿಕುಣಿವ ಮೋಡಿ ಮಾಟ.
ಏಳು ಬಣ್ಣ ಉರುಳುರುಳಿ ಉರುಳಿಯಾದಂತೆ ತಿರುಗುತಿಹವು
ಇಂದ್ರಚಾಪವನೆ ತಂತಿಮಾಡಿ ಹೆಣೆದಂತೆ ಮರಳಿ ಬಹವು.

ಎಂಥ ಮಂಜು, ಇದು ಏನು ಹೊಗೆಯು, ಆಹ ಯಾವ ಮೋಡದೊಡ್ಡು
ಬಗೆಯ ಹಗೆಯನನೆ ಹೊಕ್ಕ ಹಾಗೆ ಹರಹುವದು ಮಬ್ಬುಗೊಡ್ಡು.
ಅದರ ಹೊಂಚಿನಲಿ ಮಿಂಚು ಒಂದು ಚಂಚಲಿಸಿ ಅಡಗಲುಂಟು
ಬೆಳಕು ಕತ್ತಲೆಗೆ ಯಾವ ಗಂಟೊ? ಬಂಜೆಯಲಿ ಬೆಸಲ ನಂಟು.

ರಂಗವಲ್ಲಿಯೊಳಗಿಟ್ಟ ಅಕ್ಕಿಗಳು ಬಿಚ್ಚಿ ಕುಣಿವ ಹಾಗೆ
ಅತ್ತ ಸರಿಯುವವು ಇತ್ತ ಹರಿಯುವವು ಎತ್ತೊ ಕೆಳಗೆ ಮೇಗೆ.
ತಪ್ತ ಕಾಂಚನದ ತಗಡಿನಲ್ಲಿ ಬರೆದಂಥ ಜಂತ್ರದಂತೆ
ಯಾವ ಲಿಪಿಯೊ ಇದು, ಏಕೆ ಬಂತೊ ಇಲ್ಲಾವ ತಂತ್ರದಂತೆ?

ಬಿಳಿಯ ಮೋಡಗಳು ಒಟ್ಟುತಿಹವು ಹಿಮಶೈಲ ಕಟ್ಟಿದಂತೆ
ಕರಿಯ ಮೋಡ ಮಿರಿ ಮಿಂಚುತಿಹವು ನವನೀಲ ಹುಟ್ಟಿದಂತೆ.
ಇಲ್ಲಿ ಬಣ್ಣಗಳ ಸಂಗಮವಂಥ ಬಿಳಿ ಬೆಳಕು ಬಂತು ಒಂದು
ನೆನೆಸಿದಂಥ ರೂಪವನು ತೋರುವದು ಕ್ಷಣವೆ ಕಟ್ಟಿ ತಂದು.

ಅದೊ ಕರ್ಣದಲ್ಲಿ, ಒಳುವರ್ಣದಲ್ಲಿ ಸ್ವರವರ್ಣವಲ್ಲಿ ಅರಳಿ
ರಸರಾಗದಲ್ಲಿ ಅನುರಾಗವಲ್ಲಿ ಹೊಸ ಒಲವು ಲಹರಿ ಮರಳಿ.
ಕರೆಯುತಿಹುದು ಬಗಬಗೆಯ ನಗೆಯು ಒಗುಮಿಗುವ ನಾಕದಲ್ಲಿ.
ಗಿಣಿಗಿಣಿಲು ಗಂಟೆ ಮಧುರಸವನೀಂಟಿ ಗಂಧರ್ವಲೋಕದಲ್ಲಿ—

ಮೂರ್ತಿಗೊಂಡ ರೂಪಕವು ಕಾಣದಿದೆ, ಊನ ನ್ಯೂನವೇನೋ!
ತರಳ ಉಪಮೆ ಲವಲವಿಕೆಯಲ್ಲಿ ಉತ್ಪ್ರೇಕ್ಷೆಯಾಯಿತೇನೊ!
ತೇಜವೊಡೆದು ಪರಪುಷ್ಟವಾದ ಗ್ರಹಮಾಲೆಯಾದ ಹಾಗೆ—
ಉತ್ಪ್ರೇಕ್ಷೆಯಂತೆ ಕ್ಷಣಕೊಂದರಂತೆ ತೋರುವದಿದೇಕೊ ನನಗೆ?

ಅಣುವಿನೊಡಲೊಳಗೆ

ಅಣುವಿನೊಡಲೊಳಗೆ ಆಯೆಂದು ಬಾಯ್ದೆರೆದಿರುವ
ಮಹತೋ ಮಹೀಯವೇ! ನಿನ್ನ ಬರವಿನ ಮುಂಚೆ
ಬರುವ ನೆಳಲೋ ಏನೊ, ಇದುವೆ ಕಾಡಿಗೆ ಕರೆವ
ಕಾರ್ಗಾಲ! ಈ ಬೆಳಕು ಸುಡುವ ಸಿಡಿಲೇ ಮಿಂಚೆ?
ಯೌವನದ ನಂದನದ ಸುಕುಮಾರ ಸುಮಗಳನು
ಬಾಳ ಬೇಳುವೆಯ ಬೇಡುವದೆ? ಇದಕೀ ಹವಿಯೊ
ಆಹಾ! ಭವಿಯೊ? ಜಂಗಮಕ್ಕೆ ನೀಡವುಗಳನು
ನಿನ್ನ ದೀಪಾರತಿಯೊ! ರವಿಯೊ? ಕತ್ತಲೆ ಗವಿಯೊ!

ಇಂದ್ರಚಾಪದಿ ಬರೆದ ರಂಗವಲ್ಲಿಯ ತುಳಿದು
ಬರುವ ಪದಪಲ್ಲವದಿ ಹರಿವ ವಿಷ್ವಕ್ ಸೇವ್ಯ
ಜೀವನಜ್ಯೋತಿಯೇ! ನಿನ್ನ ಸತ್ತ್ವವೆ ತಳಿದು
ಮೂರ್ತಿಗೊಳ್ಳುತಲಿಲ್ಲಿ ನವಿರುನವಿಂಗೆ ಕಣ್ಣ
ತೆರೆದು ನೋಡುತ್ತಿರುವ ನವ್ಯವೇ ದಿವ್ಯವೇ!
ಸಾವಿರದ ನಿನ್ನ ಮೊಗದಲ್ಲಿ ಸಾವಿರ ಬಣ್ಣ.

ಪರಮೆ–ತುಂಬಿ

ಕಾಳಿ ಗಾಳಿಯಲಿ ಗಾಡಿಯೇರುತಿರೆ
ಗಾಲಿ ತಿರುಗುತಿಹವು.
ಕಾಲಕಾಲಕೂ ಕಾಲ ತಾಲದಲಿ
ಗೆಜ್ಜೆ ಮಿರುಗುತಿಹವು.

ಪ್ರಾರ್ಥಕೋಟಿ ಜೀವಿಜೀನ ಮಿಂಚುತಿವೆ
ಬಾನಿನೊಡಲಿನಲ್ಲಿ.
ಅಬ್ಜಕೋಟಿ ಬಾಳ್ ಬೀಜ ಸೋಡುತಿವೆ
ಬದುಕುಗಡಲಿನಲ್ಲಿ.

ತುಂಬಿ ಮೊರೆದು ಪರಮೆಯನು ಕರೆಯುತಿದೆ
ತುಂಬು ಬಾಳಿಗಾಗಿ.
ಪರಮ ಜೀವನದ ಜೇನ ಕೂಡಿಸಲು
ಇಂದು ನಾಳೆಗಾಗಿ.

ತಾವು ತಾವು ಇವು ಹೂವು ನೋಡು ಈ
ನಾವು ನೀವು ಕೂಡ.
ಹೂ ಹೂವು ಇವರ ರಸರಸವು ಬೆರೆಯೆ
ಮಧುಪಾಕವಹುದು ನೋಡ.

ಹಾದಿ ಕಾಣದಲಿ ಹಾದಿ ತೆರೆಯುತಿದೆ
ಹಕ್ಕಿ ಹಕ್ಕಿಗಾಗಿ.
ಕೂಗಿ ಕರೆಯುತಿದೆ, ಕುಣಿದು ಒರೆಯುತಿದೆ
ಸಾಕ್ಷಿ ಪಕ್ಷಿಗಾಗಿ.

ಇದು ಯಾವ ಗೀತಿ, ನವರೀತಿಯಲ್ಲಿ
    ಭಯ ಭೀತಿ ತೊರೆದು ಬಂತು?
ನಾಂದಿಯಾಗಿ ನವನಾಟ್ಯ ನಡೆಸಿರಲು
    ವಿಶ್ವ ನಟನೆ ನಿಂತು.

ಸುದರ್ಶನದಲ್ಲಿ

ಮೂರು ಸಪ್ತಕವಾಚೆ ಮೊಳೆತ ನನೆದಸಿಯಿಂದ
ಜೀವಮಂಡಲವು ಪರಿಪೂರ್ಣವಾದಂತೆ
ದೇವಕೇಂದ್ರದಿ ಕದಿರುತಿಪ್ಪ ಆಶೀರ್ವಾದ
ಫಲಿಪ ಸುಮುಸಮಯ ಅಪಶೀರ್ಣವಾದಂತೆ
ಮೂಡಲಿನ ಕಡಲಿನಲಿ ಆಲ್ಲೋಲ ಕಲ್ಲೋಲ
ಮಂತ್ರಪುಷ್ಪದ ವೇದಘೋಷವಾದಂತೆ
ವಿಶ್ವಮಾತೆಯು ಪ್ರಾರ್ಥನೆಯು ಕೇಳಿ ಶಾಂತಿ ಸಾ-
ಗರದ ಬಸಿರಲ್ಲಿ ಸಂತೋಷವಾದಂತೆ
ಕೃಷ್ಣವರ್ಣದ ವಾಸುದೇವ ಬೀರಿದ ಬೆಳಕು
ಘನನೀಲ ಗಗನದಲಿ ಸೋಸಿ ಬಂದಂತೆ
ನೀಲಘನವೃಷ್ಟಿಯನ್ನುಂಡಾ ವಸುಂಧರೆಯು
ಹಸಿರಿನಲಿ ಕಾಮನನೆ ಹಣೆದು ತಂದಂತೆ
ಮೂಲವರ್ಣವದೊಂದು ನೀಲಿ ಬಣ್ಣದ ಆಚೆ
ಚಾಚುತಿದೆ ಹೊಸ ನಸುಕು ಮೂಡಲಿರುವಂತೆ.
ಆ ಸುದರ್ಶನವಲ್ಲಿ ನವರಾಗರೇಖೆಯಿರೆ
ಕಣ್ಮುಚ್ಚಿ ಲೋಕವಿದೆ ಮೂಢರಿರುವಂತೆ.

ಆತ್ಮಪ್ರಜ್ಞೆ

ಆ ಆತ್ಮಪ್ರಜ್ಞೆ ದಿಗ್ದೇಶ ಮುಟ್ಟಿ ಎಂಟೆದೆಯೆ ರೂಪ ತಳೆದು
ಅಗೋ! ಬ್ರಹ್ಮಬಿಂದು ಚೈತನ್ಯದಿಂದ ಷಡ್ಗುಣಿಸಿ ಘನದಿ ಬೆಳೆದು
ಈ ಕಾಲಕಾಲಕೂ ವಿಶ್ವಪ್ರಜ್ಞೆ ಆದಿತ್ಯರಂತೆ ಬೆಳಗೆ
ಋತುಮಾನದಲ್ಲಿ ಚಾತುರ್ಯಗೊಂಡು ನಲಿಯುವೆವು ಹೊರಗೆ ಒಳಗೆ.

ತಾನಿರುವದೊಂದು ತಾನರಿವದೊಂದು, ಎರಡೊಂದು ಪಿಂಡಗೊಂಡು
ಮುವವಾಗಿ ನಲಿದು, ತಕ್ಕೈಸಿ ಒಲಿದು, ಎದೆಹಾಲನುಂಡುಕೊಂಡು
ಸ್ಥಿತಪ್ರಜ್ಞೆಯಲ್ಲಿ ಸಂಚರಿಸಲೆಂದು ವಿಜ್ಞಾನ ನೇತ್ರವಾಗಿ.
ಮನಪ್ರಾಣಗಳಲಿ ಮೈಯಾಡಿಸುವದು ಸುಜ್ಞಾನನಕ್ಷತ್ರವಾಗಿ.

ಬಯಲಾಗಿ ಒಳಗೆ, ಬಾನಾಗಿ ಹೊರಗೆ, ಇಹುದೊಂದೆ ಜ್ಯೋತಿಯಣ್ಣ;
ಗಾಳಿಯಲಿ ಸುತ್ತಿ ಬೆಳಕಾಗಿ ಮುತ್ತಿ ತೆರೆಯುವದು ಏಳು ಬಣ್ಣ.
ಮೇಲಿಂದ ಬಂದು ಕೆಳಗಿಳಿದುಕೊಂಡು ಮೆಟ್ಟಿಲವ ನೆಲಿಸುತಿಹುದು;
ಬೆನ್ನಾಗಿ ಹಿಂದೆ, ಮೈಯಾಗಿ ಮುಂದೆ ಅಂಗಾಂಗ ಒಲಿಸುತಿಹುದು.

ಬಲಕ್ಕೊಮ್ಮೆ ಒಲೆದು, ಎಡಕ್ಕೊಮ್ಮೆ ಚಲಿಸಿ, ಸಮತೂಕ ಕಲಿಸುತಿಹುದು.
ಆನಂದ ಪ್ರಕೃತಿ ಚಿತ್‌ಪುರುಷನಿಂದ ಸತ್‌ಪುತ್ರ ಸಲಿಸುತಿಹುದು.
ಈ ಗಂಧಮೂರ್ತಿ ರುಚಿಗೊಂಡು ಕೀರ್ತಿ ಏಳ್ಬಣ್ಣ ಪಿಂಡವಾಗಿ
ಬ್ರಹ್ಮಾಂಡ ಸ್ಪರ್ಶ ಪಡೆದಿರುವ ಪಕ್ಷಿ ಹಾಡಲಿ ಅಖಂಡವಾಗಿ.

ಮಧ್ವ

ಹಸಿವೆಯೋ ಹಸಿನಾತವೆಂದು ಭೂತಪ್ರೇತ
ಯೋಸಿಯೋಸಿಯ ತಿರುಗಿ ಕಳೆದೆ ದ್ವಾಪರ ತ್ರೇತ;
ಪಂಚೇಂದ್ರಿಯದ ಪಂಚ ಬಾಣಗಳ ಬೆನ್ನೇರಿ
ಉಂಡುದನೆ ಉಂಡು ಕಂಡುದ ಕಂಡು ಮನಸಾರಿ
ಬಂದೆಸಿದೊ ನಾನಹಂಕಾರಶಿಖರಕೆ ಹಾರಿ
ಮುಂದುಗಾಣದೆ ಗಾಣದೆತ್ತಿನೊಲು ತಿರುಗುತ್ತ
ಬಯಲ ಬಸಿರಿನ ಬಟ್ಟೆ ಎತ್ತೊ ಎತ್ತೋ ಎನುತ
ರೆಕ್ಕೆಯೊಡೆಯದ ಹಕ್ಕಿಮರಿಯಂತೆ ದಿಟ್ಟಿಸುತ.

ನನ್ನ ಪ್ರಾಣಸ್ಪಂದದೊಂದಿಗೇ ಮಿಣುಕುತಿಹ
ಅಂತರಿಕ್ಷದ ಅಂತರಾಳದಾಳದ ಚುಕ್ಕೆ!
ಚೆಲುವಕ್ಕೆ ನಲಿವಕ್ಕೆ ಬಲವು ಒಲವುಗಳಕ್ಕೆ
ಶುಭಮುಕ್ಕೆ ನಮ್ಮ ದೃಷ್ಟಾದೃಷ್ಟಿ ಯೋಗಕ್ಕೆ.
ಉದಯಿಸಲಿ ಹೃದಯಗಹ್ವರದಿಂದ ಮೇಲ್ದೋರ
ಆನಂದತೀರ್ಥದಲಿ ಮಿಂದ ಮಧ್ವ ಅಪಾರ!

ಮೋದ ಹರುಷದ ಸಸಿ

ಮೋದ ಹರುಷದ ಸಸಿಯು, ಮತ್ತೆ ಪ್ರ-
ಮೋದ ಬಿದಿಗೆಯ ಶಶಿಯು, ಪ್ರಿಯದ ವಿ-
ನೋದ ಹಿಗ್ಗಿನ ಹಸಿವು, ನಂದಾನಂದವೇ ಪ್ರಾಣ.
ಊದುತಿದೆ ಉಸಿರಾಡುತಿದೆ ಬ್ರ-
ಹ್ಮಾದಿ ತೃಣಪರ್ಯಂತ ಒಂದೇ
ನಾದ ಅಹಮುನ್ಮಾದ ಬ್ರಹ್ಮಾಸ್ವಾದ ನಿರ್ಘೋಷ.

ಕಮಲ ವನ ಪರಳಿಹುದು ತುದಿ ಮೊದ-
ಲಮಲಸಾರಸ್ವತದ ಗೀತದ
ವಿಮಲ ಪರಮಾಮೋದ ಬೋಧದ ನಿಧಿಯೆ ತೆರೆದಂತೆ;
ಮಮತೆ ಸಮತೆಯಲಡಗಿ ನಿಂತಿತು;
ಭ್ರಮಣ ಮಾರ್ಗಕ್ರಮಣ ಮಧುವನ
ಗಮನ ನುಡಿಸುತ್ತಿಹುದು ಝೇಂಕಾರದೊಳೆ ಓಂಕಾರ.

ಎದೆಗೆಯೆದೆ ಕರೆದಂತೆ, ಹೃದಯದ
ಉದಧಿ ತೆರೆತೆರೆ ಹರಿದು, ಹರುಷದ
ವಿಧವಿಧದ ಚೆಲ್ಲಾಟ ಮಾಟವು ಅಲ್ಲೆ ನೆರೆದಂತೆ,
ವಿಧಿಯ ಯಾವ ವಿಲಾಸಲಾಸ್ಯವೊ
ಕದಿಯುತಿದೆ ಹೃನ್ಮನದ ಬಿಸದವ;
ಅದು ಅದೋ ದಿಕ್ಕೆಲ್ಲ ಒಂದೇ ನಾದ ಪಡಿಸಾದ.

ನೀರು

ಚಣಚಣಕು ತಣಿವಿಲ್ಲ, ಏನಿದು ಯಾವ ನೀರಿನ ಕಳಕಳ?
ಏಕೊ ಮೊರೆಯುತ ಎತ್ತೊ ಹರಿಯುತ ಅಳುತಲಿಹುದೇ ಕಳವಳ?

ನೆಲದ ಎದೆಬಿಸಿನೀರು ಕಂಬನಿಗಡಲ ಒಡಲಿಗೆ ಅರ್ಪಣ,
ಯಾವ ಶ್ರದ್ಧಾಬುದ್ಧಿ ಕೊಡುತಿದೆ ತೀರಲಾರದ ತರ್ಪಣ?
ಉಗಮದಲಿ ತೋಡುವದು ಯಾರೋ ಎದೆಯ ಆಳದ ಜಲಹರಿ?
ಜಲಧಿ ಕಲ್ಲೋಲದಲಿ ಕೂಡಲಾಗ್ಲಿ ಮುಗಿವುದು ಈ ಪರಿ.
ನಿಲ್ಲಲಾರದ ಚಂಚಲತೆಯೇ ತೊರೆಯ ಹೆಸರಿಗೆ ಆಸರ.
ಜಲಕೆ ಜಡವೆನಲೆಂತು? ಇದಕೇ ಇಲ್ಲ ಹರಿಯುವ ಬೇಸರ.
ಅದರೂ ಇಷ್ಟೇಕೆ ಇಹುದೋ ತಂಪುನೀರಿಗೆ ತಳಮಳ?
ಮುಗಿಲುಗನ್ನಡಿ ಬಿಡಿಸಿದಂತಿಹ ಜಲದ ನೈಯಿದೆ ಜಳಜಳ.
ಮೋಡ ಎರೆವುದು ಮಳೆಯ ತಲೆಯಲಿ, ಬೆಟ್ಟ ಸುರಿವುದು ಕೊಳ್ಳಕೆ,
ಕೊಳ್ಳ ತೊರೆವುದು ನದಿಗೆ, ಎಲ್ಲವು ಮತ್ತೆ ಕಡಲಿನ ಹಳ್ಳಕೆ.
ಸೂರ್ಯರಶ್ಮಿಯು ನೀರ ಹೀರುವದಣ್ಣ ಬಾನಿನ ಎರಿಗೆ.
ನೆಲವೆ ನೀರಡಿಸಿರಲು ಕರೆವುದು ಗಿಡಮರದ ತಾಯ್ಬೇರಿಗೆ.

ಜನ್ಮಮರಣದ ಚಕ್ರವಂತಿದೆ ವಕ್ರಮಾರ್ಗವು ನೀರಿಗೆ.
ಬೇಕು ಈ ಅಭಿಸರಣದಂದದ ಅಧಃಪತನವು ಯಾರಿಗೆ?

ತಿರೆಯ ಎದೆಯೊಳಗಿರುವ ಕಂಪಿನ ಅಲರನರಳಿಸಲಾಗಿಯೋ
ಅರಳ ಬಸಿರಲಿ ಕಾತು ಪಾಡನು ಪಡೆದು ಕಾಲಕೆ ಮಾಗಿಯೋ
ಹಣ್ಣುರಸವೆನಿಸುತ್ತ ಜೀವದ ಹಸಿವ ತಣಿಸಲು ಬರುವೆಯಾ?
ರಕ್ತದಲಿ ಒಂದಾಗಿ ಹೃದಯದಿ ಮತ್ತೆ ನಲಿವನು ತರುವೆಯಾ?

ಎಲೆಲೆ ನೀರೇ, ದೂರದೀ ಗುರಿ ಈ ಪ್ರವಾಹದಿ ನೆಲೆಸಿದೆ.
ಅಂತೆಯೇ ನಿನ್ನೊಳಗಿನೊಳಗಿನ ಸ್ಥೈರ್ಯ ವೈಯಲಿ ಚಲಿಸಿದೆ.

ನಿನ್ನ ಜೀವವ ಕುಡಿದು ಸುತ್ತಗೊ ಮಣ್ಣ ತುಂಬಿದೆ ಜೀವನಾ.
ಬೆಳಕಿಗೆತ್ತಲು ಕಣ್ಣ ತೆರೆದಿದೆ ಹುಡುಕ ಬಯಸಿದೆ ದೇವನಾ.

ತಾಯಿ ಎದೆಸೆರಗನ್ನು ಅವಚಿರುವಂಥ ಕೂಸಿನ ಅಂದದಿ
ಬೇರ ಹಿಡಿಯಲಿ ತಿರೆಯ ಹಿಡಿಯುತ ಮೊಗವ ತಿರುಹಿದೆ ಚೆಂದದಿ.

ಪಲ್ಲವಿಸಿ ಹೂವಾಗಿ ಹರುಹಿದೆ ಹಸಿರು ಪ್ರಾಣದ ಹಂದರಾ.
ಕತ್ತಲೆಯ ಗರ್ಭವನೆ ಬೆಳಗಿಸಬಂದವನಗೊ ಆ ಚಂದಿರಾ.

ನೀರ ದಂಡೆಗೆ ಹಸಿರು ಎದ್ದಿದೆ ಗಾಳಿಗಿದೊ ತಲೆದೂಗುತ,
ಮರಮರವು ಮರ್ಮರಿಸುತಿದೆ ಹವಣಾಗಿ ಬಳುಕುತ ಬಾಗುತ.
ತಲೆಯಲಲೆದರು ಬುಡದೊಳಿದೆ ನೆಲೆಗೊಂಡ ನಿಲವಿನ ನಿಕ್ಕಳ.
ಮರದ ನೆಲೆ ನೋಡುವದು ನಡುಗಿಸಿ ಸ್ಥಿರದ–ಚಂಚಲದಿಕ್ಕಳ.

ಮೈಯು ಮುಳ್ಳಿಡಬಹುದು ಆದರು ಮನದೊಳಗೆ ಇದೆ ಧೈರ್ಯವು.
ನಡುಕದಲ್ಲಿಯು ಉಡುಗಲಾರದ ವೀರ್ಯವೇ ಸೈ ಸ್ಥೈರ್ಯವು.
ಹರಿವ ಹೊಳೆಗಳ ಆಚೆ ನಡುಗುವ ಮರಗಳಾಚೆಗೆ ಒಳಗಿದೆ.
ಮರದ ನಡುವಿನ ಬಯಲು ಸುತ್ತಿನ ಬನದ ಒಳಗನೆ ಬೆಳಗಿದೆ.

ಬೆಳಕು ತುಂಬಿದೆ ಒಡಲಲು

ಬೆಳಕು ತುಂಬಿದೆ ಒಡಲಲು
ತುಂಬುಹಾಲಿನ ಕಡಲೊಳು
ಬೆನ್ಗೆ ಇಳಿಸುತ ಪೃಥ್ವಿಯ ಭಾರವ, ತಲೆಗೆ ನೀಡುತ ಹೆಡೆಯನು,
ಹಾವು-ಜೀವವು ಎತ್ತಿ ಹಿಡಿದಿದೆ ಕೋಟಿ ಮಣಿಗಳ ಕೊಡೆಯನು

ಪ್ರಾಣಪತಿ ಜೀವೇಶ ಹೃದಯದಧೀಶ ಅಂತರ್ಯಾಮಿಯು
ಗುಟ್ಟಿನೊಳು ಸುಪ್ರೇಮಿಯು
ಹುಟ್ಟಿಗೆಲ್ಲಕು ಸ್ವಾಮಿಯು
ನಿದ್ದೆ ಮರೆಯಲಿ ಎದ್ದಿರುವನು ಸರ್ವಕಾಮದ ಕಾಮಿಯು.

ಮುಕ್ತಲಯದಲಿ ನಡೆಯುತ
ಛಂದಭಾವಕೆ ಒಲಿಯುವಂದದಿ ನಮ್ಮ ಒಲುಮೆಗೆ ಒಲಿಯುತ
ಭಕ್ತಿ ತಾಲವ ಹಿಡಿಯುತ
ಜ್ಞಾನತೇಜದ ಗೊಂಬೆ ಮಾಡುವ ತನ್ನ ಲೀಲೆಗೆ ನಲಿಯುತ.

ಶ್ರೀವಿಶ್ವನಲ್ಲಿ ಯಜಮಾನನಾಗಿ

ಶ್ರೀ ವಿಶ್ವನಲ್ಲಿ ಯಜಮಾನನಾಗಿ ಜೀವಾತ್ಮ ನಾನು ಬಂದೆ.
ಇಗೊ ಚಿತ್ತವಲ್ಲಿ ಪುರುಷಾತ್ಮಗಾಗಿ ಚೈತ್ಯಾಗ್ನಿ ಹೊತ್ತಿತೆಂದೆ.
ಉಸುರುಸುರಿನಲ್ಲಿ ಪ್ರಾಣವನೆ ನಿನಗೆ ಆಹುತಿಗಳಾಗಿ ತಂದೆ.
ಬಾ ದೇವ ಬಾರೊ, ಮಹದೇವ ಬಾರೊ, ಬಾ ವಾಸುದೇವ ತಂದೆ.

ಈ ಜೀವ-ಚೈತ್ಯವನೆ ಗುಡಿಯ ಮಾಡಿ ನಿಂತಿರುವ ನನ್ನ ದೇವ,
ನನ್ನೊಳಗು ಹೊರಗು ನೀ ಬಲ್ಲೆ ಜೀಯ ಕ್ಷೇತ್ರಜ್ಞ ಜೀವಜೀವ.
ಮಹಮೂರ್ತಿ ಮಾಡು, ಅಚ್ಚೊತ್ತು ಎತ್ತು ಗುರುಪಾದದಲ್ಲಿ ನನ್ನ
ಎಚ್ಚತ್ತು ನಿಂತ ಭಗವಂತ ಇನ್ನು ತಡವೇಕೆ ನನ್ನ ಚೆನ್ನ?

ಎಷ್ಟೊತ್ತು ನಾನು ಮೊಗಹಾಕಿ ಕೆಳಗೆ ನೋಡುವೆನು ನೀರಿನಲ್ಲಿ;
ಕಂಡಂತೆ ಏನೊ ಕಾಣುವದೊ ಮೂಲ ಕಳೆಯಿಲ್ಲವೇನೊ ಅಲ್ಲಿ?
ಮೊಗವೆತ್ತಿ ನನ್ನ ಮುತ್ತಿಟ್ಟು ನಿನ್ನ ಮೊಗದೋರು ಬೇಗ ಚೆನ್ನ.
ನೀ ಬಿಂಬನಿರಲು ಪ್ರತಿಬಿಂಬವೇಕೆ, ಬಾ ತುಂಬ ತುಂಬು ನನ್ನ.

ನಿನ್ನ ಕೃಪೆಯ ಇಳಿಬೆಳಕಿನಲ್ಲಿ ಸುಳಿಯೇರಿ ಬಂತು ಪ್ರೀತಿ.
ಜನರ ನೀತಿಯಲಿ ಹೂತು ಬಂತು ಹೊಸದೊಂದು ಜೀವರೀತಿ.
ಸಾಕು ತಾಯಿ ಈ ಹೂವುಗಳನು ಫಲ ಪಕ್ವವಾಗುವಂತೆ.
ಅಣ್ಣ ತಮ್ಮದಿರ ಕಾಯಬೇಕು ಹುಲುದೃಷ್ಟಿ ತಾಗದಂತೆ.

ಮೃತ್ಯುಯ ತೆರೆಯ ತೆರೆದದ್ದೆ, ಉಸಿರ ನೀಳಿದ್ದೆ ಬಂದೆ ತಡವು
ಬಗೆಬಗೆಯ ಬಗೆದು, ಬಾನೆಲರ ನೆಗೆದು ಜೀವಂತವಾಗಿ ಜಡವು
ಇದೊ ಭಿನ್ನಕಿರಣ, ಇಗೊ ನನ್ನ ಹರಣ, ಅಗೊ, ನಿನ್ನ ಚರಣಕಾಗಿ
ಎಲೆ ತಂದೆ, ಬಂತು ಎದೆಗೊಡಗಿ ನಿಂತ ತಾಯ್ನೆರಗ ಸೇರಲಾಗಿ.

ನಂಬಿಗೆಯೆ ತಾಯಿ, ನಂಬಿಗೆಯೆ ಬಸಿರು, ನಂಬಿಗೆಯೆ ಪಿಂಡವಣ್ಣ.
ನಂಬಿಗೆಯೆ ಹುಟ್ಟು, ನಂಬಿಗೆಯ ಕಟ್ಟು, ನಂಬಿಗೆಯು ಪಡೆದು ಕಣ್ಣ,
ತಂಬಿಗಿಯ ಒಳಗೆ ತುಂಬಿರುವ ನೀರೆ ವರಶಕ್ತಿ ಎನಿಸುವಂತೆ
ಆಳಾಗಿ ಹೊರಟು ಆಳುವದು ಜಗವ ಪೆರುಮಾಳೆ ಜನಿಸುವಂತೆ.

ಏಸಗಲ ಚೆಲುವು ಆಸಗಲ ಹಿಗ್ಗು ಉಕ್ಕುಕ್ಕುತಿರಲು ಇಲ್ಲಿ
ಬಾನರಳು ಏನು ನೀರ್ಮಾನವೇನು ನೆಲಹೂವು ಏನು ಅಲ್ಲಿ
ಉಪಿತಾರ್ನವೆಲ್ಲ ರಸಗಾನ ಜಗವು ಜೀವಂತ ಮೌನವೆನಿಸೆ
ಹೊರಗೆಲ್ಲ ಒಳಗು ಒಳಗೆಲ್ಲ ಹೊರಗು ನೀನೆನಿಸೆ ಜನಿಸೆ ನೆನೆಸೆ.

ತಮವನೆಲ್ಲ ತಳಸೋಸಿ ಮಾಡು ಸ್ಥಿರಶಾಂತಿ ಕಾಂತಿಯಾಗಿ.
ರಜವ ಮಾಡು ಸಹಭಕ್ತಿಯಾಗಿ ಚಿರಜೀವಸತ್ತ್ವವಾಗಿ.
ಮನವನೊಪ್ಪಿಸಿದೆ ನಿನ್ನ ನಾಲಗೆಗೆ ಆಗು ನನ್ನ ಬಾಯಿ.
ಮನೆಯನೊಪ್ಪಿಸಿದೆ ಪಾದದಲ್ಲಿ, ತೀರಿದಂತೆ ಮಾಡು ತಾಯಿ.

ವೈಯು ನೀನು

ವೈಯು ನೀನು, ನೀ ಮಿಡುಕ, ಸನ್ನ ಒಳುಬಗೆಯ ತಿಳಲು ನೀನು.
ಇರೆಯು ತೊರೆಯು, ನೀ ನೀರೆ ನೀರೆ ರಸರಸವು ಹಾಲುಜೇನು.
ನಿನ್ನಲ್ಲಿ ಅಲ್ಲದೆಲ್ಲೆಲ್ಲು ನನಗೆ ವೈಷಮ್ಯ ಕಂಡುಬರಲಿ.
ತಾಯಿ ನಿನ್ನ ಒಳಲೊಡನೆ ಮಾತ್ರ, ಈ ಜೀವ ಸಾಮ್ಯವಿರಲಿ.

ತಾಳಬೇಕು ನಾ; ಬಾಳಬೇಕು ನೀ; ಇಳಿಯಬೇಕು ಆತ.
ಆತನಿಂದಲೇ ಆತ್ಮವಾಗಿ ತಂತಾನೆ ಜೀವಜಾತ
ಒಳ್ಳಿತನದ ಉಳ್ಳೊಡೆಯರಾಗಿ ಆದರಾಕೆವಾಳರಾಗಿ
ಇಳೆಯ ಬಾಳನೇ ಮರೆಸಲಾರೆವೇ ಬಾನ ಮೀನರಾಗಿ ?

ಬಗೆಯಬೇಕು, ಒಳುತಿಳಿವು ಬೇಕು, ಕುರಿತರಿವು ಬೇಕು ಕೊನೆಗೆ.
ಮಿಂಗಡವು ಬಾಳ ಸಂಗಡವೆ ಬೇಕು, ಪಂಗಡವು ಏಕೆ ನನಗೆ?
ಒಳುವೆಲ್ಲ ನನಗೆ ಒಳಿತಾಗಿ ತೋರಿ ಒಲವತ್ತ ಹರಿಯುತಿರಲಿ.
ಒಲಿದದ್ದೆ ಒಳಿತು ಎಂಬಂತೆ ಜೀವ ಕುಣಿಕುಣಿವ ಅರಿವು ಇರಲಿ.

ಕಲ್ಲಾಗಲೇನು ಹೊಲ್ಲಾಗಲೇನು ಅದು ಬಲ್ಲತನಕೆ ಸಲ್ಲ.
ಆ ನಲ್ಲೆ ತಾನು ಇರುವಲ್ಲೆ ನಿತ್ಯ ಇರುತಿಹನು ಒಬ್ಬನಲ್ಲ.
ಅಸವಸವು ಬೇಡ, ರಸಕಸಿಯು ಬೇಡ, ಹೊಸರಸಿಕವೃತ್ತಿ ಬೇಕು.
ಕಲಿಗೆಲ್ಲೆಯಿಲ್ಲ, ಕಾಲನಿಗೆ ಉಂಟು; ಸ್ಮರಣೆಯ ಇರವೆ ಸಾಕು.

ಬೇಕು ಬೇಡ ಈ ಎರಡರೊಳಗೆ ಅರಿವೆಲ್ಲ ಅಡಗಿ ಇಹುದು.
ಆ ಅರಿವಿನಲ್ಲಿ ಇರವಾಗೆ ನೀನು ನಾನೇನೊ ಬದುಕಬಹುದು.
ನಿನಗೇನು ಬೇಕು ಅದು ನನಗೆ ಬೇಕು, ಬೇಡಾದುದೆನಗೆ ಬೇಡ.
ಈ ಜ್ಞಾನಪಿಂಡ ಬೆಳೆಯುತ್ತ ಬರಲಿ, ಹುಟ್ಟಾನೆ ಮಾತೃಮೂಢ.

ಜೊಂಪಿಸಿತ್ತು ಮಣ್ಣು

ಜೊಂಪಿಸಿತ್ತು ಮಣ್ಣು ಮಣ್ಣು
ಎವೆ ತೆರೆಯದ ಕೂಸು-ಕಣ್ಣು
ಮೊಳಕೆ ಬರದ ಗಣಿಕೆಗಣ್ಣು
ಎಲ್ಲೊ ಇತ್ತು ಚಿಗುರುಬಣ್ಣ
ಹೂಹೂವಿನ ಚಿತ್ರವರ್ಣ
ನಿದ್ರಿಸುತಿದೆ ಕಂಪಕಂಪ
ಅಡಗಿದೆ ಎಲೆ ಪಸರ ಜೊಂಪ
ಸವಿ ನುಂಗಿದೆ ತನ್ನ ಹಂಪ
ಬಸಿರು ಬಯಲು ಪ್ರೊಳ್ಳುಗುಂಭ
ಬಂಜೆಗಾಳಿ ಅದರ ತುಂಬ
ಜಪಿಸುತಿರೋ ಶಪಿಸದಿರು
ಕುಪಿಸದಿರೋ ತಪಿಸುತಿರು
ಉಸಿರು ಮಸೆದ ಉರಿಯು ಆಗ
ಬೇಗೆ ಹತ್ತಿದಂತೆ ಬೇಗ
ತಲೆ ಮೊಳೆವುದು ಬಿದ್ದ ಬಿತ್ತು;
ಸಿಂಪಿ ತೆರೆದು ಬಹುದು ಮುತ್ತು.
ಅಲ್ಲಿವರೆಗು ಮೌನ ಗುರು.
ಅದರ ಶಿಷ್ಯ ನೀನಾಗಿರು.

ನೋವೋ ನೋವು

ಓಹೋ ನೋವು ನೋವೋ ನೋವು
ಜೀವವೆ ಇಲ್ಲದ ಒಣಒಣ ಸಾವು;
ಕಾಯದ ಕಾಯುವ ಬಂಜೆಯ ಹೂವು
ಪೊರೆಯಿದೆ; ಹೋಗಿದೆ ಎಲ್ಲೋ ಹಾವು.

ನಾನೆನ್ನದು ನನೆಯದ ಹುಸಿ ಜೀವ
ತಾನಿಗೆ ಸಾಕಾಗದು ತುಸು ಭಾವ
ಜೊಳ್ಳೋ ಜೊಟ್ಟ, ಟೊಕ್ಕನೆ ಖೊಟ್ಟ
ಹುರುಳಿಲ್ಲದ ಬರಿ ಶಬ್ದವು ಹುಟ್ಟ
ಎಣಿಸಿದರೇನದು, ಗುಣಿಸಿದರೇನು?
ತಲೆಕೆರೆ ತುಂಬಾ ಸೀರೂ ಹೇನೂ!

ಧೃಷ್ಟಬುದ್ಧಿಯಿದೆ ಕುಂತಲದಲ್ಲಿ;
ಮದನವಿಷಯೆ ಆವರಾಡುವರಲ್ಲಿ.
ಬಾನಿನಲ್ಲಿ ಘನಛಾಯೆಯು ಇಲ್ಲ;
ಕೃಷ್ಣ ಕಾಣದೇ ಮಾಯೆಯು ಹೊಲ್ಲ.
ನೋವಿನಲ್ಲಿ ನೋಂಪಿಯ ಹಸಿ ಬೇಕು;
ಜೀವಕೆ ಜೀವನ ರಸ–ಕಸಿ ಬೇಕು.
ಮಂತಣದಲ್ಲಿಯು ಚಿಂತನವಿರಲಿ;
ಚಿತ್ತವು ಒಳಗನು ಚಿತ್ರಿಸಿ ಇರಲಿ.
ತಂತಿ ತಂತಿ ತಂತನದ ವಿತಾನಾ
ಹಾಸು ಹೊಕ್ಕು ಮುಂಮೌನಾ ಗಾನಾ!

ಪ್ರಾಣಪಕ್ಷಿ

ಕಣ್ಣು ಕಾಮಾಕ್ಷಿ, ಮನವು ಮೀನಾಕ್ಷಿ,
ಚಿತ್ತ ಚೈತ್ಯ ಸಾಕ್ಷಿ;
ಪಕ್ಷಪುಚ್ಛ ಪೈ ಚೂಚು ಚಾಚಿದರು
ಬೇರೆ ಪ್ರಾಣಪಕ್ಷಿ;

ದೃಷ್ಟಿ ದಿಟವೆಂಬೆ, ಸೃಷ್ಟಿ ಸಟೆಯೆಂಬೆ,
ದೃಷ್ಟ ನಷ್ಟವೆಂಬೆ.
ಕಾಂಬುವನ ನಂಬೆ, ಹುಸಿ ಚಿಗುರ ಕೊಂಬೆ,
ಓ ಹೇಡಿ–ಮಣ್ಣ ಗೊಂಬೆ!

ಕಿಡಿ ಇಲ್ಲವಲ್ಲ ಹುಡಿ ಒಡೆವುದೆಂತು?
ಮಿಡಿ ಹಿಡಿವುದೆಂತೊ ಕಾಣೆ,
ತಂತಿ ಝಣಗುಡದ ಪೊಳ್ಳು ಸೊಟ್ಟ
ಎನಿಸೀತು ಹೇಗೆ ವೀಣೆ?

ರಕ್ತಾಕ್ಷಿ

ರಕ್ತಾಕ್ಷಿ ರಕ್ತಾಕ್ಷಿ ಭೌತಬಿನ್ನಣದಕ್ಷಿ
ಹಾರಿಸಲಿ ಬಾರಿಸಲಿ ಮಾತಿನ ಪಟಾಕ್ಷಿ.
ಇರುಳು–ಕುತ್ತಕೆ ಅತ್ತ ಹೊತ್ತುರುಳಿಸಿತು ಕತ್ತು.
ಬಂಜೆ ಸಂಜೆಯು ಸುತ್ತುಮುತ್ತು ಗುಲಬಾಕ್ಷಿ.

ಕರಿಗೊರಳ ಸುತ್ತ ಹಾವಿನ ಹುತ್ತ, ಕೆಳಗಿತ್ತ
        ಜೋತಾಡುತಿದೆ ತಾನೆ ಒಂಟಿ ರುದ್ರಾಕ್ಷಿ.
ಬೆಳ್ಳಿ ಬೆಳಗಲಿ ಕಾಕ–ನಿಶೆಯಲ್ಲಿ ದಿಶೆಯಲ್ಲಿ
        ಧ್ರುವನ ಆನಂತ್ಯಕ್ಕೆ ಕೂಟಸಾಕ್ಷಿ.

ಆ ರಕ್ಷಿ ಈ ರಕ್ಷಿ ದಿವ್ಯಮಾತೆಯ ರಕ್ಷಿ.
ಹಿಮನಗದ ಜಗದ ಸೌಭಾಗ್ಯ ಯಕ್ಷಿ.

ಮುಗಿದಿತ್ತು ಬೀದಿಮಾತು

ನೆಲ ಹೊರಳುತಿತ್ತು
ಸೀರುದುಳುತಿತ್ತು
ಬೆಳಕರಳುತಿತ್ತು ಆಗ.

ಬಿರುಗಾಳಿ ಧೂಳಿ
ಆಕಾಶ ಕಾಳಿ
ಎತ್ತಿತ್ತು ಅಪ್ಪರಾಗ.

ಅಬ್ಬಬ್ಬ ಚುಕ್ಕೆ
ಏನೊಂದು ದಿಕ್ಕೆ
ಬಾನೆಲ್ಲ ತೂತು ತೂತು.

ಬೆಂಕೆಲ್ಲ ಹೂತು
ಮೌನಕ್ಕೆ ಸೋತು
ಮುಗಿದಿತ್ತು ಬೀದಿ–ಮಾತು.

ಹಸುಗೂಸೋ ಇದು !

ಹಸುಗೂಸೋ ಇದು ಹೊಸಗೂಸೋ ಇದು
ಮಾಸಿಲ್ಲ, ಇದ ಮೂಸಿಲ್ಲ.
ಹೊಸ ಬಗೆ ನಸುನಗೆ ಗಾಳಿಯ ದಾಳಿಯು
ಬೀಸಿಲ್ಲ, ಇದ ಕಾಸಿಲ್ಲ.

ಕಳೆ ಮೀರಿದ ಬೆಳೆ, ಅಪರೂಪದ ತೊಳೆ
ಬಿಚ್ಚಿಲ್ಲ, ಇದ ಮುಚ್ಚಿಲ್ಲ.
ಬಾಳ ಕೋಣೆಯೊಳು ಬಿಸಿಲುಕೋಲು ಇದು
ಬಿತ್ತಿಲ್ಲ, ಇದ ಕೆತ್ತಿಲ್ಲ.

ಆವ ತಪದೊ ಅನುಭವಿಸಿದವರೆ ಇದ
ತಿಳಿದಿಲ್ಲ, ಇಳೆಗಿಳಿದಿಲ್ಲ.
ಅಲ್ಲವೆನಲಿ ಅಹುದೆನಲಿ ಬಿಡಲಿ ಇದು
ಮಾತಿನ ತೊಡಿಗೆಯ ತೊಟ್ಟಿಲ್ಲ,
ಅದ ಬಿಟ್ಟಿಲ್ಲ.

ಒಂದು–ಹಲವು

To be or become something, to bring something into being is the whole labour of the force of Nature.

—Sri Aurobindo

ಇರುವುದೊಂದೆ ನೆರೆದು ಮುಂದೆ ಹಲವು ಫಲವ ಪಡೆವುದು.
ಅರಿವುದೊಂದೆ ಬೆರೆತುಕೊಂಡೆ ಒಗ್ಗ ಪಡೆದು ನಡೆವುದು.
ಬೀಜದಲ್ಲಿ ಮರಗಳಲ್ಲಿ ಜನನಿಪ್ರಕೃತಿ ಮೆರೆವಳು.
ಅರಿವಿನಲ್ಲಿ ಇರವ ಬೆಳೆಸಿ ಜನಕಪುರುಷ ತೆರೆವನು.

ಮನದ ಗಂಟ ಕಟ್ಟಿಕೊಂಡು
ಬೆನ್ನಮೇಲೆ ಹೊತ್ತುಕೊಂಡು
ಜನುಮವೇಕೆ ಕಳೆವುದು?
ತತ್ತ್ವ ನೀನು ಬೇರೆ ಏನು?
ಅದೇ ಆಗಿ ನಾನು ನೀನು
ವಿಶ್ವದಲ್ಲಿ ಮೊಳೆವುದು.

ಓಂ ನಮಃ ಶಿವಾಯ ಎಂದು
ಪ್ರಾಣ–ಲಿಂಗ–ಶಕ್ತಿ ಒಂದು
ಅನುಗ್ರಹವ ತಾಳುವಾ.
ಏಕಾತ್ಮದ ಶರಣರಾಗಿ
ದಿವ್ಯಸೃಷ್ಟಿ ಕರಣರಾಗಿ
ವಿಗ್ರಹದೊಲು ಬಾಳುವಾ.

ಇದೇ ಸಂಧಿ ಇದೇ ಶಾಂತಿ ಮನುಕುರುಕುಲ ಕ್ಷೇತ್ರಕೆ.
ಈ ವಿರಾಟ ದೊಡ್ಡ ಆಟ ಪಾತ್ರ ಬೇರೆ ನೇತ್ರಕೆ?
ನಟನಿಗೆ ಜಯ, ನಾಟಕಕ್ಕೆ ಜಯ ನಾಟಕಕಾರಾ
ಸಾಕ್ಷಿಪುರುಷ ದೃಶ್ಯಗಳಲಿ ನೀ ವಿಶ್ವಾಕಾರಾ.

ಬ್ರಹ್ಮದಲ್ಲಿ ಮಾಯೆಯೆಂದೊ
ಮಾಯೆಯಲ್ಲಿ ಬ್ರಹ್ಮವೆಂದೊ
ಶಬ್ದದಲ್ಲಿ ಮೂಡಿದೆ.
ಶ್ರದ್ಧೆಯಂತೆ ಬುದ್ಧದೇವ
ದೇವನಂತೆ ಪ್ರಕೃತ ಜೀವ
ಈ ಭಾವ ಹಾಡಿದೆ.

ಗಿರಿಶಿಖರ

Our right & natural road is towards the Summits.

—Sri Aurobindo

ಅಗೊ ಭೂಮಿಹೃದಯ ಗಿರಿಶಿಖರಗಳಲಿ ಕೈಮೊಗ್ಗ ಮೇಲೆ ಮುಗಿಸಿ,
ಅರ್ಪಿಸುತ್ತಲಿವೆ ಭಕ್ತಿಯನ್ನು ಬಾನಲ್ಲಿ ಸತ್ತ್ವ ಜಗಿಸಿ.
ಕೊಳಕುಕೊಳ್ಳದಲಿ ಹುಚ್ಚುಹಳ್ಳದಲಿ ಎಷ್ಟು ದಿವಸ ನಡೆವೆ?
ಎತ್ತರಕ್ಕೆ ಬಾರಣ್ಣ, ಅಲ್ಲೆ ನೀ ಪಡೆವುದನ್ನು ಪಡೆವೆ.

ತಿರುಮಲೆಯ ಕಡೆಗೆ, ಶ್ರೀಶೈಲದೆಡೆಗೆ ಶ್ರಿಂಗೇರಿ ಮಾರ್ಗವಾಗಿ
ಬೆಳಗುಳದ ಬೆಟ್ಟ, ಆ ಪೂರ್ವಘಟ್ಟ ಜೀವಕ್ಕೆ ಸ್ವರ್ಗವಾಗಿ
ಎಂದಿನಿಂದಲೋ ಸೆಳೆಯುತಿಹವು ಯಾತ್ರಿಕರ ಮೋದದಿಂದ.
ಬದುಕು ಮಾಡಿಕೊಂಡಿಹುದು ಮನುಜಕುಲ ಆ ಪ್ರಸಾದದಿಂದ.

ಹೊಳೆಗೆ ತಾಯಿಮನೆಯಾಗಿ ಬಾಳುತಿವೆ ಸರ್ವಪರ್ವತಾಗ್ರ,
ಮನಕೆ ತವರುಮನೆಯಾಗಿ ನೆಲೆಸಿಹವು ತಾನೆ ತಾ ಉದಗ್ರ.
ಹೊಲಕೆ ಮಣ್ಣು ಆ ಮನೆಗೆ ಕಲ್ಲು ಕೊಡುತಿಹವು ಏನು ಒಲವು!
ಬಿಸಿಲುಗಾಲದಲಿ ನೆರೆಯ ತರುವವೋ ಗಂಗೆಗಳಿಗೆ ಚೆಲವು.

ಗುಡ್ಡದಲ್ಲಿ ಗುಡಿ ಕೊರೆದವರಲ್ಲ ಕಣ್ಗಂಡ ಓಜರೆಲ್ಲ.
ಶಿಲ್ಪವಲ್ಲ ನವಕಲ್ಪಸೃಷ್ಟಿ ಆ ಕಲೆಗೆ ಮರಣವಿಲ್ಲ.
ಧ್ಯಾನಲೀನ ಮನ ಏಳೆ ತೊಳೆದು ಅಜ್ಞಾನದಾ ಕಲಂಕ
ಜ್ಯೋತಿ ಜೀವನವೆ ಮೂರ್ತವಾದಂತೆ ಜೀವ ದೇವತಾಂಕ.

ಕಲ್ಲಿನಲ್ಲೆ ದೇವತ್ವ ಮೂಡಿ ಆದರ್ಶವಾಗುತಿರಲು
ಮನುಜನಲ್ಲಿ ಯಾ ರೋಗ ಮೂಡಿ ಜೀವನವೆ ಬೊಕ್ಕುಬೋರಲು
ಆಗುತಿಹುದೊ? ಆ ಬೀಜ ಹುರಿದು ನಿರ್ನಾಮಗೊಳಿಸಲಹುದು.
ಅಲ್ಲಿ ಇಲ್ಲಿ ಒರಗುವದದೇಕೆ, ತುದಿಯಲ್ಲಿ ಫಲವು ಬಹುದು.

ಗೆಳೆಯ ಶಂಕರಗೌಡರಿಗೆ

ಶಿವಾಯನಮ ಓಂ ಶಿವಾಯನಮಃ ದಿಮುಡಿ ಮಿಡಿಯುತಿತ್ತು.
ಏಕನಾದವೂ ಶಿವಾಯನಮ ಓಂ ಶ್ರುತಿಯ ಹಿಡಿಯುತಿತ್ತು.
ಶಿವಾಯನಮ ಓಂ ಬಯಲಿನಲ್ಲಿ ಪಡಿನುಡಿಯು ಸಿಡಿಯುತಿತ್ತು.

ತಲೆಯ ಮೇಲೆ ಎಲ್ಲಿಂದೊ ಬಂತೊ ಈ ನಾದ ಗಾಳಿ ಗುದ್ದಿ.
ಗೆಳೆಯ, ನೀವು ಮೈಗರೆದಿರೆಂದು, ಛೀ! ನಂಬಬರದ ಸುದ್ದಿ.
ಎಡದ ಮೈಯು ನಡುಗಿಸುತ ಬಂತು, ಕ್ಷಣ ಮಂಕು ಆಯ್ತು ಬುದ್ಧಿ.

ನನ್ನ ಜೀವನದಿ ನೀವು ತೇಲಿದಿರಿ ಚುಕ್ಕೆ ತೇಲುವಂತೆ.
ಗೆಲುವಿನಲ್ಲೆ ಒಳಸೋತಿರಣ್ಣ ಸವಿಗೆಳೆಯ ಸೋಲುವಂತೆ.
ಆಪತ್ತಿನಲ್ಲಿ ಸಂಪತ್ತಿನಲ್ಲಿ ನೆರವಾಗಿ ಸಾಲುವಂತೆ.

ನಿಮ್ಮ ಸ್ನೇಹಝುರಿ ಏಕತಾನ ಸ್ವರಮೇಳದಂತಭಂಗ.
ದಾಸೋಹ ಶರಣ ಜೀವನದ ರೀತಿ ಕಂಡಿತ್ತು ದೇವಲಿಂಗ.
ನಿಮ್ಮ ಅಭಿರುಚಿಯು ಗಂಧಮೂರ್ತಿ ಪ್ರದ್ಯುಮ್ನನಾದನಂಗ.

ಮೂಡಲದ ಕಡಲ ಗುಡುಗಾಟದೊಡನೆ ಸಂಗಡಿಗನಾಗೆ ಬಂತು.
ತಂತಂತಿಯಾಗಿ ಸರಿಜೀಘು ಹಿಡಿದಿಹುದು ನಿಮ್ಮ ಜೀವತಂತು.
ಆ ದಿವ್ಯಜೀವನದ ಸವಿಯು ನೋಡಿ ನಂಬಿಗೆಯು ನೆಲಸಿ ನೋಂತು.

ಒಬ್ಬರಾಗಿ ಬರಲಿಲ್ಲ ನೀವು, ಹಲವೊಬ್ಬರಾಗಿ ಬಂದು
ಏರಿದಿರಿ ಮುಂದೆ, ಸಾರಿದಿರಿ ಹಿಂದೆ, ಸರಿ ಒಕ್ಕಲಾಗಿ ನಿಂದು
ಬೆಳೆಯುವಾಗಲೇ ಮೇಲಿನವರಿಗೂ ಗೊಬ್ಬರಾಗಿ ಎಂದು.

ಒಂಟಿಮುರಿಗೆಯಲಿ ಹಳ್ಳ ಹಿಡಿದು ಹೋಗುತ್ತಲಿತ್ತು ನೀರು.
ಕಂಠದಲ್ಲಿ ನೆಲೆಗೊಂಡು ಇತ್ತು ಕನ್ನಡದ ತಾಯಿಜೇನು.
ಬಯಲುಸೀಮೆಯಲಿ ಉರುಳುತಿತ್ತು ಪ್ರಭುದೇವರೊಂದು ತೇರು.

ದಾನವಾಗಿ ಮೂಡಿತ್ತು ಜನರ ಅಜ್ಞಾನಕೆದ್ದ ಕ್ಷೋಭ.
ನಿಮ್ಮ ಮೌನ ಮನೆಮಾಡಿ ಇತ್ತು ಸಾಹಿತ್ಯ ರಸಿಕ ಶೋಭ.
ಕನ್ನಡಕ್ಕೆ ನೀರೆರೆವ ಲೋಭದಲಿ ನಾಡಿಗಾಯ್ತು ಲಾಭ.

ನಿಮ್ಮ ಬದುಕು ಕಾಶ್ಮೀರಿ ಶಾಲು, ಅದು ಅಲ್ಲ ತೇಪೆ ಕವುದೆ.
ಆದರೇನು ಅನುರಾಗಕಹುದು ವೈರಾಗ್ಯ ಕೂನು ಹೌದೇ.
ತಾಯಿ ಅವ್ವನೆಂದೊಪ್ಪದವನು ತಂದೆಯನು ಅಪ್ಪಬಹುದೇ?

ಶ್ರಾವಣಕ್ಕೆ ಶ್ರುತಿ ಮೀರಿ ಬಂತೊ, ಹೆಗಲಲ್ಲಿ ಇರಿಸಿ ಕಂಥೆ
ಜೋಗಿ ಎದ್ದಂತೆ ಆಲಕನೆದ್ದು ಮುಗಿಸಿದಿರಿ ಒಂದು ಸಂಥೆ.
ಏರು ಜೀರಿನಲಿ ರಾಗ ನಡೆದಿರಲು ತಂತಿ ಹರಿಯುವಂತೆ.

ಬಾಳಿನಲ್ಲಿ ಕೈಹಿಡಿದು ನಡೆಸಿದಿರಿ ಜೊತೆಯ ಅಣ್ಣಗಳನು.
ತಮ್ಮಗಳಿಗೆ ಕಂಡದ್ದ ತೋರಿ ತೆರೆಸಿದಿರಿ ಕಣ್ಣುಗಳನು.
ಹೆಣ್ಣುಗರುಳಿನಲಿ ತೂಗಿ ನೋಡಿದಿರಿ ಹೊನ್ನು ಮಣ್ಣುಗಳನು.

ಭೋಗದಲ್ಲಿ ಜೊತೆಯಾಗಿ ಬೆಳೆದು ರೋಗಕ್ಕು ವೈಯ ಮಸೆದು
ಯೋಗಕಾಗಿ ಪಾಡಾಗಿ ಬಂದು ಗುರುಪಾದಕಾಗಿ ಒಸೆದು
ಜೊತೆಗೆ ನೋವಿನಲಿ ಜೊತೆಗೆ ಸಾವಿನಲಿ ಆದ ರೀತಿ ಹೊಸದು.

ಒಕ್ಕಲಿಗರಂತೆ ಒಕ್ಕಲಿಗರಾಗಿ ನೇಗಿಲವೆ ಮುದ್ರೆ ಮಾಡಿ
ನಾಳೆ ಬರುವ ಬೆಳೆಗಾಗಿ ಕಾದ ಹೊಲದಲ್ಲಿ ಜಾಗ ನೋಡಿ
ತಾಯಿ ತಂದೆಗಳ ಪಾದದಲ್ಲಿ ಮುಳುಗಿದಿರಿ ಬರಲು ಮೂಡಿ.

ಕಲ್ಲಮುಂಟಪದ ನೆರಳಿನಲ್ಲಿ ಮಲಗಿದಿರಿ ಒಂದು ಜಾವ
ಯಜಮಾನರೆಲ್ಲೊ ಆ ಬಲಕೆ ನೀವು ತೋರಿಸಲು ನಿಮ್ಮ ಠಾವು.
ಅಮರ ಜೀವನಕೆ ಸಾಕ್ಷಿಯಾಗಿ ಮೂಡಿಹುದು ಅಡಕೆ ಹೂವು.

ಆಪ್ಯಾಯನ

ಓ ಲಿಂಗವೆ, ಓ ಅಂಗವೆ, ಓ ಕೂಡಲಸಂಗಾ !
ಓಂ ಆಪ್ಯಾಯನ ಪಡೆಯಲಿ ಈ ಅಂಗಾಂಗಾಽ.
ನುಡಿ ಉಸಿರೂ ಕಣ್‌ಕಿವಿಯೂ ಒಳಹೊಂದಿಕೆ ಮಾಗಿ
ಬಲಗೊಳ್ಳಲಿ ಇಂದ್ರೇಂದ್ರಿಯ ಅದರಿಂದಾಗಿ.

ನಾನಾತನು ನೀನಾತನು ತಾನ್ ತನ್ನದು ನೋಡಾ
ಅದು ನಿನ್ನನು ನೀನದನ್ನು ನಿರಾಕರಿಸಬೇಡಾ !
ಆತನಾಕೆ ಆಕೆಯು ತನು ಒಲಿದೊಲದವ ಬಲ್ಲಾ.
ಉಪನಿಷದಿದು ಇದು ಬ್ರಹ್ಮ ಅದು ಇದು ಉದು ಎಲ್ಲಾ.

ಒಳಹೊರಗನು ಒಳಗೊಳ್ಳುವ ಒಲವಿನ ಹೃತ್ಪಿಂಡಾ
ಸಮ್ಯಕ್‌ಸ್ಥಿತಿ, ಸಮ್ಯಕ್‌ಗತಿ, ಸಮ್ಯಕ್ ಬ್ರಹ್ಮಾಂಡಾ.
ಗುರುಶಿಷ್ಯರ ಸಂವಾದದೊಳಿದೆ ಜೀವದ ಧರ್ಮಾ.
ಬ್ರಹ್ಮಭಾವ ನಿರತವಿರಲಿ ನಿಜಜೀವನ ಕರ್ಮಾ.

ಸಹಸ್ರತಂತ್ರೀ ನಿಃಸ್ವನದಂತೆ

ಸಹಸ್ರತಂತ್ರೀ ನಿಃಸ್ವನದಂತೆ
ಮಾತರಿಶ್ವನಾ ಘನಮನದಂತೆ
ಗುಡುಗಾಡುತ್ತಿದೆ ಗಗನವ ತುಂಬ
ಪ್ರಣವ ಪ್ರವೀಣನ ನಾದಸ್ತಂಭ.

ಏಕದಿಂದಲೇ ಉದಿಸಿದೆ ಸರ್ವ.
ಐಕ್ಯ ಧರಿಸಿಯೇ ಆಳುವನೊರ್ವ.
ಆ ಒರ್ವನೊಳೇ ಸರ್ವವು ಸೇರಿ
ಜಯವನು ಸಾರಲಿ ಧರ್ಮದ ಭೇರಿ.

ದದದಾ ದದದೋಂ ದಮುದಯ ದತ್ತೋಂ
ದಿಕ್ತಟ ತಟಪಟ ಧಿಗಿದಂ ಧಿಕ್ತೋಂ
ನಿರ್ದ್ವಂದ್ವದೊಳೆದ್ದಿತು ಓಂ ನಾದ
ತಾಂಡವೇಶ್ವರನ ಅಖಂಡವಾದ.

ಸತಿಮುಖಸುಸ್ಮಿತ ಜನಿತ ಸುವೇದ.
ಶರಣನ ಚಿದ್ಗತಿ ಶರಣ್ಯವೇಧ
ಮಧುರಾಭಕ್ತಿಯ ಮಧುರಾ ಗೀತ
ವೇಣುಧ್ವನಿಯಲಿ ಆತ್ಮಪ್ರೀತ.

ಮಾನವ–ದಾನವ–ದೇವ ದೇವತಾ.
ಯುಗಯುಗ ಗರ್ಭಿತ ಜೀವ ಜೀವಿತಾ
ಮೂರ್ತಿತವಾಗಲಿ ಪ್ರಾರ್ಥನೆಗಾಗಿ
ಉದ್ಭವ ಭವಿಷ್ಯ ಸಾರ್ಥಕವಾಗಿ.

ಸಹಸ್ರಾರವಿಂದೋತ್ಥಿತಬಾಲೆ
ಬ್ರಹ್ಮಹೃದಯರತಿ ಸುಷುಪ್ತ ಜ್ವಾಲೆ
ಏನಿದೆ? ಏನಿದೆ? ಏನಾಮೇಲೆ?
ಕೃಪಾಪುಷ್ಪಗಳ ಅನಂತಮಾಲೆ.

ಧರ್ಮಮೇಘವೇ ವರ್ಷಿಸುವಂತೆ
ಸತ್ಯದ ಸತ್ತ್ವವ ಸ್ಪರ್ಶಿಸುವಂತೆ
ಧರಣಿಯ ಕೆಚ್ಚಲು ಹರ್ಷಿಸುವಂತೆ
ಬರಲಿದೆ ಮಳೆ ಉದ್ಘರ್ಷಿಸುವಂತೆ—

—ಸಹಸ್ರತಂತ್ರೀ ನಿಃಸ್ವನದಂತೆ.

ಮುಕ್ತಕಂಠ

ರಮಣಹೃದಯ

(ಶ್ರೀ ಭಗವಾನ್ ರಮಣಮಹರ್ಷಯೇ ನಮಃ)

ಉಂಟೆಂಬುದರ ಅರಿವು ಅದ ಬಿಟ್ಟು ಇರಲಹುದೆ?
ಇದೆ ಇಲ್ಲ ಎಣಿಸದ ಎದೆಯೇ ಇದೆ ॥
ಅಳತೆಗಳವಡದೊಂದನೆಂತಾರೆ ನೆನೆವುದು?
ನೆನವೆ ಘನವಾಗುಳಿದ ಉಳಿವೆ ಎದೆ ॥ ೧ ॥

ಸತ್ತೇನು ನಾನೆಂದು ಸಾವುಂಡ ದೇವಗೆ ।
ಮೊರೆಹೊಕ್ಕು ನಾನೆಂಬುದೇ ಸಾವುದು ॥
ಹೀಗಾಗಿ ಇದ್ದಾಗೆ ಸಾವಿಲ್ಲದವರಾಗೆ ।
ಸಾವುಗೀವಿಗೆ ಎಡೆ ಎಲ್ಲಿಹುದು? ॥ ೨ ॥

ಕಾಂಬನು ಕಾಂಬುದು ಎಂಬುದರ ಬೇರಿಗೆ ।
ಮೀರಿದ ಕಸುವಿನ ಅಸುವೊಂದಿದೆ ॥
ಚಿತ್ರಪಟದಾಟಕೆ ನೋಟಕ ನಾಟಕ ।
ಬಿಳಿಬಟ್ಟೆ ಬೆಳಕು ತಾನೊಂದಾಗಿದೆ ॥ ೩ ॥

ಎಲ್ಲ ಎಣಿಕೆಯ ಪಸರ ಜಗ–ಜೀವ–ಪರಮಾತ್ಮ ।
ಆತನ ತತ್ತ್ವದ ಮೊದಲು ಕಡೆ ॥
ನಾನುಂಟೆ? ಜಗವುಂಟು; ಅವನುಂಟು; ಮೂರುಂಟು
ನಾನಿಲ್ಲ; ತಾನೊಂದೆ ಎಲ್ಲ ಕಡೆ ॥ ೪ ॥

ಒಗ್ಗಿದೆ ಕುಗ್ಗಿದೆ ಜೀವ ಜಪ ದಿಟ ಸಟಿ ।
ಘಟಪಟ ನ್ಯಾಯವು ಕಟಪಟವು ॥
ಎಲ್ಲರಿಗು ಬೇಕಾದ ಬೆಲ್ಲದಿರವು ಅಲ್ಲಿ ।
ಇವರಾಚೆ ತಾನು ತಾನಾಗಿರಲು ॥ ೫ ॥

ಜಗದೇವನೆಡಕು ರೂಪುಂಟು ರೂಪಿಲ್ಲ ।
ತನಗಿದ್ದಂತದಕಿದೆ ಆಕಾರವು ॥
ಎಲ್ಲವನು ಒಳಗೊಂಡ ಒಂದೆ ಕಣ್ಣಾಗುತ ।
ತಾನೆ ತಾನಾಗಿರಲು ಕಂಡೀತೇನು? ॥ ೬ ॥

ಅಯ್ದು ಚೀಲಗಳಲ್ಲಿ ಮೈತುಂಬಿಕೊಂಡಿದೆ ।
ಮೈಹೊಟ್ಟೆಯೊಳು ಬಂತು ಅಯ್ದರಾಟ ॥
ಮೈಯುಂಟೆ? ಜಗವುಂಟು; ಜಗದೊಂದು ಮೈಯುಂಟು ।
ಮೈಯಿಲ್ಲದಲೆ ಕಂಡರಾರು ಜಗ? ॥ ೭ ॥

ಒಡವೆಯು ಒಡಲಿಲ್ಲ ಸವಿರೂಪು ನುಡಿಕಂಪು ।
ಮುಟ್ಟುತಟ್ಟಿನೋಡಿದೆ ಭೂಭುವನ ॥
ಇವಕೆಲ್ಲ ಮನ ಮೂಲ ಮನದಲ್ಲೆ ಜಗವೆಲ್ಲ ।
ಭುವನವಿ ಮೂಡಿದೆ ಮನದತನ ॥ ೮ ॥

ಬಗೆಯೊಡನೆ ಮೂಡುತ, ಬಗೆಯೊಡನೆ ಮುಳುಗುತ ।
ಬಗೆಹೊಳೆ ಹರಿವಂತೆ ಜಗ ಹೊಳೆವುದು ॥
ಹುಟ್ಟಿಲ್ಲ ಸತ್ತಿಲ್ಲ ಇದ್ದೊಂದು ಇಡಿ ಒಡವೆ ।
ಬಗೆ ಬಯಲಾಟವಿದ್ದಷ್ಟರೊಳು ॥ ೯ ॥

ಏನುಂಟೊ ಇದರಾಚೆ ಅಪ ಕಾಂಬ ಪೂಜೆಗೆ ।
ಹೆಸರು ಮಾಟಗಳೆರಡೂ ತಾವಾಗಲು ॥
ಏನುಂಟೊ ಅದರೊಡ ತಾನೊಡಂಬಟ್ಟಾಗ ।
ನಿಲುಕಿದ ನಿಲುವಿಗೆ ಉಂಟೆಂಬರು ॥ ೧೦ ॥

ಇದ್ದೊಂದು ಒಡವೆಯೆ ಇಬ್ಬಗೆ ಮೂವಗೆ ।
ಬಗೆಬಗೆ ಒಡಮೂಡಿ ಬಗೆಗೊಳಲು ॥
ಅದನೊಂದೆ ಹುಡುಕಲು ಉಳಿದೆಲ್ಲವಳಿವುದು ।
ಇದ ಕಂಡ ಕಣ್ಣೆಂತು ನಡುಗುವುದು? ॥ ೧೧ ॥

ಮರೆವಿಲ್ಲದರಿವಿಲ್ಲ ಅರಿವಿರದೆ ಮರೆವಿಲ್ಲ ।
ಒಂದನೊಂದನು ಅವು ಹೊಂದಿಹವು ॥
ಇದರ ಇಬ್ಬಗೆ ಬಗೆದು ಒಳಹೊಕ್ಕು ನೋಡಲು ।
ಬೇರು, ಬೀಜದ ಒಳಗು ತಾನಹುದು ॥ ೧೨ ॥

ತನ್ನ ತಾ ತಿಳಿಯದ ಆ ಜ್ಞಾನ ಅಜ್ಞಾನ ।
ಒಳಹುರುಳ ತಿಳುವಳಿಕೆ ಎಂತಾದೀತು? ॥
ಅರಿವಿಗು ಮರೆವಿಗು ಇರವೆ ಆಧಾರವು ।
ಆಧಾರ ಒಳಬಟ್ಟೆ ಮುಟ್ಟುವದು ॥ ೧೩ ॥

ನಿದ್ದೆಯು ಮರೆವಲ್ಲ ಎದ್ದಾಗಿನರಿವಲ್ಲ ।
ತನ್ನ ತಾ ತಿಳಿದಾಗ ಕಾಂಬುದೇನು? ॥
ಬೆಳಕಿನ ಮುಡಲಲ್ಲಿ ಬಣ್ಣ ಮಡಗಿದ ಹಾಗೆ ।
ಇಲ್ಲವಾಗುವದಿಲ್ಲ, ಉಂಟೆಂಬುದು. ॥ ೧೪ ॥

ತಂತನದ ತಂತಿಗೆ ಎಂತು ತಾನತರಂಗ।
ಅಂತೊಂದು ಹೊಂದಿದೆ ಹಲಕೆಲವು॥
ಬಂಗಾರವೆಳೆದಾಡೆ ಸಿಂಗಾರದಾಭರಣ।
ಇದ್ದೊಂದರಿರವರಿವು ಬಂಗಾರವು ॥ ೧೫ ॥

ನಾನುಂಟು, ನೀನುಂಟು, ಅವನುಂಟು. ಏಕಿಲ್ಲ?।
ತಾನೆ ತಾನಾದಾಗ ನಾನಿಂಗಿತು॥
ನಾನಿಲ್ಲ, ನೀನಿಲ್ಲ, ಅವನಿಲ್ಲ ತಾನೊಂದು।
ಗಾಳಿ ನುಂಗಿದ ಬೆಳಕಿನಂತಿದ್ದಿತು ॥ ೧೬ ॥

ಹಿಂದು ಮುಂದಾಗುವ ಇಂದೇ ಉದ್ದಕ್ಕಿಹುದು।
ಇಂದಿರವೆ ಹಿಂದಿತ್ತೆ? ಮುಂದಿದ್ದಿತೆ?॥
ಹಿಂದೇನು ಮುಂದೇನು ಇಂದೆಂಬುದಿರದಿರೆ।
ಎಣಿಸುವರೆ ಒಂದೆನದೆ ಎರಡೆಂಬರೇ? ॥ ೧೭ ॥

ನಾವಿರಲು ಹೋಳ್ವುದು ಹೊತ್ತು ಗೊತ್ತಿನ ಗತ್ತು।
ನಾ ಮೈಯು ಎನಲು ದಿಕ್ಕಾಲ ಕಡೆ॥
ಎಲ್ಲೆಲ್ಲು ನಾವಿಲ್ಲ ಎಂದಿಗೂ ನಾವಿಲ್ಲ।
ಆದರು ತಾವುಂಟು ಎಲ್ಲ ಕಡೆ ॥ ೧೮ ॥

ತಾನು ಮೈಗೂಡಿಹುದು ಬಲ್ಲವರಿಗೂ ಉಂಟು।
ತಾನೆಂಬ ಬೆಳಕು ಅವರೆದೆಯೊಳಿದೆ॥
ಆ ಬೆಳಕು ಮೈದುಂಬಿ ಜಗದುಂಬಿ ಮಿಗುವುದು।
ನಾಡಾಡಿ ಮೈಯಲ್ಲಿ ತಾನಡಗಿದೆ ॥ ೧೯ ॥

ಅಜ್ಞಗು, ಸುಜ್ಞಗು ಲೋಕವೆಂಬುವದುಂಟು ।
ಅಜ್ಞಗೆ ಕಂಡದ್ದೆ ಕಡೆಯಾಗಿದೆ ॥
ಸುಜ್ಞಗೆ ಕಂಡುದರ ಬುಡವಲಿದ್ದದ್ದೊಂದು ।
ಇಡಿ ಕಡೆ ಕಣ್ಣೆಂಬುದನು ಕಂಡಿದೆ ॥ ೨೦ ॥

ದೈವಪೌರುಷವೆಂಬ ಇಬ್ಬಗೆಯ ವಾದವು ।
ಉಂಟು ಎರಡರ ಬೇರನರಿಯದಗೆ ॥
ದೈವ ಪೌರುಷ ಹೋಳು ಬೇಳೆ ಬೀಜವ ಹಿಡಿಯೆ ।
ಎಂತೇನು ದೈವವು ಪೌರುಷವೇ ॥ ೨೧ ॥

ಕಾಂಬನ ಕಾಣದೆ ದೇವನ ಕಾಂಬುದು ।
ಮನದ ಕಣ್ಣಿಲೆ ಕಂಡ ಕಲ್ಪನೆಯು ॥
ಕಾಂಬನಿಂವದ ಬೇರೆ ಬಿಂಬವೆಂಬುದು ಉಂಟೆ? ।
ಕಣ್ಣಾರೆ ಕಾಂಬನೆ ನಿಲುಕಡೆಯು ॥ ೨೨ ॥

ತನ್ನ ತಾ ಕಾಂಬುದು ಮೇಲವನ ಎಂಬುದು ।
ಆಗಮುಕ್ತಿಯು ಭಾವ ಗಹನವಿದು ॥
ಕಣ್ಣು ತಾನಾಗದೆ ನಿಜವೆಂತು ಕಂಡೀತು? ।
ತಾನವನ ತುತ್ತಾಗೆ ಅದೆ ಕಾಂಬುದು ॥ ೨೩ ॥

ಬಗೆಯೊಳಗೆ ಬೆಳಕಿತ್ತು ನಿಜವಲ್ಲಿ ಬೆಳಗುವದು ।
ನಿಜನರಿತು ಬಗೆಯಲ್ಲಿ ಮೂಡುತಿದೆ ॥
ಬಗೆಯು ಒಳನೋಗವಾಗ ನಿಜ ಬೆರೆಯಲೆಂಬಾಗ ।
ಬೇರೆ ಇಲ್ಲವು ತಾನೆ ನಿಜವಲ್ಲದೆ ॥ ೨೪ ॥

ಸಿದ್ದಿಯೊಳಗೆ ನಾನು ಇದ್ದಿಲ್ಲ; ಎದ್ದಾಗ ।
ಮೈಯಷ್ಟೆ ನಾನಿರುವೆ ಎಂಬ ಜನ ॥
ಉಂಟೇ? ಉಂಟಿನ ಗಂಟು ಬಿಚ್ಚಿ ನೋಡಲು ಬೇಕು ।
ತಾನೆಂಬ ಹಮ್ಮುದಿಸೆ ಅರುಣೋದಯ ॥ ೨೫ ॥

ಮೈಗಾವ ಅರಿವುಂಟು? ಇದ್ದುದಕೆ ಹುಟ್ಟಿಲ್ಲ ।
ನಡುವಾರೊ ಮೈವೆತ್ತು ಆಡುವರು ॥
ನಾನು ತಾನಿನ ಗಂಟು ಕಣ್ಣಳಿ ಒಳಗುಂಟು ।
ಅರಿವೆ ಮೈವೆತ್ತುಸಿರಿಸವ ಜೀವನು ॥ ೨೬ ॥

ಮಾಟದಲ್ಲಿಯೆ ಹುಟ್ಟಿ ಮಾಟಗಳಲಿ ಬೆಳೆದು ।
ಮಾಟವಂತಿಮ ಮಾಟವ ತಳೆದು ॥
ತಾನೆಂತು ಮಾಟಲ್ಲ ಮಾಯದಾಟವಿದೇನೋ ।
ಏತಕು ಸಿಗದು ಹಮ್ಮಿನ ಘಾತವು ॥ ೨೭ ॥

ಹಮ್ಮು ಮೂಡಿದ ಒಡನೆ ಉಳಿದೆಲ್ಲ ಮೂಡುವದು ।
ಹಮ್ಮಿನ ಒಡನೆಲ್ಲಾ ಮುಳುಗುವದು ॥
ಮಾಟದ ಸೃಷ್ಟಿಗೆ ಹಮ್ಮೆ ಬ್ರಹ್ಮವು; ಅದನೆ ।
ಹುಡುಕಲೆಲ್ಲವ ಗೆಲ್ಲಲಿಹ ಹಾದಿಯು ॥ ೨೮ ॥

ಉಂಟೇನೊ ಅದರೊಳಗೆ ತಾನೆಂಬ ಗಂಟಿಲ್ಲ ।
ಹುಟ್ಟಿ ಹುಡುಕಲು ಹಮ್ಮು ಹುಳವೇ ಇಲ್ಲ ॥
ಹಮ್ಮಿನ ಮರವಗೆದು ಬಿತ್ತಿ ಕೀಳದೆ ।
ತಾನಿನ ತಾದಾತ್ಮ್ಯ ಯಾವ ಬಲ್ಲ? ॥ ೨೯ ॥

ನೀರಿನಾಳದೊಳದ್ದಿ ಮುಳುಗಿ ನೋಡುವನಂತೆ ।
ಬಗೆಯ ಧಾರೆಯ ಹಿಡಿದು ಒಳಬಗೆದು ॥
ಮನ ಮಾತು ಉಸಿರಾಟ ಕಟ್ಟೆಟ್ಟು ಬಗೆದರೆ ।
ಹಮ್ಮಿನ ಮೊದಲಾಗ ದೊರೆಕೊಂಬುದು ॥ ೨೦ ॥

ಮೌನಕಾಸಾರದ ತಳಸೋಸಿ ಕಾಣಲು ।
ನಾನೆಂಬ ಬಗೆ ಬೇರು ಬಂತೆಂತಿದು ? ॥
ನಾನಲ್ಲ ಇದು ನನ್ನದಲ್ಲ ಇದೆನ್ನುತ ।
ತಾನೆಂಬ ಗಡ್ಡೆಗೆ ಬಗೆ ಬಹುದು ॥ ೨೧ ॥

ನಾನಾರು ನಾನೇನು ಬಗೆ ಜಾಡ ಹಿಡಿದಾಡಿ ।
ಅಲ್ಲಿಲ್ಲ ಉಂಟಿದೆ ಇದೆ ಎದೆಯು ॥
ನಾನಿನ ತಲೆ ಸಿಡಿದು ತಾನೆ ತಲೆಯೆತ್ತಿತು ।
ತಾನೆ ತಾನಾದಾಗ ಇಡಿ ತುಂಬಿತು ॥ ೨೨ ॥

ಹಮ್ಮಿನ ತುತ್ತುಂಡು ಬಿಮ್ಮನೆ ಬೆಳಗುವದೆ ।
‘ ಕಿಂ ’ ಎಂಬ ಕಾರ್ಯವು ಅವಸಿಗಿಲ್ಲ ॥
ತಾನಿಲ್ಲ, ಇದಿರಿಲ್ಲ, ತಾನೆಲ್ಲ ಕಂಡವನ ।
ಸ್ಥಿತಿಯನ್ನು ಸಿಕ್ಕವನೇನು ಬಲ್ಲ ? ॥ ೨೩ ॥

‘ ಅದು ನೀನಿರುವೆ ’ ಎಂದು ಎಂದರು ಕೂಡ ।
ಆತನ ನಿಲುವದು ನಿಲುಕವಿದೆ ॥
ಬಡ ಬಗೆ ಬಡದಾಡಿ ಸಿಡಿಮಿಡಿಗೊಂಬುದು ।
‘ ಅದು ’ ತಾನೆ ಎಂಬಂತೆ ಬೆಳಗುತಿದೆ ॥ ೨೪ ॥

'ನಾ ಬಲ್ಲೆ' 'ಗೊತ್ತಿಲ್ಲ' ಎಂಬ ವಾದದ ಹಾದಿ ।
ಬಗೆಗೇಡು ನಗೆಗೇಡು ಹಠಗಾತಿಯು ॥
ಕಣ್ಣು-ಕಾಣ್ಕೆಗಳಿಂದ ತಾನರಿದು ಹೋಳುಂಟೆ ।
ತಾನೆಂದೆ ಎಂದೆಲ್ಲರನುಭೂತಿಯು ॥ ೩೫ ॥

'ಇದೆ'ಂಬ ಒಡವೆಗೆ ಎಡೆ, ಮನೆ, ಅಲ್ಲಿದ್ದು ।
ಇಲ್ಲೆಂಬ ತೆರದೊಳಿಪ್ಪುದೇನರವೋ ? ॥
ಒಂದು, ಹಲವು, ಮಾಟ, ಬಯಲು, ಇದೆ, ಇಲ್ಲೆಂದು ।
ಮಾಟವಾಟದ ಮಾತು ಯಾವರಿವೋ ? ॥ ೩೬ ॥

ಇದ್ದುದ ಪಡೆದರೆ ಸಿದ್ಧಿಯು ಪಡೆದಂತೆ ।
ಉಳಿದ ಸಿದ್ಧಿಯು ಗುದ್ದು ಬರಿಗನಸೇ ॥
ಎದ್ದವನಗನಸೊಂದು ಇದ್ದೇನು ಇರದೇನು ।
ಬಿನ್ನಾಣದರಿಗೆ ಮಾಯೆ ಮುಸುಕುವದೆ? ॥ ೩೭ ॥

ತಾನೆ ಪೃಥ್ವಿಯೆಂದಪ್ಪಿ ಪೃಥ್ವಿಯಾಗಿ ಹೋದವಗೆ ।
'ನಾಸಿಹೆ ಅವನೆ'ಂಬ ಮಾನಸವಿದೆ ॥
ತಾನೆ ತಾನಾದಾಗ ಏನಿಹಕರ್ಥವು ।
'ನರ' ನರನೆಂದರೆ ಅದು ಸಾರ್ಥವೇ ॥ ೩೮ ॥

ಬಗೆಬಯೆ ಎರಡುಂಟು ನಿಜದಲ್ಲಿ ಒಂದುಂಟು ।
ಎಂಬ ವಾದದ ಹಾದಿ ತಾ ಸಾಧುವೆ ॥
ಹತ್ತು ಹುಚ್ಚರು ಎತ್ತ ಎಣಿಸಿದರು ಒಂಬತ್ತು ।
ಎಣಿಸುವನೆ ಇವರಲ್ಲಿ ಸತ್ತಿದ್ದನೇ ॥ ೩೯ ॥

ನಾನು ಮಾಡುವೆನೆಂಬ ಬಗೆಗಂಟಿಕೊಂಡವನು ।
ತಾನು ಪಡೆಯುವದುಂಟು ಬಂದ ಫಲ ॥
ನಾನಿಲ್ಲ ತಾನುಂಟು ಎಂದೆದೆಗಂಡರೆ ।
ನೂರು ಕರ್ಮವು ಮುಗಿದು ಮುಕ್ತಿಬಲ ॥ ೪೦ ॥

ಕಟ್ಟು ಪಡೆದವಗುಂಟು ಬಿಚ್ಚಿಕೊಳ್ಳುವ ಚಿಂತೆ ।
ಕಟ್ಟ್ಕ ಒಡೆದವನಾರು ಇವೆ ಬಗೆಯಲು ॥
ಕಟ್ಟಿಲ್ಲ ಹುಟ್ಟಿಲ್ಲ, ತಾನೆ ತಾನೆನೆ ಬಿಡುವು ।
ಕಟ್ಟಿದ್ದು ಬಿಚ್ಚಿದ್ದು ಬರಿ ಭ್ರಮೆಯು ॥ ೪೧ ॥

ಮಾಟವ ಮೀರಿದೆ ಮಾಟದಿ ಮುಗಿದಿದೆ ।
ಇದೆ ಹಾಗೂ ಇದೆ ಬೇರೆ ರೂಪವಗೆಯು ॥
ಮುಕ್ತಿಯೆಂಬರು ಸಾವಿ. ನಾನಂತು ಮುಳುಗಿದೆ ।
ತಾನಾಗಿ ಉಳಿದಿಹೆ. ಏನಿದ್ದೇನು? ॥ ೪೨ ॥

ಮುಂಜೆಳಗ ಕಿರಣವೆ ಅರುಣಾಚಲದಿಂದಿಳಿದು ।
ರಮಣವಾಣಿಯಲೇಕಸರವಾಗಿದೆ ॥
ಹಳಮಾತೆ ಹುಸಿತೊಳೆದು ಹೊಳೆಹೊಳೆದು ಹುತ್ತಿನ ।
ಹೊಳೆ ಹರಿದು ಬಂದಂತೆ ಹೊಸದಾಗಿದೆ ॥ ೪೩ ॥

ಪಡೆದವರಾಡಿದರೆ ಪಡೆದವರು ಏಳುವರು ।
ಸತ್ಯಕ್ಕೆ ಸತ್ಯೆಯು ಬಂದಂತಿದೆ ॥
ಮಾತನೆ ಮಿದ್ದಾಡೆ ಸಿದ್ಧಿಯಾಯಿತು ಮನವು ।
ಇದ್ದಂತೆ ಸತ್ತಂತೆ* ಎಂದಂತಿದೆ ॥ ೪೪ ॥

* ಸತ್+ಅಂತೆ

ಗಣಪತಿ ಮುನಿಗಳ ಮನನದಿ ನೆನೆದಾಡಿ ।
ನನೆಕೊನೆ ಹೋಯಿತು ನುಡಿಯ ನಡೆ ॥
ಅರವಿಂದವರಳಿರಲು ಎರವಿಂದ ಮಾತೇಕೆ ।
ಅನುಭವ ಒಮ್ಮೊಗ ಕಟ್ಟಿಕಡೆ ॥ ೪೫ ॥

ದತ್ತವಾಯಿತು ವಾಣಿ ಗುರುಗಳಡಿಗಳಲ್ಲಿ ।
ಅವರಾಡಿದ್ದಾಡಿಪರೆ ತಪ್ಪೇನಿದೆ? ॥
ಕನ್ನಡ ಮುನ್ನಡೆ ಗುಡಿಯೆತ್ತಿ ಬರುತಿದೆ ।
ತನ್ನ ತಾನರಿಯೆಂದು ಒಪ್ಪಿಸಿದೆ ॥ ೪೬ ॥

ಅಂಬಿಕಾತನಯನ ಚುಂಬಿಸಿದಳು ತಾಯಿ ।
ಆ ಬಾಯಿಯಾಯಿತು ಹಾಡಹೊಳೆ ॥
ತಾಯಿಯ ಎದೆಹಾಲಿನಂತಿದ್ದ ರಮಣರು ।
'ಇದೆ' ಎನಲು ಅದೆಂಥಾಯ್ತು ಎದೆಯ ಬೆಳೆ ॥ ೪೭ ॥

ಶ್ರೀ ರಮಣರ ಮಂತ್ರ ಗಣಪತಿಯ ತಂತ್ರದಿ ।
ದತ್ತನ ಧ್ವನಿಯಂತ್ರದಲಿ ಬೀಸಿದೆ ॥
ಅರವು ಮಾತಿನ ಅರಿವು ದೇವವಾಣಿಯ ಸ್ವರವು ।
ಕನ್ನಡದಲಿ ತಾನೆ ಕನ್ನಡಿಸಿದೆ ॥ ೪೮ ॥

ಗುರು ಅರವಿಂದರ ಅರವಿಂದ ಅರಳಿದ ।
ಅರವಿಂದ ಮಕರಂದ ಬೆಳೆಯುತಿರೆ ॥
ಮಾತೆಯ ನೆನಹಿಗೆ ಮಾತೆಲ್ಲ ಹೂತಿರೆ ।
ಸ್ವರಸ ಸರಸತಿಯಾಗಿ ಹರಸುತಿದೆ ॥ ೪೯ ॥

ಅಮೃತಾನುಭವ

ನಮೋ ಎಂಬೆ ಚೈತನ್ಯದೇವ ಶ್ರೀಮನ್ನಿವೃತ್ತಿನಾಥ
ನನ್ನ ದೈವ ನನಗಾದನಣ್ಣ ನನ್ನಪ್ಪ ಗುರುವೆ ಈತ.
ಸ್ವಸ್ವರೂಪದಾನಂದದುರುಳೆ ಇದಿವಕೆ ಭವವ ನೋವು.
ತೀರಲರಿಯದೋ ಹೇಳಬರದು. ಇದಕಿಲ್ಲ ಹುಟ್ಟು-ಸಾವು.

ಜಯಜಯವೆ ವಿದ್ಯೆ, ಗುರುರೂಪಿ ಎದ್ದೆ, ಶಾಂಕರಿ, ಸ್ವಪಾಕದಲ್ಲಿ.
ನೀ ಜ್ಞಾನಸಿದ್ಧೆ, ನಾ ಪದದೊಳಿದ್ದೆ ಆ ಜ್ಞಾನಲೋಕದಲ್ಲಿ.
ದಿವ್ಯದಯೆಯ ಅವತಾರಸಾರ ಜಲಪಾತದಂತೆ ಬಂದೆ
ಶಿವದ ಮೇಲೆ ಸುರಿವಂಥ ಗಂಗೆಯೊಲು ನಿರಂತರವು ನಿಂದೆ.

ಶಿವನ ಶಿವೆಯ ಶ್ರೀಲಗ್ನರಂಗವೇ ಜಗಜ್ಜನ್ಮಭೂಮಿ.
ಅವಳು ಅವಗೆ ಸ್ವಾಮಿನಿಯು, ಅವಳಿಗೋ ಆತ ತಾನೆ ಸ್ವಾಮಿ.
ಯಾರು ಯಾರೊಡನೆ ಎಂತು ಕೂಡಿದರೊ? ಈ ಅನಾದಿ ತಂತು
ಬಿಡಿಸಬರದು, ಅವಿಭಕ್ತ ಭಕ್ತಿ ಭೇದವನು ಅರಿವುದೆಂತು?

ಎರಡು ದಂಡೆಗೂ ಒಂದೆ ಪ್ರವಾಹವು, ಹೂವೆರಡಕೊಂದೆ ಗಂಧ,
ಎರಡು ದೀಪದಲಿ ಒಂದು ಬೆಳಕು ಬೆಳಗುವುದು ಎನಿತು ಚೆಂದ!
ಎರಡು ತುಟಿಗಳೊಳಗೊಂದೆ ಮಾತು, ಕಣ್ಣೆರಡಕೊಂದೆ ನೋಟ,
ಎರಡರಲ್ಲಿ ಒಂದಾಗಿ ನಡೆದಿಹುದು ಸೃಷ್ಟಿಯೆಂಬ ಮಾಟ.

ಒಬ್ಬರೊಬ್ಬರನು ಬಿಟ್ಟು ಇರರು ಈ ಇಬ್ಬರೂನು ಕೂಡ;
ಹುಟ್ಟಲರಿದು ತೃಣ ಮಾತ್ರ ಇಬ್ಬರೂ ಕೂಡದೇನೆ ಗೂಢ.
ಒಬ್ಬರೊಬ್ಬರನು ಹೊಕ್ಕು ಹೊಮ್ಮಿ ಸೇರಮಾಡಿಸುವುದು ಮೋಡಿ.
ಪರಸ್ಪರರಿಗೂ ಜೀವಪ್ರಾಣವೆನಿಸುವಂತೆ ಇವರ ಜೋಡಿ.

ಇದಕಿಂತ ಹೆಚ್ಚು ಒಳಿತಾವುದನ್ನು ಆ ಶಬ್ದ ಮಾಡಲಹುದು?
ಅದೊ ಆಬಾದ ಶಬುದ ಬುದ್ಬುದವು ಒಡೆದು ಹುಸಿಸದ್ದು ಹೊರಡಬಹುದು.
ಸುಡಿಮುಡಿದುಕೊಂಡು ಮೊರೆಯುವದು ಮಂದಿ ಜಗದಲ್ಲಿ ಹಿಂದುಮುಂದು.
ಒಡನಾಡಿ ನೆನಪು ಮೂಡುವದು ಸುಳಿಗೆ, ಸುಳಿಜೇಲಿಯು ಅದುವೆ ಒಂದು.

ಕೊಡುವಾಗ ಒಂದೆ ಕೊಳುವಾಗ ಒಂದೆ: ಇಬ್ಬರಿಗು ಮುದ್ದಿನಂತೆ.
ಕೊಡುಕೊಳೆಯ ಮಾಡೆ ನೀನೊಬ್ಬ ನೆಂಟ ಬಹುರೂಪಿಯಾಗಿ ನಿಂತೆ.
ನಾ ನೀನು ಎಂಬ ಎರಡೆಣಿಕೆ ಏಕೆ? ಸಂಸಾರ ಪಸರ ತುಂಬಿ
ಹಿಗ್ಗಿಹಿಗ್ಗಿ ಹಲವಾಗಿ ಮರಳಿ ನೀನಾದೆ ಕಣ್ಣಗೊಂಬಿ.

ಒಂದುತನಕೆ ಒಡಕಿಲ್ಲವಣ್ಣ ಶಿಷ್ಯರಿಗೆ ಹಂಚಿಕೊಡಲು.
ಒಂದೆ ನೀರು ಹರಿಯುವದು ಒಡಲಿನಲಿ ಉಗಮಮುಖಗಳಲ್ಲು.
ವೇದ ಕೀರ್ತಿಸಿದ ವೇದಮೂರ್ತಿ ನೀ ಬಂದಿ ಭೇದ ಬೇಕೆ?

ಕಂಪಿತ್ತು ಅಲ್ಲಿ ಮೂಗಾಯ್ತು ಇಲ್ಲಿ, ನಾದಾರ್ಥವಾಯ್ತು ಕಿವಿಯು,
ಕನ್ನಡಿಯು ಕಣ್ಣು ಆ ರೂಪಮೂಲ. ರುಚಿಮೂಲಕಿಹುದು ಸವಿಯು.
ಆ ಗಾಳಿ ತಾನೆ ಬೀಸಣಿಗೆಯಾಗಿ ತನ್ನನ್ನೆ ಬೀಸಿಕೊಳಲು
ತಲೆಯಲ್ಲೆ ಹೂವು ಅರಳಿರಲು ಮುಡಿಸಿಕೊಳಲೇಕೆ ತೀರ ತೊಳಲು?

ತಾವರೆಯೆ ಆಗಿ ತೆರೆದಿಹುದ ನೋಟ ಆ ರವಿಯು ಛವಿಯು ನೋಟ.
ಬೆಳುದಿಂಗಳನ್ನೆ ತಿಂಗಳನು ಕುಡಿಯೆ ಚಂದ್ರಮ–ಚಕೋರದಾಟ.
ತುಂಬಿಯೆನೆ ತಾವು ಹೀರುವವು ಹೂವು, ಆ ಸೀರೆ ಸೀರವಾಗಿ
ಕನಸಾಗಿ ನಿದ್ದೆ ತನ್ನಲ್ಲಿ ತಾನು ತನ್ನನ್ನೆ ಮೀರದಾಗಿ.

ಕಣ್ಣು ಕಣ್ಣು ತಿರುಮುರುವು ನೋಟ ನೋಡುವನ ಗೊಂಬೆಯಹುದು.
ಕಲ್ಪನೆಯ ಮೂರ್ತಿ ಶಿಲ್ಪಿಯೆನೆ ತೆರೆದು ಕಲ್ಲನ್ನೆ ಕೊರೆದು ಬಹುದು.
ಬಂಗಾರವೆಲ್ಲ ಆಕಾರವಾಗಿ ಆಗುವದು ವಸ್ತು ಒಡವೆ.
ನಾ ನನ್ನ ನೆಟ್ಟು ಆನಂದಬಟ್ಟು ನನ್ನಲ್ಲಿ ನಾನೆ ಪಡೆವೆ.

ತಳಿರು ಚಿಗುರು ಕೋಕಿಲಗಳಾಗೆ ತೆಂಗಾಳಿ ಮೂರ್ತವಾಗೆ
ರಸವೆ ತನ್ನ ರುಚಿ ನೋಡಿಕೊಳಲು ಮೈತುಂಬ ರಸನೆಯಾಗೆ.

*   *   *   *

ಉಣಿಸಿದಿರಿ ನೀವು ತಣಿಸಿದಿರಿ ಕರತಲದಿ, ಹೇ ನಿವೃತ್ತಿರಾಜಾ
ಆತ್ಮತೃಪ್ತಿಯಲಿ ಮೌನವಿಹುದು ನಿಜ, ತೇಗು ಕೂಡ ಸಾಜಾ.
ರವಿಯು ಬತ್ತಿಯನು ಹೊತ್ತಿಸಿಹುದು ಬಾನಲ್ಲಿ ಈಶನೋಜ.
ಲೋಕಲೋಕಗಳ ಬೆಳಗುತಿಹುದು ಆ ಸೂಸುತುಂಬು ತೇಜ.

ಚಂದ್ರನಲ್ಲಿ ತುಂಬುವದು ಅಮೃತ, ಆ ಚಂದ್ರ ಕುಡಿಯಲೆಂದೇ?
ಕಡಲು ಎರೆಯುವದು ಮೋಡಗಳಿಗೆ, ನೀರಡಿಕೆ ಮೋಡಕೆಂದೇ?
ಹಣತಿ ಸೊಡರು ಹೊತ್ತುವದು, ತನ್ನ ಮುಖವನ್ನೆ ಬೆಳಗಲೆಂದೇ?
ಬಯಲು ಹರಹಿಹುದು ಇಂಬುಗೊಂಡು, ಈ ನಿಖಿಲಲೋಕಕೆಂದೇ!

'ಶಮವ ಜಲಧಿಗಾನಂದ ಶೋಭೆ ಈ ಚಂದ್ರನಿಂದ ತಮ್ಮಾ.'
ಕೊರಡು ಕೊನರಿಸುವದಣ್ಣ, ಸುಗ್ಗಿಯಲಿ ಅಂಥ ಕೃಪೆಯು ನಿಮ್ಮಾ.
ಅಣ್ಣದೇವರೈಶ್ವರ್ಯ ವಿಭವವೀ ಗ್ರಂಥರೂಪವೆಲ್ಲಾ
ತಮ್ಮ ಪಾದಗಳ ತಮ್ಮ ಮೋದವಿದು, ನಾ ಸ್ವತಂತ್ರನಿಲ್ಲಾ.

ತಾನೆ ತೋರುವದ ತೆರೆವುದೇಕೆ? ಅದಲ್ಲ ಅತ್ತ ಇರಲಿ.
ಪ್ರಭು-ಪ್ರಭಾವ-ವಿನ್ಯಾಸಕಿಂತು ನಾನೇಕೆ ಅಡ್ಡ ಬರಲಿ?
ಬೇರೆ ಮಾತಿಸಿಂದೇನು ಅದುವು ತನ್ನಲ್ಲಿ ಪ್ರಕಟಿಸಿಹುದು.
ಸ್ವಪ್ರಕಾಶವಸ್ತುವನು ಬೇರಾವ ಬೆಳಕು ಬೆಳಗಬಹುದು?

ಇದು ಬೆಳ್ಳಬೆಳಕು, ಬೆಡಗೇಕೆ ಇದಕೆ? ನಾ ಸುಮ್ಮನಿದ್ದರೂನೂ
ಈ ಜನರೆ ನೋಡುವರು ಜನರೆ ಕಾಣುವರು, ಇದುವು ತೀರಿಯದೇನು?
ಕಣ್ಣು-ನೋಟ ಇದು ಒಂದರಾಟ ನಾ ತಿಳಿಸಿ ಹೇಳಲೇಕೆ?
ಸಿದ್ಧಸಾಧ್ಯ ಒದ್ದಾಟ ಸಾಕು; ಆಯತಕೆ ಸಿದ್ಧಿ ಬೇಕೆ?

ಇದನು ಬಿಟ್ಟು ಅನುಭವದ ಹಾದಿಯಲಿ ಬೇರೆ ಗುಟ್ಟು ಇಲ್ಲ.
ತಾನೆ ದೃಶ್ಯ, ದೃಷ್ಟಾರ ತಾನೆ. ಸಂಗ್ರಹರಹಸ್ಯವೆಲ್ಲ.
ಎಂದಿನಂತೆ ಅದು ಇಂದಿಗೂನು ಸಿದ್ಧಾಂತದಾರಪಾರ
ಯಾರು ಹೇಳಿದರು, ಹೇಳದಿದ್ದರೂ, ಸತ್ಯಚಿತ್ರ ಸಾರ.

ಇದ್ದ ಮಾತನ್ನೆ ಹೇಳಲಿಕ್ಕೆ ಬೇಕೇನು ಗ್ರಂಥ ಹೊಸದು?
ಸತ್ಯ ಮೆಚ್ಚಿ ಮೂಡುವದು ಮಾತು, ಅದನೆಂತು ಅಡಗಿಸುವದು?
ರುಚಿಸಿದ್ದನುಂಡು, ಕಂಡದ್ದೆ ಕಂಡು, ಹಲವೊಲವು ನವ್ಯಪ್ರೀತಿ.
ಹಾಡಿದ್ದೆ ಹಾಡಿ, ಹೇಳಿದ್ದೆ ಹೇಳಿ, ರಮಿಸುವದು ರಮ್ಯರೀತಿ.

ಹೊಸತೇನು ಇಲ್ಲ ಇದರಲ್ಲಿ, ಅಹುದು ಆಗಿಲ್ಲ ಗುಟ್ಟುರಟ್ಟು.
ತಮ್ಮರಿವೆ ಗುರುವು ತಂತಮಗೆ ಎಂಬೆ, ಪರಮಾತ್ಮ ಎಲ್ಲ ನಿಟ್ಟು.
ನಾವೆಲ್ಲರಲ್ಲಿ ತುಂಬಿಹುದ ಕಂಡು ಅಡಗಿರದೆ ಹೊರಗೆ ಬಂದೆ.
ನನ್ನಲ್ಲಿ ತಾವು ತುಂಬಿಹಿರಿ ಎಂದು ಒಳಹೊರಗೆ ಒಂದೆ ಎಂದೆ.

ಮುಚ್ಚೇನು ಮತ್ತೆ ಬಿಚ್ಚೇನು ಇಲ್ಲಿ, ಅದು ಇರಲಿ ಯಾಕೆ ಮಾತು?
ಮಧ್ಯಮೆಯ ದಾಟ ಪಶ್ಯಂತಿಯಾಚೆ ಪರವಾಣಿ ಓತು ಹೂತು,
ಬರದೇನು ಮತ್ತೆ ಹುಸಿಮೌನವೇಕೆ, ಮೌನವನೆ ಮೌನವಿರಿಸಿ.
ಜಲಲಿಪಿಯ ತೆರದೆ ಈ ಮಾತನೊರೆದೆ, ಹೃದಯಕ್ಕೆ ಹೃದಯ ತೆರೆಸಿ.

ಉಪನಿಷತ್ಸಾರ ಅದು ಕಂಡ ಸಾರ ಇವರೊಳಸಾರವಿಹುದು.
ಇದರಲ್ಲೆ ಬೋಧ ಮುಳುಗಿಹುದು ಒಳಗೆ ಶೋಧಾರ್ಥ ಮುಳುಗಲಹುದು.
ಅಮೃತಾನುಭವದಿ ಶ್ರೀಮಂತರಾಗಿ ಶ್ರೀಜ್ಞಾನದೇವನೆನುವ
ಮನದಿಂದ ಮುಕ್ತ ಭಗವಂತಯುಕ್ತ ಸಂಪ್ರಾಪ್ತ ಅಮೃತತನುವ.

ಪಡೆದುಣಲು ಬೇಕು, ಮುಕ್ತರಿಗೆ ಸಾಕುಬೇಕೆಂಬುದಿಲ್ಲ ಬಲ್ಲೆ.
ಅಮೃತಾನುಭವವು ಬೇಡೆಂಬರುಂಟೆ ಆ ಮುಕ್ತಯುಕ್ತರಲ್ಲೆ?
ಇದು ವಿಶ್ವನಿಯಮು, ಪ್ರೇಮಕ್ಕೆ ಪ್ರೇಮ ಬರುತಿಹುದು ತಾನೆ ಓತು.
ಸೋಜಿಗವದೇನು? ರುಚಿಸುವದು ತಾನು ಅಮೃತಕ್ಕೆ ಅಮೃತ ಸೋತು.

ದಿನದಿನವು ಒಸಗೆ ಚಂದಿರನ ಹೊಸಗೆ, ಪೂರ್ಣಿಮೆಯ ಚಂದ್ರ ಬೇರೆ.
ಇದು ಹೇಳಬೇಕೆ ಸಮದೃಷ್ಟಿಯವರು, ಅದ ಹೇಳದಿರಲು ಅರೆ.
ಅವರವರ ಪ್ರಾಯ ಆ ಕಾಯದಾಯ; ಆಲಿಂಗಸಂಗದಲ್ಲಿ
ಹೊರಹೊಮ್ಮಿ ಸೂಸಿ ಒಳಹೊಕ್ಕು ಸೋಸಿ ಬಹದೇಕರಂಗದಲ್ಲಿ.

ಮಾಘಋತುವಿನಲ್ಲಿ ಆ ವೃಕ್ಷದಲ್ಲಿ ತನ್ನಿಂತು ಹೂವ ಬಿಟ್ಟು
ದಿಗ್ದೇಶವಲ್ಲ ಹೊರಚೆಲ್ಲಿ ಬಹವು ಗಂಧಕ್ಕೆ ಮುತ್ತಸಿಟ್ಟು.
ಈ ಉಕ್ಕು ಏಕೆ ಅದ ಹೇಳಬೇಕೆ ಯಾರ್ಯಾರಿಗೆ ಬಿಚ್ಚಿ ಬಿಡಿಸಿ?
ಅನುಭವದ ಅಮೃತ ಇರುತಿಹುದು ಸಹಜ ಎಲ್ಲರಿಗು ಹುಚ್ಚು ಹಿಡಿಸಿ.

ಆತ್ಮಾನುಬಂಧ ಆನಂದದಿಂದ ತೋರಿಬಿಟ್ಟು ತುಟಿಗೆ ಚಿಮ್ಮಿ
ಬಿಟ್ಟವರು ಉಂಟೆ ಅಮೃತಾನುಭವವ ರುಚಿಗಂಡ ಮೇಲೆ ಒಮ್ಮೆ?
ಅವ ಬದ್ಧನೆಂಬ ಇವ ಬಿದ್ದನೆಂಬ ಅವ ಗೆದ್ದನೆಂಬ ಹಸಿಗೆ
ಮುಸಿಹೋಗಿ ಇಲ್ಲಿ ಅನುಭವಕೆ ಬಹುದು ಅಮೃತತ್ವದೊಂದು ಬೆಸಿಗೆ.

ಗಂಗೆಯಲಿ ಬಂದು ತಾನಾಗಿ ಒಂದು ಹರಿದಿಹವು ಹತ್ತು ನೀರು.
ಜೇಷ್ಠ್ಯವೆಂತು ಬಿಸಿಲಲ್ಲಿ ಬೆರೆತ ತನದೊಂದು ಪರು ಪೇರು?
ಆ ಕ್ಷರದ ಕ್ಷಾರ ಕ್ಷರಿಸುತ್ತಲಿರಲಿ ಅಕ್ಷರವು ಶಾಂತ ಜಲಧಿ.
ಸಾಹಿತ್ಯವೆಲ್ಲ ಐವತ್ತು ವರ್ಣ ಓಂಕಾರ ಸಾರ ಬಲದಿ.

ಕಸ್ತೂರಿಯಲ್ಲಿ ಒಳಬೆರೆತ ಮಣ್ಣು ಆ ಗಂಧ ತೇಗುವಂತೆ,
ಚಂದನದ ಸಂಗ ಪಡೆದಂಥ ಬೇವು ಪ್ರಸನ್ನವಾಗುವಂತೆ,
ಆ ಲೋಹವೊಮ್ಮೆ ಪರಿಸಕ್ಕೆ ತಾಗಿ ಪಡೆಯುವದು ಸ್ವರ್ಣರೇಖೆ;
ಆಪಾದವಾಗಿ ಜ್ಞಾನಾತ್ಮನಲ್ಲಿ ಹೂತಂತೆ ಮುಕ್ತಿಶಾಖೆ.

ಅಬಲ ಬ್ರಹ್ಮದಲಿ ಸಬಲಬ್ರಹ್ಮ ನೆರೆನೆರೆತು ಒಂದುಗೂಡಿ,
ಪರಮಾತ್ಮನಲ್ಲಿ ವೈವರ್ತವಾಗಿ ಪರಿಣಮಿಸಿ ವಿಶ್ವವೋಡಿ,
ಐಶ್ವರ್ಯವೆಲ್ಲ ಮೆರೆಯುತ್ತಲಿರಲು ನಶ್ವರತೆ ಹೋಯಿತೋಡಿ.
ಸುಡುಬೆರಳನೆತ್ತಿ ತೋರಿಸುವವರಾರು ಶಿವ-ಶಕ್ತಿ ಬೇರೆ ಮಾಡಿ?

ಆದಕಾಗಿ ಎಸುವ ಈ ಜ್ಞಾನದೇವ ಅನುಭವದ ಅಮೃತ ಪಡೆದು
ಸಂಪೂರ್ಣರಾಗಿ ಆ ಬ್ರಹ್ಮವಾಗಿ ಭೌಮತ್ವವನ್ನು ಹಡೆದು
ಮೊವಲಿಹುವು ಮುಕ್ತಿ, ಅನುಭವದ ಭುಕ್ತಿ, ಹಬ್ಬಕ್ಕೆ ಹಬ್ಬವಾಗಿ.
ಓಬ್ಬೆಂದು ವಿಶ್ವ ನಲಿದಾಡುತಿರಲಿ ಆಗರ್ಭವೊಬ್ಬನಾಗಿ.

ಆನಂದಲಹರಿ

ಮಂಜುವೆಟ್ಟದ ತಂದೆ ಕರುಳಿಲೆ ಮುಟ್ಟಿದನು ತುದಿಬೆರಳಲಿ
ಬೆಟ್ಟದೊಡೆಯನು ಮುದ್ದಿನಲಿ ಎತ್ತಿದನು ಹಲಸಲ ಮರುಳಲಿ
ದುಂಡುಮೊಗಗನ್ನಡಿಯ ಹಿಡಿಕೆಯು ಹಾಗೆ ಮೆರೆವೀಗದ್ದವ.
ಸರಿದೊರೆಯೆ ಇದಕಿಲ್ಲ, ಬಣ್ಣಿಸಿ ಬರೆಯಲೆಂತೀ ಪದ್ಯವ?

ತ್ರಿಪುರ ಮುರಿದವನಪ್ಪಿಗೆಗೆ ಮುಳ್ಳಿಡುವ ಮುಮ್ಮುರಿ ಕೊರಳಿದೆ.
ಮೊಗದ ಕಮಲವ ದೇಟು ಜಗದಾಧಾರ ಹೇಗೋ ಹೊರಳಿದೆ.
ಅಗುರುಧೂಪದ ಹೊಗೆಗೆ ಮಾಸಿದೆ ಅಚ್ಚ ಬಿಳಿಮುತ್ತಿನ ಸರ.
ಬೆಂಡುವಂಟಿನ ಗಂಟುಗುಂಡಿನ ಜೆಡಗು ಬಳುಕಿದೆ ಹೊಸತರ.

ಅಭಯವರದ ಕರಮುದ್ರೆ ಇಹುದು ಆ ಹಿಂದುದೈವಗಳಿಗೆ.
ಕೊಡುವೆ ನೀನು ಸುಳಿದಿಲ್ಲ ತಾಯಿ ಆ ನಟನೆ ನಿನ್ನ ಬಳಿಗೆ.
ಭಯವು ಹಿಂಗುವೊಲು ಮಿಕ್ಕ ಫಲವ ಕೊಡೆ ನೀ ಶರಣ್ಯೆ, ಸಾಕು.
ಚರಣದಿಂದಲೇ ಕಾರ್ಯವಾಗುತಿರೆ, ಕರಗಳೇಕೆ ಬೇಕು?

ಈ ಹಗಲ ಬೆಳಗುವೆನು ಎಂದು ಹಣತಿಯೊಂದೊತ್ತಿ ಎತ್ತಲಹುದೆ?
ಬೆಳುದಿಂಗಳಲ್ಲಿ ಬಸಿಗಲ್ಲ ನೀಡಿ ತಿಂಗಳನು ತಣಿಸಬಹುದೆ?
ಆ ಕಡಲ ತುಂಬಲೆಂದೆನುತ ಹೊಳೆಯು ಹರಿಹರಿವುದೇನು ಹುಚ್ಚು!
ಏ ಮಾತೆ, ನಿನ್ನನೇ ನಿನ್ನ ಮಾತಿನಿಂ ಹೊಗಳಲೇನು ಹೆಚ್ಚು?

ನವನಿಧಿಯೆ, ವಿಧಿಯೆ, ನಿರವಧಿಯೆ, ನಿಚ್ಚ ನಗುವಾಕೆ, ನೀತಿಯವಳೇ,
ತವನಿಧಿಯ ಅರಿವೆ ನೆಲೆನಿಂತ ಚಿತ್ತ ನೆಲೆವೀಡು ಮಾಡಿದವಳೇ,
ನಿಟ್ಟಿಲ್ಲ, ನಿನಗೆ ಕಟ್ಟಿಲ್ಲ, ನಿಗನು ಗನುಗಮಿಸಿ ತುಂಬಿದಾಕೆ,
ಹಳೆಮಾತ ಜತೆಗೆ ಹೊಸಗೀತವಿದನು ಎಲೆ ತಾಯಿ ಮಾಡು ಜೋಕೆ.

ಹಸುತನದ ಹಾಸ ಬಿಚ್ಚುವನು ತನ್ನ ತಾ ನಿನ್ನ ಮೆಚ್ಚುಗೊಂಡು
ಹಿರಿಹಿಗ್ಗನುಂಡು ಕಾಣುವದ ಕಂಡು ಚಿರಜೀವಿಯಾಗಿಕೊಂಡು
ನಿನ್ನವನು ರತಿಗೆ ತನ್ನವನು ಅವನು ಸರಸತಿಗು ಬ್ರಹ್ಮಸವನು.
ಹೊನ್ನಪಸ ಕೈಯು ಕಸವಾಗಿ, ಜೀವರಸವಾಗಿ ಬಾಳುತಿಹನು.

ಸರಸತಿಯು ಬಾಯ ತಾವರೆಯ ತಂಬುಲದ ಗುಟುಕನೊಂದ ಕುಡಿದು
ಆಗೊ ಹುಟ್ಟುಮೂಕರೂ ದಿಟ್ಟ ಕವಿಗಳಾಗುವರು ಅಂದು ಹಿಡಿದು
ಅದರಂತೆ ಕೆಂಪು ಅದಕಿಂತ ತಂಪು ಕಾಲ್ತೊಳೆದ ನಿನ್ನ ನೀರು
ಅದನೆಂದು ಕುಡಿದು ಬೆಳೆವೆನು ಎಂದು ಎಳಸುವದು ಜೀವಬೇರು.

ತುಟಿಗೆ ಮಾಟನಗೆ, ಎದೆಯ ತುಂಬ ತುಂಬಿದೆಯ ಕ್ಷೀರಶಾಂತಿ,
ಕಣ್ಣಿನಲ್ಲಿ ಕಂದರ್ಪ, ಮೈಗೆ ಕಡವಾಲ ಮರದ ಕಾಂತಿ.
ನಿನ್ನ ಭಕ್ತರಲಿ ನಿನ್ನ ಭಕ್ತಿ ಅವಿಭಕ್ತವಾಗಿ ಮೂಡಿ
ಹರನ ಕಣ್ಗೆ ಕಂಗೊಳಿಸುತಿಹುದು ಭಕ್ತರಲಿ ನಿನ್ನ ನೋಡಿ.

ಹರನ ಮಡದಿ ನೀ, ಹರಿಯ ಹೆಂಡತಿ ನೀ, ವಿಧಿಯ ಬಿಡದಿ ಎಂದು.
ಬಲ್ಲ ಜನರು ಬಲ್ಲಂತೆ ಹೊಗಳಿ ಹೇಳುವರು ಬಲ್ಲೆವೆಂದು.
ನಿನ್ನ ನೆಲೆಯು ಸಿಲುಕುವದೆ ನುಡಿಗೆ ಕಂಗಳಿಗೆ ಕವಿಸಿ ಮಾಯೆ
ಮೂರರ ಮೀರಿ, ನಾಲ್ಕನೆಯದೇನೊ ನೀನಾಗಿ ಇರುವೆ ತಾಯೆ.

ಹಣವ ಗಳಿಸುತಲೆ ತಾವು ಲಕ್ಷ್ಮೀಪತಿ ಎಂದು ಭ್ರಮಿಸಿಕೊಂಡು
ಕಾವ್ಯ ಕಟ್ಟಿ ವಾಕ್ಪತಿಗಳೆನಿಸಿ ಇರುತಿಹವು ಕೆಲವು ಗಂಡು.
ನೀನೆ ಗರತಿ, ಶಿವನೊಬ್ಬ ಬಲ್ಲ ನಿನ್ನಲ್ಲಿ ಇರಲು ಬೆರತು
ನಿನ್ನ ವೈಯು ಮುಟ್ಟುವದು ಪಾಪ ಗೊರಟೆಗೆಗು ಕೂಡ ಹೊರತು.

('ಭವನು ಭವನಕೆ ಬರಲು ಸಂಭ್ರಮದಿದಿರುಗೊಳ್ಳುವ ಕಾಲಕೆ
ಬ್ರಹ್ಮಮಕುಟವ ತಮ್ಮಡಿಯು ತಾಕೀತು, ಹರಿಯ ಕಿರೀಟವ
ಚೂಪುಕುಡಿ ಎಡವೀಯೆ, ದಾಟೌ ಇಂದ್ರಸೆರಗಿದ ಮಕುಟವ.' ,
ಎನುತ ಪರಿಜನರುಕ್ತಿ ಮೆರೆವುದು ನಿನ್ನ ಹೆಜ್ಜೆಯ ತಾಲಕೆ.)

ಭವನು ಭವನಕೆ ಬಂದಿರೆ
ನೀನು ವಿಭ್ರಮ ಹೊಂದಿರೆ
ನಿನ್ನ ಜನರು ಪರಾಕು ಹೇಳಿ ವಿಲಾಸ ಸಂಭ್ರಮದಿಂದಿರೆ
'ಬ್ರಹ್ಮಮಕುಟವು ತಾಯಿಯೇ,
ಹರಿಕಿರೀಟವು ಮಾಯೆಯೇ,
ಇಂದ್ರಶಿರ ಶಿವಜಾಯೆಯೇ,
ಎಡವಿಗಿಡವೀ, ತಾಕಿಗೀಕಿ' ಎನ್ನುತೆನ್ನುತ ಮುಂದಿರೆ.

ದಿನದ ಸಂಭ್ರಮ ದಿನದಿ ವಿಭ್ರಮ
ಇದಿರುಗೊಳ್ಳುವ ಚೆಂದವೂ
ದಿನದಿನವು ನನ್ನುಸಿರನಾಳಲಿ ಕುಣಿಯೆ ಹೃದಯಸ್ಪಂದವು
ತಮ್ಮಡಿಯ ಆನಂದವು.

ಕಸಿರು ಇರದ ರಸದುಂಬಿ ಮನಕೆ ರವಿಶಶಿಗಳಿಂದ ಮೀರಿ
ಉರಿಯ ಕೆಚ್ಚಲಲಿ ಹಿಗ್ಗಿನೊಂದು ತೆರೆ ಬಂದಹಾಗೆ ತೋರಿ
ಮಿಂಚುಬಳ್ಳಿಯೊಲು ತೆಳ್ಳಮೈಯ ಕಳೆ ಆರು ಕಮಲ ದಾಂಟಿ
ಹಿರಿಯ ಕಮಲವನದಲ್ಲಿ ಮೆರೆಯುತಿದೆ ನೂರು ರಸಗಳೀಂಟಿ.

ನಿಮ್ಮ ತಿಳಿವಳಿಕೆ ತೆರೆವ ಕಣ್ಣಿನಲಿ ಗೊಂಬೆಯಾಗಿ ನಿಂತು
ನಿದ್ದೆಹೋದ ಕನಸನ್ನೆ ಹೊಸತು ಕನ್ನಡಿಸುವಂತೆ ಬಂತು
ಕಲಿವರಾರು? ಕಲಿಸುವರದಾರು? ಆ ಕಲಿಕೆ ಕಲ್ಪಿಸುವರೆ!
ಒಲವು ನಲುಮೆಯಲಿ ಬಿತ್ತಬಹುದು, ತಿಳಿವೆಂತು ಕರುಣಿಸುವರೆ?

ತ್ರಿಗುಣಕ್ಕೆ ಹುಟ್ಟಿದ ತ್ರಿಮೂರ್ತಿಗಳು ಮಣಿದಿಹರು ನೀನೆ ಶರಣೆಂದು ಬಗೆದು
ನಿನ್ನ ಅಡಿಬೆಸನಕ್ಕೆ ಇಟ್ಟ ಮಣಿಪೀಠಕ್ಕೆ ತಲೆಗೊಟ್ಟು ಕೈಯ ಮುಗಿದು.
ಪಾವಲೀನರಿಗೇನು ಬೇರೆ ಪೂಜೆಯು ಬೇಕೆ? ಈ ಗುಟ್ಟು ಭಕ್ತ ಅಲ್ಲ.
ನಿನ್ನ ಪಾದಕೆ ಪೂಜೆ ಸಲ್ಲಿಸಿದ ಕೂಡಲೇ ಸಲ್ಲುವದು ಅವರಿಗೆಲ್ಲ.

ನೀನೆ ಶಿವನೊ ಶಿವ ನೀನೊ ತಾಯೆ, ಸತಿಶಕ್ತಿ ನೀನು ಭಾಪು.
ಮುಡಿಯಲ್ಲಿ ಚಂದ್ರ ಹಣೆಯಲ್ಲಿ ಕಣ್ಣು ಮೈಗೆಂಪು ಮಧುರ ರೂಪು.
ಶಿವನ ಆಲಿಂಗಿಸುತ ಶಿವನ ವ್ಯಾಪಿಸಿಬಿಟ್ಟೆ ಶಿವನ ಅರ್ಧಾಂಗಿ ಎಂತೊ!
ಎಡದ ಮೈಯನು ತುಂಬಿ ತಣಿವುಗೊಳ್ಳದೆ ಏನೊ ಇಡಿಮೈಯತುಂಬಿನಿಂತೊ.

ಜಗವ ಬ್ರಹ್ಮ ಪಡೆವನು.
ಹರಿಯು ಉಳಿಸಿ, ರುದ್ರನಳಿಸಿ
ಒಡಲೊಳಡಗಿಸಿಡುವನು.
ಅವನು ಈಶನೆನಿಪನು.

ನಿನ್ನ ಹುಬ್ಬ ಸಂಜ್ಞೆಯಿಂದ
ಬಂದ ಒಂದು ಆಜ್ಞೆಯಿಂದ
ಶಿವನು ಇದನು ನೋಡುವ,
ಮೊದಲಿನಂತೆ ಮಾಡುವ.

ಇವರು ಜಗದ ಪಂಚಪ್ರಾಣ
ಅವರಿಗೆಲ್ಲ ನೀನೆ ತ್ರಾಣ
ನಿನ್ನ ಹುಬ್ಬ ಹಾರಿಸುತ್ತ
ಜೀವತಮ ನಿವಾರಿಸುತ್ತ
ಹಡೆವ ಹೊಟ್ಟೆಯಲ್ಲದೇ
ಬೇರೆ ಕರುಳು ಬಲ್ಲುದೇ?
ಜಗಜಗಂಗಳನ್ನು ನೀನು
ಮತ್ತೆ ಮತ್ತೆ ಕಾಯುವೆ;
ಪ್ರಾಣವನ್ನು ಈಯುವೆ.

ಸುಮ್ಮನಾಗುವ ಬ್ರಹ್ಮ, ಮುರಿಮುಚ್ಚಿಕೊಳುವ ಹರಿಯು,
ಸಾವಿಗೂ ಯಮಗು ಗಂಟು.
ಬೇರುದೆಸೆಯಿಲ್ಲದೆ ಕುಬೇರ ಹೋಗುವ ಕಡೆಗೆ ಎಲ್ಲರಿಗು ಲಯವು ಉಂಟು.
ದೇವದೇವತೆಯ ದೇವೇಂದ್ರಸಂತತಿಗಳಿಗು ಕೊನೆಗೇನು ಉಳಿವು ಇಲ್ಲ.
ಪ್ರಳಯದಲ್ಲಿಯು ನಿನ್ನನೊಡಗೂಡಿ ಶಿವನೊಬ್ಬ ಅಬ್ಬಬ್ಬ ಉಳಿವನಲ್ಲ!

ನಡೆದುದೆ ಪ್ರದಕ್ಷಿಣವು, ಮಾಡಿದುದೆ ಮುದ್ರೆ, ಮಾತಾಡಿದುದೆ ನಿನ್ನ ನಾಮ.
ಉಂಡಿದ್ದು ತಿಂದದ್ದು ನಿನಗೆ ಆಹುತಿ, ನೆಲಕೆ ಉರುಳೆ ದಂಡಪ್ರಣಾಮ.
ಮುಟ್ಟಿದ್ದು ಮೂಸಿದ್ದು ನೋಡಿದ್ದು ಕೇಳಿದ್ದು ಈ ಸಕಲ ಭೋಗದಿಂದ
ಮಾತೃಯೋಗವ ಪಡೆನು ಪೂಜೆಯೆನಿಸಲಿ ನಿನ್ನ ಕೃಪೆಯಾ ಕಟಾಕ್ಷದಿಂದ.

ಮರಿದುಂಬಿ ಮಿಂಚುಳ್ಳ ಹುಟ್ಟುಗುರುಳಿನ ನಿನ್ನ
ಮೊಗವು ನಗುವದು ನಲಿನವನ್ನು ಕಂಡು.
ನಗೆ-ಎಸಳು ಪರಿಮಳಿಸೆ ತುಂಬಿಯಾಗೆರಗುವುದು
ಸ್ಮರನ ಮಥಿಸಿದ ಕಣ್ಣು ಮೋಹಗೊಂಡು.

ಅಡಿಯಲೊದ್ದೆಯೆಂದು ನೆಕ್ಕ ಬಂತು ತಳಿತಶೋಕ
ಅಡಿಗೆ ಮೆಚ್ಚಿ ಜೀವದೊಡೆಯ ಕುಳಿತ, ಏನು ಪಾಕ!
ಆಃ ಮುದ್ದು ಅಡಿಗೆ ಮುದ್ದನಿಡುವನಾವ ಧನ್ಯ!
ನಿನ್ನ ಅಡಿಯ ಮಣೆಯ ಮಾಡಿ ಮೆಟ್ಟಿ ತಾಯಿ ನನ್ನ!

ಅಸರಂತ ಪತಿಯು ಗುಣಕಥನ ಜಪವೆ ಐಶ್ವರ್ಯವಾಗೆ ನಿನಗೆ
ಜಯವಿರಲಿ ಜಿಹ್ವೆಗೆಂದೆಂದು ಜನನಿ ಅದು ಜಪಾಪುಷ್ಪವೆನಗೆ.
ನಾಲಗೆಯ ತುದಿಯೆ ನೆಲೆಯಾದ ಅಚ್ಚಬಿಳಿಹಳಕಿನಂಗದವಳ
ಸರಸ್ವತಿಯ ಮೈ ಮೂರ್ತಮಾಣಿಕವು ಅಹುದು ಕೆಂಡ ಹವಳ!

ರಣದಲ್ಲಿ ಜಯಿಸಿ ದೈತ್ಯರನು ಕವಚಿಗಳು ಶಿರಸ್ತ್ರಾಣ ತೆಗೆದು
ಹರನ ಪೂಜ್ಯ ನಿರ್ಮಾಲ್ಯ ಚಂಡನಿಗೆ ಮೀಸಲೆಂದು ಬಗೆದು
ಹರಿಯು ಇಂದ್ರ ತಾರಕನು ಕಪ್ಪುರದ ಕಂಪು ತಂಪು ತಾಗಿ
ಬಯಸಿ ಬರುವರಾ ತಾಯ ಬಾಯದಂಬುಲದ ಕವಳಕಾಗಿ.

ವಿವಿಧ ಪದದಿ ಪುರಹರನ ಹಾಡಿ ಸರಸತಿಯು ಸುರಿಸೆ ಜೇನು;
‘ಲೇಸು ಲೇಸು ಅಹುದಹುದೊ’ ಎಂದು ತಲೆದೂಗಲಾಗ ಸೀನು;
ಅಹ ಅದರ ಮಧುರ ಮುಳುಗಿಸಿತ್ತು ತಂತಿ ಕಲರವದ ಲಸವ ಕಾಣೆ.
ಗವಸಣಿಗೆ ಮುಸುಕು ಹಾಕಿದಳು ವೀಣೆಗಾವಾಗೊ ವಾಣಿ ಜಾಣೆ.

ಓಮರ

ಗುಡಿಯ ಮಡಿಯ ಪೂಜಾರರಣ್ಣ ನರ್ತಕಿಗೆ ನುಡಿದ ನೊಂದು:
'ಎಲೆ ದುಷ್ಟೆ, ನಷ್ಟೆ, ನೀ ಬೇಟೆಯಾಡುವೆಯೆ ಪ್ರಾಯದವರನೆ'ಂದು
'ಹೌದು ಧಣಿಯೆ, ನಾ ಬಿಚ್ಚುವೊಗ್ಗೆ. ನನಗಿಲ್ಲ ಸೆರಗು ಮುಚ್ಚು.
ತೆರೆದ ಪುಸ್ತಕವು ನನ್ನ ಬಾಳು, ನಿಮಗೇನೊ ಬೇರೆ ಹುಚ್ಚು!'

ನದಿಯ ಮರಳೊ, ಮರದೊಂದು ನೆರಳೊ, ಎಲ್ಲಾದರೂನು ಸರಿಯೆ.
ನನ್ನ ಜತೆಗೆ ನೀ, ನಿನ್ನ ಜತೆಗೆ ನಾ, ಬದಿಗೆ ಹಳ್ಳ ಹರಿಯೆ;
ಹೇಳುತಿರಲು ನೀ ಕೇಳುತಿರುವೆ ನಾ ಹಾಡ ನೆನೆಸಿ ಕರೆವೆ;
ನಿನ್ನ ದನಿಯು ನವಿರಾಗದಲ್ಲಿ ಜೇನಾಗ ಮುಳುಗಿ ಮರೆವೆ.

ಪಂಪ ಹುಟ್ಟಿ ಭಾರತವ ಕಟ್ಟಿ ಹಿರಿ ಸಿದ್ಧಪದವ ಮುಟ್ಟಿ
ನಿರ್ಜರಿಯ ಪಡೆದ; ನೀ ಮಾತ್ರ ಅದನೆ ಓದುತ್ತ ಕುಳಿತುಬಿಟ್ಟೆ.
ಆ ಪೊನ್ನ ರನ್ನ ಜನ್ನರುಗಳಿರಲಿ: ತೀಡಿದರು ಅದನೆ ಅದನೆ.
ಯಾರಾರೊ ಎಂದು ರಸವಾರಿಹೋಗಿ ಪುಸ್ತಕವೆ ಆಯ್ತು ಬದನೆ.

ಕರ್ಣಾಟ ಇರಲಿ, ಕಣ್ಣಾಟ ಇರಲಿ, ಚಿನ್ನಾಟ ಸಾಕುಮಾಡು.
ಮಣ್ಣಾಟ ಬಿಟ್ಟು, ಮನೆ ಕಟ್ಟಿ ನೋಡು, ಸಂಸಾರದಲ್ಲಿ ಹೂಡು.
ನಿನಗೆ ನೀನೆ ಮರೆಯಾಗಿ ಚಿಗಿಸು ಹೂತಿರುವ ಹಿಗ್ಗಿನಾಟ.
ಜನನ-ಮರಣಗಳ ಸೂತ್ರದಲ್ಲಿ ನಡೆಸಿರುವ ಗೊಂಬೆಯಾಟ.

ಕ್ಷೀರಸಾಗರವ ಹಾಲಿನಲ್ಲಿ ನಿನಗೂನು ಪಾಲು ಬೇಕು.
ಸಾಕು, ನಿನ್ನ ಶತಕೃತ್ಯದಲ್ಲಿ ಒಂದೆರಡು ಮೂರು ನಾಕು.
ಚೊಕ್ಕ ಹೇಳು, ಬಹುಬಹುದು ಬೇಡ, ನಾಸ್ತಿಕ್ಯ ಸಹಿಸಲಹುದು.
ಜಗದ್ರಂಗದಲಿ ಯಾವ ಪಾತ್ರ ಕನ್ನಡವು ವಹಿಸಲಹುದು?

ಹಿಡಿಮಣ್ಣಿನಲ್ಲಿ ಅಡಗಿತ್ತೊ ತಮ್ಮ ಎಂಥೆಂಥ ಮಕುಟ ನೋಡ.
ಕಲ್ಲಿನಲ್ಲಿ ಹೆಸರನ್ನು ಕೊರೆಸಿ ಚಿರವೆಂದು ನಂಬಬೇಡ.
ಜಯದ ಮದ್ದಿನಲಿ ನಾಮಮೋಹದಲಿ ಭರತನಾದ ಮೂಢ.
ಹೆಸರು ಇರಲಿ; ಮುಳುಗಿಹುದು ಎಲ್ಲೊ ಆ ಹೆಸರ ಗುಡ್ಡ ಕೂಡ.

ಗಾಂಧಿ ಇದ್ದ, ಮತ್ತಾರೊ ಬಿದ್ದ, ಹೊರಬರಲಿ ನಿನ್ನ ಬುದ್ಧಿ.
ದಪ್ಪ ಅಕ್ಷರದ ವಾರ್ತೆ ಬೇಡ, ಬರಿ ವರ್ತಮಾನ ಸುದ್ದಿ
ಮಣ್ಣು ಹತ್ತದಿರಲೆಂದು ಮೀಸೆಯನೆ ಇಳಿಸಿಬಿಟ್ಟೆ ನೀನು.
ಮುಖಕೆ ಮಸಿಯು ಹತ್ತೀತು, ಇನ್ನು ಮುಂದದರ ಗತಿಯು ಏನು?

ತುದಿಗೆ ತುಟಿಯು ಸೋಕಿದರೆ ಸಾಕು ಝುಂಝುಣತ್ಕಾರವೆದ್ದು
ಮೈಯೆ ನಾದಮಯವಾಗಿ ವೀಣೆಯಂತು ಸೋಲಿಸುವುದು ಗೆದ್ದು.
'ಕುಡಿಯೊ ಗೆಳೆಯ, ರಸಕೇನು ಕೊರತೆ?' ಎನುತಿಹುದು ಮಡಕೆ ನೋಡ.
ಒಮ್ಮೆ ಬದುಕಿ ಬಾಳಿತ್ತೊ ಏನೊ ಈ ಮಣ್ಣ ಪಾತ್ರೆ ಕೂಡ!

ಹಾಗೆ ನಗುತಲಿರು, ಕುಂದಬೇಡ, ಏನ ಬೀರುತಿಹುದೆ ಲೇಸು?
ನೀರು ಇಲ್ಲದಲೆ ಒಣಗುತಿರುವ ಸಸಿ ಬಲ್ಲರಾರು ಏನು?

ನಮ್ಮ ದುಃಖವೇ ಪಿಂಡಗೊಂಡು ಹಿರಿ ನರಕವಾಗಲಹುದು;
ನಮ್ಮ ಸುಖದ ತಾವರೆಯೆ ಅರಳುತಿರೆ ಸ್ವರ್ಗವೆನಿಸಬಹುದು.
ಬಾಳ ಸಂಪುಟದ ಪುಟಗಳಲ್ಲಿ ರಸಭಾಗ ತುಂಬ ಮೆಚ್ಚು.
ಇಲ್ಲೆ ಸುಖದ ಸಂಸಾರ ಕಂಡವಗೆ ಸ್ವರ್ಗವೇನು ಹೆಚ್ಚು ?

ಹೌದು ಕುಡುಕ ನಾ, ರಸದ ರಾಗವೇ ಉದಯರಾಗವೆನಗೆ,
ಶಾಂತಿ ಶಶಿಗೆ, ಮಾಧುರ್ಯ ಸವಿಗೆ, ಆ ತುಂಬು ಪ್ರಭೆಯು ಇನಗೆ.
ನನ್ನ ಕೈಯ ಪಾತ್ರೆಯನು ಕಸಿದು ಒಡೆಯುವದು ಎಂಥ ಹುಚ್ಚು ?
ಬೆಳಕನೆಲ್ಲ ಕತ್ತಲೆಯು ಗುಡಿಸುವದು ಯಾವ ಬಗೆಯ ನೆಚ್ಚು ?

ಪ್ರಾಯ ತುಂಬಿರಲು, ಪಾತ್ರೆ ತುಂಬಿರಲಿ. ಬರಿದು ಭ್ರಾಂತಿ ಏಕೆ ?
ಬಾಳ ಕಹಿಗೆ ಕಟುಮಧುರ ಸುರೆಯು ಸರಿಬೆರಕೆ ಬೇಕು; ಜೋಕೆ.
ಸಖಿಯೆ ಸುಖಿಯೆ ಮದಿರಾಕ್ಷಿ ಸಾಕ್ಷಿ ಇಲ್ಲಿನುವವೆನ್ನ ಮನವೇ ?
ಒಂದು ಮುಗಿದು ಇನ್ನೊಂದು ಬರಲು ಮತ್ತೊಂದು ತುಂಬು ಎನುವೆ.

ಬದುಕಿರುವವರಿಗೆ ಈ ಘಟವ ನಾನು ಒಟ್ಟೊಂದೆ ಕೆಲಸಕಿಡುವೆ.
ಯಾರದೇನು ? ರಸ ಸೋಸಿ ನೋಡುವಾ ಪಾತ್ರೆ ಮಾಡಿಬಿಡುವೆ.
ತಪ್ಪಿ ಒಡೆಯೆ, ಕುಂಬಾರರಣ್ಣ ಅದ ಮತ್ತೆ ಮಣ್ಣು ಮಾಡು
ಸುಟ್ಟು, ಕಟ್ಟು, ಕುಡಿವವಗೆ ಮತ್ತೆ ಮೊಗೆ ಮಾಡಿ ಅವನೆ ನೀಡು.

ಸಖಿ ಬಾರೆ, ತಾರೆ ರಸಚಷಕ, ನೀನು ಮಧುರವನು ತುಂಬ ತುಂಬು.
ಪಡೆದದ್ದೆ ಉಂಟು. ಉಳಿವದ್ದು ಏನು ? ಈ ವರ್ತಮಾನ ನಂಬು.
ತನಿಸುಖದ ತುಟ್ಟತುದಿ ಮುಟ್ಟಿ ನೋಡು, ನರಜನ್ಮ ಸುಲಭವಲ್ಲ.
ಓ, ನಾಳೆ ನೋಡಿದವರಾರು ? ಮುಂದಿನಾ ಕ್ಷಣವೆ ನೆಚ್ಚಿಗಿಲ್ಲ.

ವಿಧಿಯು ತನ್ನ ನವವೇದ ಬರೆದು ಹ... ಗೆಯ ಮುಗಿಸುವಂದು
ಹೇಳೇನು ಹೊಸತು ಆವೃತ್ತಿಯಲ್ಲಿ ... ಕಥೆಯು ಬೇಡವೆಂದು.
ಎಲೊ ಬರೆಹಗಾರ ಈ ನಮ್ಮ ಪುಟಕೆ ...ತ್ತೆರಡು ಚಿತ್ರ ಬೇಕು.
ಮರಣ ಮುಸುಕದೊಲು ಹೆಸರನುಳಿ...—ಅದು ಇಲ್ಲ,—ತೊಡೆದುಹಾಕು.

ಈಸಣ್ಣ ಹೌದು, ಬಸವಣ್ಣ ಹೌದು, ಮುಂದೇನು ಹೇಳು ಮಗನೇ.
ಆ ನಿನ್ನ ತಾಳದಲಿ ನೀನೆ ಕುಣಿದೆ ಸ..., ರಚಿಸಿದವನು ನಗನೇ?
ಒಳತೋಟಿಯಲ್ಲಿ ಹೋರಟೆಯು ಮು... ನವಧರ್ಮಮೇಘ ಹೊಮ್ಮಿ
ಮಿಂಚು ಹೊಡಕರಿಸಿ, ಗುಡುಗು ಬಂತು, ಬರಿ ವಚನವಲ್ಲ, ತಮ್ಮಿ!

‘ಕಣ್ಣು ನನ್ನದೇ? ಮನವು ನನ್ನದೇ? ಜಿಹ್ವೆ ನನ್ನದೇನೇ?
ನಿನ್ನದಯ್ಯ ಶಿವ’ ಎಂದು ಬಾಳಿದನು ನನ್ನದೆನ್ನದೇನೆ!
ತನ್ನ ಮರೆವಿಗೇ ತನ್ನ ಅರಿವಿನಲಿ ನ... ವಿಶ್ವಬಂಧು.
ನೀನು ನಕ್ಕರದು ಅಕ್ಕರಹುದೆ?–ಸ...ಷ್ಟ ನಕ್ಕನೆಂದು.

ರಸವೆಂದರೇನು, ಮಧುವೆಂದರೇನು, ಸುರೆ–ಸೋಮವೆಂದರೇನು?
ಸಂಸ್ಕೃತವೆ ಇರಲಿ, ಪ್ರಾಕೃತವೆ ಜೇ..., ಅವರರ್ಥ ಒಂದೆ ತಾನು.

* * * *

ಏನು ತಾಪವದು, ಯಾವ ಶಾಪ, ಎಲೊ ಎಲವೊ ಪಾಪಶಂಕಿ?
ರಸ ಕುಡಿದು ನೋಡು, ಮಧುಗೀತ ಹಾಡು, ಸರಿ ಹೊತ್ತಿಸಲ್ಲಿ ಜಿಂಕಿ.
ಈಗ ಇತ್ತು ಈಗಿಲ್ಲ, ಇದರ ಪರಿ ಯಾರಿಗೇನು ಗೊತ್ತು?
ರೆಕ್ಕೆಗೆದರಿ ಕುಳಿತಿರುವ ಹಕ್ಕಿಗೋ ಹಾರಲೆಷ್ಟು ಹೊತ್ತು?

ಕಿರಣಕಿರಣಕೂ ಹರಣ ತೆರೆದು ಶರಣಾರ್ತಿ ಎಂದ ಬಣ್ಣ
ಮಣ್ಣ ಬದುಕಿರಲಿ, ಕಣ್ಣ ಬೆಳಕೆನಿಸಿ, ಮಣ್ಣುಗೂಡಿತಣ್ಣ.
ಇಂದೆ ಬೆಳಗು ಅರಳಿರುವ ಹೂವು ಅಕೊ ಸಂಜೆಹೊತ್ತಿಗಿಲ್ಲ.
ರಾಮು-ರಾವಣರು, ಕೃಷ್ಣ-ಕಂಸರೂ ಕೊನೆಗೆ ಹೋದರಲ್ಲ.

ಬೆಳಗುಜಾವ

ಏಳು ಚಿನ್ನ, ಬೆಳಗಾಯ್ತು ಅಣ್ಣ, ಮೂಡಲವು ತೆರೆಯೆ ಕಣ್ಣ,
ನಕ್ಷತ್ರ ಜಾರಿ, ತಮವೆಲ್ಲ ಸೋರಿ, ಮಿಗಿಲಹುದು ಬಾನ ಬಣ್ಣ.
ಜೇನ್ನೊಣದ ಹೆದೆಗೆ ಹೂಬಾಣ ಹೂಡಿ ಝುಂ ಎಂದು ಬಿಟ್ಟ ಮಾರ.
ಗುಡಿಗೋಪುರಕ್ಕು ಬಲೆ ಬೀಸಿ ಬಂದ ಆಗೊ ಬೆಳಕು–ಬೇಟೆಗಾರ.

ನಿಶೆಯಿಳಿದ ಉಷೆಯ ಎಳನಗೆಯ ಬಗೆಗೆ ಸೋತಿರಲು ಜಗವು ಸವಿಗೆ
ಕಣ್ಣಿದಿರು ಒಂದು ಕಟ್ಟಿತ್ತು ಕನಸು; ಕೂಗೊಂದು ಬಂತು ಕಿವಿಗೆ :
ಮಕ್ಕಳಿರ ಕೇಳಿ. ರಸ ಕುಡಿಯಲೇಳಿ, ಹುಸಿನಿದ್ದೆ ಗಿದ್ದೆ ಸಾಕು.
ಈ ತುಂಬಿಬಾಳು ತುಂಬಿರುವ ತನಕ ತುಂತುಂಬಿ ಕುಡಿಯಬೇಕು.

ಯಾವಾಗೊ ಕೋಳಿ ಕೂಗಿಹುದು ಏಳಿ, ತಡವೇಕೆ ಪಾನಕೇಳಿ.
ಮೊದಲಾಗಲೀಗ, ಅಂಗಡಿಯ ಕದವ ಈ ಕ್ಷಣಕೆ ತೆರೆಯ ಹೇಳಿ.
ಜೀವನದ ನದಿಗೆ ಸೆಳವಿಹುದು. ಮರಣ ಬಂದೀತು ಕ್ಷಣವು ಉರಳಿ
ಹೋದವರು ತಿರಗಿ ಬಂದಾರೆ, ಅವರು ಬರಲಿಕ್ಕು ಇಲ್ಲ ಮರಳಿ.

ಬಾನ್ ಹೊಗರಲುಂಟು, ಮರ ಚಿಗುರಲುಂಟು, ಬರಲುಂಟೆ ಸುಗ್ಗಿ ಮತ್ತೆ ?
ಮುಳುಗಿರಲಿ ಮುಪ್ಪು ಚಿಂತನದಿ ತಾಸು ಹರೆಯಕ್ಕೆ ಬೇರೆ ಹೊತ್ತೆ ?

ಏಳಣ್ಣ

ಏಳಣ್ಣ ಬೆಳಗಾಯ್ತು; ತಮವು ತಿ ನೆಳಗಾಯ್ತು;
ಚಿಕ್ಕೆಗಳ ಬಳಗವೂ ಕರಗಿಹೋಯ್ತು.
ಮೂಡಲದ ಬೇಡ ಬಂಗಾರ ಬಲೆ ಬೀಸಿರಲು
ಗುಡಿಯ ಗೋಪುರವು ಹೊಂಬಣ್ಣವಾಯ್ತು.

ಕತ್ತಲೆಯ ಬಾಚುವೊಲು ನಸುಕು ಕೈಚಾಚಿರಲು
ಕನಸಿನಲಿ ಕೇಳಿದೆನು ಕೂಗನೊಂದು:
‘ಏಳಿರೈ ಮಕ್ಕಳಿರ, ತುಂಬಿ ಕುಡಿಯಿರಿ ಮಧುವ
ಬದುಕು ಬರಿದಾಗುವದರೊಳಗೆ’ ಎಂದು.

ಅತ್ತ ಕೂಗಿತು ಕೋಳಿ, ಇತ್ತ ಕೂಡಿತು ಜನವು,
ಸಾಗಲೆಂದಿತು ಈಗ ಪಾನಕೇಳಿ.
ಕಾಲ ಕಳೆಯುಲು ಸಲ್ಲ, ಮರುಚಣವು ಹೋದೇವು
ಇತ್ತ ಬರಲಿಕ್ಕಿಲ್ಲ ಮತ್ತೆ ಮರಳಿ.

ತುಟಿಗೆ ಮುದ್ದು ಸುರೆ, ತುಟಿಗೆ ಮುದ್ದು ಪ್ರಿಯೆ,
ತುಟಿಗೆ ಮುದ್ದು ಹಾಡು.
ಕೊರಳೊಳಿಳಿದು ಎದೆಬದಿಗೆ ಸುಳಿದು ಜೇಡಿದ್ದ ಕೊಡುವೆ ಬೇಡು.
ಹಾರದಲ್ಲಿ ವ್ಯಾಪಾರವಿಲ್ಲ ಅರಿ ಜೀವ ಜೀವಬಂಧು.
ಕೊಡುವದೇನು, ಕೊಳ್ಳುವದು ಏನು, ಅವು ಒಂದರೊಳಗೆ ಒಂದು.

ಕೆಟ್ಟೆಯಣ್ಣ ನೀ ಧರ್ಮಶಾಲೆಯನು ಮನೆಯು ಎಂದು ನಂಬಿ.
ಎಷ್ಟು ಶಾಂತಿ ಎಷ್ಟೊಂದು ಭ್ರಾಂತಿ ಇದು ಕೂಡ ಮಣ್ಣಗೊಂಬಿ.
ರಸವೆ ಬಾಳು, ಉಳಿದೆಲ್ಲ ಹಾಳು; ಆ ಸಾಕ್ಷ್ಯ ಬೇರೆ ಬೇಕೆ ?
ಸುಖದ ಸಾರವನು ತಿಳಿಯದವಗೆ ಬದುಕಿದ್ದನೆಂಬುದೇಕೆ ?

ಈಶ

ಇದರೊಳಿರುವನೀಶನಲೇ
ಎಲ್ಲವೆಲ್ಲ ಇಳೆಯೊಳಲೆ
ಬಿಟ್ಟುಕೊಟ್ಟು ಪಡೆದು ಉಣ್ಣು
ಬೇಕೆ ಏಕೆ ಬೇರೆ ಹೊನ್ನು?

ದುಡಿದು ಮಾಡು ಇಲ್ಲೆ ಇಳೆ
ಬದುಕು ನೂರು ಬಾಳು ಬೆಳೆ
ಇದುವು ನಿನ್ನ ಹಾದಿ; ತನ್ನ
ಮಾಟ ಮೆತ್ತಿಕೊಳ್ಳದಣ್ಣ.

ಕುರುಡುಗತ್ತಲುಳ್ಳ ನಾಡು
ಸೂರ್ಯನಿರದ ಕಪ್ಪುಗಾಡು
ತನ್ನ ಕೊಂದುಕೊಂಬ ಜನ.
ಭಾವವಿರದ ತನನನ.

ಕಾಳಿದಾಸ

ನಾನೊಬ್ಬನುಂಟು ಹಲವಾಗಲೆಲ್ಲೂ ಎಂಬ
ಹಂಬಲಿನ ಹಂಬೆ ಹರಿಬಳ್ಳಿವಳ್ಳಿಗಳಾಗಿ
ತನ್ನ ದಾಂಗುಡಿಯ ಗೂನೆ ಬಾನು ಮಣ್ಣೊಂದಾಗಿ
ಒಂದಾಗಿ ಕೆಲವಾಗಿ ಇರುವ ಹರುಹಿನ ತುಂಬ
ನಲಿವುಲಿವು ಬಲುಮೆ ನೆಲೆ ಚೆಲುವ ಮಂದಿರಗಂಬ-
ವೆನೆ ತಾನೆ ಹೂ, ಹಣ್ಣು, ಹೆಣ್ಣು ಕಣ್ಣೊಂದಾಗಿ
ಸೀಡಿ ಬಾನ್‌ಮೀನಂಗಳಲ್ಲು ಚಳಮಿಳನಾಗಿ
ಆಗ ಬಗೆಬಯೆ ಮಿಂಚಿತ್ತು ಒಂದೇ ಬಿಂಬ
ಕಣ್ವ ಕವಿಗಣ್ಣ ಕನ್ನಡಿಯಲ್ಲಿ ಒಳಮೂಡಿ.

ಆ ಕಾವ ನೋವೆ ಹಲಪ್ರೊಲವಿನಲಿ ಹಾಡಾಗಿ
ಯಾವುದೋ ಹಿರಿಬೇಳ್ಕೆ ಮಿಸುಕಾಟವೇ ಹಿಗ್ಗಿ
ಇಲ್ಲದುಂಟಾಗಿ ಕತ್ತಲೆಯು ಬೆಳಕಿಗೆ ಬಾಗಿ
ಸಾವು ಸುಲಿಯಲು ಬಾಳ್ ತೀಳಲು ಎನೆ ಸವಿಗೂಡಿ
ಮುದ್ದಾಟವೆನೆ ಬಂತು ಕಾಳಿದಾಸನ ನುಗ್ಗಿ.

ಸುಮ್ಮನಿರು ಓ ಮಾತೆ!

ಸುಮ್ಮನಿರು ಓ ಮಾತೆ! ಭಾವಗೀತ ಪುನೀತೆ
ಓ ಮಾತೆ, ಓ ಮಾತೆ, ಓ ಆತ್ಮಸುಪ್ರೀತೆ,
ನೋಡಿದರು ತಿಳಿಯದಾ ಗೂಢ ಹೇಳಿದರೇನು?
ತಾನಾಗಿ ಬಿಡುವನಕ ತೊಡಕು ನಾನೂ ನೀನು.
ರಾಗವೆಳೆದರೆ ಭಾವದಾವೇಶವಾದರೂ
ಮಾತೆಂಬುದೆಂದಿಗೂ ಅರ್ಥರೂಪದ ಬೆದರು.
ನಾದವೂ ವಾದವೂ ಬರಲು ಇದಿರಾ ಇದಿರು
ಒಂದು ಒಂದನು ನುಂಗೆ, ಕೊಳಲು ಹುಸಿಹಸಿ ಬಿದಿರು.
ಓ ಅನಿರ್ವಾಚ್ಯವೇ, ನಿನ್ನ ವಾಚ್ಯತೆಗೆಳೆದು
ಗಾಳಿಯೊಡ ಗುದ್ದಾಡಿ ಮೈಯ ನೋಯಿಸಿಕೊಂಡೆ
ಎಂಬ ಹುಂಬನ ಕುರುಡುನಂಬಿಗೆಯು ಪಾಂಗಾಯ್ತು.
ಸಾಧ್ಯಸಾಧನೆಯಲ್ಲಿ ಒಗೆತನದ ಹಗೆಯಳಿದು
ಇಂದಿಲ್ಲ ಒಂದು ದಿನ ಬಂದೀತು ಮೊಳೆಗೊಂಡೆ
ಅಂದೆ ಮೌನದ ನೋಂಪಿ ತಾನು ಹರಿ-ಹಂಗಾಯ್ತು.

ಸಾಕ್ಷಿ

ಇರುವೆನು ಎನ್ನುವ ದೇಹದ ಅರಿವೇ
ಈಗೋ ಆಗೋ ಎಣಿಸುತಿದೆ.
ಅರಿವೆನು ಎನ್ನುವ ಮನದ ಪರಿವೆಯೋ
ಅಹುದೊ ಅಲ್ಲವೋ ಎನಿಸುತಿದೆ.
ಉಸಿರುಸಿರಿಗೆ ಹೊಯ್ದಾಡುವ ಪ್ರಾಣ
ಕಂಠದಿ ಕುಂಠಿತವಾಗುತಿದೆ.
ಬೆಳಕು, ಬಿಸಿಲ, ಬೆಳುದಿಂಗಳ ಇರುಳಿಗೆ
ಬೆಳೆಯುವದೇನೋ ಸಾಗುತಿದೆ.
ಕಂಡೂ ಕಾಣದೆ ಕಾಣದ ಬದುಕೂ
ಹಾಗ್ಹಾಗೇ ಒಳವಾಗುತಿದೆ.
ಹೊಮ್ಮರ ಹೆಮ್ಮರ ಹಬ್ಬಿದೆ ಬಯಲಲಿ
ಪಾದಪ ಅಡಿಯಲಿ ಬಾಗುತಿದೆ.
ನಿಮ್ಮ ಕಣ್ಣು ರವಿಚಂದ್ರ ಬೆಳಗುತಿರೆ
ಜೀವಚುಕ್ಕೆ ನೆರವಾಗುತಿದೆ.

ಜೀವದ ತತ್ತಿ

ಎರಡು ಹೆಜ್ಜೆಗಳಲ್ಲಿ
ಮೂರು ಲೋಕವ ತುಂಬಿ
ಮೂರಕ್ಕೆ ಬಲಿಯು ತಲೆ ಮೆಟ್ಟಿ ನಿಂತೆ
ಎಲೆ ಜೀವದೇವ ಆ
ಲೀಲೆ ಆಗದೊ ಇಲ್ಲಿ
ಎಂತು ಅಲ್ಲಾಗಿತ್ತೊ ಇಲ್ಲಿ ಅಂತೆ

ಜೀವದೀ ತತ್ತಿಯಲಿ
ದೇವನೆಂಬೀ ಹಕ್ಕಿ
ಕಾವನುಣ್ಣುತ ಕಾದುಕೊಂಡೆ ಇಹುದು
ತಂದೆ ಹಕ್ಕಿಯ ಕರೆಗೆ
ತಾಯಿ ರೆಕ್ಕೆಯ ಮರೆಗೆ
ಬಾಯಿದೆರೆದೋಂಕರಿಸಿ ಬೇಗ ಬಹುದು.

ಫಲದ ಹೊಟ್ಟೆಯ ಬೀಜ
ನೆಲದ ಬಸಿರೊಳು ನಾಟಿ
ಮರ ಬೆಳೆದು ಹಣ್ಣು ಬಿಟ್ಟು ಎರಗುವಂತೆ
ದಿವ್ಯ ಮನ್ವಂತರದ
ಭವ್ಯತೆಯ ಉದಯದಲಿ
ಗುರುವೆ ಅವತ[illegible]ಷ್ಣ ಹೃದಯದಲ್ಲಿ.

ವಿಶ್ವ ಒಂದು ಅಶ್ವ

ಘುರ್ರೆ ಘುರ್ರೆ ಘೋಟಕಾ
ನಡೆ ಅಂತಃಸ್ಫೋಟಕಾ
ಪಂಚಸ್ಥಿತಿ, ಪಂಚಗತೀ
ಕಾಲ ಕುಣಿತದಂತೆ ರೀತಿ
ನನಗೆ ನಿನಗೆ ಸಮನೆ ಪ್ರೀತಿ
ಕುದುರಿ ಸಾಗು ಗುರಿಯೆಡೇ
ಕುರಿಯಬೇಡ ಎಡೆತಡೇ—ನಡೇ ನಡೇ ನಡೇ.

ಉಸಿರು ಛಂದ ದೀರ್ಘಹ್ರಸ್ವ
ನನ್ನ ವಿಶ್ವ ಆತ್ಮದಶ್ವ
ಪ್ರಾಣವೇರಿದಂತೆ ಮನಾ
ಗುರುವೇರಿದ ತನ್ನತನಾ
ಕೈಮೈಗಳ ಗೈಮೆಯಲ್ಲಿ
ರೂಪಿಸುವದು ರೂಪಕಾ—
ತಿಳಿಯಬಹುದು ಸೋಳಿಯಬಹುದು
ಅಳೆಯಬಹುದೆ ಮಾಪಕಾ ?

ಹೈ ಹೈ ಹೈ ಸೈ, ಸೈ, ಸೈ.
ಅಹಾ ಮೋಕ್ಷದಾಯಕಾ
ಗುರಿಯ ಕಂಡ ಸಾಯಕಾ
ಓಹೊ ಜೀವನಾಯಕಾ.
ಘುರ್ರೆ ಘುರ್ರೆ........

ಪಂಚಮುಖ

ನೈಜಕ್ಕಿದೆ ಪಂಚಮುಖ
ಐದರೊಳಿದೆ ನೈಜಸುಖ
ಒಂದರೊಳಿಲ್ಲೋ ಎಲ್ಲಾ, ಎಲ್ಲಾ ಒಂದೊಂದು
ಒಂದೇ ಅದು ಐದಾಗಿದೆ
ಐಬೆರಳಿನ ಕೈದಾಗಿದೆ
ಮರತುದಿಗಿದೆ ಹಲಹೂಹೂ, ಬುಡಕಿದೆ ಬೇರೊಂದು.

ಹೊರಗೆಲ್ಲೋ ಬಾನಾಗಿದೆ
ಒಳಗಿಲ್ಲೇ ನಾನಾಗಿದೆ
ಕಣ್ಣೆದಿರಿನೊಳೆಲ್ಲೆಲ್ಲೂ ಆಗೊ ಒಡವೆಯೆ ಒಡವೆ.
ಅಲ್ಲೂ ಇಲ್ಲೂ ಒಂದೇ
ಕಣ್ಣಲ್ಲೂ ಕಣ್ಮುಂದೆ
ಈ ತುದಿ ಆ ತುದಿ ಬೆಳಕೇ ಬೆಳಕೇ ನಡುನಡುವೆ.

ಕನ್ನಡದ ಕಮಳ

ಕನ್ನಡದ ಕಮಳವದೊ ಅಷ್ಟದಳವಾಗಿಹುದು
ಕ್ಷೇತ್ರದಳ ಕ್ಷೇತ್ರಿದಳ ಜೀವದಳವು.

ಬ್ರಹ್ಮದಳ ಶೇಷದಳದಲಿ ದಳವನರಳಿಸುತ
ವಾಯುದಳವಾದ ಕರ್ನಾಟ ದಳವು.

ದಾಸದಳ ವತ್ಸದಳ ಮಿತ್ರದಳದೊಂದಿಗೇ
ಮಾಧುರ್ಯ ದಳವೊಂದು ಬಿಡಿಸುತಿರಲು.

ಕರ್ಣಿಕಾಮಧ್ಯದಲಿ ಹಂಸವೆಚ್ಚತ್ತಿಹುದು.
ನವಚತುರ್ದಳಗಳನು ಮೀರುತಿಹುದು.

ಚಾನ್ಮ್ಯಯೆ ಕದಿರ ಗರಿಗರಿ ಬಿಚ್ಚಿ ನಿಮಿರಿರಲು
ಚೈತ್ಯದಾಕಾಶದಲಿ ಏರುತಿಹುದು.

ಅಶೋಕವೃಕ್ಷ

ಅಶೋಕವೃಕ್ಷದ ನೆರಳಿನಲಿ
ಸಶೋಕ ಸೀತೆಯು ಕಂಡಿದ್ದೆ.
ಅಶೋಕಚಕ್ರದ ಧ್ವಜದಡಿಗೆ
ಸಶೋಕ ಜನತೆಯ ಕಾಣುತಿಹೆ.

ವಿಶೋಕಗೊಳಿಸುವ ದಿವ್ಯಧ್ವನಿ
ಆಗಿಸಂತೆ ಮೊಳಗುವದೀಗೂ.
ವಿಶೇಷವೆನಿಸುವ ಶ್ರದ್ಧೆಯಲಿ.
ಶುದ್ಧಿಯಿರಲಿ ನವಬುದ್ಧಿಯಲಿ.

ಬೇಕೆಂಬುವನಿಗೆ
ಬಂದೇಬರುವವು
ಬೇಡದೆರಡು ದುಃಖ.
ಬೇಡೆಂಬುವನಿಗೆ
ನಿಂತೇ ಬಿಡುವವು
ಬರಬೇಕಾದ ಸುಖ.

ಬಿಡಿಸುವ ಸ್ವಾಮಿಯೊ
ತಿಳಿದೇ ನೀಡುವ
ಅವನ ತೃಪ್ತಿ ಸಾಕು.
ಜೀವಕೆ ಯಾವುದು
ಬೇಕು ಬೇಡವೋ !
ಯಾರು ಹೇಳಬೇಕು ?

ರಮ್ಯ—ಅಗಮ್ಯ

ರಮ್ಯವಿರುವ ಈ ಪ್ರಪಂಚ
    ಎಂದಿಗೂ ಅಗಮ್ಯವು
ಗಮ್ಯವಿರಲಿ ಇರಲಗಮ್ಯ
    ಯಾವಾಗಲು ರಮ್ಯವು ||ಪಲ್ಲ||

ಇರವ ಹರವ ಬಲ್ಲರಾರು
    ಎಲ್ಲಿ ಇದರ ಅಂತವು?
'ನಾನೆ ಆದಿ ಜಗಕೆ ಹಾದಿ'
    ಎಂಬುದಿದರ ಪಂಥವು.
ಜಡವೆ ನಾಶರಹಿತವೆಂದು
ಎನುವನು ವಿಜ್ಞಾನಿಯು.
ಜೀವಕಿಹುದು ಅಮರಪಟ್ಟ
ಹೇಳಲೇಕೆ ಜ್ಞಾನಿಯು. || ೧ ||

ಇನಿಸು ಉಳಿದು ಇನಿಸು ಬೆಳೆದು
    ಅಳಿವುದಿನಿಸು ರೂಪವು.
ಸೃಷ್ಟಿಲೀಲೆಗಿದು ಸ್ವಭಾವ
    ರೂಪಗಳ ಸ್ವರೂಪವು.
ಹುಟ್ಟುಸಾವು ಎರಡು ಮೆಟ್ಟು
    ಜೀವನಟನ ಆಟಕೆ.
ಜೀವನವಿದು ನಾಟ್ಯರಂಗ
    ಭಾವರಸದ ಮಾಟಕೆ. || ೨ ||

ಬೆಳ್ಳಿ ಮೂಡಲಗಾಲ

(ಯಾ ನಿಶಾ ಸರ್ವಭೂತಾನಾಂ ತಸ್ಯಾಂ ಜಾಗರ್ತಿ ಸಂಯಮೀ)

ಇರುಳಿನಂಚಿಗೆ ಹಿಂಚೆಮುಂಚೆಗೆ
ನಲಿವ ಬೆಳ್ಳಿಯು ಬೆಳ್ಳಿಯೇ,
ಹೊತ್ತಿನೆಡಬಲ ಸುತ್ತಿ ತುಳುಕುವ
ಬೆಳಕು ಬೆಡಗಿನ ಬಳ್ಳಿಯೇ,
ಕತ್ತಲಾಚೆಗೆ ಇರುವ ಮಾಟವ
ಎಲ್ಲಿ ಕಲಿತೆಯೆ 'ಮಳ್ಳಿ'ಯೆ ?

ಮೂಗನೆಡಹುತ ಗಾಳಿ ತಡಹುತ
ಹೊರಟ ಕಂಪಿನ ಕುರುಡನೂ
ಗಾಳಿ ಸುಳಿಗಳ ಸೀಳಿ ಬರುವನು
ಸ್ವೇಚ್ಛೆಗೇಳುವ ಗರುಡನು.
ಚಿಕ್ಕೆ ಮಿಣುಕಲಿ ಬೆಳ್ಳಿ ತಿಣುಕಲಿ
ಒಂದೆ ಎಂಬೆಯ ಎರಡನೂ ?

ಬಾಳಗವಿಯಲಿ ತಮವು ಕವಿಯಲಿ
ಕುಣಿವವಾತ್ಮದ ಅಣುಗಳು.
ಜೇನುಗೊಳಿಸುವವೀಗ ಹೊರಸ
ಜೀವದಾ ಜೇನ್ಗೊಣಗಳು.
ಹಾಳುಗನಸಿನ ಮಸಣದಲಿ ಹೊರ-
ಳುವವು ಜೀವದ ಹೆಣಗಳು.

ಉಷೆ ತಂದಾಳಿಕೋ

ಉಷೆ ತಂದಾಳಿಕೋ, ರವಿ ಬಂದಾನಿಗೋ
ಆತ ಹಿಂದ ಈಕಿ ಮುಂದ ಮುಽಂದ
ಕತ್ತಲಿ ಹಿಡಿದಽವ ತನ್ನ ದಾರಿಽಽ ಬೆನ್ನ ತೋರಿಽ
ನಸುಕು ಬಿತ್ತು ಎತ್ತೊ ಜಾರಿಽಽ ಆಗಿ ವಾರಿಽ
ಹೋದ್ಹಾಂಗ ಮುಸುಕ ಹಾರಿಽಽ ಮುಗಿಲನೇರಿಽ
    ಬೆಳಗಿನ್ಯಾಗ ಬೆರತು ಅಗ್ಯಾರೊಽಂದ
        ಗುಲಾಬಿ ತೋರ್ಯಾನ ಲಜ್ಜಿ
        ಹಕ್ಕಿ ನುಡಿಸ್ಯಾವ ಗೆಜ್ಜಿ
        ಬೆಳಕು ಹಾಕ್ಯಾವ ಹೆಜ್ಜಿ
ಅವರು ಬರೋಽದನ್ಽ ಬಲು ಜೆಂಽವ
ಜಗಕ ಸೂರಿಸೂರಿ ಆನಂದ!

ಆತನು

ಹಿಡಿಯ ಹೋಗೆ ಹಿಡಿಯ ಬರುವ
ಇಡಿಯ ಗಗನ ಮುಸುಕಿ ಇರುವ
ತಾಽ ತನ್ನ ತಾನಿನಲ್ಲಿ
ತಾನೆ ತನ್ನ ತರುವನು
ಅವನು
ನಾದ ಬಿಂದು ಕಲಾತೀತನು

ಮಾತನೊಲ್ಲ ಮೌನವಿಲ್ಲ
ಗೀತರಾಗ ಆತ ಬಲ್ಲ
ಆಽ ಶ್ರುತಿಯ ತತಿಯ ಗತಿಯ
ಹೀರಿ ಸೇರಿ ಇರುವನು
ಅವನು
ನಾದ ಬಿಂದು ಕಲಾತೀತನು.

ಈಸಲದ ಸುಗ್ಗಿ

ಪ್ರತಿ ವರುಷದ ಹಾಗಲ್ಲವು ಈಸಲದೀ ಸುಗ್ಗಿ ।
ಏನರಳಿದೆ ಗಿಡಮರ ಬಳ್ಳಿಗಳೆದೆ ಹಿಗ್ಗಿ ॥

ಕೊಳಲ ಗುಬ್ಬಿ ಕರೆಯುತ್ತಿವೆ ತೋಟಕೆ ಬಾ ಹೊರಗೆ ।
ಬೇವಿನ ಹೂ ನೆರಳಿನಲ್ಲಿ ಸವಿನೋಟದೊಳದೊ ನೆರೆಗೆ ॥

ಹೊನ್ನ ಹೂವ ಗೊಂಚಲುಗಳ ಹೊತ್ತಿಹುದಾ ಕಕ್ಕೆ ।
ಯಾ ರಾಯನ ಬರವ ಕಾದು ನಿಂತಿಹುದೇತಕ್ಕೆ ? ॥

ಎಸಳೆಸಳಿನ ಓರಸಲ ಚವುರಿಸುವದು ಮೈಯನ್ನೆ ।
ಬೀಸಲು ಮೈನವಿರೇರಿದ ನೇರಿಳೆ ನವಕನ್ನೆ ॥

ತೊಟ್ಟುಚ್ಚುತ ತೊಟ್ಟಿಡುತಿದೆ ಮೊಗ್ಗನು ಹೂ ಹಾಸಿ ।
ಹುಲಗಿಲು ಗಾನನಿಮಗ್ನಧ್ಯಾನದ ಹೊಸ ದಾಸಿ ॥

ಮುಂಗಾರಿಯ ಗುಡುಗಿಗೆ ಸಂಪಿಗೆ ಮುಂಗುಡಿ ಬಿಟ್ಟು ।
ಪಾರಿಜಾತ ಮೊಗವೆತ್ತಿದೆ ಹಸುರಂಗಿಯ ತೊಟ್ಟು ॥
ಪ್ರತಿವರುಷದ ಹಾಗಲ್ಲವು....।

ಹರಗೋಣ ಬಾ ಹೊಲ

ಹರಗೋಣ ಬಾ, ಹೊಲ ಹೊಸದಾಗಿ
ಬಿದ್ದಽದ ಹ್ಯಾಗೋ ಕಾಲ್‌ಕಸವಾಗಿ ॥

ಬಿತ್ತಿದರು ಕಾಳು ಹನಿಹನಿಯಾಗಿ
ಬರ್ತಾಳ ತಾಯ್‌ ತೆನಿತೆನಿಯಾಗಿ
ನಂಬಿಗಿಲೆ ತುಂಬ್ಯಽದ ನಮ್ಮ ಬಾಳು
ನಂಬಿಗಿಲೆ ಬಿತ್ತೋಣ ನಮ್ಮ ಕಾಳು ॥ ೧ ॥

ನಂಬಿಗೀಲೆ ದುಡಿತಾನ ಬಸವಣ್ಣಾ
ನಂಬಿಗ್ಯಾಗೈತಿ ಅವನ ಕಸುವಣ್ಣಾ
ಕಸುವೀಲೆ ಬೆಳೆಸೋಣ ಎತ್ತಗೋಳು
ಎತ್ತಲ್ಲ ಅವ್ರು ನಮ್ಮ ಮುತ್ತುಗೋಳು ॥ ೨ ॥

ನಂಬೆಣ್ಣಗ ಒಲಿದಾನೊ ಶಿವ ನೋಡೋ
ಇಂಬೀಲೆ ಬೇಡೋದು ಅವ್ಽಗ ಬೇಡೋ
ಕೊಟ್ಟ್ಯಽರ ಕೊಡತಾನ ಶಿವನೆಲ್ಲಾ
ಕೊಡಾವ್ರ ಹೊಟ್ಟ್ಯಮಾತು ಶಿವ ಬಲ್ಲಾ ॥ ೩ ॥

ಹೊತ್ತಿಗ್ಯಾಗ ಬರಿ ಶಾಸ್ತ್ರದಾಧಾರ
ಕುತ್ತಿಗಿ ವ್ಯಾಲ್ಯೈತಿ ಸೊಗಭಾರ
ನಂಬಿಗ್ಯಾಗ ಸೆಲೀತ್ಽದ ಬಲ ಎಲ್ಲಾ
ನಂಬಗೀನ ಸೋರಿದರ ಬಲ ಇಲ್ಲಾ ॥ ೪ ॥

ವೈತಂಡವಾದ

ವೈತಂಡವಾದಗಳ ತಾಂಡವವು ನಡೆದಿಹುದು.
ತಂಡತಂಡಗಳೆಲ್ಲ ಇತ್ತಂಡವೇ.
ಸರ್ವಜ್ಞ ಸ್ಮಿತಹಾಸ್ಯಲಾಸ್ಯವಾಡುತ್ತಿಲ್ಲ.
ಮೃತ್‌ಪಿಂಡವಾಗಿಹುದು ಬ್ರಹ್ಮಾಂಡವೇ.

ಸಾತ್ವಿಕವ ಕನ್ನಡಿಗೆ ತಾಮಸವು ಮುಸುಕಿಹುದು
ಬಿಂಬಕ್ಕೆ ಪ್ರತಿಬಿಂಬ ಕಾಂಬುದಿಲ್ಲ.
ನೋಟವಿಲ್ಲದಕಾಗಿ ಕಣ್ಣೆ ಕುರುಡೆನಿಸುವದು
ಇಹ ವಸ್ತು ತಾನು ಇಹೆನೆಂಬುದಿಲ್ಲ.

ಕಾಲು ಇಲ್ಲದ ಪುರುಷ ಕೈಯು ಇಲ್ಲದೆ ಹೋದ
ಮೌನದಲಿ ಮುಳುಗಿತ್ತು ಮಾತುಗೀತು.
‘ ನಾಸ್ತಿ ’ ಎಂದರು ಕೂಡ ಅಸ್ತಿಯೆಂದಾದೀತು ?
ಇದ್ದದ್ದು ಇಲ್ಲದ್ದು ಬರಿಯ ತೂತು.

ಹೃದಯ–ಪುಂಡರೀಕ

ಹೃತ್ಪುಂಡರೀಕಪ್ರವಿಷ್ಟನೀ ವಿಠ್ಠಲನು ।
ಪುಂಡರೀಕನ ಮುಂದೆ ನಿಂತ ವಿಠ್ಠಲನು ॥

ಯಜ್ಞ ವಿಷ್ಟರದಲ್ಲಿ ಅಧಿಯಜ್ಞನಾದವನು ।
ಕ್ಷೇತ್ರಜ್ಞನಾಗಿ ಪ್ರತಿಕ್ಷೇತ್ರಕಿಳಿದವನು ॥

ಆಧಿದೈವತದಲ್ಲಿ ಪುರುಷನೆನಿಸಿದನು ।
ನಮ್ಮ ಸ್ವರೂಪದಲಿ ತಾನೆ ತಾನಾಗಿ ॥

ಭೌತಿಕದ ರಂಗದಲಿ ನಾನೆ ನಾನಾಗಿ ।
ಹೃದಯವಿಷ್ಟರದಲ್ಲಿ ಅಧಿಯಜ್ಞನಾಗಿ ॥

ಟೊಂಕದ ಮೇಲೆ ಕೈ ಇಟ್ಟುಗೊಂಡು

ಟೊಂಕದ ಮೇಲೆ ಕೈ ಇಟಗೊಂಡು
ಬಿಂಕದಾಕಿ ಯಾರ ಈಕಿ
ಒಂಕೀತೋಳ ತೋರಸತಾಳ
ಸುಂಕದ ಕಟ್ಟ್ಯವಗ.

ಯಣ್ಣಾ, ಮಾವಾ ಅಂತ ದನಿಸಿ
ಬಣ್ಣದ ಮಾತ ಆಡಿಕೋತ
ಕಣ್ಣಾಗ ಮಣ್ಣ ತೂರುವಾಕಿ
ಸಣ್ಣನ್ನ ನಡದಾಕಿ.

ಕಮ್ಮಗ ನಾಲಿಗಿ ಚಾಚತಾಳ
ಸುಮ್ಮಸುಮ್ಮಗ ನಾಚತಾಳ
ದಮ್ಮಡಿ ಕೂಡ ಕೊಡದ ಹಾಂಗs
ಬಿಮ್ಮಗ ಹೊಂಟಾಕಿ.

ಮೆಂತೆವ ಸಿವುಡು ಕಟ್ಟಿಕೊಂಡು
ಸಂತಿ ಪ್ಯಾಟಿ ಮಾಡಲಿಕ್ಕೆ
ಅಂತೂ ಇಂತು ಎಲ್ಲರಕಿಂತ
ಮುಂಚೆಗಿ ಬಂದಾಕಿ.

ಮೌನವಾರ

ಮಾತುಗಳಾಚೆಯ ವಿದೇಹಭಾವ
ಸದೇಹವಾಗಲು ತಪಿಸುತಿದೆ
ಅಶೋಕವನದಲಿ ವಿಶೋಕನಾಗಿ
ರಾಮನಾಮವನೆ ಜಪಿಸುತಿದೆ.

ಕಣ್ಣೀರ್ ಕಡಲಿಗೆ ಸೇತುವೆ ಕಟ್ಟಿ
ದಶಮುಖ ರಾವಣನನು ತುಳಿದಟ್ಟಿ
ಸೀತಾ–ರಾಮರು ಕೂಡುವರೋ ?
ಒಬ್ಬರೊಬ್ಬರನು ನೋಡುವರೋ ?

ಅದು ಏನೇ ಇರಲಿ !

ಮಾತಿನ ಮಲ್ಲರು ಯಾರೋ ಆರು
ಮೂಗರು ಏಕೋ ಬಲ್ಲವರಾರು ?

ಮೌನವ್ರತಕ್ಕೆ ದೀಕ್ಷಿತರಾಗಿ
ಮೌನರಂಗದಲಿ ಇಳಿದಿಹರು
ಮಾತಿನ ಪಲ್ಲವಿ ಉದುರಿಸಿ ಮೌನದಿ
ಬಿಳಿ ಸಂಪಿಗೆಯೊಲು ಮುಗಳಿಹರು.

ಕಾಕತನವೆ ಹೊರ ಪೋ ಗೋ ಎಂದು
ಜನಮನ ತಾನ–ವಿನಾಯಕರು
ನಾಸಿನ ಎಡೆಯಲಿ ತಾನಿನ ಬೀಜವು
ಬಿತ್ತಲಿ ಎಸುವ ವಿಧಾಯಕರು.

ನೊಂದವರೂ ಅರೆಬೆಂದವರೂ
ಆತ್ಮದತ್ತ ಹೊರಳರಳಿ ನೋಡಿ ಎಲ
ಸತ್ ಇದೆ ಸತ್ತಿಲ್ಲೆಂದವರು
ಸತ್ತ್ವದ ಸೊತ್ತಿಗೆ ಬಂದವರು

ಊಟ ಉಡಿಗೆಯಲಿ ವಿನೀತರು
ಓದುವಾದದಲಿ ಸುನೀತರು
ಸಿದ್ಧಿಸಲೆಲ್ಲರಿಗೊಂದೇ ಮಳಗಿ
ತಮ್ಮ ತಮ್ಮ ಮನ ತಾವೇ ಬೆಳಗಿ

ಬೆಳುಗಾವಿನ ಒಳಕುಲುಮೆಯಲಿ
ಅರೆ ಒಲುಮೆಯಲೀ ಅರೆ ಬಲುಮೆಯಲೀ ।
ಹಗಲಿರುಳೆನ್ನದೆ ಚಿಂತಿಸುತಿಹರು :
‘ಕನ್ನಡ ನಾಡೇ’ ಎಂದು
‘ಎಲ್ಲಿದೆ ತಂತಮ್ಮೆಡೆ ?’ ಎಂದು
ಮೌನದ ಗೂಡಿನ ಹಕ್ಕಿಗಳು
ಮಾತಿನ ಬಯಲಿನ ಚುಕ್ಕೆಗಳು

ಇವರೆಲ್ಲರು ನರಸಿಂಹರು ಆಗಿ
ಗರ್ಜಿಸುವರು ಎಂದು
ಎಂದೋ ಎಂದು ಮೌನವು ಕಾದಿ
ನುಡಿ–ನಡೆ ವೈಗೊಂಡು.

ಧಾರವಾಡದಾ ಸೀಮೆಯ ಸುತ್ತೂ
ತಗ್ಗಿ ಮೇಲಕೊಕ್ಕಿ
ಮಾಳವೊರಡಿಯಲಿ ನಿಂತು ನೋಡುತಿದೆ
ಹಾಗೆಯೆ ಎಕ್ಕೆಕ್ಕಿ

ಮಿತ್ರರ ಕರುಣೆಯು ಕಾಯುತ್ತಿಹುದು
ಮನದನ್ನೆಯರೊಲವು
ಗುಲ್‌ಮೊಹೋರಿನಲಿ ಆರತಿ ಎತ್ತಿ
ಎದೆ ನಾಡಿನ ಚೆಲುವು
ಬಂಧು-ಬಳಗವೂ ಬಿಂದು ಬಿಂದು ಒಂ-
ದಾಗಿ ಕೂಡುತಿಹುದು
ಒಳಗೆ ಹೊರಗೆ ಹಿರಿ ದೈವಕೃಪೆಯು ತಾ-
ಯಾಗಿ ನೋಡುತಿಹುದು.

ವಾಸುದೇವನೇ ಎಲ್ಲವು ಎಂದು ಹಿರಿಹಿರಿ ಹಿಗ್ಗುವರು
ಇಂಥವರಾರು ಹೇಳಿರಿ ಯಾರು ತಮತಮಗೊಗ್ಗುವರು?

ಬಿಡಿಮುತ್ತು

ಹುಟ್ಟಿದುದು ಚಿಪ್ಪು
ಮುತ್ತಿದುದು ಕಡಲಗಲುಪ್ಪು
ಮುಳುಗಿದುದೊ ನೀರಾಳ ಕಪ್ಪುಕಪ್ಪು
ಚಿಪ್ಪಲ್ಲ,
        ಬೆಳಕನೊಳಗೊಂಡ ಮಿಂಚಿನ ಬೆಳ್ಪು
        ಸ್ವಾತಿಸ್ನೇಹದ ಮೀನಗಣ್ಣಿನೊಳ್ಪು.

        ಕರುವಿರದ ಎರಕವಿದು
ನೀರ್ಮುತ್ತು ಎನಬೇಡ
        ನೀರ ನೀರೆಯುರೆರೆದ ಮುತ್ತು ನೀರೆ?
ಎದೆಯ ಹದ
        ಹೃದಯ ಮುದ
                ತುಟಿಗೆ ಮುತ್ತಾಗುವವು
        ಕಣ್ಣುಚುಕ್ಕೆಯ ಕದಿರ ಮೇರೆ ಮೀರೆ.

ಇದಿರೇನೊ ಕಂಡು
        ಒಳಗಂಡು ಹೃದಯದ ಗವಿಯ
ರವಿಯಂತೆ ಬೆಳಕಿನಲಿ ಮುಳುಗಿಸಿತ್ತು.
ಬಿಡಿ ಮುತ್ತು, ಬಿಡಿಮುತ್ತು
                ಎಕ್ಕಸರ ಹರಿದಿತ್ತು.
ಒಳಹೊರಗು ಕಾಂಬೊಳವಿ,
ಮುತ್ತ ಬಿತ್ತು.

ಬಿಡಿ ಮಾತು
ಪವಣಿಸಿರೆ ಮೆರೆಯುವವು
ಒಲವುಗಂಪಿನ ನಾರುಸೂತ್ರದಲ್ಲಿ.
ಸ್ವರ್ಗೀಯ ಸಾರಸೌಂದರ್ಯವನು ಸವಿಯುವಾ
ಪಂಕಜದ ಪಾಂಗಿನಾ ನೇತ್ರದಲ್ಲಿ.

ಮುದ್ರಿಸಿತು ಅಧರದಲಿ;
ನಿದ್ರಿಸಿತು ಉದರದಲಿ,
ಮೂಡಿತ್ತು ತೊಡೆಯಲ್ಲಿ ಮೂರ್ತಿಗೊಂಡು
ತೋಳತೊಟ್ಟಿಲೊಳಾಡಿ
ಮಾತೃಗೀತವ ಹಾಡಿ
ಕೀರ್ತಿ ಪಡೆದಿತು ಜೀವ ಸ್ಫೂರ್ತಿಗೊಂಡು.

ಮಣ್ಣೆಂದು ಜರೆಯುವದು !—
ಏನು ಮಣ್ಣೋ ಕಾಣೆ?
ಮಣ್ಣ ಬೆಳೆ, ಮಣ್ಣ ಕಳೆ, ಮಣ್ಣಗಂಪು.
ಒಡೆಯ ಬಿಟ್ಟರು,—
ಒಡಲು ಬಿಡದು ಮಣ್ಣಿನ ನೆರೆಯ
ಬೂದಿಯಾದರು ಬದುಕು
ಮಣ್ಣೆ ತಂಪು.
ಬಾನಗಂಗೆಯ ಮರುಕ
ಮೃತ್‌ಪಿಂಡ ತೊಳೆಯುತಿದೆ
ಮಾಟ ಮಮತೆಗೆ ತೊರೆವ
ಬಾಳಚಿಲುಮೆ
ಶ್ರೀನಿವಾಸನು ಕೂಡ
ತಿರುಮಲೆಗೆ ನೆಲೆನಿಂತ
ಮಣ್ಣಲ್ಲ ಈ ಭೂಮಿ ದೇವನೊಲುಮೆ.

ತಪ್ತ ಸೂರ್ಯನ ತಾಪ,
　　ತಪತಪನೆ ತೊಯ್ಸುವದು.
ಶಪಿಸಿದಳೆ, ತಪಿಸಿದಳು ಭೂಮಿತಾಯಿ :
“ ಬಸವಳಿಯದಿರು ಮಗುವೆ !
　　ಹಸನಾಗು, ರಸವಾಗು
ಕಸುವಿರುವವರೆಗು ತಡೆ, ತಾಳು, ಕಾಯಿ. ”

ರಮ್ಯವೋ !
　　ಏನಿದೊ ಅಗಮ್ಯವೋ ? ಗಮ್ಯವೋ !
　　　　ಕಾಣ್ಕೆ ಎನೆ ನೀ ಕಾಣೆ—
　　　　　　　　ವೇದವಚನ
ನಾ ಕಾಣೆ ಹದಿನಾರು ಕಲೆಯಲ್ಲಿ,
　　　　　　　　ತಲೆಯಲ್ಲಿ;
ಮುಕ್ಕಾಲು ಮರೆಗೆ ಇದೆ—
　　　　　　　　ವಿಶ್ವರಚನೆ.

ಒಳಗಿಹುದೊ,
　　ಹೊರಗಿಹುದೊ
　　ಅಜ್ಞಾನ ಆ ಜ್ಞಾನ.
ಪ್ರಾಜ್ಞಗಿದೆ ಈ ವಿಶ್ವ ಒಂದು ಮಾರು.
　　ತಿಳಿವ ತೇಜದ ಮುಂದೆ
　　ನಾನು, ಬಾನೂ, ನೀನು
ತುದಿಯಿಂದ ತುದಿವರೆಗೆ
　　　　ಆರುಪಾರು.

*　　*　　*　　*

ಕೋಕಿಲಕೆ ಕುಕಿಲು
ನವಿಲಿಗೆ ಕೇಕೆ, ಭೃಂಗಕ್ಕೆ
ಗುಂಗು ಗುಂಗುಂಗಾನ–ಏಕತಾನ
ಜಯದೇವನಷ್ಟಪದಿ ಸರ್ವಜ್ಞನಿಗೆ ತ್ರಿಪದಿ
ಸ್ಫೂರ್ತಿಕ್ಕೆ ಚೌಪದವೆ ಜೀವಕೂನ.

*   *   *   *

ಆ ಕೃತಿಗು, ಈ ಕೃತಿಗು,
ತ್ರಾಸು ತಕ್ಕಡಿ ಹಿಡಿದು
ಪ್ರಾಸವಚನಗಳಿಂದ ತೂಗಬೇಡ
ಕೃತ್ತಿಕೆಗು ವೃತ್ತಿಕೆಗು
ಯಾರ ಹೋಲಿಕೆ ಬೇಕು?
ಜೋಡ ಹುಳ ತಿಳಿಯದೇ
ಬಲೆಯು ಜಾಡ?

ಮೋಡದ ಮಳಿಗೆಗೆ ರವಿ ಕಾದಿದ್ದ

ಮೋಡದ ಮಳಿಗೆಗೆ ರವಿ ಕಾದಿದ್ದ
ನರಿಮದುವೆಯ ಕರೆಗೆ.
ಅದೇ ಹೊತ್ತಿನಲಿ ಕವಿಯೂ ಎದ್ದ
ಸುತ್ತಾಡಲು ಹೊರಗೆ.

ಕೊಡೆಗಿಡೆ ಇಲ್ಲ; ಮಳೆ ಬಿಲ್ಲೆಸೆದು
ತಂಪಾದನು ರವಿಯು.
ಮೌನದ ಮದದಲಿ ತಪಿಸುತ್ತಿದ್ದನು
ಒಳಗೊಳಗೇ ಕವಿಯು.

ಒಮ್ಮೆಯಾದರೂ ಕವಿ ಕಾಣದುದನು
ರವಿ ಕಂಡೇನೆಂದು
ನಿಜವಾಗಿಯು ಕಾದಿದ್ದನು ಯುಗಯುಗ
ಆ ದಿನ ಬಂತಿಂದು.

ತಪಸ್ವಿ ಕವಿಯನು ತಪತಪ ತೊಯ್ಸಿ
ತಾ ಕೆಡಬೇಕೆಂದು
ಮೋಡವ ಹಿಂಜಿ ಜನರಿಗೆ ಅಂಜಿ
ರವಿ ಅಡಗಿದನಂದು.

ಒತ್ತ ಕರಡಿನೊಲು ಬಾನದ್ದಿತ್ತು
ಮತಿಗೊಣ್ಣೆಯವೊಲು ವನವೆದ್ದಿತ್ತು.
ಕತ್ತಲೆ ಕಿರಿಕಿರಿ ಸಾಗಿತ್ತು
ಮೌನ ಇದ್ದೆ ಇತ್ತು.

ವೇಳಾಪತ್ರಿಕೆ ನುಗಿಸಿದೆ ಕಾರ್ಯ
ಮಿಂಚಿದರೇನಂತೆ
ಅಣ್ಣಾರಾಯರ ಜವಾಬ್ದಾರಿಯಿರೆ
ಕವಿಗೇತರ ಚಿಂತೆ?

ಹೊತ್ತಾಗುತ್ತಲೆ ಹನಿ ಸೋಕದೆ ಕವಿ
ಮನೆಗೆ ಮರಳಿ ಬಂದ.
ಮುಳುಗಿದ ರವಿಯೂ ಕವಿ ಕಾಣದ್ದನು
ತಾನು ಕಂಡೆನೆಂದ.

ಹಾ ಸರು !

ಹಾ ! ಮಗಳೆ, ಸರು, ಸರೋಜಿನಿ ।
ಯಾಮಗಳುರುಳಿದವು ನಿಲ್ಲಿಸೀ ಕಂಬನಿಗಳ್ ॥
ತಾಮರೆಗಣ್ ಮುಚ್ಚಿದೆಯಾ ? ।
ಯಾ ಮುಖ ತೋರಿಸಲಿ ನಿನ್ನ ತಂದೆಗ ತಾಯ್ಗೆ ॥ ೧ ॥

ನಿನ್ನ ನಗೆ–ನೆನವು ಬೇಸರು ।
ನಿನ್ನಾ ಕುಡಿನೋಟ ಮಿಂಚು ಜೇಸರು, ಸರು ಹಾ ॥
ನಿನ್ನೆಯೊ ಮೊನ್ನೆಯೊ ಇದ್ದೆಯೊ ।
ಎನ್ನುವ ತೆರನಾಯ್ತು ಕನ್ನೆ ನಿನ್ನಾ ಬಾಳು ॥ ೨ ॥

ಹೇಸರು ಯಮದೂತರು ಹಸು– ।
ಗೂಸುಂಗೊಲೆಗೆಂದು ಇಂದುವರೆ ತಿಳಿದಿರ್ದೆಂ ॥
ಹಾ, ಸರು ಶಿವದೂತರೆ ನಿ- ।
ನ್ನೀಸರನನ್ನೊಯ್ದರೆಸಲು ಶಿವಲೋಕಕ್ಕೆ ॥ ೩ ॥

ರೂಪುಗಳ ಕೊಲುವ ಕಾಲನು ।
ಪಾಪಿಯು, ಕೊಲಲಾರನವರ ಸವಿನೆನಪುಗಳಂ ॥
ಈ ಪರಿ ತಿಳಿಯದೆಯೂ, ಸಂ– ।
ತಾಪದೊಳೂ ನನಗೆ ಈಗ ಸಂತಸವಾಯ್ತು ॥ ೪ ॥

ಆಗೊ ಆ ನಗೆಗೊಳದೊಳು ಒಳು ।
ಬಗೆಯೊಳು ತಾವರೆಯು ಸಿರಿಯು ಮೊಗದೊಳು ಭ್ರಮರಂ ॥
ಬಗೆಬಗೆಯೊಳು ಹೊರಳುತ್ತಿರೆ ।
ಇಗೊ ಆಗಿದೆ ನಿನ್ನ ನೆನವೆ ಕರುವಿಟ್ಟಂತೆ ॥ ೫ ॥

ಇದು ವಾರಪತ್ರಿಕೆ

ಇದು ವಾರಪತ್ರಿಕೆಯು ! ಏನು ಇಲ್ಲಿಯ ಸುದ್ದಿ ?
ಯಾರೊ ಸತ್ತರು ! ಯಾರೊ ಎಲ್ಲೊ ಗೆದ್ದರು ! ಯಾರೊ
ಯಾಕೆ ಬಿದ್ದರೊ ಏನೊ ? ಹಾಕು ಗಾಳಿಯ ಗುದ್ದಿ
ಬರವಣಿಗೆ ಚಾಚಿ, ಉಸ್ಸೆಂದು ಮುಂದಲೆ ಬಾಚಿ
ಉಃಫೆಂದು ಹೊಗೆ ಸೂಸಿ ಇಸ್ಸು ಬಸ್ಸೋ ಕಾರೊ
ಏನಾದರೂ ಸರಿಯೆ, ಓಡಿತಲ್ಲಿಯೆ ಬುದ್ಧಿ.
ಚಿತ್ರಮಂದಿರದೆಡೆಗೆ, ಮುಂದೆ ಅನ್ನವೊ ಸಾರೊ
ಏನು ಕಾದಿದೆ ಏನೊ ! ಹೊರಟತ್ತ ಉಲಕೋಚಿ
ಆಯುಷ್ಯಯಂತ್ರ ತಿರುತಿರುಗಿ ಹಾಗೇ ತಿರುಗಿ
ನೀರಸವು, ಆರಿತಗೊ ಕುಳಿತಲ್ಲಿಯೇ ಕೊರಗಿ–
ಬಾಸುಂಡೆ ಬರುವಂತೆ ಸೆಳೆದ ತಿರುಗಾ ಮುರುಗಿ
ದಾನ ತಂದಳು ಎಂದು ಕೂಗಿದರು, ಆ ದುರುಗಿ-
ಕೊನೆಗೊಮ್ಮೆ ಅವನ ಸುದ್ದಿಯೆ ಬಂತು ಪತ್ರದಲಿ
ಉಳಿದವರ ಹಾಗೆ ಬಲಿಯಾದನಿವ ಸತ್ರದಲಿ.

ಆಟ

ತಿನುವೆ ಎಂದು ಅನ್ನ ಬಂತು
ನಾನೆ ಅದನು ತಿಂದೆ
ಸತ್ತೆ ಎಂದು ಪ್ರಾಣ ಚೀರೆ
ಮತ್ತೆ ಹುಟ್ಟಿ ಬಂದೆ.

ನಾನು ನೀನು ಅವನು ಅವಳು
ಅದುವು ಇದುವು ಎಂದು
ತಿಳಿಯದಾಡುತಿತ್ತು ತಿಳಿವು
ಮುಚ್ಚಿ ಒಂದನೊಂದು.

ತಾನೆ ಎಲ್ಲವಾಯಿತೇನೊ
ಎಲ್ಲರಲ್ಲು ತಾನೊ
ತಾನಿನೊಂದು ತಾನಿನಂತೆ
ಅವನು ನೀನು ನಾನೊ.

ಜಗದ ಆಟ ಜೀವಗಳಲಿ
ಇಹನು ಈಶನಾಡಿ
ಚೆಲುವಿನಿಂದ ಒಲವಿನಲ್ಲಿ
ನಲಿದು ಬಹನು ಮೂಡಿ.

ನಿರ್ಮಾಕ್ಷಿಕ

ನೊಣವ ಜಾಡಿಸಬೇಡ ಇದ್ದಲ್ಲಿ ಇರಲಿ ಅವು
ಎದ್ದಾವು, ಸಿಕ್ಕಲ್ಲಿ ಹೋದಾವು, ಒಯ್ದಾವು
ಕಾಲಕಲ್ಮಷವನ್ನು. ಹುಳಿ ತೊರೆದು ಮುಸುಕುವವು-
ಅಕೊ ಹೂವು! ಈ ದೃಶ್ಯ ನೋಡಬೇಕೇ ನಾವು?

ಅದಕೇನು, ವ್ರಣ ಕೀವು ಬೆಲ್ಲ ಎಲ್ಲಾ ಒಂದು
ಉಂಡುಗಿಂಡಾವು ಅವು ತಾವೆ ತೊರೆದುದ ಬಂದು
ಆ ಜಾತಿಗದುವೆ ಗುಣ; ನೊಣವ ಜಾಡಿಸಬೇಡೊ
ಇದ್ದಲ್ಲೆ ಕಾಲಂಟಿಕೊಂಡು ಇರುವೊಲು ಮಾಡು.

ನೊಣವಿಲ್ಲದೆಡೆಗೆ ಹೋಗೋಣ ನಾವೂ ನೀವು
ಅಚ್ಚ ಸೌಗಂಧವೇ ಅದರ ಜೀವಕೆ ಸಾವು
ಏಕೆ, ಬರೆಯಾ ನೀನು? ಏನು, ಕೀಳದೆ ಕಾಲು?

ಅವು ಇದ್ದ ಎಡೆಗಿದ್ದು ಅದರ ಶಾಸನ ಮಾಡು
ಅದು ಕೂಡ ಕೆಲಸವೇ. ಒಪ್ಪೆಯಾ? ಇರಲಿ ಬಿಡು
ತಲೆ ಜಾಡಿಪುದಕಿಂತ ನೊಣ ಜಾಡಿಪುದು ಮೇಲು.

ಈಚಲ ಮರದಮ್ಮ

ಈಚಲ ಮರದಮ್ಮ
ಕರುಣಿಸು ನಮ್ಮ
ಕೆದರಿವೆ ಗರಿ ತಲೆ ತುಂಬಾ
ಜೊಲ್ಲಲೆ ತುಂಬಿದೆ ಕುಂಭಾ
ಮೊಸಳೆ ಮೈಯ್ಯ ಜಗದಂಬಾ—ಓ....... ॥ ೧ ॥

ಹೆಣವಾದೆವು ಹೆಂಡದಲ್ಲಿ
ಉರುವಲು ಬಾಳ್ಗೊಂಡದಲ್ಲಿ
ಬದುಕಿಗ್ಗು ಡು ತಂಡದಲ್ಲಿ—ಓ........ ॥ ೨ ॥

ಎಚ್ಚರದಲಿ ದುಡಿತದಾಳು
ಘನನಿದ್ರೆಯೆ ನಮ್ಮ ಬಾಳು
ನಡುನಡುವೆಯೆ ಕನಸು ಹಾಳು—ಓ........ ॥ ೩ ॥

ಹೊರಗೆ ನಿಶೆ ಒಳಗೆ ನಿಶೆ
ಕತ್ತಲೊ ಕಡಲೆಲ್ಲ ದಿಶೆ
ತೀರೀತೇ ಇಂಥ ದಶೆ—ಓ........ ॥ ೪ ॥

ಬಯ್ದಾಡುತ ಸುಮ್ಮ ಸುಮ್ಮ
ಬಿದ್ದಿಹನಗೊ ಅಣ್ಣ, ತಮ್ಮ
ಕುಡಿದು ದುಂಡು ಕಂದವ್ಮಾ—ಓ........ ॥ ೫ ॥

ನೋಡಲಾರೆವೀ ಚಿತ್ರಾ
ಮಲಕು ಬಿಡಲಿ ಸಿನ್ನ ಸೂತ್ರಾ
ಕುಣಿಸು ಇನ್ನು ಜೇನಿನ ಪಾತ್ರಾ—ಓ........ ॥ ೬ ॥

ಇಳಿ ಎದೆಯಲಿ ಹಾಲಾಗಿ
ಎಚ್ಚರುವೆವು ಹಾಯಾಗಿ
ಬೆಲ್ಲವ ಕೊಡು ತಾಯಾಗಿ—-ಓ........
ಬದುಕಿಸು ನಮ್ಮ ॥ ೭ ॥

ಜೀವಾಳದ ಆಸೆ

ಯಾ ಆಸೆ ಜೀವಾಳದಿ ಉಳಿದು
ಕರ್ಮವನು ಕಳೆದು
ರೂಪವನು ತಳೆದು
ಇದ್ದಿತಲ್ಲೇ—
ಇಗೊ ಮೂಡಿ ಬಂದಿತಿಲ್ಲಿ.

ಎದ್ದಿತೆದ್ದಿತೋ ತಾ ನ್ಯೈಹಾರಿದು
ದೇಟುಗೀಟಿನಲಿ ನನೆಕೊನೆ ಕೊರೆದು
ತೊಂಗೆ ತೊಗಲಲಿ ಬದೆ ಹಾವರಿದು—
ಮುಸುಕ ಹಿಂಪೆ ತಳ್ಳೀ ಇಗೊ........॥

ಎಲೆಯಲೆಯಲಿ ಅದು ಒಲಿತು ನಲಿದಿತೋ
ಮುಗುಳು ಮೊಗ್ಗಿ ಅರಳಿಸುತ ಕೆಲೆದಿತೋ
ಮಧುಗಾನದಿ ತನ್ನೋಗಸುಲಿದಿತೋ....
ಆಗಿ ಗಾಳಿ ಬಳ್ಳೀ ಇಗೊ........॥

ಪ್ರಕಟವಾಗಿ ಜಗದುಂಬಿ ತೊಳಗಿದೆ
ಜಾಗ್ರತಿಯಲಿ ಸ್ವಪ್ನವೂ ಮುಳುಗಿದೆ
ಸಫಲವಾಗಿ ಜೀವನಲೆ ಒಳಗಿದೆ—
ಮಿಕ್ಕ ಮೀಸಲಲ್ಲೀ ಇಗೊ........॥

ಹೇವ ಹೇವ ಭಾವದಲಿ ಬೆರೆದಿತೋ
ನಾಮಗ್ರಾಮ ಎಲ್ಲವನು ಮರೆದಿತೋ
ಗಾನ ತಾನ ಗೀತದೊಳೆ ಹರೆದಿತೋ—
ಹೊರಗೆ ಸೂಸಿಚೆಲ್ಲೀ ಇಗೊ........॥

ಯಾವ ಕೃಷ್ಣನವ ಊದಿದ ಮುರಲೀ
ಅಡಗಿದ ಪ್ರೀತಿಯೆ ಒಡಮೂಡಿರಲೀ
ಪ್ರಳಯ ಜಯಿಸಿ ತಾಸೀಸಿಯೆ ಬರಲೀ—
ಆಡುತಿರಲು ತಿಳ್ಳೀ, ಇಗೊ ಓಡಿ ಬಂದಿತಿಲ್ಲಿ ॥

ಪ್ರಾಣಿಗಳು

ಜಗದೊಳು ತುಂಬಿಹರೋ ಜನರು ।
ಹುಲಿಮಂಗನ ಸಂತತಿಯವರು ॥
ಬೆಕ್ಕಿನ ಜಾತಿಯು ತಿನಸಿಗರು ।
ಹಡೆವ ಬದುಕನೇ ತಿನುವವರು ॥
ಕುರಿಗಳ ಹಿಂದೇ ಕ್ರೂರತನ ।
ಎದುರು ಪೋದಲು, ಕೊನೆ ಪಲಾಯನ ॥
ಹೊಟ್ಟೆಯು ಕಿಚ್ಚಿನ ಕಡುಶೌರ್ಯ ।
ಹುಲಿ ಜಾತಿಗೆ ಸೇರಿದ ಕ್ರೌರ್ಯ ॥

ಅದೊ ಹರುಹಿದೆ ಮಂಗನ ಹಿಂಡು ।
ನರಚೇಷ್ಟೆಯ ವಾನರ ದಂಡು ॥
ಹುಬ್ಬಿನ ಹಿಗ್ಗೇ ವಿಚಾರವು ।
ಹಲ್ಕಿಸಿವುದೆ ಸರಿ ಪ್ರಚಾರವು ॥
ಚೀರಾಟವೆ ಜಯಜಯಕಾರ ।
ಕಾಲಿನ ಬುದ್ಧಿಯೆ ಆಧಾರ ॥
ಎತ್ತಿದ ಬಾಲವೆ ಮಹಾಧ್ವಜ ।
ಎತ್ತೆತ್ತೋ ಬಿತ್ತಿದೆ ಬೀಜ ॥

ಹುಲಿಕುಣಿತವು ಮಂಗನ ಕಾಟ ।
ನಿಲ್ಲಲಿ ಇನ್ನೀ ಚೆಲ್ಲಾಟ ॥
ಬಿಸುಡಿರಿ ಈ ಮುಸುಕಿದ ಮೋಸ ।
ಹರಿದೊಗೆಯಿರಿ ಹಾಕಿದ ವೇಷ ॥

ಜನಮನದಲಿ ಜನಕತೆ ಹಿಗ್ಗಿ ।
ವೈದೇಹರ ಪ್ರಕೃತಿಯು ಸುಗ್ಗಿ
ವರಿಸಲಿ ಆತ್ಮಾರಾಮತೆಯ ।
ಪ್ರೇಮದ ನವಸಿಷ್ಠಾಮತೆಯ ॥

ನನ್ನದಿರಲಿ ನಿನ್ನದಿರಲಿ

ನನ್ನದಿರಲಿ ನಿನ್ನದಿರಲಿ ಸಂಚಿತ ಅದು ಆರದೇ
ವಂಚಿತವಾಗದು ಅದು ಮುಂದೆ ಎಂದೊ ಬಾರದೇ
ನಮ್ಮ ಸೂತ್ರಧಾರ ದೈವ ಕೃಪಾರಸವ ಕರೆಯಿಸಿ
ಹೃದಯದೊಂದು ಸರಿಯು ಕಂಡು ಬಿಡಿಸಬಹುದು ಮರೆಯಿಸಿ.

ಹೋರಾಡು ಹೋರಾಡು

ಎಚ್ಚರೆಚ್ಚರು! ಏಳು! ಎಚ್ಚರು!
    ನಿದ್ದೆ ಹೋಗದಿರೆಚ್ಚರ;
ಸೂರೆಹೋದೀತೆಲ್ಲ; ನೀನೇ
    ಸೆರೆಗೆ ಸಿಕ್ಕೀ ಬೆಚ್ಚರ!

ಹೋರು ಹೋರಲೆ ಹೋರಿ, ಹೋರೆನೆನ್ನುವ ಪೋರ,
ಹೋರೆ ಹೊಗದಿರು, ಹೋರಿ ಹೊರವನಾಳು;
ಹೋರೆ ಹೊರೆಯಲ್ಲ; ಭಾಪುರೆ! ಪುರುಷ ಪರಮೇಶ
    ಅವನ ಹೋರಿಯೆ! ಏಳು ಎಲ್ಲ ತಾಳು.

ಮೂಷಿಕಾಸ್ವಯಂವರ

ಇಲಿಮರಿ ಸುರಸುಂದರಿ ಆವರು ಕಷ್ಟ
ಅವಳಿಗೆ ಹೆಗ್ಗಣ–ಪತಿಯೇ ಶ್ರೇಷ್ಠ.

ಗುಡ್ಡ:— ನಾನೇ ಪರ್ವತರಾಜ
ನೆಲದ ಮೇಲೆ ನನಗಿಂತ ಎತ್ತರವು
ಇದ್ದರೆ, ಬರಲವರಿಂದುತ್ತರವು.
ನನ್ನಿಂದಲೆ ಹೊಳೆ, ಹರಿವವು ಮುಂದೆ
ನನ್ನ ತಗ್ಗಿನಲಿ ಬೀಳ್ವವು ಎಂದೇ
ದಿಡುಗೋ ಗುಡುಗೋ ಜೋಗಪ್ರಪಾತ
ನನ್ನಿಂದಲೆ ಆ ಅರಣ್ಯಜಾತ
(ಗುಡ್ಡವು ಮೇಲ್ಬಿದ್ದರೆ ನೈಯೋ ಪುಡಿಪುಡಿ
ಆಗಲೊಲ್ಲೆ ನಾ ಇಂದಿಗೆ ಹುಡಿ ಹುಡಿ)

ಗಾಳಿ:— ನಾನೋ ಮಾರುತರಾಯ
ಬಾನೊರೆಗಿರುವದು ನನ್ನ ಕಾಯ
ನನ್ನಿಂದಲೆ ಜೀವನದುಸಿರಾಟಾ
ನಾನಿದ್ದರೆ ಸವಿ ಊಟಾ ನೋಟಾ
ನಾನೊಳಗಿದ್ದಾಡಿಸುವದೆ ಪ್ರಾಣ
ನಾ ಹೊರಬಿದ್ದರೆ ಜಗ ನಿತ್ರಾಣ
(ಒಣ ಎಲೆ ಹಾರಿಸುವವನೋ ನೀನು
ಧೂಳಿ ಎಬ್ಬಿಸಿದರಾಯಿತು ಏನು?
ಒಪ್ಪಿದೆ, ಗುದುಮುರಿಗೆಗೆ ಮುದಿಮರ ಬಿದ್ದಾವು
ಗುಡ್ಡ ಇರಲಿ, ಮೊರಡಿ ಕೂಡ ಅಲುಗದೆ ಇದ್ದಾವು

ಧಿಕತೋಂ ಥಕತೈ ಹೊಗಳಬೇಡ ಆ ಮಾಯದ ಮಾಟ
ಬರಿಬಯಲಾಟ

ಮನೆ ಕಟ್ಟುವರೇ ಗಾಳಿಗೆ ನೆಚ್ಚಿ?
ನಾನಲ್ಲವು ಅಂಥಾ ಹುಚ್ಚಿ)

ರವಿ:— ನಾನೇ ರವಿರಾಜ
ನನ್ನಿಂದೀ ಜಗ ಬೆಳಕನು ಕಾಂಬುದು
ನನ್ನಿಂದಲೆ ಅದು ಮಳೆ ಬೆಳೆ ಉಂಬುದು
(ಏನೀ ರವಿ ಇವ ಯಾವ ಹೆಚ್ಚಿನವ?
ಮೋಡ ಬಂದೊಡನೆ ಕಣ್ಣು ಮುಚ್ಚುವವ
ಬೇಡ ಬೇಡ ಹುಸಿಬೆಳಕು ಬಢಾಯಿ
ಉರಿವವನೊಡನೆ ಏಕೆ ಲಢಾಯಿ?)

ಮೋಡ:— ಮಳೆಯೆಂಬುದು ನನ್ನ ಕೃಪಾ-ಜಲ-ಧಾರೆ
ಬಿಚ್ಚಿ ಹೇಳುವದು ಏತಕೆ ಬೇರೆ?
ಮಳೆಯಿರದಿರೆ ಎಲ್ಲವು ಮಟಮಾಯ
ಜೀವನಕಧಿಪತಿ ನಾ ಮಳೆರಾಯ.
(ನಿನ್ನ ಬಣ್ಣಪ್ರೋ ಕಣ್ಣಿಗೆ ಮೆಚ್ಚು
ಬೆನ್ಗೊಟ್ಟೋಡುವೆ ಗಾಳಿಗೆ ನೀನು
ಜಂಭವ ಬಿಡು ಇದು ಕಂಡೆ ನಾನು.)
ಇದ ಕಾಣುತ 'ಓಹೋ' ಋಷಿ ಎಂದ
ಅವರವರಿಗೆ ಅವರಾ ಜಾತಿಯೆ ಚೆಂದ.

ಗೆಳತಿ

ಆ ನಾನೊ ! ಆ ನೀನೊ !
ಎಂದು ಕೂಡಿದೆವೇನೊ !
ಈ ನಾನು ಈ ನೀನು
ಈಗ ಆಗಿ
ಇದಿರು ಬದಿರಿಗೆ ಬಂದು
ಸ್ಮೃತ ವಿಸ್ಮೃತದಿ ನಿಂದು
ಬಿಂಬ ಪ್ರತಿಬಿಂಬದೊಲು ಕಂಡೆವೇನೋ ?

ಏನ ಕಂಡೆವೊ ಏನೊ
ಮನ ನೆನೆಯುತಿದೆ ಏನೊ
ಕಣಸು ಏನೇನೊ ಮೂಡುತ್ತಲಿಹವು.
ಕಣಸೊ ಕನಸೋ ಕಾಣೆ
ನೀನೊ ಅದ್ಭುತಜಾಣೆ
ಮುಟ್ಟದೆಯೆ ಮುರುಕ ತೋರಿಸಿದ ವೀಣೆ.

ಮೌನ ಕಂಪಿಸುತಿರಲು
ಸುಪ್ತಿ ಜೊಂಪಿಸುತಿರಲು
ಬಯಲ ಬಸಿರಲಿ ನೀರು ಉರಿದೆದ್ದಿತು.
ತಿಂಗಳನ ಚುಕ್ಕೆಯೋ
ಅಹುದೇಕೆ ನಕ್ಕೆಯೋ
ಗ್ರಹಮಾಲೆಯನೆ ನೀನು ಹೆಣೆಯುತಿರುವೆ.

ಯಾವ ಗಿಳಿಯೋ ಅಳಿಯೊ
ಗಳಪಿ ಗುಂಗುಣಿಸಿತೋ
ಕೂ ಹೂ ಹು ಹೂ ಹೂ ವು ಕುಕಿಲುತಿರಲು
ಮಾವು ಹೂವಾಗಿತ್ತು.
ಬೇವು ಸವಿಯಾಗಿತ್ತು.
ಕಣ್ಣು ಹುಬ್ಬು ಕೂಡಿ—ಕುಣಿಯುತಿತ್ತು.

ಸೃಷ್ಟಿ

ಕಿವುಡಿ ನರ್ತಕಿಯು ಕುಣಿಯೆ, ಬಾರಿಸುವ
        ಕುರುಡು ಹಾಡುಗಾರ
ಅಂಗ-ಭಂಗಿ-ಲಾವಣ್ಯ ಬಣ್ಣಿಸುವ
        ಮೂಕ ಚಿತ್ರಗಾರ.

ತೊಟ್ಟಿಲಲ್ಲಿ ಹಾಕುವರದಾರು ಆ
        ಹೆಸರನಿಡುವರಿಲ್ಲ.
ಯಾವ ಪ್ರೀತಿಗಿದನಾರು ಹಡೆವರೋ
        ಸೃಷ್ಟಿಕರ್ತ ಬಲ್ಲ.

ಸಂತೆಮಂದಿ ಹಿಮ್ಮೇಳದಲ್ಲಿ ಗೊಂ-
        ದಳದ ಕುಣಿತ ನಡೆಯೆ.
ಬೀಸು ಗಾಳಿಯಲಿ ಬನವೆ ಒಲೆದ ಒಲು
        ಅಂದ ಚೆಂದ ಪಡೆಯೆ.

ರವಿಯ ಬೆಳಕಿನಲಿ ಅಡಗಿಕೊಂಡು
        ತಾರೆಯರು ನೋಡುತಿಹರು.
ಸ್ತಬ್ಧಶಾಂತ ಹುಸಿಗಾಲದಲ್ಲಿ
        ಯಾರಾರೊ ಹಾಡುತಿಹರು.

ಕತ್ತಲನ್ನು ಬೆನ್ನಟ್ಟಿ ಬಹುದೊ ಈ
ಬೆಳಕು ನಸುಕಿನಲ್ಲಿ.
ಬೆಳಕೆ ಬೆಂಬತ್ತಿ ಹೋಗುತಿಹುದೊ ಆ
ಸಂಜೆ ಮುಸುಕಿನಲ್ಲಿ.

ಜಾಗರತಿಯ ಕಥೆಯಂತೆ ಚಿತ್ರಗತಿ-
ಯಾಗಿ ತಿರುಗುತಿಹುದು.
ಹಗಲು ರಾತ್ರಿಗಳು ಒಂದನೊಂದು ಬೆಂ-
ಬಿಡದೆ ಮರಳುತಿಹವು.

ಮುಕ್ತಕಂಠ

ಬಂದ ಮಾತ ಅಂದುಬಿಡುವೆ
ನಡೆವ ಮಾತ ನೋಡಿಬಿಡುವೆ
ಆಡಿಬಿಡುವೆ ಹಾಗೆ ಬಿಡುವೆ
ನಿಲ್ಲಗೊಡೆನು ನಡುವೆ ನಡುವೆ.

ಹರಿವ ಬಾಳ ತಡೆವುದೇಕೆ
ಬಿಟ್ಟ ಹಾದಿ ಹಿಡಿವುದೇಕೆ?
ನೆಲದ ನೀರಿನಾಟವೆಲ್ಲ
ಬೆಳಕಿನೋಟ ನೋಟದೊಡನೆ.

ಗತಿಯು ತನ್ನ ಛಂದದಲ್ಲಿ
ಭಾವ ತನ್ನ ಬಂಧದಲ್ಲಿ
ಹರಿವೆನಿಲ್ಲೆ ಹೊಂದದಲ್ಲಿ
ಬಲ್ಲೆ ಎಲ್ಲು ಒಂದರಲ್ಲಿ.

ಹೊಳೆಯ ನೀರು ಒಡಲಿನಲ್ಲಿ
ಒಡವೆಯಂತೆ ಒಡೆಯನಲ್ಲಿ.
ಬಂದ ಮಾತ ಅಂದುಬಿಡುವೆ.

ಅಮೃತಾನುಭವ

ತಾವು ಇಬ್ಬರೂ ಒಬ್ಬರೆನ್ನುವಪ ತೋರಿಸುವರು ಸತತ
ಅಗಲಿ ಕೂಡಿ ಒಂದಾಟ ಹೂಡಿ ಜಗಭರಿತರಾಗಿ ವಿತತ
ಬಿಂದುರಜವ ಸಂಧಾನದಂತೆ ಈ ತಂದೆ–ತಾಯಿಯೊಂದು.
ಶರಣು ಹೋಗುವೆವು ನಮ್ಮ ಪಡೆದವರ ನಾವೆ ಪಡೆಯಲೆಂದು.

ಬೇರಿಗಿವನು, ಗೊನೆಫಲದಲಿವನು, ನಡುಮೈಯೊಳಿವನೆ ಇವನು
ಮೂಲ ಮಧ್ಯ ಮತ್ತಗ್ರದಲ್ಲಿ ಒಂದಾದ ಮೂರ್ತಶಿವನು
ಸುತ್ತಲೆಲ್ಲ ಸರ್ವತ್ರ ಮೇಲು ಒಳ–ಹೊರಗು ಅವನ ಕಾಂಬೆ
ಮೂರ ಮೀರಿ ಒಳಗೊಂಡ ಪೂರ್ಣಶಂಭುವಿಗೆ ನಮೋ ಎಂಬೆ.*

* ಅಮೃತಾನುಭವದ ೪–೫ನೆಯ ಪದ್ಯಗಳು.

ಆನಂದಃ ಹರಿಯಿಂದ

ಶಿವನು ಶಕ್ತಿಯುತನಾದರೇಯೆ ಜಗ ಪಡೆಯಲಾಪನವನು |
ಇಲ್ಲದಿರಲು ಮಿಡುಕಾಟ ಕೂಡ ಅವಗಿಲ್ಲ ಅವನು ಶವನು ||
ಹರಿಗೆ ಹರಗೆ ಬ್ರಹ್ಮಾದಿಗಳಿಗೆ ನೀ ಪೂಜ್ಯೆ, ಪುಣ್ಯವಿರದೆ |
ಯಾವನವನು ಪೊಡಮಡುವನವ್ವ, ಹೊಗಳುವನು ಹಾಡಿ ಬರಿದೆ? ||

ನಿನ್ನ ಅಡಿಯ ತಾವರೆಯ ತಳದ ಹುಡಿಯಿನಿಸು ತಾಕಲಾಗಿ |
ಅಂಥ ಕೈಲಿ ಕಟ್ಟಿದನು ಬ್ರಹ್ಮ ಬ್ರಹ್ಮಾಂಡ ಕೋಟಿಯಾಗಿ ||
ಅವುಗಳನ್ನೆ ಸಾಸಿರದ ಶಿರದಿ ಹೊತ್ತಿಹನು ಶೇಷಹರಿಯು |
ಅವುಗಳಾದ ಬೂದಿಯನೆ ಬಳಿದುಕೊಳ್ಳುವನು ರುದ್ರದೊರೆಯು ||

ಆ ಅವಿದ್ಯೆಯೊಳಗತ್ತಲಲ್ಲಿ ಬೆಳಕೊತ್ತು ದೀಪ ನೀನು |
ಜಡದ ಒಡಲ ಚೈತನ್ಯವೆಂಬ ತೆನೆತುಂಬ ನೀನು ಜೇನು ||
ನೀನು ನಮ್ಮ ಬಡತನವ ಹರೆವ ಚಿಂತಾಮಣಿಯ ಹಾರ |
ಜನ್ಮಜಲಧಿಯಲಿ ಶ್ರೀವರಾಹನೊಲು ನೀನೆ ಅಂತಪಾರ ||

ನಿನ್ನ ಮೊಗದ ಚಂದಿರನ ನಗೆಯ ಬೆಳುದಿಂಗಳಿಂದ ಇಡಿದು |
ಈ ಚಕೋರಗಳ ಬಾಯಿ ಕಟ್ಟಿ ತಾ ಮೇಲುಸವಿಯ ಕುಡಿದು ||
ಅರುಚಿ ಕಳೆಯೆ ಹಾತೊರೆಯುತಿಹವು ದಿನ ರಾತ್ರಿ ಚಂದ್ರ ಕಂಡು |
ಚಂದ್ರವೆಳಕಿನಂಬಲಿಯ ರುಚಿಯು ಹುಳಿಗಂಜಿ ನಂಜಿಕೊಂಡು ||*

* ಆನಂದಲಹರಿಯ ಮೊದಲ ನಾಲ್ಕು ಪದ್ಯಗಳು.

ಚೈತ್ರಾಲಯ

ಪೂರ್ಣ ಮಾಡು

ಅಂದೆ ನೆಲವು ಪಡೆದೀತು ಅಸುರ ಜೀವಂತ ಶಾಂತಿಯನ್ನು
ಎಂದು ನಾಡ–ನಡೆವಳಿಕೆಯಲ್ಲಿ ನೆಲೆಗೊಂಬುದೊಂದೆ ನಿಜವು.
ಆ ಪೂರ್ಣ ನಿಜದ ನೆಲೆ ಮೊಲೆಯ ಬಯಸಿ ಭಕ್ತಿಯಲಪೇಕ್ಷಿಸುವೆವು.
ನೀ ಪೂರ್ಣ ಮಾಡು ಹೇ ದೊರೆಯೆ! ಎಲ್ಲಿಯೂ ಬಯ್ತ ಬಯಕೆಯನ್ನು

ನಾಳಿನ ಮಗು

ಫಲದ ನಿರ್ಣಯವು ಏನು ಆದರೂ ಕ್ಷುಬ್ಧನಾಗನವನು
ನೇರಾದ ರೀತಿ ರುಜು ಅವನ ನೀತಿ, ಸಿದ್ಧಿಸದೆ ಇದ್ದರೂನು
ತನ್ನ ಯೋಗ್ಯತೆಗೆ ತಕ್ಕ ರೀತಿಯಲಿ ಕರ್ಮಕುಶಲನಾಗಿ
ಸತ್ಯವನ್ನೇ ಸಾರುವನು ಜಗಕೆ ನಿರ್ಭೀತ ಧೀರನಾಗಿ.

ಫಲವೆಂದೆ ಬರಲಿ ಯುಗಯುಗವು ತಾಳಿ ಎದೆಗೆಡದೆ ಇರುವನಾತ
ಗೊಣಗುಡದೆ ಅವನು ಅವಘಡವ ಸಹಿಸಿ ಎದುರಿಸುವ ವೀರಜಾತ
ಸಡಲಿಸನು ಅವನು ಹವಣಿಕೆಯ ಹಿಡಿತ ಶತಕಾನುಶತಕವಾಗಿ
ಸಿದ್ಧಿಸಲಿ ಬಿಡಲಿ ಸಮತೆಯನು ಕಳೆದುಕೊಳನಾತ ಸಾಮ್ಯಯೋಗಿ.

ಅಪಜಯವು ಬರಲಿ ಕೊನೆ ವಿಜಯವಿಹುದು ಎನುತೆನುತ ಯುದ್ಧವೆಸಗಿ
ಮೊಗದಲ್ಲಿ ನಗೆಯು, ಎದೆ ಸೊಗದ ಬಗೆಯು, ಸ್ಥಿತಿ ಬರಲಿ ಎಂತೊ ಮಸಗಿ
ಪರಗುಣದ ರಸಿಕ ಸಹಕಾರಿಯವನು ಸತ್ಕೃತ್ಯವೆಲ್ಲಕೂನು
ಸಂಯಮದಿ ಬದ್ಧ ಪ್ರಾಮಾಣ್ಯಸಿದ್ಧ ಹೀಗಿರಲು ಬೇಕು ಮಗುವು.
ಅವನಲ್ಲಿ ದಿವ್ಯಜ್ಯೋತಿಗಳ ಉದಯ ತೋರುವದು ಬರುವ ಯುಗವು.

ವಿದ್ಯುತ್‌ಪುತ್ರನ ಅವತಾರ

ಸುಸಮರ್ಥನಾದ ವಿದ್ಯುತ್‌ಪುತ್ರನೊಬ್ಬ ತಾನೀ ಭೂಮಿಗಿಳಿದು ಬಂದ
ಅಪ್ರತಿಮ ತ್ವರಿತಗತಿ ಅಗ್ನಿ–ಪಾದಗಳಿಂದ.
ಮಾನವನ ಮೈಕಟ್ಟು ಘನಗರ್ಜನೆಯು ತೊಟ್ಟು,
ನರಗರ್ಭದಲ್ಲಿ ಹುಟ್ಟಿತ್ತು ಬೆಳಕು.

ಸ್ವರ್ಗದತಿ ಶಾಂತಗತಿ, ಮಹಿಮೆಯಾ ಮಾಧುರ್ಯ, ಪರಿಶುದ್ಧರಾಗ
ಗರಿಗೊಂಡ ಬಲ ಇಳಿದು ಬಂದವಾಗ.
ಎಲ್ಲ ದೇವತೆಗಳೂ ಒಂದೆ ಮರ್ತ್ಯ ಶರೀರದಲ್ಲಿ ಬಾಳಿದವು
ಒಂದೇ ಹೆಸರ ತಾಳಿದವು

ಅಗಲಗಲ ಗತಿಯು ಅಲೆ ಮುಸಕು ಭೂಮಂಡಲದಿ ಬಂತು ಬಳಲಿ
ಉತ್ಫುಲ್ಲಸ್ವಪ್ನೋತ್ಥಗುಂಫಗಳಲಿ.
ಭವ್ಯತೆಯ ಕರುವಿಟ್ಟ ಹಾಗೆ ಬಾಳಾಗಿತ್ತು
ಕಡಲಗಲ ಕೈ ಕಾಲ–ಚಕ್ರ ಅಮುಕಿತ್ತು.

ಮಾನವನ ಆತ್ಮ ಮತ್ತೊಮ್ಮೆ ಪಡೆದಿತ್ತು ಬಾಳ ಸಾರಥ್ಯ
ಧೀರ ಉದ್ಧತ ದೇವದೇವತೆಗಳಾತಿಥ್ಯ.
ಪ್ರಪ್ರಭಂಜನ ಪಕ್ಷ ಉತ್‌ಕ್ಷಿಪ್ತ ವಾಯುಪಥದಲ್ಲಿ ಹಾರಿತ್ತು
ಭವ್ಯ ಆದರ್ಶಕ್ಕೆ ಗುರಿಯಿಟ್ಟು ಎಸೆದ ಈಟಿಯ ಹಾಗೆ ಏರಿತ್ತು.

ಡೆಂಪಣಿಸಿ ಕಳಚಿ ಬಿದ್ದವು ಪುರಾತನಾಯುಸ ಕವಚ
ಗೋಡೆ ಸಿಡಿದೊಡೆದು ಬಿದ್ದಿತು ಪುರಾಣ ಪ್ರಕೃತಿ
ತರುಣರ ಸೌಂದರ್ಯ, ಸುವಿಚಾರ, ಸತ್‌ಪ್ರಭೆಯ ಜಗದಿ
ಹೊಕ್ಕ ದೇವನು ಮತ್ತೆ ಚಿನ್ನ ಹೊಸತನದಿ.

ಮೂಡಿತ್ತು ದೇವವಾಣಿಯ ಸೊಲ್ಲು ಮಾನವರ ತುಟಿಯಲ್ಲು
ಹೃದಯ ಎಚ್ಚತ್ತಿತ್ತು ಮಿಂಚು ಬೆಡಗಿನ ಬಿಳಿಯ ನಸುಕುಗಳಲು
ಗಾಳಿ ಬೆಳಕಿನ ಬಟ್ಟೆ, ಉಸಿರು ಹರ್ಷದ ಕುಸರು
ದೇವಲೀಲೆಯ ಆಟದಂತೆ ಬಾಳು.

ಅಗ್ನಿರಾಜ

ಅಗ್ನಿರಾಜ :

ಬೆಂಕಿ ನಿಲುವಂಗಿ ತೊಟ್ಟುಕೊಂಡು ಬುವಿಯಿಂದ ಬಂದ ಜೀವ
ಸಪ್ತಸ್ವರ್ಗಗಳ ಸುಪ್ತ ಮೌನವನು ದಾಟಿಕೊಂಡು ಯಾವ?
ನೀನು ಏನು ಅಧ್ಯಾತ್ಮದೌರಸನೊ? ಅಭವ ಸ್ವಯಂಭವನು.
ಪರಂಧಾಮದಾ ಅತಿಥಿಯೇನು ಪೌರಾಣ ಕಾಲದವನು?

ಮನುಕುಲ ದೂತ :

ಮಾನವ್ಯಕುಲದ ಹರಿಕಾರ ನಾನು, ಅಂತರ್ಯದಾತ್ಮಸಾನು;
ಇರುಳನ್ನು ಕೊಡಹಿ ಸಾವನ್ನೆ ತಡೆದ ಪ್ರಪ್ರಥಮ ಪ್ರಮಥ ನಾನು;
ಅಮೃತಬಿಂಬ ಪ್ರತಿಬಿಂಬಿಸಿರುವ ಸೌಂದರ್ಯಲಕ್ಷ್ಮಿಸೂನು.
ಅಮರ ಜ್ಯೋತಿ ಮೃಗವೇಧಕಾಗಿ ಬಂದಂಥ ವ್ಯಾಧಶಿವನು.

ಅಗ್ನಿರಾಜ :

ತನ್ನ ಶಕ್ತಿಯಲಿ ನಿನ್ನ ಸುತ್ತಿರುವುದಾವ ಬೆಂಕಿ ಉರಿಯು?
ಪಾಲಿಸುತ್ತಿರೆಯು ಬರ್ಚಿ ನಾಲಗೆಯ ಚಾಚಿ ಕಾಯುತಿರೆಯು
ಸನಾತನದ ಸತ್ಕಾಲದಲ್ಲಿ ಸಂಚರಿಸುತಿಲ್ಲಿ ಬಂದೆ
ಕಲ್ಪನಾತೀತವಾದ ನವಕಿರಣದೊಂದು ಅಂಶವೆಂದೆ?

ಮನುಕುಲ ದೂತ :

ನವೋನವದ ಜಾಗೃತಿಯಲೆದ್ದ ಜೀವಾಗ್ನಿ ತೋಚುತಿಹುದು;
ಮರಣ ಸೀಳಿ ಉದ್ಭವಿಸಿ ಮೇಲೆ ಶಾಶ್ವತಕೆ ಚಾಚುತಿಹುದು;
ಯಜ್ಞಪಕ್ಷಿ ಗುರಿಯತ್ತ ಹಾರಿ ಶಿಖೆ ಏರಿ ಹರಿಯುತಿಹುದು;
ಮಾನವ್ಯದಲ್ಲಿ ಮಲಗಿದ್ದು ಎದ್ದ ದೇವತ್ವ ಉರಿಯುತಿಹುದು.

ಅಗ್ನಿರಾಜ :

ಭಂಗುರದ ಹಂಗು ಹರಕೊಂಡು ಬಂದೆ, ಓ ಮಗುವೆ ಏನೊ ಬೇಕೊ?
ಮುಕ್ತನಾಗಿ ಸಾವಿರದ ಸಯ್ತನಲಿ ಗುಮ್ಮಸಿಹುದೆ? ಸಾಕೋ.
ಏನು ಬ್ರಹ್ಮ ಸಂಮುಖಕೆ ಸಾಕ್ಷಿಯಾಗಿರುವೆ ಎನುವೆ ನೀನು
ಅಸ್ಪರ್ಶ ಯೋಗ ನಿರ್ವಾಣದಲ್ಲಿ ಲಯವಾಗಬೇಕು ಏನು?

ಮನುಕುಲ ದೂತ :

ಪಾತಾಳಖಾತದಜ್ಞಾನದಲ್ಲೂ ಜ್ಯೋತಿರಲಿ ದಿವ್ಯದೀಪ್ತಿ.
ನರಕಯಾತನೆಯ ಜೀವದಲ್ಲಿ ತಾಸಿರಲಿ ದೇವಶಕ್ತಿ.
ಮೂರುಕಾಲಕೂ ಮೀರಿ ದುಃಖಿಸದ ಸುಖವು ಭೂಮಿಗೆಂದೆ
ಅಕ್ಷುಬ್ಧವಾದ ಹದಗೆಡದ ಶಾಂತಿ ಮಾನವಗೆ ಬೇಡಬಂದೆ.

" ಅಂತರ್ಯಾಮಿ ವೈಶ್ವಾನರ "

ನನ್ನ ಜೀವಾಲಿಂಗನಾಂಗದಲ್ಲಿ ಪೂರ್ಣ ಪ್ರಪಂಚ
ಕೃತ್ತಿಕೆಯು ಕಿಚ್ಚಗಸ್ತ್ಯನ ತಪಃಸುಖವು.
ಜೀವಜೀವದ ರೂಪರೂಪದಲಿ ನಾ ಕಾಂಬೆ
ನನ್ನದೇ ಮೈಯು ಮತ್ತೊಂದು ಮುಖವು.

ನನ್ನ ನೋಡುವ ನೋಟ ನನ್ನದೇ ಕಣ್ಣಾಟ
ಎಲ್ಲೆದೆಯ ಮಿಡಿತ ನನ್ನೆದೆಯ ಠಾವು.
ನನ್ನ ನರದಲಿ ಹರಿಯುತಿದೆ ಜಗದ ಮಧುರ ಸೊಗ
ಆದರ ದುಃಖದ ಕೋಟಿ ನನ್ನ ನೋವು.

ಆದರೇನಾ ಕರ್ಮಸಂತತಿಯು ತೆರೆಗಳೊಲು
ನನ್ನ ಮೇಲ್ಮೈ ಮಾತ್ರ ನನ್ನ ತಿರುಳು.
ಮೊಳಕೆ ಮೂಡದ ಬೀಜ, ಕಾಲ ಮೀರಿದ ತೇಜ
ನಾನು ಕನ್ನಡಿ ಉಳಿದುದೆಲ್ಲ ನೆರಳು.

ನನ್ನ ಬ್ರಹ್ಮಾಂಡದಲಿ ಸಂಸಾರ ಸುಳಿ ಇತ್ತು
ಅಲ್ಲಿ ನಾ ಹುದುಗಿದ್ದೆ : ಮುನ್ನೀರ–ಎದೆ–ಮುತ್ತು !

ಬಂಧವಿಮೋಚನೆ

ಮನವ ರಿಂಗಣದ ರಂಗಭೂಮಿಯನು ಅಗೆದು ಬಗೆದು ನಾನು
ಆತ್ಮಸೌನಿ ಮುಸಿಯಾಪೆ ಬಾಸಿನಲಿ ಸಿಂತ ಹಾಗೆ ಭಾನು.
ಪ್ರಾಣ ಅಲ್ಲ; ಹೊತ್ತರಿಯೆ ನಾ [illegible]; ಕ್ಷಯರಹಿತ ಚಂದ್ರನಾಗಿ
ಸನಾತನದ ಆ ಬ್ರಹ್ಮಗೋಲದಲಿ ನಾನೆ ಕೇಂದ್ರವಾಗಿ.

ಮುಕ್ತನಾದೆ ನಾ, ತೀರಿಹೋಯ್ತು, ಆ ಅಲ್ಪ ಆತ್ಮರಚನ.
ಅಪ್ಸೃತ ನಾನು, ಕೇವಲನು ನಾನು, ಮೀರಿದೆನು ವರ್ಣವಚನ.
ನಾನೆ ಕಲ್ಪಿಸಿದ ವಿಶ್ವದಿಂದ ಹೊರಬಿದ್ದೆ ಎದ್ದೆ ಮೇಲೆ.
ನಾಮುಕ್ತಶೀಕ ನಾನಾದೆನಿಂದು ನನಗಿಲ್ಲ ಮೇರೆ ಬೇರೆ.

ನನ್ನ ಮನವು ಗಂಭೀರ ಗುಂಭ ಕಂಬೆಲ್ಲ ಹಿಗ್ಗು ಬೆಳಕು.
ನನ್ನ ಹೃದಯವಾನಂದ ಕಂದಿಲವು ಪ್ರಶಮದೊಳಗು ಥಳಕು.
ಮುಟ್ಟುತಟ್ಟು ಕಿವಿ ಕಣ್ಣು—ಕಟ್ಟು ಕರಣಕ್ಕೆ ಇಲ್ಲ ಕುಂದು
ಆ ಅಚ್ಛ ಸ್ವಚ್ಛ ಆನಂತ್ಯದಲ್ಲಿ ಈ ದೇಹ ಏಕಬಿಂದು.

ಸತ್ ಪ್ರಸುಷ ಹರುಷ ಆನಂದ ಸಿಂಧು ಲೋಕೈಕವಾದ ಪರ್ವ
ಯಾರೊಬ್ಬನಲ್ಲ, ಆ ಎಲ್ಲರಲ್ಲಿ ಇರುವಪೂರ್ವ ನಾನೆ ಸರ್ವ.

ಸುವರ್ಣದೀಪ

ನನ್ನ ಮಿಮುಳು ದಳವೇರಿ ದಳ್ಳಿಸಿತು ಸ್ವರ್ಣದೀಪ್ತಿ ಇಳಿಯೆ.
ಮನದ ಕರಿನೆರೆಯು ಹುಳುಗಳೆಲ್ಲ ಹೊತ್ತೇರಿ ಸಿದ್ದೆ ತಿಳಿಯೆ.
ಜ್ಞಾನಮಯುವ ಉದ್ದೀಪನಕ್ಕೆ ಪ್ರಜ್ವಲಿತವಾದ ಮೇಲೆ.
ಶಾಂತ ಕಾರ್ತಿಕದ ನಟ್ಟನಡುವೆ ಉರಿವಂತೆ ಪ್ರೇಮಜ್ವಾಲೆ.

ಕೊರಳಿಗಿಳಿದು ಬಂದಿರಲು ಆಹ ! ಆ ನಿನ್ನ ಸರ್ಣದೀಪ
ವಾಣಿ ಇನಿದಾಗಿ ಮಾಗಿ ಹಾಡಿಯುತಿದೆ ಏಕರಾಗ ಭೂಪ.
ಶ್ರುತಿಯು ಮೀಟಿದರೆ, ಸ್ತೋತ್ರಜಲಧಿ ಸಿನ್ನಡಿಗೆ ನುಗ್ಗಲುಂಟು
ಅಮೃತ ಕುಡಿದ ಗಂಧರ್ವನುತ್ತ ಗೀರ್ವಾಣ ಹಿಗ್ಗಲುಂಟು.

ನಿನ್ನ ಸ್ವರ್ಣದೀಪ್ತಿಯಲಿ ಬೆಳಗಿತೀಗೊ ನನ್ನ ಹೃದಯ ಭಾಗ
ನಿನ್ನ ಶಾಶ್ವತದ ಉಸಿರು ಆಡುತಿದೆ ಪ್ರಾಣದಿಟುಕು ಜಾಗ.
ನಿನ್ನ ಸುತ್ತು ಕಟ್ಟಿತ್ತು ಈಗ ದೇಗುಲವೆ ರೂಪಗೊಂಡು
ಹೃದಯರಾಗಗಳು ಶಿಖರಗಟ್ಟುತಿವೆ ಧೂಪ ಎಂದುಕೊಂಡು.

ಪಾದಗಳಲಿ ಇಳಿದಿರಲು ನಿನ್ನದಾದಾ ಸುವರ್ಣದೀಪ
ನನ್ನ ಇಳೆಯು ಲೀಲಾಭೂಮಿ ನಿನ್ನಡಿಗೆ ಬಹು ಸಮೀಪ.

ಅನಂತ ಸಾಹಸ

ಅನಂತ್ಯದೊಂದು ನವ ಜಲಧಿಯಲ್ಲಿ ಹೊರಟಿಹುದು ನನ್ನ ನಾವೆ.
ಎಲ್ಲಿ ಹೊರಟಿತೋ; ತನ್ನ ಮಾನಸ್ಯ ಬಿಟ್ಟು ಬೇರೆ ಠಾವೆ?
ಮಸಕು ಮಸಕು ಹಿಂದೆಲ್ಲ, ಮುಂದೆ ಪಾತಾಳಖಾತ ಸಿಂಧು
ಗೊತ್ತುಗುರಿಯಿಲ್ಲ, ದೂರ ಧ್ರುವದಾಚೆ ಬೆಳಕು ಸ್ಫಟಿಕ ಬಿಂದು!

ಕಾಣದೊಂದು ಕೈ ಹುಟ್ಟ ಹಾಕುತಿದೆ, ಕಾಂಬೆ ಕತ್ತಲೊಂದೆ
ಇರುಳು ರಾತ್ರಿ ಅಮವಾಸಿ ಗುಹೆಯು ಬಾಯ್ತೆರೆದ ಹಾಗೆ ಮುಂದೆ.
ಒಳಗೆ ಕೆಳಗೆ ಹಸಿನಾತವೆಂದು ಪಂಚಾಸ್ಯ ಗುಡುಗುತಿಹುದು.
ಸತ್ತ ಒಲವು ಜೀಸತ್ತ ಒಲವು ಘನ ಸಿದ್ರೆ ತೊಡಗುತಿಹುದು.

ಅರಸಿ ಹೊರಟ ಆ ಮಹಾಶಕ್ತಿ ನನ್ನನ್ನೆ ಸುತ್ತಿ ಮುತ್ತಿ
ತೋಡಿಹುದಗಳ್ತಿ ಮುಚ್ಚಿಹುದು ಅಬ್ಬ ನಾಗೇಂದ್ರನನಂತ ನೆತ್ತಿ
ಮೇಲೆ ನೋಡಿದರೆ ಯಾವ ಜೀವವೂ ತುಳಿಯದಿದ್ದ ಶಿಖರ
ಮುಳುಗಿ ಹೋದೆ ಅದ್ವೈತ ಐಕ್ಯದಲಿ ಅದರ ಆಚೆ ಪ್ರಖರ.

ಎಂಥ ಜಾಗ್ರ ಉರಿದೆದ್ದ ಹಾಗೆ ಭಗವಂತ! ಏನು ಕಿಚ್ಚು!
ಅವತರಿಸಲಿರುವ ಆ ಮೆಚ್ಚು ಮಾಟ ಆನಂದವೆಂಬ ಅಚ್ಚು.

ವಿಶ್ವಾವತಾರ

ಒಂದು ಬಿನ್ನಾಣವಿಹುದು ಸುಸಮಾಧಿ ಸುಪ್ತ ಸೂರ್ಯನಂತೆ.
ಹೃದಯಗುಹೆಯಲ್ಲಿ ಹಿಗ್ಗು ಹೊತ್ತಿಹುದು ಅಗ್ನಿಸತ್ವದಂತೆ.
ಹೃದಯ ಹೃದಯ ಮಿಲಿತೈಕ್ಯದಂಥದಿದೆ ಒಂದೆ ಹೃದಯಲೋಕ.
ಸುಪ್ರಮೋದ ಪರ್ವತದ ಅಗ್ರಕಿದೆ ಭವ್ಯಮೌನ ಮೂಕ.

ಶಾಂತಿ ತೊಡೆಯ ತೊಟ್ಟಿಲದಲಾಡಿಸುವಳಲ್ಲಿ ದೈವಶಿಶುವ
ನೆಲದ ದುಗುಡ ಮುದ್ದಿಟ್ಟು ಕಳೆಯುವಳು ಕರುಣೆ ತನ್ನ ಹಸಿವ
ಬಹು ರಹಸ್ಯಗಳ ಹೊಟ್ಟೆಯಲ್ಲಿ ಮನೆ ಮಾಡಿ ಇಹುದು ಸಾಕ್ಷಿ
ದೇಹ ಧರಿಸಿ ಬಂದಿರುವ ದೇವ ಏಕಾತ್ಮ ಯಕ್ಷ ಯಕ್ಷಿ.

ತೆರೆಯ ಮೇಲೆ ಉರಿ ಶಬ್ದ ಶಿಖೆಯು ಹಿಂದಿಹುದು ಹೃದಯಧಾಮ
ಚಿತ್ರರೇಖೆಯಲಿ ಲೇಖಿಸಿಹುದು ಅದ್ಭುತ ರಹಸ್ಯನಾಮ.

ಕಲ್ಲುಮೂರ್ತಿ

ದೇವದೇವತಾ ಪಟ್ಟಣಪಲ್ಲಿ । ದೇಗುಲದೊಲು ಕಿರಿಕಟ್ಟಡದಲ್ಲಿ ॥
ಕಟ್ಟಿರಕವ ಕೈ ಕಾಲೂ ಕಣ್ಣು । ದೇವತೆ ನೋಡಿದಳದೊ ನನ್ನನ್ನು ॥
ಸಜೀವ ಜಾಗ್ರತ ಅಮೃತವು ದಿವ್ಯ । ಏಕಮೂರ್ತಿಯೇ ಅನಂತಭವ್ಯ ॥
ಮಹಾದೇವಿ ಮಾತಾಯಿಯು ಅಂಬೆ । ಪ್ರತ್ಯಕ್ಷವು ಆ ಇಚ್ಛೆಯು ಎಂಬೆ ॥
ಪೃಥ್ವಿಯ ಗರ್ಭದ ಆಳಡಿಯಲ್ಲಿ । ನಿಸ್ಪನ್ನದ ನಿದ್ರೆಯ ತೊಡೆಯಲ್ಲಿ ॥
ಸರ್ವಶಕ್ತ, ದುರ್ಭೇದ್ಯವು ಮೂಕ । ಗಗನ–ಜಲಧಿ–ವನ ವ್ಯಾಪಿಸಿ ಏಕ ॥
ಮುಸುಕಿತು ಇಗೋ ಮಾನಸಪಾಪರಣ । ಮೌನವನೇ ಮಾಡಿಹಳಾಭರಣ ॥
ಅಗಮ್ಯ ನಿಃಶಬ್ದವು ಸರ್ವಜ್ಞ । ಸುಷುಪ್ತಿಯೊಳು ಎಚ್ಚತ್ತನು ಪ್ರಾಜ್ಞ ॥
ಕಂಡಿತು ದೃಷ್ಟಿಯು ಕೇಳಿತು ಶ್ರುತಿಯು। ಏಕವ್ಯಕ್ತವು ಆಯ್ತೊ ಮೂರ್ತಿಯು॥
ಪೂಜ್ಯವು, ಪೂಜಕ, ಪೂಜೆಯು, ಪೂವು । ರೂಪ ರೂಪಗಳು ನಾವೂ ನೀವು ॥
ಹೆಣ್ಣೂ ಮಣ್ಣೂ ಹೊನ್ನೂ ಒಂದು । ರಮ್ಯಗಮ್ಯ ಶ್ರೀ ರೂಪವು ಎಂದು ॥

ಅತಿಥಿ

ಕಂಡೆ ನನ್ನ ಅಂತರ್ಯಾಮಮರಪುರುಷರನು ತೆರೆಯಲಿಹನ
 ಮನದ ಮುಖವಾಡ ತೊಟ್ಟುಕೊಂಡ, ಭದ್ರಾಕಾರ, ಘನನ
ಮೃತ್ಯುಲೋಕವನು ಅಮೃತಸಂತೆ ಯಾಹೊತ್ತು ಕಾಣುವವನ
 ಮರ್ತ್ಯಲೀಲೆಯನು ದಿವ್ಯಪ್ರೇಕ್ಷಕನ ಹಾಗೆ ನೋಡುತಿಹನ!

ಹೃದಯಕಿರುವ ಮೈಗಿರುವ ಹರ್ಷ—ಖೇದಗಳ ಸ್ಪರ್ಶಗಿರ್ಶ
 ತಟ್ಟಲರಿಯದಾಗರ್ಭಗುಡಿಯು ನಿಃಶಬ್ದ ಶುಚಿ ವಿಮರ್ಶ.
ಸಂಕಟವು ಭಯವು—ಘೂಬಿಟ್ಟ ನಿಧಿಯ ಕ್ರೂರಾತ್ಮ ಕರ್ಮಶುನಕ
 ಹರಕೊಳ್ಳಬಹುದು ವೈಪಾಸನ, ಬರವು—ಮುಕ್ತಾತ್ಮನಲ್ಲಿತನಕ.

ನಿರ್ನಿದ್ರವಾದ ಆ ದೇವಕಿರಣ ಹೃದಯದಲಿ ಸಾಕ್ಷಿಯಾಗಿ
 ನಿರ್ಮರಣವಾದ ಸಾತ್ವಿಕದ ಅಚ್ಚ ಜೀವಾತ್ಮದಕ್ಷಿಯಾಗಿ
ಸರ್ವಶಕ್ತ, ದುರ್ಗಮ್ಯ, ಅತಿಥಿ ಊರ್ಧ್ವೋರ್ಧ್ವ ಅಗ್ನಿ ನಿಧಿಯು
 ಮರಣ ಬರಲು, ಬಲಿಯೆಂದು ಅದನೆ ಎತ್ತಿತ್ತು ದಿವ್ಯವಿಧಿಯು.

ಪೂರ್ವಪ್ರಕೃತಿಯಾ ಮನೆಯು ಬೀಳುತಿದೆ, ಕೊಚ್ಚಿ ಕೆಳಗೆ ಕುಸಿದು
 ದುರ್ದಮ್ಯನಂತೆ ಅಕ್ಷುಬ್ಧ ಶಾಂತ ಇಹನಾತ ಮಿಂಚ ಮುಸೆದು.

ಮೈ

ಈ ಮೈಯೆ ಒಮ್ಮೆ ಇಡಿ ವಿಶ್ವವೆಂದು ನನಗೇಕೊ ತೋರುತಿತ್ತು.
ಈಗ ಜೀವದೀ ಹೊಟ್ಟೆ ಪ್ರಾರ್ಕ ಎನಿಸುವದು ಎರಡೆ ತುತ್ತು.
ಜಗನ್ಮಾವ್ಯಶ್ಡ ಸಂಚಲನಕೀಗ ಇದು ಸಣ್ಣದೊಂದು ಸಂಚಿ
ಬೃಹದ್ಭೂಮಿಯಲಿ ಬೃಹತ್ತರದ ಆದರ್ಶಕೆಂದು ಹಂಚಿ.

ಒಪ್ಪಿಡಿಯ ಕವಳ ಏತಕ್ಕೆ ಸಾಕು ಅದು ಮಹಾಸುರದ ಭಿಕ್ಷೆ
ಅನಂತತೆಯ ಸಂತತಿಯನುಂಡು ತೀರಿತು, ಆ ಬುಭುಕ್ಷೆ
ಆ ಬುಭುಕ್ಷೆ ಒಳಮಡಿಕೆಗಳಲಿ ತೂಷ್ಣೀಂಭಾವವಾಗಿ
ದೇವರಾಯುಸವು ಆಗಿ ಇಹುದು ಶಾಶ್ವತದ ಠಾವಿಗಾಗಿ.

ಅದರ ಇದಿರು ಮುಗಿದಿರದ ಹೊತ್ತು-ಗೊತ್ತಿಲ್ಲ ಮುಗಿಲ ತಬ್ಬಿ
ಮಾಡಿದ್ದೆ ಮಾಟ ಮುಟ್ಟಿದ್ದೆ ಚಿನ್ನ ಎನುವಂತೆ ಘಟನೆ ಹಬ್ಬಿ
ಹೃದಯವನು ಹೊಕ್ಕು ಬ್ರಹ್ಮಾಂಡವುಕ್ಕು ಉಕ್ಕುಕ್ಕು ಮಧುರಪೂರಾ
ಆದರ ಮನವು ಹಾಕುವದು ಎಣಿಕೆ ಧ್ರುವದೆಡೆಗೆ ದೂರ ದೂರಾ.

ಇಟುಕುಮನೆಯ ವಾಮನನು ಜೀವ ಹೇಗೋಽ ವಿಶ್ವಯೋಗಿ
ಈ ಪ್ರಪಂಚವೊಡನೊಡನೆ ಸಾಗಿ ವಿಶ್ವಾಕಾರನಾಗಿ.

ಮುಕ್ತಿ

ನನ್ನ ಜೀವ ಮನ ಹಿಗ್ಗಿ ಹಿಗ್ಗಿ ಆಕಾಶಕಿಂತ ಅಗಲ
ಆವರಣರಹಿತದಾಕಾಲ ಮುಳುಗಿ ಉಂಡಿತ್ತು ಹರ್ಷ ಮಿಗಿಲ
ಮೈಯ ಪಿಂಡ ಉಡುಗಿತ್ತು ಉಳಿದು ಜಲಲಿಪಿಯ ರೇಷೆಯಾಗಿ
ಆತ್ಮದೇಕಾಂತ ಚಿಂತೆಯಲ್ಲಿ ಸ್ಮೃತಿ ಮಾತ್ರ ಶೇಷವಾಗಿ.

ಬಣ್ಣ ಹಾರಿ ಅಡಗಿತ್ತು ವಿಶ್ವ ಸುತ್ತೆಲ್ಲ ಸೆರಗು ಹರಿದು.
ಶುಭ್ರತೆಯ ಏಕಸಾಮ್ರಾಜ್ಯದಲ್ಲಿ ಬೆಳಕೊಂದೆ ಚೆಲ್ಲವರಿದು
ಅಮೃತ ಮೂರ್ತಿ ನಟರಾಜನೊಂದು ಸೌಂದರ್ಯ-ಶಾಲೆಯಾಗಿ
ಅಮಿತದಾನಂದ ಪಡೆದ ವೈಶಾಲ್ಯದೊಡನೇ ವಿಶಾಲನಾಗಿ.

ಹರ್ಷಪುಲಕ ಉಬ್ಬುಬ್ಬಿ ಹಬ್ಬಿ ಬ್ರಹ್ಮಾಂಡದುದ್ದ ಠಾವ.
ಬೆಳಕಿನಲ್ಲಿ ಇಂಗಿತ್ತು ಬುದ್ಧಿ, ಹಿರಿಹಿಗ್ಗಿನಲ್ಲಿ ಭಾವ
ನಿರ್ಭ್ರಾಂತ ಶಾಂತ ಸುಸ್ತಬ್ಧದಾಂತ ಪರಿಣಾಮ ಆಲಿಸುವದು
ಸನಾತನದ ಆ ಶಾಂತಿ ಶಾಸನವ ತಾನೆ ಪಾಲಿಸುವದು.

ಅನಿರ್ವಾಚ್ಯದಾ ರಾಜ್ಯದಲ್ಲಿ ಬದುಕುವೆನು ಬಾಳಹಬ್ಬ
ಪ್ರಕೃತಿಯಾಟ ಮುಗಿದಿಹುದು ಈಗ ತಾ ಪುರುಷನೊಬ್ಬನೊಬ್ಬ.

ಬೆಳಕು

ಬೆಳಕು ಬೆಳಕು ಕೊನೆಯಿರದ ಬೆಳಕು ಕತ್ತಲೆಗೆ ಖಣವೆ ಇಲ್ಲ.
ಪ್ರಾಣದಲ್ಲಿ ಅಜ್ಞಾತ-ಖಾತ ಇರುವುದು ರಹಸ್ಯವೆಲ್ಲ.
ಜಡವಗಾಧ ಆ ಖಾತ ಮುಂಚೆ ಮುಚ್ಚಿತ್ತು ತನ್ನ ನೆಲೆಯ.
ಲವಲವಿಕೆಯಲ್ಲಿ ಎಚ್ಚೆತ್ತು ಈಗ ಎತ್ತಿಹುದು ತನ್ನ ತಲೆಯ.

ಬೆಳಕು, ಹೊತ್ತಿರದ ಬೆಳಕು ತನ್ನ ತ[illegible]ವ ಅಚ್ಚವೆಳಕು
ಪಾವಿತ್ರ್ಯಮುದ್ರೆಯಲ್ಲಿಟ್ಟ ಗ[illegible] ತೆರೆದಿತ್ತು ತನ್ನ ಫಡಕು
ಬೆಳಕು ಬೆಳಕು ಕಿಚ್ಚಿಟ್ಟ ಬೆಳಕು ಆ[illegible]ತ್ರ್ಯ ಹೃದಯರತ್ನ
ಎದೆಯಲೆನ್ನ ಪ್ರಸ್ಪಂದಿಸುತ್ತ [illegible]ಳಿದೆ ಗುಲಾಬಿ ಸೂತ್ನ.

ಬೆಳಕೊ ಬೆಳಕೊ ನರನಾಡಿಯಲ್ಲಿ ತ[illegible]ತ್ತೂರಿ ಕುಣಿವುತೆದ್ದು
ಧ್ಯಾನಸ್ಥ ಬೆಳಕು! ಆ ಕಾವಿ[illegible]ದ ಜೀವಾಣು ತಣಿವುತಿದ್ದು
ಆನಂದ ಮುಗ್ಧ, ಸುಸಮಾಧಿಯಲ್ಲಿ ಪ್ರಜ್ವಲಿಸುತಿಹುದು ತೀರಾ
ಅಮೃತ ಸ್ಪರ್ಶ ನೆನೆವಂತೆ ರ[illegible] ನಾಂದಿಹವು ಪುಟ್ಟಪೂರಾ.

ದೀಪ್ತಿ ಸಾಗರದ ಬೃಹದ್ಗರ್ಭದಲಿ ಸ್ತಂಭದಂತೆ ನಿಂತೆ
ಮೂಲವಗ್ನಿಯನು ಮೇಲಿನನ್ನಯಲಿ ಒಂದುಗೊಳಿಸುವಂತೆ!

ಮಿಹಿರದ್ವೀಪ

ಸ್ವರ್ಣಸಮುದ್ರದಿ ಪಯಣಿಸಿಹೆ
ರಜತತೀರವನು ನೂಕಿರುವೆ
ಜ್ಞಾನಭಾಸ್ಕರನ ತಲುಪಿರುವೆ
ಇಳೆಯಿರುಳಭಿಜಿತ್ ಸೋಕಿರುವೆ.

ದೃಷ್ಟಿದೀಪಿಸುವ ಕ್ಷೇತ್ರಗಳು
ಕೆಚ್ಚಿನ ಕಸುವಿನ ಬೆಟ್ಟಗಳು
ಹರ್ಷಜ್ವಾಲೆಯ ಶಿಖರಗಳು
ಕೇವಲ ಬೆಳಕಿನ ಗಾಳಿಯೊಳು.

ಆತ್ಮವಿಸ್ಮೃತಿಯ ಕಡಲುಗಳು
ರುದ್ರನಿದ್ರೆಗಳ ಗಿರಿದರಿಯು
ನನ್ನ ಜೀವದಾ ರಾಜ್ಯದೊಳು
ನಂದಾ ದ್ವೀಪಾವಳಿಗಳೊಳು.

ದೇವನೆ ದೇವ ಮೌನೋ ಮೌನ
ಕಾಲರಹಿತವಹ ಕಾಲದ ಅಯನ
ಅಲ್ಲಿ ಜೀವನವು ರಾಗದ ಮೂರ್ತಿ.
ಸತ್ಯ ವಿಚಾರವೆ ಛಂದಃಶಯನ.

ಅಲ್ಲಿಯ ಬೆಳಕೇ ಸುತ್ತೂ ಮುತ್ತು.
ಇಲ್ಲಿಗೆ ಬಂದರು ಎತ್ತಲು ಇತ್ತು
ಅಮೃತ ಜ್ಞಾನವು ಇಳೆಗಿಳಿದಿತ್ತು
ಮೌನವು ಜನ್ಮದ ಗರ್ಭದಿ ಬಿತ್ತು.

ಆತ್ಮಾರ್ಥಿ—ಸ್ವಾರ್ಥಿ

'ಅಹಂಕಾರರಹಿತ ನಾನು ಮುಕ್ತ ಆತ್ಮನಂದನು—
ಸುಡಲಿ ಊಟ ಬರಮು ಏಕೆ ಕೂಡಲಿ ತಾನೆ'ಂದನು.
ಅವನಿಗೆಂದೆ 'ಏಕೊ ರೋಷ?' 'ಎಂಥ ರೋಷ ಎದರದು?
ಉದರದೇವ ಹಸಿಮುಕೊಂಡ ಆ ಗರ್ಜನೆ ಅದರದು!'

'ಹೀಗೊ' ಎಂದೆ—'ಹೌದು' ಎಂದ 'ಎಲ್ಲ ಆಟ ಅವನದು
ಹಸಿಯೆ ನುಸಿಯೆ ನನ್ನ ಬಮುಕು ಶುದ್ಧ ಸ್ವಯಂಭವನದು
ಏನು ಆದರೇನು ನನಗೆ ಇಂದು ನಾಳೆ ನಾಡಿಮು'
'ನಿಜವೊ' ಎಂದೆ ಅನ್ನರಾಗ ಎಳೆದು ಮತ್ತೆ ಹಾಡಿದು?

'ಅಚ್ಛಾ' ಎಂದಾ 'ನಿಮ್ಮ ಶಂಕೆ ನನ್ನ ತಲೆಗು ಸೋಂಕಿತು
ಒಮ್ಮೆ ಮುಕ್ತ ಸದಾಮುಕ್ತ ಉಳಿಮುದೇನು ಕೊಂಕಿತು?
ಒದ್ದಾಡಿದೆ ಗುದ್ದಾಡಿದೆ ಕವ್ವಾಡಿದೆ ಆಗಲಿ
ಹಸಿವು ಹುಸಿವು ಕಸುವು ಕುಸಿವು ಹೇಗೊ ಹಾಗೆ ಸಾಗಲಿ

ಆತ್ಮಜ್ಞಾನ ಮುಕ್ತಗಾನ; ಉಳಿದ ತಾನ ಮಾನವು
ತಾಳ ಬಿಡಲಿ, ಮೇಳ ಕೆಡಲಿ ಆದರದೇಕೆ ಭಾನವು?'

ಸರ್ವಸಾಕ್ಷಿ

ಇಲ್ಲಿಹ, ಅಲ್ಲಿಹ, ಎಲ್ಲೆಲ್ಲೂ ಆವ ಮುಖಕ್ಕೆ ಪ್ರತಿಮುಖನಾಗಿಹನು
    ಹಮ್ಮ್ರಿನ ಕೋಟೆಯ ಗೋಡೆಯ ಕನ್ನಯ ಬಲಭುಜದಲಿ ಸೈತಾಗಿಹನು
ನಾನೋ ಆಗಸೆಯ ಸೀಮೆಗೆ ನಿಂತು ದಿಟ್ಟಿಸಿ ನೋಡೇ ನೋಡುವೆನು
    ಬಯಲು ಬಯಲು ನಿರವಯಲಿನಾಚೆ ನಾನನಂತ ಅನಂತ ತೋಡುವೆನು.

ಒಡವೆ ಒಡವೆ ಒಮ್ಮ್ರಗ್ಗಲು ಕಾಂಬುದು ಅಗ್ಗಲು ಹಿಗ್ಗಲು ಭೂಭೂವಮಾ
    ಆದರ ಕಿಟಕಿಯಿಂದಿಣಿಕಿ ನೋಡಿದರೆ ಕಾಂಬೊಲವೆಲ್ಲವು ನಿಃಸೀಮಾ
ಸೆರೆಮನೆ ಎನುವುದು ಏತಕೊ ಒಡಲಿಗೆ ಕಾಂಬುದು ಅರಮನೆ ತುಣುಕು ಅದು
    ಕೀಲುಕೀಲದಲಿ ಪೀಲುಪೀಲಿನಲಿ ರನ್ನದ ಕಣಕಣ ಮಿಣುಕುವದು.

ಒಡಲು ನನ್ನದೋ ಒಡವೆಯು ಅವನದು ಉಸಿರವನದು ನಾ ಬರಿ ಹೆಸರು
    ಖೇದವೋದಗಳ ಪಯರಿನಲ್ಲಿಯೂ ಹಚ್ಚಗೆ ಎಸೆವುದು ಆ ಹೆಸರು
ಚಿರಂತನದ ಒಪ್ಪೆನುವೊಲು ಜನನದ ಘನಘನ ಮಾಲೆಯು ಸಾಗುವುದು
    ನನ್ನ ಮರಣ ಅವನಮರತೆ–ಸೇರುವ ಸೇರುವೆ ಬಾಗಿಲವಾಗುವುದು.

ಆಳ ಆಳ ಪಾತಾಳ ರಸಾತಳ ಕಾವಣದೊಳೊ ಎನೆ ಬಾಳುವನು
    ಪೂಜೆಯಿಲ್ಲದಾ ಪೂಜ್ಯನು ಹೃದಯದಿ ಪೂ–ನಗೆ ಮುಗುಳಿಸಿ
                                        ತಾಳುವನು.

ಅದ್ವೈತ

ಚಂದ್ರಶೈಲದುನ್ನತಿಯ ರಾಜವೀಥಿಯಲಿ ಅಬ್ಬ ಬಂಡೆ
ಆದಿ ಶಂಕರನ ಚಿಕ್ಕ ಗುಡಿಯೊಳಗ ಕಟ್ಟಿದಂತೆ ಕಂಡೆ–
ಹೊತ್ತು ಮುಗಿದ ಮುಮ್ಮೂಕ ತುದಿಗೆ ಆನಂತ್ಯದಿದಿರುಕಡೆಗೆ
ಇಹದವಭಂಡ ಕಥೆ ಮುಗಿಸಿದಂತೆ ಬಾಳಿನಲಿ ಒಂಟಿನಡಿಗೆ.

ನಿರಾಕಾರ ಏಕಾಂತ ತಂತು ಸುತ್ತುತ್ತಲಿತ್ತು ನನ್ನ
ಹೆಸರೆ ಕೊಡಬರದ ಹೊಸದೆ ಏನೊ ಇತ್ತಲ್ಲಿ ಜಗದ್ಭಿನ್ನ
ಅಂಕುರಿಸದಿದ್ದ ಏಕೈಕ ಸ್ವೈಜ ಜಗವನೂಹದಂತೆ ನಗ್ನ
ಅಚಲ ಅಚಲ ಬೇರಿಲ್ಲ ಬುಡಕೆ; ಶಿಖೆಯಿಲ್ಲ ಅಗ್ರ ಭಗ್ನ.

ಸದ್ರೂಪವೆಲ್ಲ ನೆಲಿಸಿಹುದೊ ಮೌನಸಾಮುವನೆ ಧರಿಸಿ ಮಾತ್ರ
ಹಾದಿಯಿರಲಿಲ್ಲ ಆದಿಗೂನು ಕೊನೆಯೂನು ಧ್ವನಿಗಪಾತ್ರ
ದೃಷ್ಟನಷ್ಟ ಕ್ಷಣದಲ್ಲಿ, ಶ್ರುತವು ಅಶ್ರುತವು ಲಯಿಸಬಹುದು.
ನಿರ್ವಚನದಾಚೆಯಾ ಶೃಂಗದಲ್ಲಿ ರಾರಾಜಿಸುತ್ತಲಿಹುದು.

ಅಕ್ಷುಬ್ಧವಾದ ಏಕಾಕಿ-ಶಾಂತಿ ಅವಿಚಲಿತ ಶೂನ್ಯದಲ್ಲಿ
ಪ್ರಕೃತಿದೇವಿಯಾಂತರ್ಯಗೂಢವಾ ಮೂಕ ಶಿಖರದಲ್ಲಿ.

ಮಾನವ–ಬೌದ್ಧಿಕ ಪ್ರಾಣಿ

ಆ ಅಸೀಮದಾ ಸಂಚುಪೊಂಚಿನಲಿ ಒಂದು ಕ್ಷುದ್ರ ಘಟಕ
ವೈಶ್ವಾನರನ ಆವರ್ತನೃತ್ಯರಂಗದಲಿ ಸಣ್ಣ ಚುಟುಕ.
ಬಟಾಬಯಲು ಇದ್ದು, ಹೋ! ಅಖಂಡ ಕಾನರ್ಥಹೀನ ಹಳವು
ಆಕಸ್ಮಾತ್ತೊ ಎನುವಂತೆ ಬಂತು ಭೂಮಿಯಲಿ ನರನ ಫಲವು.

ತನ್ನ ನರಿತ ಅಜ್ಞಾನದಲ್ಲಿ ತಾನೆರಿತ ಒಂದು ಪ್ರಾಣಿ
ನೆರಳು ಬೆಳಕು ಅರ್ಧಾರ್ಧವಿರುವ ಮನ; ಬದುಕಿನೊಂದು ಕಾಣಿ
ಮರ್ತ್ಯಲೋಕದೀ ಬಂದಿ, ತಿಳಿವ ಶ್ವಾಸೋಚ್ಛ್ವಾಸ ಹರುಷ.
ಹೇಗೊ ಬಾಳುವನು ಕುಂಟುಕೂರಿಗೆಯ ಕ್ಷಣಿಕ ನೂರು ವರುಷ.

ಆದರೇನು ಆಂತರ್ಯ ಪ್ರಗತಿ ದೈವಿಕದ ಅಚ್ಚಭಲವು
ಅಚಿನ್ಮಯದ ಅಜ್ಞಾನ ಸಿಕೆಯು ಚೇತನದ ಚೊಕ್ಕ ಬಲವು
ಬರುವೆ ಎನ್ನುತಿದೆ ಪರಂಜ್ಯೋತಿ ಸಾಕ್ಷಾತ್ಕರಿಸಿಕೊಂಡು
ಆ ಅದೃಷ್ಟ ನಿಷ್ಕರುಣ ಶಕ್ತಿಗಳಸಿದಿರು ಎದುರುಗೊಂಡು.

ಅಚಿತ್ತಾದ ಈ ಮಣ್ಣಿನಲ್ಲಿ ದಿವ್ಯತ್ವದೂರ್ಧ್ವಭಾವ
ಕಾಂಬೆನೆನ್ನುವದು ಮಂದಗತಿಯೊಳೇ ಚಿರಂತನದ ಜಾವ.

ಸಾಕ್ಷಿ ಮತ್ತು ಚಕ್ರ

ಯಾರಣ್ಣ ನೀ ಬಿಡುಗಣ್ಣನೇ । ಎದೆಗೆಳೆಯು ! ಕುಳಿತಿಹೆ ತಣ್ಣನೇ
ಮಾನವನ ಕರ್ಮವ ಬಿಮ್ಮನೇ । ಸುಖದುಃಖ ನೋಡುವೆ ಸುಮ್ಮನೇ

ಸಂತಾಪ ಜಾಲಕೆ ಆದರದೇ । ಮರಣಕ್ಕೂ ವಿಧಿಗೂ ಬೆದರದೇ
ಕುರುಡು ಜಗ ಉರುಳುವುದ ಕಾಯುವೆ । ಸಾಕ್ಷಿ ಕಣ್ಣೂ ನೋಯುವೇ ?

ಈ ವಕ್ರಚಕ್ರದ ಜೊತೆಗೆ ನೀಸಹನಂತೆ ಏತಕೋ ತಿರುಗುವೇ
ಯಾ ಕಲ್ಪ ತವ ಸಂಕಲ್ಪವೋ । ಈ ಹೃದಯ ದುಡಿಸಿದೆ ಸ್ವಲ್ಪವೇ

ನೀ ನಿಲ್ಲದೇನೂ ನಿಲ್ಲದೋ । ಚಿರಕಾಲವಲು ಅನುಭಾವಿಯೋ
ಜಡ ಪ್ರಕೃತಿ ನಿಯಮಿತ ಪ್ರೇರಣೆಯು ಬಿಟ್ಟನ್ನು ಜೀವನ ತೊಳೆವೆವು
ಹುಲು ಎದೆಯು ವಾಸನೆ ತೊಳೆವೆವು । ನಿನ್ನಂತೆ ಪರಿಣತಿಗೊಳುವೆವು

ಎಂದಿನಂತೆಯು ಹಿಂದಿನಂತೆಯೆ ಪ್ರಕೃತಿರಥವೋ ಸಾಗಲಿ
ತನ್ನ ರತಿಕೃತಿ, ಭಿನ್ನ ಗತಿಸ್ಥಿತಿ, ಅಂಥ ರೀತಿಯೊಳಾಗಲಿ

ಈ ಇಹದ ರಾಗದ್ವೇಷ ಈ ಸುಖದುಃಖ ಜಲಲಿಪಿಮಾನವು
ಏನಿಲ್ಲ ಅರ್ಥವು ವ್ಯರ್ಥವಿದು ಗುರಿಯಿರದ ಜಗ–ಸೋಪಾನವು

ಅಗೊ ಪುರುಷನೋ, ಅದು ಆತ್ಮವೋ, ಆ ಜೀವವೋ ಕಾಯುತಲಿರೆ
ಆಕಾಶವ್ಯೂಹಪರಾಕ್ರಮುಕ್ಕದೊ ಕಾಲತತಿ ಸಾಯುತಲಿರೆ
ಶಮದ ಸೀಮೆಯೊಳಚಲವಿರುವೆವು, ನಿಯತಿ ಮರಣವ ನೂಗಲಿ

ನೀನಾರು ಹೇಳೈ ಸಾಕ್ಷಿಯೇ, । ನಾನಾರು ನಿನ್ನೊಡನಾತನು
ಈ ಲೋಕಚಕ್ರವ ಕಾಲದೇಶದಿ ಕಾಂಬ ನಾಮಾತೀತನು ?

ಪುನರ್ನವ

ಹೃದಯವು ದಣಿವಿಲಿ ನವೆದಿತ್ತು, । ಸ್ಪಂದಕೆ ಮರೆವೋ ಕವಿದಿತ್ತು
ಎಲ್ಲವು ಇತ್ತೆಂದಾಗಿತ್ತು, । ಮುಂದಕೆ ಇನ್ನಿಲ್ಲೆನಿಸಿತ್ತು
ಬಿಲ್ಲೀ ಕಳಚಿದೆ ಕೈಯಿಂದ, । ಹೆದೆ ಹರಿದಿದೆ ಒಳಹುರಿಯಿಂದ
ಕೈಗಳ ಹಿಡಿತವೆ ಸಡಿಲಾಗಿ, । ಎನಿಸಿದೆ ಆಗದು ಒಂದಾಗಿ
ಪ್ರಾಣಲಿಂಗವೇ ಹೊರಟಿರಲು । ಹೊಸ ಮೈ ಹೊಸ ಜನ್ಮವೆ ಬರಲು
ಮುನ್ನೋಡದ ಹೊಸ ಹೊಸ ದೇಶ, । ಹೊಸ ಮುಖಗಳ
ಹೊಸ ಹೊಸ ವೇಷ
ಬಿಲ್ಲೇರುವದೇ ಗುರಿ ನೋಡಿ, । ಹೆದೆ ಹೊಂದಿಸಿ ಬಾಣವ ಹೂಡಿ
ವ್ಯರ್ಥ ಕರ್ಮಹತ ವಿಧಿ ವಕ್ರ. । ಮುಗಿವುದೆ ಪ್ರಾರಬ್ಧದ ಚಕ್ರ?
ಕಾಲವು ಜೀವಗಳಗಲಿಸಿರೇ, । ಮತ್ತೆ ಅವರು ಒಂದಾಗುವರೇ?
ಪ್ರೇಮವು ಹತವಾಗಿರೆ ವಿಕಲ । ಮರುಮೈ ಮಾಡುವದೇ ಸಫಲ?
ಇಂದ್ರಿಯಗಳು ಅದ ಬಂಧಿಸವು. । ಎದೆಯ ತಂತಿಗಳು ಸಂಧಿಸವು
ಮರೆತಿದೆ ಪೂರಾ ಮುನ್ಮನವು, । ಆದರು ಆತ್ಮಕೆ ಘನ ನೆನೆವು.

ಸ್ವಪ್ನನೌಕೆ

ಓ ಸ್ವಪ್ನಾಗ್ನಿಸೃಷ್ಟಾ, ನೌಕಾರೂಢಾಽ ಗೂಢಾ
ಯಾರವನೋ ಚಿರತರುಣಾಽ ಬಂದಾ
ಹುಬ್ಬೋ, ಅನಂಗನು ಚಿತ್ತಿಯಲಿ ಮಣಿಸಿದ ಕಬ್ಬೋ
ಆಹಾ ಈ ಕಾಯಾ ಹಿರಣ್ಯಾಽಽಗರ್ಭಚ್ಛಾಯಾ
—ಆಕೃತಿಬಂಧಾ
ಮೌನಾ ಕರಗಿಸಿ ಎರೆದಾ, ಸೆಳೆಮಿಂಚಿನ ತೆರದಾ,
ಸವಿನುಡಿ ಛಂದಾ—
‘ಆ ಹೃದಯ ಜ್ವಾಲಾ ಮಾಲಾಽಲಂಕೃತಾ ಯಜ್ಞಾ ಸಿದ್ಧವೇನೇ ?
ಕಂಕಣಾ ಬದ್ಧವೇನೇ ?
ಬಂದೆನೇ! ಬರುವಿಯೇನೇ ?’ —ಎಂದಾ

ಅರರೇ, ಗದಗದನೇ ಏನೋ ನಡುಗಿತ್ತೋ—ನಡುಗಿತ್ತೋ
ಎದೆಗೂಡಿನ ಹಿಂದೇ
ಏನೇನೋ ಅಡಗಿತ್ತೋ—ಅಡಗಿತ್ತೋ
ನೆನವೇ ನನೆಕೊನೆಹೋಗಿ ಪಲ್ಲವಿಸಿತೊ ಜೀವನವೃಕ್ಷಾ
ಆಮೋದದ ಲಿಂಗಽ ಪಡಪಡಿಸಿತು ಪ್ರಾಣದ ಪಕ್ಷಾ
ಪ್ರತಿಬಿಂಬಿತವಾಯ್ತೋಽ ಭಗ್ಗನೇ, ಸ್ಮೃತಿಸಾರದ ಸಾತ್ತ್ವಿಕ ಲಕ್ಷಾ
ಓಹೋ ಹೋಯಿತೋ ಹಡಗಾ, ಬಂಗಾರದ ಹುಡುಗಾ
ಹೃದಯದ ದೇವಾ !—
ತಾಳೆನೇ ನೋವಾ.

ಟೊಳ್ಳೋ ಈ ಜಗವೆಲ್ಲಾ ಬಯಲಿನ ಡೊಗರು
ಬದುಕಾಗಿದೆ ಹಗುರು
ಒಲವಿಲ್ಲ ಬಾರಸು ಸಲ್ಲಾ, ಹೆಳೆ ಹಿಗ್ಗಿಗೆ ಮೂಡದು ಚಿಗುರು
ಬರದೋ, ಬರದೆನಿಸಣೆ ಎಂದೂ ಬರದು
ಕಿಸಲಯ-ನಯ ಹೋಗಿದೆ ತರಿದು
ಬರಿದಾಗಿದೆ ಒಳಗೂ ಹೊರಗೂ
ಆ ರುಕ್ಮಾಂಗದ ದೇವನ ಕನಸೂ ಬರಿದಾಗಿ
ಕನಸಿನ ಹಡಗಾsss ಬರದಾಗಿ.

ಹುಲಿ ಮತ್ತು ಹುಲ್ಲೆ

ಮಿಂಚಿ ಚಕಮಕ, ಬಾಗಿ ತೂಗುತ ಮಣಿಮ ಬಳಕುತ ತಡೆದಿದೆ
ಕಾಮಬೆಟ್ಟದ ಪಚ್ಚೆ ಹೃದಯದಿ ಏನು ಸುಸುಳುತ ನಡೆದಿದೆ?
ನಯನ ನಿಗಿನಿಗಿ ಎದೆಯು ದೃಢಪಡೆ ಏನೊ ನಾತವ ಹಿಡಿದಿದೆ
ಕಳ್ಳಹೆಜ್ಜೆಯು ಮೆಲ್ಲನಡಿಗೆಯು ಘಾತಸಂಭ್ರಮ ಪಡೆದಿದೆ.
ಎಲೆಯ ಸಂದಿಗಳಿಂದ ಜಳಕನೆ ಹರಿದ ಮರ್ಮರ ಗಾಳಿಯೆ
ಮೊದಲೆ ನಿರ್ದಯವಾದ ಅದ್ಭುತ ಮತ್ತೆ ಕೆರಳಿದರೆಂತೆನೆ
ಉಸಿರನಡಗಿಸಿ ಭಯದಿ ನಡುಗುತ ಕಾಣಕಾಣುತ ಜಾರಿದೆ
ಮಹಾಮೃಗವನೊ ಹೇಗೆ ಸಾಗಿದೆ ಬಾಗಿ ನಯಭಯಮಯದಲಿ
ಸೌಮ್ಯ ಸೌಂದರ್ಯವನು ನಶಿಸಲು ರೌದ್ರ ಸುಂದರ ನಯದಲಿ.

ಮುಗ್ಧ ಮೃಗವಧು ತನ್ನ ಕಾಲಿಲೆ ಮರಣವಿದ್ದೆಡೆ ಸಾಗಿದೆ
ಬನವ ತಣ್ಣೆಳಲಲ್ಲಿ ತಿಳಿಗೊಳವಲ್ಲಿ ನಿರ್ಭಯ ಬಾಗಿದೆ
ಪಾಪ, ಸಂಶಯವೆಂಬುದೇ ಗೊತ್ತಿಲ್ಲ ನಂಬುಗೆ-ಜೀವಕೆ
ಆಚೆ-ಈಚೆಗೆ ನೋಡದೇ ನಾಲಗೆಯ ಚಾಚಿರೆ ತೇವಕೆ
ಹಾರಿ ಜಗಿದಿತು ಮೇಲೆ ಒಗೆದಿತು ಹುಲಿಯು ಹುಲ್ಲೆಯ ಹೀರಿತು
ಅಯ್ಯೊ ಬಿದ್ದಿತು, ಭಕ್ಷ್ಯವಾಯಿತು, ಆಯಿತೋ ಬಾಳಾಯಿತು,
ಗಹನ ಗುಹೆಯಲಿ ಒಂಟಿ ಇಹ ಸಖನನ್ನೆ ನೆನೆಯುತ ತೀರಿತು
ಆದೇ ಸುಖದಲಿ ಮೃತ್ಯುಮುಖದಲಿ ಹುಲ್ಲೆ ಓ ಹಾಳಾಯಿತು
ಹಾರಿ ಜಪ್ಪಿಸಿ ಕೊಲುವ ಕೌಶಲವಿರಲಿ ಆರ್ಭಟೆ ಇಂದಿನ
ಆದರೂ ಬಂದೀತು ಎಂದೋ ಹುಲಿಯೆ ಲಯವಾದೊಂದಿನ.

ನೆಲವ ಲಟಲಟ ಮುರಿಯೆ ಹುಟ್ಟಿದ ಪೆಡಂಭೂತಗಳೆಲ್ಲಿವೆ ?
ನೆರಳ ತಂಗೊಳ ಜಲವ ಕುಡಿನುಳಿದಾವು ಹರಿಣಗಳಿಲ್ಲಿಯೋ !
ಪ್ರಬಲ ಬಲಿಯೇ ತನ್ನ ಬಲಭರಭಾರದಲ್ಲಿಯೆ ಮಡಿವನು.
ಬದುಕಿನೊಡೆಯನು ಸತ್ತ್ವನೆನಿಸಿದ ಸತ್ಯಸಂತತಿ ಜೀವನು.
ಕೊಲ್ಲಬಲ್ಲವ ಮೆಲ್ಲಮೆಲ್ಲನೆ ಮೃತ್ಯುಪಂಥವ ಹಿಡಿವನು.

ಪ್ರತೀಕ್ಷಾ–ಸಮಾಧಿ

ಬ್ರಹ್ಮಾಂಡಕೆ ಕಾವ್ ಕೊಡುತ್ತಿದೆ, ಒಬ್ಬೊಂಟಿಗ ಹಿಮ–ಶಿಖರದಲೂ
ಮುತ್ತಿತ್ತೋ ಗುಜುಗುಜು ನಾದಾ
ಝುಗಝುಗಿಸುವ ನಿದ್ದೆಯೊಳದ್ದಿ, ಮಾನಸವನು ಸುತ್ತಿದೆ ಎತ್ತೊ
ಮರ್ಮರಿಸುವ ನಿರ್ಭರ ಮೌನಾ.
ಚಿರಶುಭ್ರಜ್ವಾಲಾ ಗೂಢಾ, ಮನಸಕ್ಕಪ್ರಾಪ್ತ ಪದಾರ್ಥಾ
ಜಿನುಗಿಡುತಿದೆ ಅಸ್ಫುಟ ನಾದಾ
ದೃಕ್‌ಪಥಕತಿಗೋಚರಸೀಮಾ. ಪಡಿದನಿಸುತ್ತಿಹುದು ಅಲೀನಾ
ಜಡವಾದವ ಗಾಢ ವಿವಾದಾ
ಯಃಕಶ್ಚಿತ್ ಛಾಯಾವಿಹಗಾ, ಪಕ್ಷಾಹತ ಚಂಚಲವಾದಾ
ನಿಸ್ತೇಜಿತ ಪಲ್ವಲದಂತೆ,
ಕೆಳಕೆಳಗೋ ದೂರವಿದೂರಾ ಆಕ್ರಮಿತಾರಾಗ ವಿಭಂಗಾ
ಆಜೀವನ ಜಲಧಿ ಅಪಾರಾ
ಲಗುಬಗೆ ಬಗೆ ಚಕ್ರಾಕಾರಾ ಹಾರಾಟವ ನಿಲಿಸಿದೆ ಪೂರಾ
ಸ್ವನಿವೃತ್ತ ಪ್ರಸ್ವಾಂತವಿಚಾರಾ
ನಿಸ್ತಬ್ಧಾ ನಾಡಿಸ್ಪಂದಾ, ಈ ಅಸ್ಮಿತೆ ಶಾಂತಾ ನಿಷ್ಠಾ
ಅದ್ಭುತ ವಿಶ್ರಾಂತಿ ಸ್ನಾತಾ,—
ಅವಲೋಕಿಸ ಬಂದಿದೆ ಜ್ಞಾನಾ, ವಿಜ್ಞಾನವ ಮೀರಿದ ಮಾನಾ
ಆ ಮಾನಸ ಪ್ರಮೆಗೆ ಅಮೇಯಾ
ತುಂತುಂಬಿದೆ ತೂತೂಬಿನೊಳು, ಚೈತನ್ಯದ ಘನ ಅವಕಾಶಾ
ಸತ್ ಸಾಕ್ಷಾತ್ಕಾರ ಪ್ರಕಾಶಾ,
ಕಂಪಿಸುತಿದೆ ಸಂವಿತ್ತಾಗ್ನಿ, ಪುಲಕಿಸುತಿದೆ ತಂತಾನಾಗಿ
ಸ್ವಾಧಿಷ್ಠಾನಪ್ರಭಾವಾ,

ಭೂದೇವಿಯ ನೂತನ ಪಾತ್ರಾಸು ಸಮಾಧಿಯೆ ಕಾಂಚೀದಾಮಾ
ಸ್ವರ್ಗಾಂಬರ ವಸನ ಸಮಾನಾ
ಶಾಶ್ವತತೆಯ ಹೆಬ್ಬಾಗಿಲೊಳು, ದಿವ್ಯಪ್ರಭೆ ಪಕ್ಷಗಳಾದ
ನಿಯತಿಯು ಶುಭನಿದ್ರಾಮಗ್ನಾ
ಕಾಲನಿರೀಕ್ಷಾಶೂನ್ಯಾ, ಚೇತಿಸುವಾ ನಿದ್ಯುಲ್ಲೇಖಾ
ನೈವರ್ತಿಕ ಮಂತ್ರೋತ್ಸೇಕಾ,
ಪಾರ್ಥಿವ ಗೃಹ ಸರ್ಜನ ಸಿದ್ಧಾ ಅವಕಾಶಾವಸ್ಥಿತ ದೇವಾ
ಯೋಗಾಲಂಬಿ ಸ್ವಭಾವಾ
ಚಿರಂತನದ ಪಾದಾರ್ಪಣಕೆ ಆದೇಶಾಗಮನಾರ್ತಸ್ಥಾ
ಪ್ರತೀಕ್ಷಾಪೇಕ್ಷ ಬುಭೂಷಾ
ಬೀಸಿತ್ತೋವೋ ಸಂಭಾವ್ಯಾ, ಆನಂದ ರಾಗಾಲಾಪಾ
ಆನಂತ್ಯದ ಸಾಗರದಿಂದಾ.

ಆತ್ಮದ ದೃಶ್ಯ

ಮೋಡಗಳೊರಗಿವೆ ನಿರ್ವಾಸಿತವಾದಾಕಾಶದ ಅವಕಾಶದೊಳು
ಆಲಸದಲಿ ದಣಿವಾದವೊಲು
ಗತಿಸಿದ ಕಡಲಿನ ನೆರೆ ತೆರೆ ಅವಲೋಕಿಸಿ ಸುತ್ತಾಡುತ್ತಿವೆ ಖಿನ್ನ
ಉರುಳುರುಳುತ್ತಿವೆ ಅವಸನ್ನ
ಬರಿ ಚಿಂತೆಯೊಳೋ ಕರಿ ಕರೆ ಚಾಚಿವೆ ಶೋಕಾಕುಲತೆಯೆ ಮುಸುಕಿದೊಲು
ವಾಯುವ್ಯದ ಉಸಿರಾಟದಲು
ಆಗೊ ಅವರಾಜಿಗೆ ಅಡಕಿಲವಾಗಿವೆ ವಿಷಾದದಲಿ ಹಲ ದಿನ್ನೆಗಳು

ಪ್ರಕೃತಿಯಲ್ಲಿ ಏಕಾಕಿಯಾದ ಆ ಆತ್ಮದ ವಿಸ್ಫಾರಿತ ಭಾವ
ರಿಕ್ತವಾದ ಹುಸಿಪುಸಿ ಜಾವ
ಗರ್ಭಿತಾರ್ಥದಲಿ ಕೆತ್ತಿದಂತೆ ಇರೆ ನೆಲದ ಮುಖಕೆ ಮೊಗವಾಡವಿದೆ
ವಿಕಾರದಲಿ ಕೊರೆದಂತೆ ಇದೆ
ಸ್ತಬ್ಧಮನೋದಯ ಮಾನವ ಹೃದಯ, ಆಧ್ಯಾತ್ಮಿಕ ಅನುರಾಗದಲಿ
ಇದಿರಿಸುತಿದೆ ಸಂಸ್ತ್ಯಾಗದಲಿ
ವಿಜನ ವನದ ಹತ ಪ್ರತೀಕ್ಷೆಯನ್ನೇ ಅನುಕರಿಸುವ ಆಕಾರದಲಿ

ಎತ್ತಿರಿಸದೆ ಆಗೊ ನಿಂತಿದೆ ಕಾದು, ಸಹಸ್ರರಶ್ಮಿಯು ವರಕಾಗಿ
ಬಂಗಾರಕು ನೀಲಿಗು ತಾಗಿ
ಸಾಗರ ಗೀತದ ಮಂಥರ ಸುಂದರ ಮಂಗಲಮಯ ಧ್ರುವಪದಗಾನ
ಸುಖಸಂಚಲ ತಾನವಿತಾನ
ಗಭೀರ ತಲದಲಿ ಮಾನವನಾತ್ಮದಿ ದಿವ್ಯಪ್ರಭವಿಸ್ಫೋಟನಕೆ
ಅಂತರ್ಗತ ಉದ್ಘಾಟನಕೆ
ಸ್ವಪ್ರತಿಬಿಂಬವ ಮೂಡಿಸಿದಾಗ ಹಿಗ್ಗಾದೊಲು ದೇವನ ಮನಕೆ

ಐಕ್ಯಸಾಗರ

ಇಗೋಽಽ ಈ ಮೌನಾ ಸುತ್ತೂಮುತ್ತೂ ಜಗದಗಲಾ ವಾಚಾತೀತಾ
ಶ್ವೇತಾಽಽ ಶುಭ್ರಾ ಸ್ಫೀತಾ ಖಗಮಾಲಾ ಸಾಗರಮುಗ್ನಾಽ
ದಿಗಂತೋಡ್ಡೀನಾ ಲೀನಾ
ನಿಃಶಬ್ದಾಕಾಶವ್ಯಾಪ್ತಾಽ ನಿರ್ನಾದಾ ಪಾರಾವಾರಾ
ನೀಲಾಂತರ್ನೀಲಾ ಅಗಾಧಾಽಽ ಅನ್ಯೋನ್ಯಾ ಸಾಕ್ಷೀಮೂಕಾ
—ಇಗೋ ಈ ಮೌನಾ.

ಗುರುಗುಮ್ಮಾಽ ಅನಂತಾನಂತಾ ಏಕಾತ್ಮಾ ಏಕೋರಾಮಾ
ಈ ವಿಶ್ವಾಶ್ಲಿಷ್ಟಾ ಪುರುಷಾ ಶ್ರೀ–ವಿಶ್ವಾಕಾರ ಪ್ರಾಪ್ತಾ
ದೃಷ್ಟಾಽ ಅದೃಷ್ಟಾಽ ಸರ್ವಾಽಽ ನಿಜಬೀಜಾಂಕುರಿತಾ ಭರಿತಾ
ಒಂದೇ ಇದೋ ಮಹೋದಾರಾ, ಒಂದೇ ಒಂದೇ ಬೃಹದಾಕಾರಾ, ಅಪಾರಾ
—ಅಹೋ ಈ ಮೌನಾ

ಇದು ಯಾರೋ ಏನೋ ಧ್ಯಾನಾಸಕ್ತಾ ವಿದೇಹಽ ನಾಮಾತೀತಾ
ಅಸ್ಮಿತ್ಯಾಸ್ತಿಕತಾಲಗ್ನಾ ಐಕ್ಯೈಕಾ ಅನ್ಯೃತಽ ಭೂಮಾ
ಓ ಸ್ಥಾಣೋ, ಶಾಶ್ವತಾ, ಸಮಾಧಿಪ್ರಜ್ಞಾ, ಕೇವಲಾಽಸೀಮಾ
ಆಃ ಸತತಾ ವಿತತಾ ವಿವಿಧಾ ಲೋಕೈಕೇ ಹೃದಯೇ ಮಗ್ನಾ
—ಓಹೋ ಈ ಮೌನಾ.

ಅಗ್ನಾಯಿ

ಅಗ್ನಾಯಿ ! ಇನ್ನು ಆಲಿಂಗಿಸೆನ್ನ
ಓ ಜಾತವೇದಜಾಯೆ
ಗಂಧ-ಪಕಳೆಗಳು ಎಂದೋ ಉರುಳಿದವು
ಕೊಂದೆ ಕಾಮಮಾಯೆ
ತೆಕ್ಕೆಯಲ್ಲಿ ಮುಕ್ತೆನ್ನ ಜೀವನದ
ಜ್ಯೋತಿಲಲಿತೆ ನಲ್ಲೆ !
ಬಯಕೆ ಸುಟ್ಟೆ ಆ ದುಗುಡ ಬಿಟ್ಟೆ ಹಿ-
ಗ್ಗನ್ನು ತಾಳಬಲ್ಲೆ
ಮೋದಮೂರ್ತಿ ! ಪುಲಕಿಸುತ ಬಾರ ಆ-
ನಂದದೇಕ ಪ್ರತಿಮೆ
ಮೊಗದ ಬೆಡಗಿನಲಿ ನಾಟಿ ಹೀರುವೆನು
ಮುತ್ತಿನೊಂದೆ ಮಹಿಮೆ
ದಿವ್ಯಧ್ವನಿಯೆ ಹೃದಯದಲೆ ನುಡಿಸು ಆ-
ನಂದದೇಕ ತೂರ್ಯ
ಮುದ್ರೆ ಹಾಕು ತವ ತೇಜ ನೆಲಿಸು ಓ
ಪ್ರಾಣಪೂರ್ಣ ಸೂರ್ಯ.

ಉರಿಗಾಳಿ

ಅಗೊ ಬಂಗಾರದ ಮೂಡಲದಿಂದ ಬೀಸಿತು ಉರಿಗಾಳಿ
ಏಳ್ಮಡಿ ಮಧ್ಯಾಹ್ನದ ಉಸಿರಿನಿಂದ ನನ್ನಾತ್ಮಕೆ ದಾಳಿ.
ಯಕ್ಷರ ಪಕ್ಷವ ತಾಳಿ ಓಡುನೀ ಪಶು ನಾಗಾಲಾಗಿ
ಹೊತ್ತಿದೆ ಮಾನಸ, ಹೊತ್ತಿದೆ ದೇಹ, ಎದೆ ಮೂರ್ಛಿತವಾಗಿ.

ಮಧ್ಯಾಹ್ನದ ಬಲಶಕ್ತಿಯ ತಂದೆ ಉರಿಯೋ ನಿರ್ಬಾಧಾ
ಎಲ್ಲಿದೆ ಬೆಳಗಿನ ತಲ್ಲೀನತೆ ಪ್ರಕೃತಿಯ ಝುಳುಝುಳುನಾದಾ
ಎಲ್ಲಿದೆ ಬೆಳುದಿಂಗಳ ತಿಳಿಸೇಲಿಯ ಲೋಕಾತೀತ ಸುರೆ
ಏತಕೆ ಈ ಮೈ–ಮನದ ಪ್ರಫುಲ್ಲತೆ ಹೃದಯವೆ ನರಳುತಿರೆ ?

ಪ್ರಾಣದ ರಕ್ತಜ್ವಾಲೆಯು ಮತ್ತೀ ಮನಸಿನ ಬಂಗಾರ
ಸ್ವರ್ಗವು ಝುಗಝುಗ ಈ ಭೂ ಧಗಧಗ ಇದೆ ದೀಪ್ತಾಂಗಾರ
ಹೃದಯದ ಬಿಳಿದೋ ಆ ಗುಲಾಬಿಯೋ ಆಗಿರೆ ನಿಃಸತ್ತ್ವ
ಹೋಗೆಲೆ ಉರಿಯೇ, ಮೌನದೊಳಿರುವೆ, ಬರಲಿ ಪ್ರೇಮತತ್ತ್ವ

ಸಮಾಪತ್ತಿ

ನನ್ನ ಉಸಿರು ಹರಿವಾಡುತಿಹುದು ಇಗೋ ಸೂಕ್ಷ್ಮ ಛಂದದಲ್ಲಿ;
ನನ್ನ ಅವಯವದಿ [illegible] ಭಗವಂತ ಶಕ್ತಿ-ವಲ್ಲಿ :
ಅನಂತ್ಯವನ್ನು ನಾ ಕುಡಿವೆ ಎತ್ತಿಯಾ ಅಸುರ-ಸುರಾ-ಪಾತ್ರೆ
ಕಾಲಲೀಲೆಯದು ನನ್ನ ನಾಟಕವು ನನ್ನ ಸ್ವಪ್ನಯಾತ್ರೆ.

ಈಗ ನನ್ನ ಜೀವಾಣುಗಣವು ಪ್ರಪ್ರಮೋದಾಗ್ನಿ ರಚಿತ
ರೋಮ ಹರ್ಷಕನುಕೂಲ ನಾಡಿ ನರಜಾಲ ಸೂಕ್ಷ್ಮಖಚಿತ
ಪುಲಕ ಪಾರದರ್ಶಿತ್ವ ಹರ್ಷವಾಹಿನಿಯೆ ಸ್ಫೂರ್ತಿಗಾಗಿ
ಆ ಅಗಮ್ಯದಾ ಪರಾಶಕ್ತಿಯಾ ಪ್ರಕೃತಿಪೂರ್ತಿಗಾಗಿ.

ದೇಹದಾಸ ನಾನಲ್ಲವೆಂದಿಗೂ ಇನಿಸು ಇನ್ನುಮೇಲೆ
ಪ್ರಕೃತಿ ಜೀತದಾಳಾಗಿ ದುಡಿಯೆ ನಾ ಬಿಟ್ಟೆ ಜಡದ ಶಾಲೆ
ಗಂಡು ಮೀರಿ ನಾ ನಿಂತೆ ಇನ್ನು ಇಂದ್ರಿಯದ ಇಂದ್ರಜಾಲ
ದ್ರಷ್ಟಾರ ದೃಷ್ಟಿ ಕ್ಷಿತಿಜವನು ಹರಿದು ಮಿತಿಮೀರಿದೊಲು ವಿಶಾಲ.

ನನ್ನ ದೇಹ ಸುಖಭರಿತ ದೇವನಾ ಪ್ರಾಣಪೂರ್ಣಯಂತ್ರ
ಬೃಹದ್ಭಾನುವಿನ ಅಮರಜ್ಯೋತಿ ಚೇತನವು ಆತ್ಮತಂತ್ರ.

ಸಮಾಧಿ

ರಜತ ರಶ್ಮಿ ಪ್ರಸ್ಫುರಿತಕಿರಣೆ ಯಾರಿವಳು ತಾರಕೆಯು ದಿಗಂಬರೇ
  ದೃಷ್ಟಿ ಕ್ಷಿತಿಜದಲಿ ತೇಲಿ ಬಹಳು ಗುಡಿಗಟ್ಟಿಗೊಂಡ ಸೋಮಾವಸರೆ
ತಿಳಿ ನೀಲಿಯ ಬಾನಂಚಿನ ಕರೆಗೆ ಪ್ರಭಂಜನವೇ ಅಡಿಕಿಲವಾಗೆ
  ಇಗೊ ಜಡಜಲಧಿಯ ಪಸರಪ ಮುಸುಕಿದೆ ಶವ ಮೂರ್ಛೆಯ ಹಾಗೆ.

ಮನವೋ ಅಸ್ಮಿತೆಯನು ಮು‌ಟ್ಟಿತ್ತ ಸ್ಪಂದ ಸಮಾಧಿಯಲಿ
  ಹೃದಯ ಮೌನದಲಿ ಗುಪ್ತವಾಗಿ ಆನಂದ ಗರ್ಭವಾಗಿ
ವಿವಿಧೇಂದ್ರಿಯ ಪ್ರಸ್ಫುರಣ ನಾಟ್ಯದಾವರಣ ಹರಿದು ಹೋಗಿ
  ಮೂಕ ಮೈಯೊಳಾವುದೊ ಒಲೆ ಹೊತ್ತಿತು ಝುಗ್ಗನೆ ಪ್ರಭೆಯಾಗಿ.

ಸರ್ಗ ಸುಸಜ್ಜೇ ಓ ತಾರಗೆಯೇ ನಿರ್ಮಲೆ, ಸ್ವಚ್ಛಂದೇ
  ಅಜ್ಞಾತಾನಂದಾಬ್ಧಿಯೊಳೆದ್ದಾ ಪರಿವೇಷಿತ ಚಂದ್ರೇ
ಪುರೋಭಾವಿಯಾದಾತ್ಮ ಪರಿಣತಿಯದಿದೊ ಝುಂಝೋಚ್ಛ್ವಾಸ
  ಏಕಮೇವ ಆನಂದ ಸಾಗರದ ಆತ್ಮಲೀನವಾಸ.

ಪ್ರಯಾಣದ ಕೊನೆ

ದಿನವು ಮುಳುಗಿತು ಬೆಳೆದು ಚಾಚುತ ಇರುಳ ಸಂಜೆಯ ಲಯದಲಿ
ಉದ್ದೊ ಉದ್ದಿನ ಹಾದಿ ಮುಗಿದಿದೆ ಸ್ವಲ್ಪ ಉಳಿದಿದೆ ಮಾರ್ಗವು
ಇನ್ನು ಒಣ ಒಣ ರಣದ ಭಣಭಣ, ಇನ್ನು ಮೌನಾಶ್ರಯದಲಿ
ಬಂತು ಕತ್ತಲು ಗೋಡೆ, ನಡೆ ನಡೆ, ಅದರ ಹಿಂದೆಡೆ ಸ್ವರ್ಗವು.

ಕಿಂಚಿತ್ ಶೇಷ

ಇನ್ನೊಂದೆ ದಿನವು, ಹೋದೀತವೀಗ ಅರೆಸತ್ತ ಕಾರ್ಯ ಮುಗಿದು.
ಹೌದೊಂದೆ ದಿನಕೆ ಅರಳೀತು ಮೊಗ್ಗ ಹುಟ್ಟೀತು ಪಕಳೆ ಬಗೆದು.
ಇನ್ನಿಷ್ಟೆ ಹಾದಿ ದಾಟಿದರೆ ಬಂತು ಹೊಸ ಜಗದ ಗುರಿಯು ಪೂರ್ತಿ.
ತೀಡಿವರೆ ಒಮ್ಮೆ ಮೂಡೀತು ನೋಡು ಭಗವತಿಯ ಪೂರ್ಣ ಮೂರ್ತಿ.

ಗುಡ್ಡ ಬೆಟ್ಟಗಳ ಮೆಟ್ಟ ಏರಿ ಕೊನೆವರೆಗೆ ಬಂದೆನಿಂದು
ಆಗೊ ನೋಡು ಅಲ್ಲಿ ಹುಬ್ಬನ್ನು ಚಾಚಿ ಇದಿರಿಸುವದೇನೊ ಒಂದು
ಬ್ರಹ್ಮಾಂಡ ಬಂಡೆ ಇದ ಮೆಟ್ಟಿದವರು ಸಿಗಿಲ್ಲವೀಗು ಸ್ವಾಮಿ
ಇನ್ನೊಂದೆ ಹೆಜ್ಜೆ, ಆ ಮುಂದೆ ಬಾನು ಬೆಳಕೆಲ್ಲ ದೇವಭೂಮಿ.

ಅಜ್ಞಾನ–ಮಗ್ನಾತ್ಮ

ನಿದ್ದೆಯಲ್ಲಿ ಬಿದ್ದೇಕೆ ಆತ್ಮವೇ ಏಳು ಆಳದಿಂದ
ಏಳು ಏಳು ಜಗದಗ್ನಿಲಿಂಗವೇ ದೇವಕಿರಣದಂದ
ಎತ್ತು ನಿನ್ನ ಮನ, ಎತ್ತು ಹೃದಯಘನ, ಏರು ಯಶದ ತೆಂಗು
ತಿಮಿರ–ಗರ್ಭದರ್ಭಕನೆ ಸೂರ್ಯನೇ 'ತತ್ತ್ವಮಸಿ'ಯ ನುಂಗು.

ಏಕ ವಿಶ್ವ, ಸರ್ವಾತ್ಮಸೃಷ್ಟಿಯೇ ಏಳು ಯೋಗದಿಂದ
ಜಡಪ್ರಕೃತಿಯಲಿ ಏಕೆ ತಿರುಗುತಿಹೆ ಮೂಕಚಕ್ರದಂದ
ದೇವಜನಿತ ನೀನೆನಿಸಿ ಏಳು, ತಿಳಿ ನೀನು ಮರಣರಹಿತ
ಕಾಲ ಮೀರಿ ನೀ ಮರಳು ನಿನಗಹುದು ಅಮರ–ಪಟ್ಟ ವಿಹಿತ.

ಮಹಾಲಕ್ಷ್ಮಿ

ಕಮಲವನ ಸಂಚಾರಿಣಿಯೆ ಮಹಾಲಕ್ಷ್ಮಿ ಬೇಕೇ ಆಸನ
ಅರುಣಚರಣೇ ಮಾಡು ನನ್ನೀ ಹೃದಯವನೆ ಸಿಂಹಾಸನ.
ವಿಶ್ವಸುಂದರಿ ನಿಖಿಲಜಗದಾನಂದಕರಿ ಹೇ ಯೋಗಿನೀ
ವಿರಸ ಹೃದಯತ್ಯಾಗಿ ನೀರಸ ಭಕ್ತಿ ಬಂಧನ ಭೋಗಿನೀ.
ಪಾಪದೂರೇ ಮಾಡು ನನ್ನನು ನಿನ್ನನುಗ್ರಹದಾಗರಾ
ಮಧುರ ಕೌಶಲ ಮಾಯೆಯಲಿ ಮಾಡೆನ್ನ ಪ್ರೇಮದ ಸಾಗರಾ.

ಪ್ರಾಣಾಂಗನೆ

ಆನಂದ ತನುಜೆ, ಅನುಭೂತಿಯನುಜೆ, ಅದ್ಭುತಪವಾಡದಂತೆ
ಓ ಜಾತಿವಂತೆ ಸನ್ನಿಧಿಯು ಧ್ಯಾನದಲಿ ಮಗ್ನಳಾಗಿ ನಿಂತೆ
ದಿಗ್ದಂತಿದಂತ ಚಾಚಿರುವನಂತವಾಹಿನಿಯಲಿ ನಿನ್ನ ಬಾಹು
ಏನು ಹಾರಿಕೆಯು ದೌಡು ಇಡುವೆ ಆ ಚಿರಂತನದ ಕಡೆಗು.

ಗಗನ ಶಿಖರಕೇರುತ್ತ ನಡೆವೆ ಹೇ ಗಗನ ದೇಹ ಪಡೆದೆ
ಜೀವ ಮೋದಗಳನೆರಡು ತೋಳಿನಲಿ ತೂಗಿ ತೂಗಿ ಹಿಡಿದೆ
ಇಗೊ ಇತ್ತ ಮೃತ್ಯು ಅಗೊ ಅತ್ತ ಅಮೃತ ಎರಡಕ್ಕು ನಡುವೆ ಇರುವೆ
ನೋವು ಸಾವುಗಳ ಕವಳ ಮಾಡಿ ಹಿಗ್ಗಿಗ್ಗಿ ಬಾಯ್ದೆರೆವೆ.

ಘನನಿಬಿಡವಾಗಿ ಆಲಿಂಗಿಸೆನ್ನ ತುಸು ಕೂಡ ತೆರವು ಬೇಡ
ಬಾನಗಲ ನಿನ್ನ ಎದೆ ಹರವುಗೊಳಿಸಿ ಹೃದಯವನೆ ತುತ್ತು ಮಾಡ !
ಓ ಭೀಮಕಾಯ ನಿನಗಾಯ ಮಾಡುವೆ ಹಿಂಜರಿವುದೇಕೆ ಇನ್ನು ?
ಮೂರ್ಛೆಗಮುನಿಸು ತೆರೆದೆರಗಿ ಬಾರ ಕ್ರೀಡೆಯಲಿ ಇರುವೆ ಚಿನ್ನ.

ತೊಟ್ಟು ಕೂಡ ಬಿಡದಂತೆ ಸವರಿ ಹಿಗ್ಗನ್ನು ಹುಡುಕಿ ಕುಡಿವೆ
ಕಚ್ಚು ಚುಚ್ಚು ಎದೆ ಹೊಚ್ಚು ಬಿಚ್ಚು : ಮೆಚ್ಚಿದ್ದ ಮಾಡಿ ಬಿಡುವೆ
ನರಸಿಂಹನಂತೆ ಬಸಿರನ್ನೆ ಹೊಕ್ಕು ಕರುಳುಗಳ ಮಾಲೆ ಸೂಡಿ
ಮಧುಪಾನ ಮತ್ತಮಧುಕರನ ಹಾಗೆ ರಸ ಸರಸ ವಿರಸವಾಡಿ.

ಏನು ತಾನು ಮಾಡಿದರು ನಾನು ದಾನವನ ಹಾಗೆ ಹೀರಿ
ಅಭಿಮಾನಿ ದೈವ ಬರುವೊಲು ಸತ್ವದ ಆನಂದ ಮೇರೆ ಮೀರಿ
ಮಾನವನ ಮೈಯೆ ಯಾತಕ್ಕು ಸೈಯೆ, ನಾನಿರುವೆ ಪ್ರೇಮದಂತೆ
ಶಿವ-ರತಿಯ ತಕ್ಕೆಯಲಿ ನಲಿವ ಉಲಿವ ಚಿರಬಾಲ ಕಾಮನಂತೆ.

ನಾ ಬೇಡಲೇನು ನೀ ಕೊಡುವದೇನು ? ವ್ಯಾಪಾರ ಸಾಕು ಬಲ್ಲೆ
ಆ ದೈವವತ್ತ ಈ ಮೊಗವ ಮುನ್ನ ಸುತ್ತುತ್ತಲಿರುವೆ ಇಲ್ಲೆ
ಅರಸಾದರೇನು ಆಳಾದರೇನು ಆ [illegible]ವ ಭೋಗದಲ್ಲಿ
ಬಾಳಾದರೇನು ಹಾಳಾದರೇನು ಈ ಪೂರ್ಣಯೋಗದಲ್ಲಿ.

ಅಧಃಪಾತನಲಿ ನೆರೆದು ಬರುವೆ ಗಂಗಾವತಾರದಂತೆ
ಜೀರ್ಣವಸ್ತ್ರದಲಿ ಮಿಂಚಿ ತೆರೆವೆ ಸುರ ಸುಮನ ಹಾರದಂತೆ
ಮೂರ್ತ ಮೃತ್ಯುಮುಖರಂಗದಲ್ಲಿ ನರ್ತಿಸುವೆ ಅಮರನಂತೆ
ತೊತ್ತುಳಿವರೂನು ಥಥ್ಥಳಿಸಿ ಹೊಳೆವೆ ಸಂಜೀವ ಭ್ರಮರನಂತೆ.

ದಿವ್ಯಶ್ರುತಿ

ಎಲ್ಲ ನಾದದಲಿ ಎಲ್ಲ ದನಿಗಳಲಿ ದೇವಾಣಿ ಜಾಗು
ಹಾಡು-ಪಾಡು ಗುಡುಗಾಟ ಪುತ್ತಿ ಕುಹುಕಾಟ ಕೇಕೆ ಕೂಗು
ಹರ್ಷಶೋಕದಲಿ ಮಿಕ್ಕಿಬರುವ ಜೀವನದ ತೊದಲು ಬದಲು
ವೈಖರಿಯ ಗಮಕ, ಗುಂಗುಣಿಸಿ ಬರುವ ಸವಿನುಡಿಯ ಯಮಕಗಳಲು.

ಕಡಲ ಮೊರೆತ ಕುಣಿಕುಣಿದು ನೊರೆಯ ತೆರೆತೆರೆಯ ಅಟ್ಟಹಾಸ.
ಗಾಳಿತೇರು ರೆಕ್ಕೆಗಳ ಬೀಸಿ ಪರಿಗುಡುವ ಜಯವಿಲಾಸ.
ಭೂಮಿ ಸುತ್ತಿ ತುತ್ತೂರಿ ಬರುವ ಬಾನುಲಿಯ ತೂರ್ಯನಾದ
ಯಂತ್ರ ಗಿರಣಿ ಎದೆಗುಕ್ಕು ದುಃಖ ಭಯರುದ್ರ ಭುಂ-ನಿನಾದ.

ಆಕಾಶವಾಣಿ ಮಾರುತರ ಓಣಿಓಣಿಯಾಲಿ ಶಂಖ ಊದಿ
ದೇವಹೃದಯಕೂ ಜೀವದೆದೆಗು ಮಾಡುತ್ತಿಹುದು ಹಾದಿ.
ರವಿತೇಜ ಕಂಡ, ಹಲನೀರನುಂಡ, ಏನೇನೊ ನೆನವು ಜನಿಸಿ
ಭವ್ಯಬಂಧದಲಿ ದಿವ್ಯಛಂದ ವೇದ-ಪ್ರಬಂಧವೆನಿಸಿ.

ಅಂಧ-ಹೃದಯದಲಿ ನುಸುಳುತಿಹುದು ಸವಿ ತಾಳಮೇಳವಾಗಿ.
ನೀನೆ ದೇವ! ಓ ಜೀವ ಭಾವ! ಎನೆ, ಚೆಲುವಿಗಾಗಿ ಮಾಗಿ.

ಉತ್ಕ್ರಾಂತಿ

ಹೊಕ್ಕೆ ನಾನು ಅಚಲಪ್ರಸನ್ನ ಪ್ರಸಾದಸೌಧ ಒಂದು.
ಸ್ಫಟಿಕಮುಕುರ ಪ್ರತಿಬಿಂಬ ಎಂಬ ತೆರ ಕಂಡೆ ದಿವ್ಯ ಅಂದು.
ನಾಗವೋಡಿಯಲಿ ಏರುತಿತ್ತು ಏನೋ ಪುರಾಣಶಕ್ತಿ,
ಯುಗದಜುಗದ ತಿರುಪಣಿಯ ಸಾರಿಯನು ಸಾವಕಾಶ ಹತ್ತಿ.

ಜನ್ಮಮರಣದಜ್ಞಾನಬಂಧ ಬೇಕಾಗಿ ಬಿಡಿಸಿಕೊಂಡು
ಮುಕ್ತಮನವು ಈಸಾಡುತಿತ್ತು ಹಿರಿ ಬೆಳಕುಕಡಲ ಕಂಡು.
ಕ್ಲಿಷ್ಟ ಕೃಷ್ಣಗತಿ ತೊರೆದು ಹೊರಟಿತ್ತು ಪ್ರಾಣಜೀವರೀತಿ.
ನಿಶಾ—ಗರ್ಭವನು ಬೆಳಗಿಸಿತ್ತು ನಾ ಕಂಡೆ ಜಡ–ಜ್ಯೋತಿ.

ಜೀವವನುಭವಿಸುತಿತ್ತು ಆನಂತ್ಯದೊಂದು ಅಚ್ಚುಕಟ್ಟು
ಭಕ್ತಿಹೃದಯ ಪಡೆದಿತ್ತು ಭಗವದಾನಂದ ಹೊತ್ತು ಬಿಟ್ಟು.

ನಿರ್ವಸ್ತುಭಾವ

ಅಧಃಪತಿತ ನಿಃಸೀಮ ಆತ್ಮದೆಚ್ಚೆತ್ತ ಶಕ್ತಿ ಒಂದು
ಇಲ್ಲತನದ ಕೊನೆ–ಮೊದಲುಗಳಲಿ ಅರಿತರಿವು ಮರವುಗೊಂಡು
ಇದು ಬಿಡಿಸಬರದ ಕಗ್ಗಂಟು ಕಂಟು ಜನ್ಮದ ರಹಸ್ಯವೆಂದು
ಅತಿಸಾವಕಾಶಗತಿಯಲ್ಲಿ ನಡೆದ ಸೃತಿರೀತಿ ಮನಕೆ ತಂದು.

ತಾನು ಬಂದ ಘನ ಅಂಧಗರ್ಭ–ಪಾತಾಳವನೆ ಮರಳಿ ನೆನಿಸಿ
ಇಲ್ಲಿನೆಯ ಬಯಲ ಬಯಸಿತ್ತು ತನುವೆ ಆಲಯವು ಲಯಕೆ ಎನಿಸಿ.
ಅಜ್ಞಾತದೊಂದು ಹೋಲಿಕೆಯನುಳ್ಳ, ಮುಕ್ಕಾದ ಮೂಕಮುಖವು
ಮರವೆ ತುಂಬಿರುವ ಮಾಟಗಳನೆ ಮರಮರಳಿ ಮಾಡುತಿತ್ತು.

ಕುರುಡು ಕಲ್ಪವನೆ ಬರಡುಹಾದಿಯಲಿ ಎತ್ತೊ ಮೂಡುತಿತ್ತು
ಪ್ರತಿಪದಾರ್ಥಗಳ ಉಗಮ ಅಡಗಿದೊಲು ತಮದ ಆಳದಲ್ಲಿ.

ಸಾವಿತ್ರಿ

(ಕೆಲವು ಸಾಲುಗಳು)

ಕಾಂಬನೊಬ್ಬ ಒಳಗಿಹನು ಬಲ್ಲನೋರ್ವಾದ ಹಂಚು-ಸಂಚು.
ಅದು ಕಾಣವಣ್ಣ ಕಾಲಲ್ಲೆ ಇಹುದು ಕತಿಗಡಿಗು ಅದರ ಅಂಚು.
ಊದಿ ಉಸಿರನುಬ್ಬಿಸುವನೆಮ್ಮ ಕಣ್ಣಾಳ ಶಿಖರಗಳಿಗೆ
ಹುಟ್ಟು-ಬಾಳುಗಳ ದರಿಗ ಸೂಗಿದೊಲು ಹಿಂದೆ ಒಮ್ಮೆ ನಮಗೆ
ಕಾಲಪಥಿಕನಾ ಕಿವಿಗೆ ಮುಕ್ತಿಯಾ ಕರೆಯು, ಕೇಳಿ ಸೊಲ್ಲ
ಒಂಟಿಯಾಗಿ ಏಕಾಂತಿಯಾಗಿ ಅದರಾಳವನೆ ಬಲ್ಲ.
ಹೊರಟ ಯಾತ್ರಿ ದಿಕ್ತಟವ ಸ್ತುತಿಯಲಿ ಮೂಕಮುಗ್ಧನಾಗಿ.

* * * *

ಕಾಲ-ಜನಿತ ಮಾನವರ ಈ ಜ್ಞಾನ ಇತ್ತು ಮೊದಲು ಅವಗೆ
ಬೆಳಕು-ಮನದ ತೆರೆ ಸರಿದು ಹಿಂದೆ ಅವ ಹೊಕ್ಕನಾಗ ಒಳಗೆ.
ನಮ್ಮ ಬಗೆಗೆ ಕೇವಲದ ಕಣ್ಗೆ ಮರೆಯಾಗಿ ಮುಸುಕ ನಡುವೆ
ಗೂಢಗವಿಯು ಅವ ಕಂಡ, ಮತ್ತೆ ಮುಂದಾ ರಹಸ್ಯದ್ವಾರ
ಆತ್ಮನೊಳಗಿನಾ ದೃಷ್ಟಿ ದಾನದಾ ಬಾಗಿ ಅದರ ಬಳಿಗೆ
ಅಲ್ಲಿ ಇತ್ತು ಶ್ರೀವಿಜಯಪಕ್ಷಿ ಕಾವ್ಯೋದ್ಗತ ಧ್ಯಾನಲೀನ
ಇಲ್ಲ ಬೆಳಕೆ ಆಕಾಶ ಸರ್ವಸರ್ವತ್ರ ಜ್ಞಾನತಾನ.
ಪ್ರಾಣಸ್ಪಂದನವು ನಿಂತುಬಿಟ್ಟರೂ ಸಾವು ದುಮುಕ ಸಲ್ಲ.
ಉಸಿರು ಹಿಂಗಿಯೂ ಬಗೆಯು ಇಂಗಿಯೂ ಆತ ಬದುಕಬಲ್ಲ.

* * * *

ದೇವರೆಚ್ಚರಿವ ಉದಯರಾಗ ಬ್ರಾಹ್ಮೀಮುಹೂರ್ತದಲ್ಲಿ
ದಿವ್ಯಘಟನೆ ಘಟಿಸುವದು ಇತ್ತು ಆ ದೇವಯಾನದಲ್ಲಿ
ತನ್ನ ಶಾಶ್ವತಿಯ ಗರ್ಭಗುಡಿಯ ನಿರ್ದೀಪ್ತ ಐಕ್ಯವಲ್ಲಿ
ಮೌನದಂಚಿನಲಿ ಮೈಯು ಚಾಚಿ ಮಲಗಿತ್ತು ಮಿಸುಕದಾಗಿ.
ನಿಶೆಯು ಮಹಮನವು ಏನೋ ಮರುಗಂಡು ಸ್ವಯಂ ಲೀನವಾಗಿ.
ಅನಿರ್ಭೇದ್ಯವಿದು ಇದು ಅಪಾರ ಎನಿಸುವಗಾಧ ಚಿಂತೆ
ಆ ಅಮೂರ್ತ ಅನಂತ್ಯದಾಳ ಪಾತಾಳಖಾತ ಬಂತೇ
ಕಣ್ಣು ಮುಚ್ಚಿದಾ ಧ್ಯಾನಗಮ್ಯ ಸಂಕೇತ ಚಿತ್ರದಂತೆ.

ಆರೋಹ

೧. ಮೌನ

ಮೌನಾಽ, ಮೌನಾಽಽ, ಮೌನಾಽಽಽ ಮೌನ–ನಿಮಾನಾರೂಢಾ
ಅಮೃತಾತ್ಮಾ, ತರ! ಉತ್ತರ! ಭೋಽ ಉರ್ಧ್ವೋಽರ್ಧ್ವೋಽ, ಭೋಽ
ಈ ಮಾಯಾಮಂಡಲ ಮುರಿಯೋಽ. ದಾಟೈ ಈ ತಿರ್ರನ ಚಕ್ರ
ಏರೈ, ಏಕಾ, ಏಕೈಕಾ ಮರಣೋತ್ತೀರ್ಣಾ
ಫೂಃ! ಪಿಸುಪಿಸು ಮಾತೋಽ ಮಾತು, ಇರುಳಿರುಳಿನ ಭುಂಭೋಽದ್ಗಾರಾ
ಕರೆ, ಕರೆನರೆ ಕಿರಿಕಿರಿ ಲೋಽಕಾ
ಬಿಡು ಶೋಽಕಾ, ಉಳಿದೊದ್ದಾಟಾ
ಚಿರಮೌನದಿ ಹೊಗು ಹೊಗು ಏಗೂ ಮೇಽಗೂ.
ವಿಶಾಲಾ, ಅಚಲಾ, ಅಕ್ಷರಾ, ಅರೂಪಾ, ಅದ್ಭುತಭೂತಾ
ಸ್ವರ್ಗೋಽಪರಿ ಸ್ವರ್ಗಾ, ಅಗಲಾ ಬ್ರಹ್ಮಾಂಡಕು ಮಿಗಿಲಾ,
ಶುದ್ಧಾ, ವಿಶುದ್ಧಾ, ಸತ್ತ್ವಾ ಮಹಿಮಾವಗ್ನಾ
ಸ್ವಾನ್ವೀಕ್ಷಕ ಸೋಽಜ್ವಲ ಸ್ತಿಮಿತಾ
ಅಸೀಮಾ, ನಿರೋಽದ್ಗಾರಾ, ಸಾಕ್ಷಾತ್ ಸಂವಾದನಶೀಲಾ
ಮಾಡೈ ವಿಚಾರಾತೀತಜ್ಞಾನಾ, ಪಡೆ ಅಕ್ಷೋಭ್ಯಗಭೀರಾವೋಽದಾ
ಆವಿಕಾರಿತ ಜ್ಯೋತಿಯೊಳಿರು ವಿಶ್ರಾಂತಾ, ಮೂಕಾ,
ನಿಶ್ಶಬ್ದಿತಸಾಕ್ಷಾತ್ಕಾರಾ
ನಿನ್ನನ್ನೇ ಮೀರೈ ಆತ್ಮಾ, ಪ್ರಕೃತ್ಯೋತ್ತರಪುರುಷಾ
ಓ ಸಾಕ್ಷೀ, ಕಳೆದುಳಿ ಉಳಿ ಕಂಡದ್ದೆಲ್ಲಾ
ಕಾಣೈ, ಕೇವಲಾ, ಬ್ರಹ್ಮಾ, ಶಾಶ್ವತಾ
ಸನಾತನ ಮಾತ್ರಾ, ಶಾಂತಾ, ಮೌನೋಽಸ್ಮಾನಾ
ಓ ಲೋಽಕೋತ್ತಮ ನಾಮಾತೀಽಶಾ, ಏಕಾ
ಭೌಮಾಮೃತ ಆತ್ಮಾ

೧. ಮೌನಾತೀತ

ಉತ್ಸೃಜ್ಯೋತ್ಸೃಜ್ಯ, ಹೇ ಮೌನಸಾಮಗ್ನಾ,
ಅವರ್ಣ್ಯದ್ರವ್ಯಸ್ವಭಾವಾ,
ಪ್ರಭಾವಾ, ವಿಭಾವಾ, ಸಹಿತಾ
ಆರೋಹಿಸು ಭೋ ಅಮೃತಾತ್ಮ
ಕಾಲಕೆ ಕೊಡು ಚಿರತರ ಅರ್ಥ
ಕಾಲಾತೀತಾಲಿಂಗಿತಾ ಘನ ಮಹಾಮಯೋದರ ಪ್ರತಿಷ್ಠಾ
ಶಾಶ್ವತಿಯಲಿ ಬಾಹ್ಯ ಜಾಗೃತಾ, ಅನಂತಪ್ರಮೋದೋದ್ಭೂತಾ
ಪೂರ್ಣಾರ್ಪೂರ್ಣಾರ್ಪೂರ್ಣಾರ್ ಸ್ವಪ್ರೇಮಾತ್ರ ಅಮಾತ್ರ ಪೂರ್ತಿರ್
ಪ್ರಿಯಹೃದಯೇ ಸಂಪ್ಲುತಸ್ವರಸಾ
ಇದು ಯಾವುದೋ ಬ್ರಹ್ಮಾತೀತಾ. ಬ್ರಹ್ಮಾಂತರ್ಜಾತಾ, ತತ್ರತಾ
ಸ್ವರೂಪಾ, ರೂಪಾರೂಪಾರೂಪಾ. ಬಹುರೂಪಾ, ಭೂಪಾ, ಜೇತಾ
ಲೀಲಾವಿಗ್ರಹಾ, ಆಹಾ ಚಿರಸಂಗಿ ಸಂತಾಜಸಿತಾ
ಪ್ರಕೃತಾ ವಿಕೃತಾ ಕೃತಕಾ ಕೃತಜ್ಞತ್ವಾ ಧನ್ಯಾಮೂರ್ತ
ಸುಂದರಾ, ಸುಬಂಧಾ, ಸುಗಮಾ, ಸಿಗಮಾತೀತಾ
ಹೃದಯೇ ಹೃದಯಾಂತರ್ಹೃದಯೇ ಲಗ್ನಾ: ಪರಮಾತ್ಮೇಮಗ್ನಾ:
ಸಾಕ್ಷಿಸ್, ದೃಷ್ಟಂ ತ್ಯಜ, ದೃಷ್ಟಂ ತ್ಯಜ
ಭಜ ಸ್ವಾಂತಂ ಏಕಾಂತಂ ಏಕಂ ಬ್ರಹ್ಮ ಚಿಂತನಂ
ಅಃ ಲೋಕಾತೀತಾ, ಅನಾಮಾ ಏಕೈಕಾ
ಓ ಮಹದ್ಭೂತಾ, ಅಮೃತಾ!
ಭವಮೌನೀ, ಶಾಂತೋಽನಂತೋಽನಂತಃ

ಪ್ರಾಣದೇವತೆಗಳ ಪರಮಸ್ವರ್ಗ

ಮಧುಮಧುರವಾದ ಹಿರಿಹಗಲು ಒಂದು ಬೆಳಗಿತ್ತು ಅವನ ಸುತ್ತು.
ಹರ್ಷಾವತರಣ ಆನಂತ್ಯದಂವ ಪ್ರಭೆ ಬೀರಿದಂತೆ ಇತ್ತು.
ಬಂಗಾರನಗೆಯು ಹೊಂಗಾವಲಲ್ಲಿ ಮೆರೆದಿಹವು ಸುಖದ ಬೀಡು,
ಬಿಡುಗಡೆಯು ಪಡೆವ ಒಳಗುಡಿಯು ಎದೆಯ ಹವಹದುಳವುಳ್ಳ ನಾಡು.

ಆದೇವದೇವನಾ ಸೋಮರಸವು ಸೃಗಿಳಿದ ಮತ್ತಿನಲ್ಲಿ
ಎಂದೆಂದು ತನ್ನ ದಿವ್ಯತೆಯುಳಿದು ಮುಳುಗಿಹುದು ಬೆಳಕಿನಲ್ಲಿ.
ಎಲ್ಲ ದೇವರಿಗೆ ಮುದ್ದು ಒಸಮು, ಒಲು ಸಲುಗೆಯಲ್ಲಿ ಬಳೆದು.
ಹಿಗ್ಗಿನೊಂದೆ ಕಾಯಕವೊಳಿಹುದು ಅದು ದೇವನಾಜ್ಞೆ ತಳೆನು.

ತನ್ನ ತಾನೆ ಆಳುವದು ತನ್ನ ಸ್ವಾನಂದದಲ್ಲಿ ಬಾಳಿ
ಅದರ ಬಲದ ಸ್ವಾರಾಜ್ಯಗಳಲಿ ಅರಸೊತ್ತು ತಾನೆ ತಾಳಿ.
ಎಲ್ಲ ರೂಪಗಳು ಯಾವ ಮೋದವನು ನೆಮ್ಮಿ ನೆಚ್ಚಿ ಇಹವು
ಕ್ಷಣ-ಕ್ಷಣಕು ಆಳಿ ಅಳಿವಂಥ ಕಾಲಕೂ ಬೆಚ್ಚಿಬೆದರದಿಹವು.

ಮುತ್ತಲರಿಯುದೆಂದೆಂದು ಅದನು ಪ್ರತಿಕೂಲ ಸ್ಥಿತಿಯು ಕೂಡ.
ಇಂಥ ಸಹಜ ವಿಶ್ರಾಂತಿಯಲ್ಲಿ ಅದು ನಲಿಸಿಸುವದು ನೋಡ.
ಆ ಮರಣಕೌತಣವ ಕೊಡುವ ಮೃತ್ಯುವು ಕ್ಷಣಭಂಗುರತ್ವವಿಲ್ಲ.
ಅಡಿಗೊಮ್ಮೆ ಎಡವಿ ಭಯದಲ್ಲಿ ಇರುವ ಸಂಕಲ್ಪವಲ್ಲಿ ಸಲ್ಲ.

ಆ ರಾಗಭೋಗದಾವೇಗಗಳನು ಬಿಗಿಹಿಡಿವುದಲ್ಲಿ ಏಕೆ?
ಸಂತೃಪ್ತವಾದ ಸುಖದೊಂದು ತಕ್ಕೆ ಇರೆ ಬೇರೆ ಪುಲಕ ಬೇಕೆ?
ಅಬ್ಬಬ್ಬ ಏನು ಅದ್ಭುತದ ಓಟ, ಕುಡಿಬೆಂಕಿ ನೋಟ, ಕೂಗು
ತನಿಪ್ರಾಣದೂರ್ಮಿ ಸಿಗಿಸಿಗಿಯೆ ಹರಿವ ನೆತ್ತರಿನ ತುಂಬು ತೀಗು.

ಅದು ಇಹುದು ದೇವನಗೆಯಲ್ಲಿ ಒಗೆದ ನವರತ್ನನಗರದಲ್ಲಿ
ಒರಗಿಹುದು ಎದೆಗೆ ಬೆರಗಾಗಿ ಪ್ರೇಮ ಹರಿದಿರಲು ಆಗಿ ಬಳ್ಳಿ.
ಅದಕಾವ ಬಂಧ? ಸ್ವಚ್ಛಂದದಿಂದ ಆನಂದ ಕೀರ್ತಿಸುವದು;
ಬಿಸಿಲೊಡ್ಡು ವೈಯ್ಸಿ, ಬೆಳುದಿಂಗಳುಣಿಸಿ, ಜ್ಯೋತಿಯನೆ ಮೂರ್ತಿಸುವದು.

ಪೆರುಮಾಳನ ಕೆಂದಾವರೆ

ಪೆರುಮಾಳನ ಕೆಂದಾವರೆ ಅರಳಿದೆ ನಸುನಕ್ಕೆ !
ಹರಿನೀಲದ ಬಾನೊಳಗಿನ ಸಿಂಧೂರದ ಚುಕ್ಕೆ.
ನಲಿವಿನ ನಲಿನವು ತಾನೇ ತಾನಾಗಿಯೆ ಬಿಚ್ಚೆ
ಏಳ್ಮಡಿ ಧಾಳಾಧೂಳಿಯ ಏಳ್ಬಣ್ಣದ ಕಿಚ್ಚೇ
ಕಾರಣತನುವಿನ ಕೃತಿಯೇ ಸವಿಯೇ ಹರಿವರಿಯೇ
ಮನುಹೃದಯುದಿ ಚಿಗಿ ನಿಗಿನಿಗಿ ಜಿಗಿ ಮೇಲಕ್ಕುರಿಯೇ
ಹೆಸರಾಚೆಯ ಭಾವದ ಹೂ ಸುರಿಸಿದ ಹಿರಿ ಹಿಗ್ಗೇ
ಬೆಡಗಿನ ನುಡಿ ಮೌನದ ಕುಡಿಮುಗುಳೇ ಮುಮ್ಮೊಗ್ಗೇ.

ಪೆರುಮಾಳನ ಕೆಂದಾವರೆ ಬೆಳಕಿನ ಚೆಂದಿರುಳೇ
ಬಾಳಿನ ತಿರುಕೋಡೊಳಗಿನ ಬಲು ಅರಿವಿನ ಅರುಳೇ
ಕಗ್ಗೊನೆಗಾಣ್ಕೆಯ ಒಳಗಿನ ಅಕಲಂಕಿತ ಕೆಚ್ಚೇ
ನೆಲದೆದೆಯಲಿ ನೆಲೆಮಾಡೆಲೆ ಹೊನ್‌ಹೂ ಮನಮೆಚ್ಚೇ
ಗುಟ್ಟೇ ಹುಟ್ಟೇ ಮೊಟ್ಟೆಯೆ ಸುರುಳಡಗಿದ ಹೆಸರೇ
ನಿಷ್ಕಾಲದ ನಡುನೆತ್ತಿಯ ನೇಸರೆ ಹೊಂಬಸಿರೇ
ದಿವ್ಯಮುಹೂರ್ತದ ಅತಿಥಿಯೆ ಕಾದಿರುವದು ಈಗ
ಮೂರಾಳದ ಕತ್ತಲೆ ಅದ ಬೆಳಗಿಸು ಬಾ ಬೇಗ.

ಪೆರುಮಾಳನ ಕೆಂದಾವರೆ ರತ್ನಪ್ರಭೆ ಬೀರೆ.
ಇರುಳಿಂಗಿತು ಮರ್ತ್ಯರ ಸಂಕಲ್ಪವೆ ಹೊತ್ತುತಿರೆ
ಆನಂತ್ಯದ ತಪಚಿತ್ರಿತ ಚೀನಾಂಶುಕವಾಗೆ
ದಿವ್ಯಪ್ರಕಾಶದ ಮಾಣಿಕ್ಯದ ಮೂರ್ತಿಯ ಹಾಗೆ

ಕಾರ್ಮೋಡದ ತಿಳಿಸೀರಲಿ ಕೆಮ್ಮಿಂಚುರಿವಂತೆ
ಡಾಳಿಂಬರ ಮೈಮುಂಬಿರೆ ತಾನೇ ಬಿರಿವಂತೆ
ಸಿಸ್ತಾ ಹಂಚಿಕೆ ಪಂಚಿಕೆ ಬಿಗಿಗಾದೊಲು ಹಣತೆ
ವಿಗ್ರಹಗೊಂಡೊಲು ಅಮರತೆ ನರನಾರಾಯಣತೆ.

ಪೆರುಮಾಳನ ಕೆಂದಾವರೆ ಬಾಳಿನ ತಾಣವಿದೋ
ವರ್ಣಕ್ರಮ ಬಣ್ಣ ಬಂಗಾರಿಸಿಹ ಪೀಠಯಿದೋ
ಬಿನ್ನೈಚ್ಛೆಯು ಮೈಮರೆದೆ ಸೇರಿಕೆ ಬಣ್ಣದೊಳು
ಶತದಳದೊಲು ದಳದಳದಲಿ ಮಣ್ಣಿನ ಕಣ್ಣಿನೊಳು
ನೆಲ ಬಾಸಿಗ ಸಿಜ್ಜಳಿಕೆಯು ಸಿಲ್ಲಿಸು ಸಿಲ್ಲಿಸಲೇ
ಮರ್ತ್ಯನವು ಮರಣಾಂತರಿಯದ ಹಾಗಿರಲಿಲ್ಲ ಸಲೆ
ಮಧುಮಂತ್ರದ ಘೋಷ್ಪನು ಮಿಲ್ಲಿಟಿಸುವ ಹಾಗೆ
ಕಾಲಿನ ಕಂಪನ ಪಾಪೈ ಮಾರ್ಕಂಡೇಯರಾಗೆ.

ಪೆರುಮಾಳನ ಕೆಂದಾವರೆ ನಲುವೆಯ ನಲಿನವಿದೋ
ಗುರುಕಾರುಣ್ಯದ ಭಾವಜ್ವಾಲಾಮಾಲೆಯಿದೋ
ಎಂದೆಂದಿನ ಮೊಗದೊಳಗಿಹ ಹಿಗ್ಗಿನ ನಾಚಿಕೆಯೋ
ಬಾಳಿನ ಆಳವ ತೋರಿದ ಮಾಣಿಕವೀಚಿಕೆಯೋ
ಪ್ರಕೃತಿಯು ಪಾತಾಳದ ಎದೆದಾಳವೆ ಬಿಕ್ಕುತಿರೆ
ಬಾ ಬಲವೇ ಬಾ ಚೆಲುವೇ ಒಲವೇ ಉಕ್ಕುತಿರೆ.
ಬಿಸಮಂದದ ಸಂದಣಿಯ ಮಾತೇ ಜಗವಿಂದು
ಬಾಳಾಗಲಿ ಚಿನ್ಮಯದ ಮುತ್ತಿನ ಸರವೊಂದು.

ಮಾನಸ ಆಶ್ರಮದಲ್ಲಿ

(ಸಾವಿತ್ರಿ)

ಕೊನೆಗಲ್ಲಿ ಬಂತು ಬರಿದೆನುವ ಬಯಲು ಆ ಉದಾಸೀನ ಬಾನು.
ಕೋಟಿ ಪ್ರಶ್ನೆ ಏನೇನು? ಇರಲಿ ಉತ್ತರವು ಬ್ರಹ್ಮ ನಾನು.
ವಿಶ್ವ ಹೇಳುತಿದೆ ಮೌನ ಕೇಳುತಿದೆ ಮನನ ಏಕತಾನು.
ಜೀವ ಜಿಜ್ಞಾಸೆಗಿಲ್ಲ ಕೊನೆಯು ಪ್ರತಿ ಮೌನ ಕಾಮಧೇನು.

ಲವಲವಿಕೆಯೆಲ್ಲ ಎಕ್ಕೈಕ್ಕಿ ನಡೆದು ಮುಗ್ಗರಿಸಿಕೊಂಡು ಬಿತ್ತು.
ಬರಿ ಸಾಮುಸೂಮು ಹಬ್ಬುತ್ತ ಒಮ್ಮೆಗೆಲೆ ಸ್ತಬ್ಧವಾಗಿ ಇತ್ತು.

*　　*　　*　　*

ನಿರಾಕಾರ, ನಿಷ್ಕ್ರಿಯ ಮತ್ತು ನಿಶ್ಶಬ್ದ ಪುರುಷನೊಬ್ಬ.
ಹೊತ್ತು ಹೊರತಾಗೆ, ತನ್ನ ತಿಳಿದವನು ತಾನೆ ತಾನು ಆಗಿ,
ನಿಸ್ತರಂಗವಾ ಆಳದಲ್ಲಿ ತಂವೆನಿಸಿ ಆಗಳೂನೂ
ನಿರ್ಮಾತನಲ್ಲ, ನಿರ್ಮಾಣವಲ್ಲ, ಪೂರಾ ಅಜಾತನಾಗಿ.

ಒಂದರದೆ ಹಲವು, ಇಪಸಿಂದೆ ಹಸವು, ಎರವಿಲ್ಲದೊಬ್ಬನೊಬ್ಬ,
ಇಲ್ಲದಕೆ ಅಳತೆ ಬೆಳ್ಳಂ ಬೆಳಕು—ಮುಸುಕಿತ್ತು ಗುಪ್ತವಿರಿಸಿ.
ಅವ್ಯಕ್ತ ತನ್ನ ಆವರಣಗಳಲಿ ಕಾಪಾಡಿದಂತೆ ಉಳಿಸಿ,
ವಿಶ್ವದೊಂದು ವಿಷ್ಕಂಭದಾಚೆ ಲೋಕಾಲೋಕ ದಾಟಿ,
ಬ್ರಹ್ಮದಕ್ಷರದ ಪರಂಧಾಮ ಏಕೋ ಏಕವೆನಿಸಿ,

ಅರಿದಾದ ಗೂಢಕಾರಣವು ತಾನು ದುರ್ಭೇದ್ಯದಾತನಾಗಿ,
ಚಿರಂತನವು ತಾ, ತಾನನಂತ್ಯಕೇವಲವಗಮ್ಯನಾಗಿ.

*　　*　　*　　*

ಆಕಾರವಿರದ ಆಕಾರವೊಂದು ಆತ್ಮಾರ್ಥವೆಂದು ತಿಳಿಯೆ,
ಮಹದ್ಭೂತ ಗತಿಸಿರಲು ಅದರ ಘನಛಾಯೆ ಹಿಂದೆ ಉಳಿಯೆ,
ಆ ಅಪಾರ ಪಾರಾವಾರದಪ್ಪಳಿಸಿದ ನೊರೆಯಲು ಗಂಗೆ,
ಅಳಿವೆ ಅಲೆಯಲೆಯು ಕೊನೆಯು ಕರೆಯು ಅನುಭವದ ಹಾಗೆ ಕಳೆಯೆ,

ಶೂನ್ಯಸಾಗರದ ತೀರದಲ್ಲೆ ಇಂಗಿಂಗಿ ಜಡಧಿ ಹೋಗೆ,
ಬಯಲು ಭಾವನೆಯು ತೇವ ಛಾಯೆಯಲಿ ಅಡಗಿಹೋದ ಹಾಗೆ,
ಅವಕಾಶವನ್ನು ಸೆಂಬಿಲ್ಲ ಎಂಬ ಮಹದಾತ್ಮಧ್ಯಾನ ಪ್ರಖರ,
ಕಾಲವನೆ ಕೊಸರಿ ನಿಜದಾದ ತಾನು ಶಾಶ್ವತದ ಶೂನ್ಯಶಿಖರ,

ಅದ್ಭುತವು ಭವ್ಯ ವ್ಯಭಿಚರಣೆ ಇದರ ಸುಸ್ಥಾಣು ದಾಂತಶಾಂತ.
ಜಗಜೀವಗಳನು ತಾ ಹೊರಗು ಮಾಡಿ ನಿಚ್ಚಳಗು ಮೌನವಾಂತ
ಎರಡರಿಯದೊಂದು ಕೈವಲ್ಯ ನೈಜ ಬರಿಚಿತ್ತ ಚಿತ್ತಲೂನೂ.
ಕಂಡಿತ್ತು ಅವನ ಕಡು-ರಾಗಿ ಜೀವ ಅನುಸರಿಸಿ ಕೊನೆಗೆ ತಾನು.

* * * *

ಆಳಾದ ಶಾಂತಿ ಅಲ್ಲಿತ್ತು. ಇಲ್ಲಿ ಹೆಸರಿರದ ಶಕ್ತಿಯಾಕೆ
ಇರಲಿಲ್ಲ ಅಲ್ಲಿ ಮಾಧುರ್ಯವಂತೆ. ಮಹಾಶಕ್ತಿ ನಮ್ಮ ಮಾತೆ
ತನ್ನೆದೆಗೆ ಅವಚಿಕೊಳುವವಳು, ತನ್ನ ಸಂತತಿಯು ಬಾಳ್ಕೆ ಜೋಕೆ.

ಏನವಳ ಹಿಡಿತ, ಸಕಲ ಪ್ರಪಂಚ ಈ ಅಗಲ ತಕ್ಕೆಯಲ್ಲಿ
ನೆಲೆ ಹತ್ತಿದಂಥ ಹರ್ಷಪ್ರಮೋದ ಸಂತೃಪ್ತಿಯಲ್ಲಿ
ನಾಳೆ ನಾಡಿದಿನ ಬಾಳಕಾಳು ಬೆಳೆಸುವ ವೇದಮುದ್ರೆ
ದೈವದುನ್ಮಾದದಲ್ಲಿ ಬೀಗಾವು ಎಷ್ಟು ಭಾವಭದ್ರೆ.

* * * *

ಬೆಳಕುಕತ್ತಲೆಯು ಎರಡು ಗೋಲಗಳು ಒಂದನೊಂದು ದೂಡೆ,
ಮೇರೆಗೆರೆಯಲ್ಲಿ ಆತ್ಮಚರಿತಕ್ಕೆ ಗಿರಿಹಾದಿ ಮಾಡೆ

ಕ್ಷಣಿಕ ಘಟನೆಗಳ ರಾಜ್ಯದಲ್ಲಿ; ಜೀವಪ್ರಪಂಚದಲ್ಲಿ.
ಬದುಕಲಿಕ್ಕೆ ಸಾಯುವರು ಅಲ್ಲಿ; ಬದುಕುವರು ಸಾವಿಗೆಲ್ಲಿ ?

ಮರಳಿ ಮರಳಿ ಮರಣವನೆ ಉಂಡು ಅಮರತ್ವ ಭೋಗಭಾಗಿ
ತನ್ನ ಕೃತಿಯ ಗೋಪುರದ ಚಕ್ರದಲಿ ವಕ್ರವಕ್ರವಾಗಿ
ಆಡಿದ್ದೆ ಆಡಿ ಮಾಡಿದ್ದೆ ಮಾಡಿ ಬಲಗೊಂಬುವಂತೆ ಆಗಿ.

ಮೂಲ ಭಂಡವಲು ಮುಗಿಯಲಿಲ್ಲ, ನಿಜ, ಬೆಳೆಯಲಿಲ್ಲ ಕೂಡ
ಜ್ಞಾನವೆಲ್ಲ ಅಜ್ಞಾನದಂತೆ ಮೊದಲಿದ್ದ ಹಾಗೆ ಮೂಢ.
ಆತ್ಮದಾನಂತ್ಯದಿಂದ ಮರೆಯಾಗಿ ಅದುವು ಸಾಗುತಿತ್ತು.
ಇರವು ಬಂಧನದ ಬಾಳು; ಸಾವುದೇ ಮುಕ್ತಿ ಎನಿಸಲಿತ್ತು.

ಸಾವಿತ್ರಿ

ಕತ್ತಲವೆ ಇತ್ತು ಇನ್ನೂನು ದಾರುಣಾರಣ್ಯದಂತೆ ಎಲ್ಲ
ಅದರಲ್ಲಿ ಅಲ್ಲಿ ಬದಲಿಲ್ಲ ಇಷ್ಟು ಅವರಾಶೆ ಕೂಡ ಇಲ್ಲ
ಸತ್ತ ಶಾಶ್ವತಿಯ ಸಾಯದಿರುವ ನಿಃಸತ್ತ್ವ ಭೂತವಲ್ಲ!

ಕರಿಕನಸು ಇರುವ ಬರಿಮನೆಯ ಕೆಳಗೆ ಹುಸಿಬದುಕು ಮಾಡುವವರು
ಇಲ್ಲೆಂಬ ನಾಡಿಗೆತ್ತೇನೋ ಹೊರಟ ಆ ಕುರುಡು ದಾರಿಯವರು
ಗೊತ್ತಿಲ್ಲ ಎತ್ತ ಗುರಿಗೆಲ್ಲೆಯಿಲ್ಲ, ಓ ಹೊರಟೆ ಹೊರಟರವರು.

ತಮದಿಂದ ಹೊರಟು ಅತಿತಮದ ಒಳಗೆ ಹುಸಿಮರಣದೊಳಗೆ ಮರಣ
ಕಡು ಅಸಕ್ತಿ ನಿರ್ದ್ದೇಶರಹಿತ ಬಯಲಲ್ಲಿ ನಡೆದು ಚರಣ
ನಿರಾಕಾರ ನಿರ್ಗಮನಶೂನ್ಯ ನಿಸ್ತಬ್ಧ ನಿರಾವರಣ.

ಪರಿಣತಿಯು ಇರದ ಹತವೀರ್ಯಸ್ಪಂದನೆಯ ಗತಿಗೆಟ್ಟ ಛಾಯೆ ಬಳಲಿ
ಆಶೆಯುಳಿದ ನಿಶೆಯಲ್ಲಿ ಬಿಟ್ಟುಬಿಡಲಾರ ಹೆಜ್ಜೆಗಳಲಿ
ಕಳೆವ ಜಯದ ಉಳಿದೊಂದು ಸ್ಮೃತಿಯ ತೆರ ಬರುತಲಿತ್ತು ತೊಳಲಿ.

ಯಕ್ಷಿ

ನೀನಾರು ಬಂದೆ ಅಜ್ಞಾತ ನಾನುವನು ತೊಟ್ಟುಕೊಂಡ ಯಕ್ಷಿ
ಸುಪ್ತ ಜ್ವಾಲೆಗಳ ನೇತ್ರದವಳು ಘನರಾಜ ನೀಲಪಕ್ಷಿ.

ಮರೆತುಹೋದ ಹೊತ್ತೊಂದು ಉದಿಸಿ ಮೂಡಿಸಿದೆ ಭವ್ಯ ಆಸೆ
ನಿಶಾಗುಹೆಯ ತೆರೆದಾದ ಅದ್ಭುತವ ಬರೆವ ಅಗ್ನಿರೇಷೆ.

ರಾಗ ಜೀರ್ಣ ಸೂತ್ರಗಳ ಚಕ್ರ ತೊರೆದಿತ್ತು ತ್ಯಾಗಿ ಹೃದಯ
ರಾಜಪಥದ ಸ್ವರ್ಗೀಯ ಮಧುರ ಸ್ವಾತಂತ್ರ್ಯಕಾಯ್ತು ಉದಯ.

ವಚನಗಳು

೧

ಯಾವ ಸೀರೂ ಸಾಕು ರಾಜಕೀಯನ ತೃಷೆಗೆ,
ಬೇಕೇಕೆ ಬೇರೆ ಒರತೆ?
ಜಂಗಮ ಜಗತ್ತಿನಲ್ಲಿ ರಾಜ್ಯಧುರಧೀರರದು
ಇಹುದಣ್ಣ ತುಂಬ ಕೊರತೆ.

ಭೂಮಿ ಭವಾನಂದಕಾಗಿ ಓಗರೆದಿತ್ತು
ಬಂತು ಜೀಕಿಯು ಸೆಲೆಯು ಓರಿಯ ಮಹಿಮೆ.
ದೇವವೃಷ್ಯವೆ ಇಳಿದು ಮನುಜರೂಪವ ತಳೆದು
ತೋರಿತ್ತು ಗುರುಪಿನಾ ದೊರೆಯ ಗರಿಮೆ.

ಹೋ ಶ್ರದ್ಧೆ, ಭೌತಿಕವು ಅದರೂನೂ
ಆ ಶ್ರದ್ಧೆ ಕ್ರಿಯಾಶೀಲ
ನಂ, ಬಿಗಿಯೆ ಬಿಗಿಯು ಅದು ಪುರುಷ
ಧಾತು ಶ್ರೀಶ್ರದ್ಧೆ ಜೀವಕೀಲ.

ಅನುಭವ ಸಹ ಅನುಭಾವವು
ಅನುಭೂತಿಯ ಕಂಪ
ಆಳದೊಳಿದೆ ಬಾಳಿನ ಬೆಲೆ
ಭಾವಿಸು ಆ ತಂಪ.

ಪ್ರಕೃತಿ ಯಂತ್ರಕೃತ ಒಡವೆಯಲ್ಲ
ಈ ಒಡೆಯನ ಒಡನಾಡಿ
ಆದರ ಗತ್ತು ಓ ಈ ಜಗತ್ತು ತಾನ್
ಆದೇ ಗಾಡಿ ನೋಡಿ

ಅತ್ತರೆ ಮುತ್ತಿಲ್ಲ,
ನಸುನಗೆ ಭಂಗಾರ;
ಮುತ್ತಿಗೆ ಅತ್ತಿಲ್ಲ,
ಬೆರೆವುದೆ ಶೃಂಗಾರ.

ಉದಾಸೀನವಲಿ ಬರುವ ವಿಸ್ಮೃತಿಯ
ಭೇದ ಭೇದ ಮಾಡಿ
ಬೇಡಿಕೊಳ್ಳುತಿರುವೆ, ತೋಡಿಕೊಳ್ಳುತಿರುವೆ
ನಿನ್ನ ಅರಿವು ಮೂಡಿ.

ಈ ವಿಚಾರ ಸಂತತಿಯು ಸಂಚರಿಸ-
ದಂತೆ ಅವರ ಜೋಡಿ
ನೀನು ಎಡೆಬಿಡದೆ ಬಾರೊ ದೊರೆಯೆ,
ಬಗೆಬಗೆಯ ಕೂಡಿ ಕೂಡಿ.

ಏಕಾಕಿ, ಪರಮಾಶಮಿ ಆಗಿ ನಮ್ಮೀಮನಸವು
ನಿನ್ನ ನೆಲೆಯಲ್ಲಿಯೇ ನೆಲೆಸಬೇಕು
ಆ ಗಿರಿಯು ತಾವಿಯಿಂದ ಚೊಕ್ಕನೈಜವ ಕಂಡು
ಭ್ರಮೆಯಿಂದ ಐಕ್ಯಕ್ಕೆ ಒಲಿಸಬೇಕು.

ಚೈತನ್ಯವು ನಿರಸ್ಥಾಣುವಿನಂತೆ
ಕದಲುಬದಲಿರಲಿ ತೋರಿಕೆಗೆಂತೇ
ಎಷ್ಟೆ ಇರಲಿ ಸಂಗ್ರಾಮದ ಚಿಂತೆ.

ಮೌನಗರ್ಭದಲಿ,
ನಿರಾಕಾರ ನಿಃಸೀಮಾನಂದವ ಕಂಡೆ

ಲೋಕವು ಯಾವುದೆ ಬರಲಿ
ಭೂಮಿಕೆ ಯಾವುದೆ ಇರಲಿ
ಸತ್‌ಚಿತ್ ಆನಂದದ ಮುರಲಿ
ಚೈತನ್ಯದ ಅರಿವಿನೊಳಿರಲಿ.

ಅತಿದುರ್ಗಮ
ಅತ್ಯವಶ್ಯ
ಪಾರ್ಥಿವ ಭೂಮಿಕೆಯಲ್ಲಿ
ಭಗವತ್ ಚೇತನವಲ್ಲಿ
ನೆಡುವುದು, ನಾಟುವುದು.

ಚೆಲುವಿನಲ್ಲಿಯೆ
ನಲಿವಿಹುದು.
ಆದರ ಒಲುವಿನಲೆ
ಬಲವಿಹುದು.

ಸಂಗ್ರಾಹಕ ಐಕ್ಯದೊಳಿದೆ
ಸರ್ವೈಕ್ಯದ ಹಾದಿ.

ಮಾತು ಹಡೆಯುವುದೆಲ್ಲ, ಮೌನಗರ್ಭದ ಬದುಕು
ಬಾಯ್ಬಡಕಗೇನು ಗೊತ್ತು !
ಬೆಳಕು ಕತ್ತಲೆಯಾಟ ತಿರುಗುವೀತಿರೆಗೆ ಇದೆ
ಸೂರ್ಯನಿಗೂ ಒಂದೆ ಹೊತ್ತು.

ಕೈಗೂಡಬಹುದು ಏನೂನು ಮೂಲದಲಿ ದೇವಸ್ಪರ್ಶ ಬೇಕು
ಇದ್ದರಾಯ್ತು ಭಗವತ್‌ಸ್ಪರ್ಶ, ಕೊನೆಗಾಣಬಹುದು ಏನೂ
ಮಾಡಲಹುದು ಏನನ್ನು ಕೂಡ ಬೇಕಲ್ಲಿ ದೇವಸ್ಪರ್ಶ

ಆಗರ್ಭಜಾತ ಅಧಿಕಾರ ದೇವನಾನಂದ ದಿವ್ಯ ಐಕ್ಯ

ದೇವಗರ್ಭದಿಂದ ಭೂಮಿ, ಭೂಮಿಯು ಗರ್ಭದೇವನು
ಅಡಗಿ ಒಳಗೆ ಇರುವದನ್ನ ಹೊರಗೆ ತರುವ ಯಾವನೂ ?

ಆತ್ಮಮೋಚನವ ಮಾಡುತಿರುವದೇ ಬೆಳಕಿಗೊಂದು ಆದಿ
ಸೃಷ್ಟಿಯಲ್ಲಿ ಪರಿಪೂರ್ತಿಗೊಳುವದೇ ಐಶ್ವರ್ಯದ ಹಾದಿ.

ಹೊನ್ನಾಗಿಸುತಿವೆ ಹೂವು ನೋಡಿ ಕೆಮ್ಮಣ್ಣ
ಕಾಣದೆ ಅರಳುತ್ತಲೆ ಇದೆ ಶಿವ ಕರುಣೆಯಣ್ಣ.

ರಾತ್ರಿಯಲ್ಲ ನಮ್ಮ ಆದಿ ರಾತ್ರಿಯಲ್ಲ ಅಂತ್ಯವು
ತಾಯ ಬಸಿರ ಬೆಳಕೆ ನಮ್ಮ ಚಿರಂತನದ ಚಿಂತ್ಯವು
ಬೆಳಕಿನ ಬಾಂಧವ್ಯದಿಂದ ತಾಯ ಸೆರಗ ಹಿಡಿದೆವು
ಬೆಳಕಿನಿಂದ ಬಂದೆವಣ್ಣಾ ಬೆಳಕಿನತ್ತ ನಡೆದೆವು.

ಬೇನೆ ಬಲ್ಲ ತಾಯಿಗೆಲ್ಲ ಗೊತ್ತು ಹೊತ್ತು ಕಾಲವು
ಮೂರ್ತಿ ಮಾಡುತ್ತಿಹುದು ಮರವೆಯ ಮುದ್ದೆಯಾದೀ ಮಣ್ಣನು
ಒಗರು–ಹುಳಿಗಳ ಪಾಕದಲ್ಲಿಯೆ ಬೆಳೆಸುವನು ಸವಿಹಣ್ಣನು.

ಎದೆಯ ಶೂಲಿ ಲಯಗೊಳಿಸಬೇಕು ತಾನಾ ತ್ರಿಶೂಲಿಯಲ್ಲಿ

ಒಳಗೆ ಹೂತಿಹುದು ಒಂದು [illegible], ಅದು ತೆರೆವುದೊಂದು ಕಣ್ಣ
ನಮ್ಮ ಮನಸವನು ಮಿಕ್ಕು ನಾವು ಮೇಲಾಗಿ ಇರುವೆವಣ್ಣ
ಅದನೆ ಒಮ್ಮೊಮ್ಮೆ [illegible] ಈ ಭೂಮಿ ಬಸಿರ ಬಣ್ಣ.

ನಮ್ಮ ಕಾಣ್ಕೆ ಒಮ್ಮೊಮ್ಮೆ ಮಾಡುವುದು ತೆರೆದು ಮಣ್ಣ ಕಣ್ಣ
ಒಂದು ಶಕ್ತಿ ಇದೆ ಒಳಗೆ, ಅದರಿದಿರು ನಮ್ಮ ಜ್ಞಾನ ಸಣ್ಣ
ನಂ ವಿಚಾರಗಳಿಗಿಂತ ನಾವು ಮಿಗಿಲಾಗಿ ಇರುವೆವಣ್ಣ
ಭೂಮಿ ಒಮ್ಮೊಮ್ಮೆ ತೆರೆದು ತೋರುವುದು ಆ ಕಾಣ್ಕೆಯನ್ನೆ.

ಅಮೃತ ಆತ್ಮ ಗೈಯುವುದು ಕಾರ್ಯವನು ಗಹನಗುಹೆಯ ಸೇರಿ
ಹೃದಯ ಮನಗಳನು ರೂಪಗೊಳಿಸುವುದು ಸ್ವಪ್ರಭಾವ ಬೀರಿ
ಅಮೃತವಾಗುವವು ಆತ್ಮ[illegible]ದಕೆ ಮರ್ತ್ಯತೆಯನು ಮೀರಿ.

ನಿಸ್ತಬ್ಧ ಹೃದಯದಲಿ ವೇದಗಳ ಧರಿಸುವಳು
ಜಯಶೀಲ ಕರವಾಳದಂತೆ ಒಲಿ ಮೆರೆಸುವಳು
ನೋಡುತಿರುವಂತೆಯೇ ಚಿರಸುಖವ ಹರಿಸುವಳು.

ಮರಗೂಳಿ ಮಣ್ಣಿನಲಿ ಬೆಳಕು-ನೆರೆ ತುಂಬಿತ್ತು
ಕುಡಿ ಹೊತ್ತಿ ಮಡಿ-ಮೂರ್ತಿ ಮಾಡಲಾಯ್ತು
ಧ್ಯಾನದೀಪಿತ ಕಿರಣ ನಮ್ಮ ನೆಲ ಮುಟ್ಟಿತ್ತು
ದೇವ-ಜೀವರ ಮನಕೆ ಆಯ್ತು ಸೇತು.

೨

ಹಸಿವೆಯಾಗಿ ಬಂದಿತ್ತು ಬಸಿರಿನಲಿ ಹಸಿದು ವಿಶ್ವದಗಲ
ಬಯಕೆಯಾಗಿ ಬೀಸಿತ್ತು ಒಲವು ತಾನಾಗಿ ಪ್ರಾಣನನಿಲ
ಬ್ರಹ್ಮಕರ್ಮ ಪ್ರತಿಸರ್ಗದಲ್ಲಿ ಜರಿ ತಾ ವಿಸರ್ಗವೆನಿಸಿ
ನೆಲದ ಒಲವಿನಲಿ ಚೆಲುವೆ ಹೂತಿತ್ತು ತಾ ನಿಸರ್ಗವೆನಿಸಿ.

ಜೀವನಲ್ಲಿ ತುಂಬಿಹಳು ತಾಯಿ ತಾನಾಗಿ ದೇವನೊಲವು
ಮನೋರಾಜ್ಯವನು ನಂಬಿ ಆಳುವಳು ಅರಳಿ ಅರಿವಿನೊಳವು
ಚುಂಬಿಸುವಳು ತನ್ನತ್ತ ಎಲ್ಲ ಹೊಮ್ಮಿರಲು ಪ್ರಾಣಬಲವು
ಬಿಂಬಿಸುವಳು ಪ್ರತಿಬಿಂಬದಂತೆ ಅಂಗಾಂಗವಾಗಿ ಚೆಲುವು.

ಇದ್ದುದೆಲ್ಲವೂ ತಿರುಳಿನೊಳವು, ಹಿರಿಬಲವು, ಚೆಲುವು ಒಲವು,
ನಿದ್ದೆ ತಿಳಿದು ಎದ್ದಾಗ ಬೀಜವೇ ಮರವು ಹಲವು ಫಲವು,
ಹಿಗ್ಗಿದಾಗ ಕಾಣುವದು ಕಾಣದಾನಂದಮಗ್ನನಲ್ಲಿ
ಭೂಮವೆಂಬಂತೆ ಭೂಮಿ ಮೆರೆಯೆ ವಿಜ್ಞಾನಲಗ್ನದಲ್ಲಿ.

ಸದ್ಭಾವದೊಂದು ಎದೆಮಿಡಿತದಂತೆ ಓಂಕಾರ ಧ್ವನಿಸುತಿಹುದು
ಚಿತ್ತ ಚೇತನವು ಅರಿತುದನ್ನೆ ಮರೆತಂತೆ ನೆನಿಸುತಿಹುದು
ವಾಚ್ಯ ನಟಿಸಿತ್ತು ರಂಗಭೂಮಿಯಲಿ ಅನಿರ್ವಾಚ್ಯವಾಗಿ
ಸಾಕ್ಷಿಪ್ರೇಕ್ಷಕನ ಚಿತ್ರರಂಗದಲಿ ಹೃದಯ ಸೂಚ್ಯವಾಗಿ.

ದಿವ್ಯನಾಕದಲಿ ದಿವ್ಯಲೋಕದಲಿ ದಿವ್ಯಪಾಕವಿದ್ಯೆ
ಶುದ್ಧರಸವೆ ಓ ಸಿದ್ಧರಸವೆ ಇರುವರಿವು ಹಿಗ್ಗಿ ಇದ್ದೆ
ದಿವ್ಯತೂರ್ಯ ಎಚ್ಚರಿಸುತಿರಲು ಸುತ್ತೆಲ್ಲ ದಿವ್ಯನಿದ್ದೆ
ದಿವ್ಯಸ್ವಪ್ನ ಕಣ್ತೆರವ ಮಾಡೆ ಅಹ ದಿವ್ಯ ಕಾಣಲೆದ್ದೆ.

೩

ಮಮತೆಯಲ್ಲಿಯೂ ಸಮತೆ ಬೇಕು, ವಿಶ್ರಾಂತಿಯಲ್ಲಿ ಶಾಂತಿ,
ದುಃಖ ಸುಲಿದು ಸುಖಪೂರ್ಣ ಬೇಕು, ನಗೆಯಲ್ಲಿ ಬೇಡ ಭ್ರಾಂತಿ,
ವೈರವಿಲ್ಲದಾ ವೀರ್ಯ ಬೇಕು; [illegible] ಶಕ್ತಿ ಬೇಕು,
ಪಂಡಿತನವಿರದ ಹಠವು ಇರಲಿ, ಆ ಸತ್ಯಶ್ರದ್ಧೆ ಸಾಕು.

ಭವವು ಬೇಕು, ಅನುಭವವು ಬೇಕು, ಅನುಭಾವ ಬೇಕು ಒಳಗೆ,
ಸ್ವಯಂಭುತ್ವದಾ ಜ್ಞಾನ ಬೇಕು, ಆ ಧೀ[illegible]ಗಾಧಿ ಬೆಳಗೆ
ಮೂರು ಕಾಲಕೂ ನೂರು ಕಾಲದಾ ಸೃಷ್ಟಿ ದೃಷ್ಟಿ ಇರಲಿ
ಅಷ್ಟಸಿದ್ಧಿಗಳು ಅಷ್ಟತನುವ [illegible]ನೆ ಕಟ್ಟಿಕೊಂಡು ಬರಲಿ.

ದೇಹದಲ್ಲಿ ಸೌಂದರ್ಯವಿರಲಿ, ಆರೋಗ್ಯ ಪ್ರಾಣದಲ್ಲಿ;
ಮನಸಿನಲ್ಲಿ ಉತ್ಥಾನವಿರಲಿ, ಆನಂದ ಜೀವನಲ್ಲಿ;
ಕರ್ಮದಲ್ಲಿ ಬೇಗಿರಲಿ ಜೀವನವು, ಧರ್ಮದಲ್ಲಿ ಕಾಮ;
ಕಾಲಿಕೈಯ ಕೈದಾಗಿ ಕುಣಿಸುವಾ ಕೃಷ್ಣಯೋಗ ನೇಮ.

ಸಹಜವೆಂದು ಇದ್ದಂತೆ ಇರಲು ಅದು ಶುದ್ಧವಲ್ಲ ಹಾದಿ.
ಸ್ವಸ್ವಭಾವದಲಿ ಆತ್ಮಮುಕ್ತ ಸಂಬಂಧವಿದೆ ಅನಾದಿ.
ಬದ್ಧರಂತೆ ತಿಣುಕುವದದೇಕೆ ಆ ಸಿದ್ಧಮಾರ್ಗ ಬೇರೆ.
ಭುಕ್ತಿಮುಕ್ತಿ ಬಾಯ್ಗೂಡಿಸಿಹವು; ಯೋಗಕ್ಕೆ ಇದುವೆ ಮೇರೆ.

ಏಕವಿದ್ದರೂ ಸರ್ವವೇಕೆ ಒಳಗೊಳ್ಳಬಾರದಣ್ಣ ?
ಸಾಂತವೆಲ್ಲ ಆನಂತ್ಯಮುಖವು ಅನಕೇಕೆ ತೋರ–ಸಣ್ಣ ?
ಜ್ಞಾನದಲ್ಲಿ ಆನಂದವಿರಲಿ, ಆನಂದದಲ್ಲಿ ಜ್ಞಾನ,
ಬ್ರಹ್ಮಮಾನದಲಿ ಬ್ರಹ್ಮಗಾನದಲಿ ಬ್ರಹ್ಮವೇಕತಾನ.

೪

ಒಲವಿನಲ್ಲಿ ಬೆಳೆ, ಒಲವಿನಲ್ಲಿ ಉಳಿ, ಒಲವೆ ಬಾಳ ಚೆಲುವು,
ಒಲ್ಲದಿಲ್ಲ, ಒಲಿಯುವುದು ಎಲ್ಲ. ಒಲಿಯುವವೆ ಬದುಕು-ಬಲವು.
ನಾಂದ ನಾಲಿಗೆಯ ನೀರಿನಲ್ಲಿ ನೆನೆಯುವುದು ನಲುಮೆ-ನಲಿವು.
ನಲ್ಲರೆದೆಯ ನಸ್ನಿಯಲಿ ಹೂತು ಜಗ ತುಂಬುತಿಹವು ಹಲವು.

ಹುಂಜ ಹೇಂಟೆಗಳ ಕಾವಿನಲ್ಲಿ ರೂಪಾಯ್ತು ನೀರತತ್ತಿ
ಆಕಾಶ ತುಂಬಿ ಆನಂದವಿತ್ತು ಆನಂದವನ್ನೆ ಬಿತ್ತಿ
ಜಗವು ಜಂಗಮವು ಜೀವ-ಪ್ರಾಣಿಗಳ ಚಿತ್ರಕಾಯ್ತು ಭಿತ್ತಿ
ಇದು ಹಸ್ತ-ಮಳೆಯ ಬಿಸಿಯುಸಿರು ಹಸಿರು, ಅಲ್ಲಣ್ಣ ಕುರುಡು-ಚಿತ್ತಿ.

ಇದು ಪ್ರಕೃತಿ-ಪುರುಷ, ಓ ಬ್ರಹ್ಮಮಾಯೆ, ಅಲ್ಲಲ್ಲ ! ಶೈವ-ಭಕ್ತಿ
ಮಾತೆ ಭಂಗಾರ, ಮಾತೆ ಸಿಂಗಾರ, ಮಾಟ ಕಾವ್ಯಯುಕ್ತಿ.
ಎಲ್ಲಿಹುದು ಭಕ್ತಿ, ಅಲ್ಲಿಹುದು ಶಕ್ತಿ, ಬೇಕೇಕೆ ಒಣ ವಿರಕ್ತಿ ?
ಜ್ಞಾನಬೀಜದಲಿ ಚಿಗುರಿಬಂತು ಸಚ್ಚಿದಾನಂದ ಮುಕ್ತಿ.

ಭ್ರಾಂತಿಗೀಂತಿ ಹೊರಹೊಳಪು ತರದು. ಇದು ಅಲ್ಲ ರಜತಶುಕ್ತಿ.
ಇದು ನೇತಿಯಲ್ಲ, ಇತಿಪ್ರೀತಿಸ್ವಾತಿ ಮಾಕ್ತಿಕದ ದೈವ-ಭುಕ್ತಿ.

ಮಾತೃವಾಣಿ

ಒಳುಬೇರಿನಲ್ಲಿ ಕಡುಬೇರೆಯಾಗಿ ಚೊಕ್ಕಾದ ರೂಪವಾಂತು
ವರ ಬೇಡಿಕೊಂಬ ಸ್ಥಿರಲಗ್ನ ಬಂತು ಹತ್ತಿರಕೆ ಹೊತ್ತು ಬಂತು
ಹೇ ದೊರೆಯೆ ನಿನ್ನ ವಿಜಯಕ್ಕೆ ತಕ್ಕ ಮತಿಯೇರುವಂತೆ ಮಾಡು
ಸಟಿ ತಳ್ಳಿ ನಿನ್ನ ದಿಟಪಲ್ಲಿ ಮೂಡಿ ಬರುವಂಥ ಬಲವ ನೀಡು.

ಬಂದೆ ಬಂದೆ

ಮಾತೃವಚನ

ನನ್ನ ದೊರೆಯೆ ಸವಿಗಾರ ಸ್ವಾಮಿ ಈ ನಿನ್ನ ಕೆಲಸವನ್ನೇ
ಗೊನೆಗೊಳಿಸಲೆಂದು ಜಡಜಲಧಿತಳಕೆ ಮುಟ್ಟಿದೆನು ಮೂಲವನ್ನೇ
ಸುಳ್ಳನ್ನು ಮತ್ತೆ ಅಜ್ಞಾನನರಕ ಜಿಸುತ್ತೆ ಸುಟ್ಟುಬಿಟ್ಟೆ
ಗಾಢಾಂಧಕಾರ ವಿಸ್ಮೃತಿಯ ಪರಮಗುಹೆಯಲ್ಲಿ ಪಾದವಿಟ್ಟೆ.

ನಿನ್ನ ನೆನೆವು ನನ್ನೆದೆಯೊಳಿತ್ತದರ ಕರೆಯೆ ಹಾರಿ ಸಾರಿ
ನಿನ್ನತ್ತ ಬಂತು : ಹಾ ದೊರೆಯೆ ದೊರೆಯೆ ಎತ್ತೆತ್ತ ನಿನ್ನ ವೈರಿ
ಜಯಮತ್ತರಂತೆ ತೋರುತ್ತಲಿಹರು ಜಗದೊಡೆಯನೀಗಸತ್ಯ
ನೀನಿರದ ಬಾಳು ಅದು ಒಂದು ಸಾವು ಅದು ನರಕ ನಿತ್ಯಸತ್ಯ.

ಆಸೆಯನು ತಳ್ಳಿ ಸಂಶಯವೆ ಪಟ್ಟವನು ಕಟ್ಟಿಕೊಂಡು ಮತ್ತೆ
ಹುಸಿಬಂಡು ಪುಂಡು ಶರಣತೆಯ ನೂಕಿ, ಸಂಬುಗೆಯ ತೀರಿಸುತ್ತೆ
ಉಪಕಾರ ಸ್ಮೃತಿಯು ಹುಟ್ಟಿಲ್ಲವಿನ್ನು ಕಗ್ಗುರುಡು ಕಾಮನೊಂದಿ
ಕೊಲೆಗಡಕ ಬುದ್ಧಿ ಬರುತಿಹುದು ನೋಡ ದುರ್ಬಲದ ತಪ್ಪಹೊಂದಿ.

ಆ ನಿನ್ನ ಮಧುರತಮ ಪ್ರೇಮಘಟ ಬಾಯ್ಗಟ್ಟಿ ಉಸಿರುಗಟ್ಟಿ
ಉಮ್ಮಳಿಸುತಿಹುದು ಹಾ ದೊರೆಯೆ ನೀನೆ ಬಗೆಯ ಪಟ್ಟಗಟ್ಟಿ;
ಬಿಡುವಿಯೇನು ? ಆ ಅಸೃತವನ್ನು ವಿಕೃತಿಯನ್ನು ಮತ್ತೆ,
ಸಂತಾಪ ತಾಪ ಸಂತತಿಯನೆಲ್ಲ ಆ ಮಹಾವಿಜಯದತ್ತೆ.

ಹಾ ದೊರೆಯೆ ಆಜ್ಞೆಯನು ಕೊಟ್ಟು ನೋಡು ಕಟ್ಟಿಟ್ಟ ವಿಜಯವಹುದು
ನಾ ಬಲ್ಲೆ, ನಮಗೆ ಯೋಗ್ಯತೆಯು ಇಲ್ಲ ಜಗ ಸಿದ್ಧವಿಲ್ಲ; ಅಹುದು
ಕಡುಕಟ್ಟೆ ನಂಬುಗೆಯು ತುಟ್ಟತುದಿಯು ಮುಟ್ಟೊಮ್ಮೆ ಕೂಗಿಕೊಳುವೆ.
ದೊರೆ ಪೈ ಹಸಾದ ಜಗ ರಕ್ಷಿಸಯ್ಯ ಅದು ನಿನ್ನ ಅರುಳಿನಳವೆ.

ಇದು ಏನೆ ಇರಲಿ, ಇದು ಹೇಗು ಇರಲಿ, ತೋರಯ್ಯ ಕರುಣೆದೋರು.
ಉದ್ಧಾರವಹುದು ಜಗವಮೃತವಹುದು ಭವಜಲಧಿ ದಾಟಿ ಪಾರು.
ಪಾತಾಳದಿಂದ ಎದೆಯಾಳದಿಂದ ಜೀವಾಳದಿಂದ ಬಂದು
ನಿನ್ನತ್ತ ನುಗ್ಗಿ ಹೊರಹೊಮ್ಮಿ ಹಿಗ್ಗಿ ಪ್ರಾರ್ಥನೆಯು ತಾನೆ ಬಂದು.

ನಿನ್ನನ್ನು ಕಂಡೆ ಕಡುಕಾಂತಿಯುಲ್ಲಿ ನೀನಾಗ ನನಗೆ ಅಂದೆ:—
“ಎದೆಗೆಡಿಸಿಕೊಳ್ಳದಿರು, ಧೀರಳಾಗು. ಇಗೊ ನಂಬು ಬಂದೆಬಂದೆ.”

ಸದಾಶಿವಗೆ

ಶ್ರೀಗುರುವಿಗಾಗಿ ತನುಧಾರಿಯಾಗಿ ಬಂದಂಥ ಸದಾಶಿವಗೆ
ಅನಂತಾನಂತ ನತಿಯು ಉಪಕೃತಿಯ ಒಪ್ಪಿಸುವೆವು ಇವಗೆ.
"ಎಷ್ಟು ದುಡಿದೆ ನೀನೆಷ್ಟು ಪಡೆದೆ ಹೇ ನಮೋನಮೋ ನಿನಗೆ."

ಕಷ್ಟವೇನು, ಸಂಘರ್ಷವೇನು, ಪಾಡೇನು, ತಾಳ್ಮೆಯೇನು?
ನಮಗಾಗಿ ಕಲ್ಪ, ನಮಗಾಗಿ ಶಿಲ್ಪ ಸಾಧಿಸಿದೆ ನಮಗೆ ನೀನು.

ಬಾಗಿ ಕೂಗಿ ಬೇಡುವೆವು ನಿನಗೆ ಅರೆಚಣವು ಕೂಡ ನೋಡು
ನಮ್ಮ ಸಂಪದವು ನಿನ್ನ ಪ್ರಾಪ್ತಿ ಇದ ಮರೆಯದಂತೆ ಮಾಡು.

ಚೈತ್ಯಾಲಯ

೧

ಶಿವನುಂಡ ನಂಜು ತೀಗೊಂಡು ಮಂಜು-
ಮಂಜಾಗಿದೆ ಈ ಸಂಜೆಗೆ.
ಇದು ಉಷಾವಿಷದ ವ್ಯಸನೇಹ ಸೇರಿ ಕಳೆ
ಏರಿದೆ ಹುರಿಮಂಜಿಗೆ.
ಭಾವಾತ್ಮಭೂತಿ ಚೈತನ್ಯದೂತಿ, ಊ-
ರ್ಜಿತದಾ ಸಿರಿಪಂತಿಗೆ.
ಕಥಕ್ಕಳಿಯ ಪುತ್ತಳಿಯೆ! ಪೃಥಕ್ ಥತ್
ತಳಿಸಿದೆ ಜೀವಂತಿಗೆ.
ಜಡೆತುಂಬ ಕಣ್ಣು, ಇದು ಯಾವ ಹೆಣ್ಣು? ಮಾ-
ಪ್ರಾಣದ ಸ್ಯಾವಂತಿಗೆ!

೨

ಯಾವ ಅಚ್ಚರಸಿ? ಯಾವ ಋಷಿಯರಸಿ?
ಯಾವ ಭಾವರಸಿ?
ಯಾವ ಘಟ್ಟದಲಿ? ಯಾವ ಪಟ್ಟದಲಿ?
ಯಾವ ಮುಹೂರ್ತವಿರಿಸಿ?
ಯಾವ ನಕ್ಷತ್ರ? ಯಾವ ಸುಕ್ಷೇತ್ರ?
ಯಾವ ಪಾತ್ರ ಧರಿಸಿ?
ಝುಂಝುಣಣ ಝುಣಣ, ಝುಂಝುಣತ್ ಝುಣಣ, ಜೀ-
ವಾಣುವೃಂದ ಮೆರೆಸಿ,
ಛಂದಛಂದ ನವಬಂಧ ಪಡೆದು ಬಂ-
ದಿಹವು ಹಳತ ಮರೆಸಿ.

೩

ಛಿಳಿಲ್ ಛಿಟಿಲೆಂದು ಭುಕ್ಭುಗಿಲೆಂದು
ತಟಿತ್ ತಟ್ಟಿತೆಂದೂ
ಕಣ್ಣಮುಚ್ಚಣಿಕೆ ಕಣ್ಣ ತೆರೆವಣಿಕೆ
ಕಣ್ಣಕಟ್ಟಿತೆಂದೂ
ನವೋನವದ ಭವಭವದ ತವದ ವೈ-
ಭವವ ಒಟ್ಟಿತಂದು
ಕುರುಡು ಬಯಲಿಗಿಗೊ ಕಣ್ಣು ಬರೆವ ಕೈ-
ವಾಡ ಚಿಗುರ್ತಿಂದು
ದುಂದುದುಂದು ದುಂದಭಿಸುತಿಹುದು ಇಕೊ
ಹಲವು ಮುಖದಲೊಂದು.

೪

ಬಾರೊ ಇಲ್ಲಿ ವೈರಾಗಿ ಬಾರೊ, ಬಾ
ಇಲ್ಲಿದೆ ತಂಗುವ ಸ್ಥಲಾ—
ತಣಿವನರಿಯದೇ ದಣಿದುಹೋದೆ, ಬಾ
ಇಲ್ಲಿದೆ ಇಂಗದ ಜಲಾ—
ಏಕೆ ರೋಸಿ, ಭಯಗೊಂಡು ಹೇಸಿ, ನೀ
ಆಕ್ರೋಶಿಸುತಿಹೆ ಎಲಾ!
ಶಿವದ ಭಕ್ತಿಗವತಾರಶಕ್ತಿಗೊ
ಇದುವೇ ಇಂಗಿತವಲಾ!
ಬ್ರಹ್ಮಸ್ಫುರಣಕೆ ಮರಣವೆಂತು? ಅದು
ಅದುವೇ ಅಮೃತದ ಬಲಾ.

[illegible]

ಹಿಮಾಲಯದ ಒಳಬಸಿರಲಿ ಕೊರೆದಿದೆ
ಯಾವುದೊ ಬ್ರಹ್ಮಾಭಯಾ–
ಚಿತ್ರನೇತ್ರಗಳು ಉಸ್ಮೀಲಿಸುತಿವೆ
ಓಹೊ ತಾರಕಾಮಯಾ!
ಸೃಷ್ಟಿಯ ಕಲೆಯಾ, ಮಾಯೆಯ ಬಲೆಯಾ
ಬೀಸಿದೆ ಉದಯದ ನಯಾ
ಅರವಿಂದ ಮಿಂದ ಅರಬಿಂದ ಗಂಧ ಅರಿ–
ವಿಂದಲೆ ಬಂದಿಹೆ ಜಯಾ.
ಚಿತ್ತಚಿತ್ತಗಳ ಪಾತ್ರ ಕಾಣೆಯುತಿವೆ
ಕಟ್ಟಿದೆ ಚೈತ್ಯಾಲಯ.

ಜೀವ-ಲಹರಿ

ಜೀವ-ಲಹರಿ

ಇದು ವೈಷ್ಣವ ಇದು ಜೈನವು ಇದು ಶಾಕ್ತವು ಶೈವ
ಇದು ಜೀವನು ಇದು ಜೀವನ-ಪುರುಷಾರ್ಥವು ದೈವ
ಒಮ್ಮುಖವಿದು ಹಳವೊಗವೊಲು ತೋರುವ ತರತಮತೆ
ಇದು ನಿಮ್ಮದು ಇದು ನಮ್ಮದು ಇದು ಎಲ್ಲರ ಮಮತೆ.

ಇದು ಮಣ್ಣಿನ ನರುಮಲ್ಲಿಗೆ, ಇದು ನೆಲದ ನಿಧಾನ
ಇದು ರಸವನೆ ಹೊರದೋರುವ ನಾಟಕದ ವಿಧಾನ
ನಶ್ವರದಲಿ ಮೂಡಿಹುದಿದು ಶಾಶ್ವತತೆಯ ಚಿತ್ರ
ಇದೆ ಇಲ್ಲೆಂಬುವ ವಾದವ ಇಂಗಿಸುವ ವಿಚಿತ್ರ.

ತಾಯಿ–ನುಡಿ

ತಾಯಿ ನುಡಿವಳು ಕೇಳಿರೋ–
ತಾಯಿ ನುಡಿದಳು ಏಳಿರಿ.

ಕತ್ತಲೆಯು ಹೂಗೆಂಪು ಒಡೆಯಿತು
ಏನು ಬೆಳಕಿನ ಗಂಧವೋ!
ಮೂಗು ಉಳ್ಳ್ಯಾ ಮಗುಗಳೆಲ್ಲಾ
ಉಸಿರಿಸುವದೇನಂದವೋ!

ಉಸಿರುಗೊಳುತಿವೆ ಉಸಿರ ಕೊಡುತಿವೆ
ಸಿದ್ದೆಯೆಲ್ಲವು, ಎಚ್ಚರಾ.
ಮೈತ್ರಿಯೇ ಮೈಮುರಿದು ಎದ್ದಿದೆ
ಏಕೆ ಭೂತದ ಮಚ್ಚರಾ.

ಮುದಿತರಾಗಿರಿ ಉದಿತವಾಗಿದೆ
ಬಹುದಿನದ ಸೂರ್ಯೋದಯಾ.
ಈಶ್ವರೇಚ್ಛೆಯ ಉಷೆಯ ಬೆಂಬಲ–
ವಾಗಿ ಇಳಿಯುವ ಶ್ರದ್ಧೆಯಾ.
ಇದಿರುಗೊಳಿ ಚಿರವೃದ್ಧಿಯಾ.

ದೇವ-ಮಾತಾ

ಕಣ್ಸೆಳೆವ ಮಿಣುಮಿಣುಕು ಚುಕ್ಕೆ ಮಿಂಚುವ ಹಾಗೆ
ಅಲ್ಲೊಂದು ಇಲ್ಲೊಂದು ಗೆಳತಿ ಎಳ್ಳು.

ಕಣ್ಣು ಕವಳೆಯ ಹಣ್ಣು, ಗಿಣಿಮಾವಿನೊಲು ಮೂಗು
ದಾಳಿಂಬ ಬಿರಿತಂತೆ ಹಲ್ಲುಸಾಲು.
ಸೇಬುಹಣ್ಣಿನ ಅಂದ ಗದ್ದಗಲ್ಲಗಳಲ್ಲಿ
ಹಣೆಯಲ್ಲಿ ಹುಣ್ಣಿಮೆಯ ಹೊನ್ನಹಾಲು.

ಮುಗ್ಧತೆಯ ಮುದ್ರೆಯಲಿ ನಿದ್ರಿಸುತ್ತಿದೆ ಇಲ್ಲಿ
ಭದ್ರಮಂಗಳವಾದ ಮೀಸಲೊಲವು.
ತೊಳೆದ ಕಣ್ತೆರೆದು ಒಳ ಎಚ್ಚರದ ಆರತಿಯು
ಬೆಳಗುತಿದೆ ಒಳಗೊಳಗೆ ಮಿಗುವ ಚೆಲುವು.

ದೇವಬೀಜಕ್ಕೆ ಇದು ತಾಯಿಹೊಲವು
ಸಾಕಾರವಿಲ್ಲಿ ಈಶ್ವರನ ಬಲವು.

ದೀಪದ ಮಲ್ಲಿ

ಏನವ್ವ ಮಲ್ಲಿ! ಏನವೇಸು ನೀ ನಿಂತಿಲ್ಲಿ?
ಯಾವ ದೇವರ ಬರವ ಕಾಯುತಿರುವೆ?
ಎಂಥ ಶಮ, ಎನಿತು ದಮ, ಯಾವ ಸಂಯಮದಿಂದ
ಜಾನಪದ ರಮಣಿ ನೀ ಮಾಯುತಿರುವೆ?

ಎದೆಗೆ ಸಮ ಕೈತೆರೆದು ಪ್ರಣತಿಯನ್ನೆತ್ತಿರುವೆ;
ಕಣ್ಣು ಮೂಗೊಂದಿನಿರ ಸಿಟ್ಟಿಸುವವು;
ಅಲ್ಲಿಂದ ಎಲ್ಲಿಂದು ಬಯಲಲ್ಲಿ ಹಾರುವರ
ಕಾಣದಾ ದೀಪಶಿಖೆ ಮುಟ್ಟಿಸುವವು.

ಅಚಲಪ್ರತಿಷ್ಠೆಯಲಿ ನಿಂತ ಮಿಂಚಿನ ತರಳೆ
ಸುತ್ತಿಹುದೊ ಏನು ಬ್ರಹ್ಮಾಂಡ ಬಂಡೆ?
ಕಾಣದಾಕಾಶದಲಿ ಹೃದಯಪ್ರಕಾಶದಲಿ
ಆತ್ಮದ ವಿಕಾಸದಲಿ ಏನ ಕಂಡೆ?

ಯಾರೆರೆದರೋ ಎರಕ, ಇಲ್ಲ ಹಗರಣ, ಮುರಕ,
ಅಪ್ರತಿಮವೀ ಪ್ರತಿಮೆ ಎಂಥ ಎರಕ!
ಭಕ್ತಿಭಿಕ್ಷೆಯ ಬೇಡಿ ಬಂದಾರು ನಿನ್ನಿದಿರು
ಅರಸನೂ ಬಂದಾನು ಆಗಿ ತಿರುಕ.

ಎಂದು ತೀರಿತೊ ಸ್ನೇಹ, ಎಂದುರಿದಿತೋ ಬತ್ತಿ,
ಎಂದಾರಿತೋ ಕುಡಿಯು, ಇಲ್ಲ ವಿರತಿ.
ಕರದೊಳಿದೆ ಬರಿ ಪಣತಿ, ಎದೆಗಣ್ಣೊಳಿದೆ ಪ್ರಣತಿ,
ಆರತಿಯು ಆರದಿಡೆ, ತುಂಬು ಭರತಿ.

ಉಡಿಗೆ ಹಬ್ಬದ ಠೀವಿ, ಹುಡಿಗಿಯೋ ಅನುಭಾವಿ
ನಡಿಗೆ ಮಿಂಚಿನ ಕಂಬಿ ನಿಂತ ನಿಲವು.
ಬೊಂಬೆಯೋ ನಾ ನಂಬೆ, ಓಹೋ ಅಕ್ಷಯ ಜೀವಿ,
ತಣಿಯದೇ ಹೊಗಳೇನು ಹಲವು ಸಲವು.

ಯಾರು ಕೊಟ್ಟರು ಮಣಿಹ, ದೇಹಕಿಲ್ಲವೆ ದಣಿಹ,
ಅರ್ಪಣವೆ ಮೈಗೊಂಡ ಹಾಗೆ ಇರುವೆ.
ಆಹ ಅನಿಮಿಷ ತರುಣಿ! ಏ ಅಜರೆ! ಓ ಅಮರೆ!
ನಿರ್ವಿಕಲ್ಪವು ಹೂತ ಕಲ್ಪತರುವೆ!

ಆದರೂ, ಆದರೂ, ಎಷ್ಟೆ ಏನಾದರೂ
ಏನೋ ಅಗಮ್ಯವೀ ಭಂಗಿಯಲ್ಲಿ
ಮಾತು ಮುಗಿಸೆನ್ನುತಿದೆ ಚಿತ್ತಕೇಕೀ ಭಾಷ್ಯ?
ಸಾಕ್ಷಿತ್ವ ಸಾಕು ನಿಃಸಂಗಿಯಲ್ಲಿ!

ಮುತ್ತೈದೆ

‘ಗೌರಿ’ ಎಂಬಳು ಒಮ್ಮೆ ಸಾಯುತಿರುವಾಗ ಮುತ್ತೈದೆ—
“ಇದ್ದುದೆಲ್ಲವು ಶುದ್ಧ ಒದ್ದಾಟ; ಹೊರಬಿದ್ದುದೇ ಗೆಲವು.
ಇದೆ ಬಲವು ಮುತ್ತೈದೆತನಕೆ,” ಮುತ್ತಯ್ಯ ಮುಳುಮುಳು ಅತ್ತ.

ಮುತ್ತೈದೆಕಣ್ಣು ಆಯಿತು ಒದ್ದೆ — ಅದುವು ಗಂಗಾಯಮುನೆ
ಖೇದಜಲ ಮೋದಜಲ; ಸಂಸಾರ ಸಾರಸ್ವತದ ಕೂಡಲವು.
“ತಾಳಿ-ಕುಂಕುಮ-ಓಲೆ, ಕಂಕಣದ ರುತಿ ಮೇಲೆ.
ಅಪ್ಪ, ನೀನಳಬೇಡ, ಹಿಂದಾಗಿ ಹುಟ್ಟಿ, ನೀ ನನ್ನ
ಮೊದಲಿಗೆ ಎದ್ದೆ. ಗೌರಿ ನೀ ಮುಂದಾಗಿ ಹೋಗಿ
ಬಾಗಿಲ ತೆರೆಸು ವೈಕುಂಠದಲಿ, ಕೃಷ್ಣನನು ಒಳಗೆ
ಬಿಡುವರೆ ಅಲ್ಲಿರುವ ದಿಂಡಿಗರು ದಾಂಡಿಗರು.
ನಾನೂ ಬಂದೆ, ನೀ ಮುಂದೆ ನಾ ಹಿಂದೆ.”

ಕೊನೆನೋಟ ತೆರೆದು ನೋಡಿದಳು ಜೊತೆಯವನ:
ಹೊಟ್ಟೆಮಕ್ಕಳನೊಮ್ಮೆ ನೋಡಿದಳು ಕಣ್ದಿರುಹಿ.
ಕೈಮುಗಿದಂತೆ ಮುಗಿದುಕೊಂಡವು ಕಣ್ಣು ನಾಸಾಗ್ರ—
ದೃಷ್ಟಿಯಲಿ ಮೂಗು ಮೂಗತಿ ಕಂಡು, ಒಳಹಮುಳ-
ದಲಿ ಕುಲುಕುಲು ನಗುವ ಚುಮುಚುಮು
ನಸುಕಿನೊಲು ನಗೆಮುಗುಳನರಳಿಸಿದಳಾ ಧನ್ಯೆ-
ನಿರ್ಮಳ ಕನ್ಯೆ !

ಒಳಹೊರಗು ಬೆಳಕು ತುಂಬಿತ್ತು. ಬೆಳಗುಗಸಸಿನ
ಹೃದ್ಯಸಂವೇದನೆಯ ಸುತ್ತು. ರಸಬಿಂದು ಒಂದರೊಳಗೊಂದು
ಕೈಧಾರೆ, ಕಂಕಣಸಾಲು, ನಾ ಮೇಲು—ನೀ ಮೇಲು !

ಶಬ್ದ !

ಜೀವದ ಚಿತ್ತು ಜಗತ್ತಿನ ಸತ್ತು
ತಿಳಿದಾನಂದದ ಸಂವಿತ್ತು.
ಚರ್ಪಟಿಸಲಿ ಅದ್ವೈತದ ವಾದ
ಜಾಣ ಬೊಮ್ಮ ಮೌನದೊಳಿತ್ತು.

ಇತ್ತ ಜಗತ್ತೂ ಸತ್ತೂ ಇತ್ತು
ಜೀವ ಚಿತೆಯೊಳುರಿಯುರಿಯುತ್ತಿತ್ತು
ಮಾಯೆಯುಸಿರ್ಪ ಚಸೀಯ ನಾಟ್ಯವನು
ಎಂದೋ ಯಾರೋ ಕಂಡಿತ್ತು.

ಅಲ್ಲಾ ಇಲ್ಲಾ ಎಂದಿತ್ತು.
ಬ್ರಹ್ಮಕೆ ಇದ್ದಂತೆನಿಸಿತ್ತು.
ಶಬ್ದಬ್ರಹ್ಮವ ನೆನೆಸಿತ್ತು.

ಆಳು—ಅರಸು

ನಿನ್ನ ಆಳ ನಾನು
ನನ್ನನಾಳು ನೀನು.

ಕಾಳ ಹಾಳ ಆಳಿನಲ್ಲಿ
ಹೂಳಿಹೋತು ಬಾಳು.
ಬೀತು ಹೂತು ಕಾತು ಬರುವೆ
ತಾಳಿ ತಾಳೊ ತಾಳು.

ಏಳು ನಲ್ಲ ಕೇಳು
ಎಂದು ಬರುವೆ ಹೇಳು.

'ಆ' ಬಂದೆ, 'ಓ' ಬಂದೆ
'ಏ' ಬಂದೆ ಎನುವೆ
ಆಹ ನನ್ನ ತನುವೆ.
ಜೀವದುಂಬಿ ಜೇನು ತುಂಬಿ
ವ್ಯೈದುಂಬಿ ಬರುವೆ
ಬಾರೊ ನನ್ನ ಗುರುವೆ !

ಅರಸ

ಭಾವರಸವನೆ ತೇದು
ಗಂಧ ಲೇಪಿಸಿಕೊಂಡೆ
ನಿನ್ನ ಕಂಪೇ ಬೇರೆ ಗಂಧರ್ವರರಸ.

ನೀರ ನೆತ್ತರ ಸವಿದು
ಸುರುಚಿ ಸುಮಧುರವೆಂದೆ
ನಿನ್ನ ಹಸಿಯೇ ಬೇರೆ ತಣಿವಿನರಸ.

ಬೆಳಕು–ಬಣ್ಣವ ಸೋಸಿ
ಬಹೆ ಜೀವವನು ಸೂಸಿ
ನಿನ್ನ ರಸವೇ ಬೇರೆ ಬಾಳಿನರಸ.

ಇದ್ದೆ—ಇದೆ

ಇದೆ ಇದೆ ಇದೆ, ನೋಡುವದಿದೆ ಇದೆ,
ಜಲವಿದೆ ನೆಲವಿದೆ ಬಲವಿದೆ ಫಲವಿದೆ.

ಬೆಳೆವುದು ಇದೆ ಇದೆ, ಬಾಳುವುದಿದೆ ಇದೆ,
ಅಳಿದರು ತನು ತಾನುಳಿವುದು ಇದೆ ಇದೆ.
ನೋಡುವುದಿದೆ ಇದೆ ಮಾಡುವುದೂ ಇದೆ.

ಆವರಣವು ಇದೆ, ನಿರಾವರಣವು ಇದೆ,
ಹೊಗೆ ನುಂಗುವುದಿದೆ, ಧಗೆಯು ಅಳಿವುದಿದೆ.
ಅಡಿಯಿಂ ಮುಡಿವರ ಬೆಳಗುವುದಿದೆ ಇದೆ.
ಕಾಂಬುದ ಕಂಡರೆ ಕಡೆವರ ಉಳಿವಿದೆ.

ಕೊಡುವವಗೂ ಇದೆ, ಕೊಳುವವಗೂ ಇದೆ,
ನೋಡುವುದೊಂದಿದೆ, ಕಾಣುವ ಹಲವಿದೆ.
ತೋರುವ ತೆರೆಯನು ತೆರೆಯುವ ಕಲೆ ಇದೆ.

ಬಂಧನವೂ ಇದೆ, ಬಿಡುಗಡೆಯೂ ಇದೆ,
ಸಿದ್ಧಿಯ ಮುಟ್ಟಲು ಸಾಧನವೂ ಇದೆ.
ಹಲವು ಜನುಮಗಳ ಬಟ್ಟೆ ಕಳೆವುದಿದೆ,
ಕೆಲವನು-ಕಳೆದರು ಉಳಿವುದೊಂದು ಇದೆ.

ಭುಜಬಲವೂ ಇದೆ, ಎದೆಯೊಲವೂ ಇದೆ,
ಭೇದ ಅಭೇದವ ಅರಿಯುವ ಛಲವಿದೆ.

ಹತ್ತಿರ ಹೊಲವಿದೆ, ಎತ್ತರ ನಿಲುವಿದೆ,
ಸುತ್ತ ನೋಡಿದೆಡೆ ಬಿತ್ತಿದ ಬಯಲಿದೆ.

—ಶರಣು ಬಂದವರಿಗೆ ಮರಣೆಂಬುದಿಲ್ಲಿದೆ
ಕರುಣವುಳ್ಳವರಿಗೆ ಆಯುಕದೆಡೆ ಇದೆ.
ಹರಣ ಉಳ್ಳನಕ ಆಚರಣ ಮಾರ್ಗವಿದೆ—
ಅಮರರಾದವರಿಗೆ ಮರಣವು ಎಲ್ಲಿದೆ?

ಭುಜಬಲ ತಪಿಸುತ ಹುಟ್ಟಿದ ಸ್ಥಲವಿದೆ
ಶಾಂತಿಸಾಗರವು ಕಟ್ಟಿದ ನೆಲೆಯಿದೆ
ಸಮಂತ ಭದ್ರವು ಆಶ್ರಮವಿದೆ ಇದೆ
ಇದೆ ಎಂದರು ಇದೆ, ಇಲ್ಲವೆಂದರಿದೆ.

ಹೇಳಲು ಬರದಿದೆ, ಹೇಳದೆ ಇರದಿದೆ,
ತಿಳಿವಗೆ ತಿಳಿದಿದೆ, ಇನ್ನು ತಿಳಿವುದಿದೆ.
ಅರಿವವಗೂ ಇದೆ, ಮರೆವವಗೂ ಇದೆ,
ಎಲ್ಲಕು ಒಳಗಿದೆ, ಎಲ್ಲರ ಹೊರಗಿದೆ.
ಒಳ ಹೊರಗೂ ತಾನಿದೇ **ಇದೆ, ಇದೆ,** ಇದೆ.

ಒಲವು ಲಿಂಗ

ಇದ್ದು ಇಲ್ಲದೊಲು ಇದ್ದಿತು ಒಲವು
ಇದ್ದಿಲ್ಲ ಕಲ್ಲಿನಲು.
ಅಂತಃಸ್ಪರ್ಷ ಎಂತಹ ಹರ್ಷ
ಮೌನದ ಸೊಲ್ಲಿನೊಲು.

ವಿದ್ಯುದ್ವಿದ್ಧ ಬೆಂಕಿಗೆ ಶುದ್ಧ
ಬೆಳಕಿನ ಬುದ್ಧನಿಗೋ!
ಬದ್ಧತೆಯಲ್ಲಿಯೆ ಸಿದ್ಧತೆ ನಡೆದು
ಕೆಂಡದೊಳೆದ್ದನಗೋ!

ಕಾರ್ಬೊನ್ ಕಣವೇ ಕೆಂಬೊನ್ನಾಗಿ
ಕಿನಿಕಿನಿ ಕದಿರುವದು.
ಗಾಳಿಯ ಗತಿಯೇ, ಬೆಳಕಿನ ಜತಿಯಲಿ
ಅರಿವೆನೆ ಕುದರುವದು.

ಸುಡಿ

ಬರುವ ಸೃಷ್ಟಿಯು ಜೇಳಿಯೊಡೆದಿದೆ
ಮೊಳಕೆ ಮೂಡಿದೆ
ಶಬ್ದವಾಗಿದೆ, ಶಬ್ದ ಕೇಳಣ್ಣಾ.

ನಿನ್ನ ಪಾಲಿನ ಪಾಟ ಮಾಡಿಸು
ಆಟ ಕೂಡಿಸು
ಕೂಟ ಬಂದಿದೆ ಕಟ್ಟು ಏಳಣ್ಣಾ.

ಒಂದೆ ಬಿಂದುವು ಸುತ್ತು ಕಡೆಗೂ
ಒತ್ತಿ ಕಿರಣಿಸಿ
ಮೊತ್ತವಾಗಿದೆ ಬಿತ್ತು ಬೀಳಣ್ಣಾ.

ಮರದ ತುದಿ ತುದಿ ಹಣ್ಣುಗೊಳ್ಳಲು
ಕಣ್ಣು ತೆರೆದಿದೆ
ಮಣ್ಣನರಳಿಸಿ ಕಿಚ್ಚು—ಏಳಣ್ಣಾ.

ನವ–ಊರ್ಮಿ

ಏನೋ ಮುಗಿದಿದೆ ಏನೋ ಬರಲಿದೆ,
ರಾಗವಲ್ಲಿ ಮೆದು ಹುಸಿಗಾಲ—
ಬಸಿರು ಬೇನೆಯಲಿ ತಾಯಿ **ನೋನೆಯಲಿ**
ಪಸರಿಸಿಹುದು ಚಿಂತಾಜಾಲ.

ಅಡ್ಡ ಗುಡುಗಿನಲಿ, ನೆಲವೆ ನಡುಗಿದಲಿ
ಭರಣಿ ಮಳೆಗೆ ಹಸಿರಾದಂತೆ—
ಕಾಮ ರೂಪದಲಿ, ಬ್ರಹ್ಮ ಭೂಪನಲಿ
ಹಿಮಾಲಯವೆ ಬಸಿರಾದಂತೆ—

ಅಂಕುರಿಸಿದೆ ಅರವಿಂದ ಉಪಜ್ಞೆ
ನರನಾರಾಯಣ ಜನಧರ್ಮ.
ಅಗ್ನಿಗರ್ಭದಲಿ ಶರಷ ದರ್ಭೆಯಲಿ
ಶಿವಕಲ್ಯಾಣದ ನವ ಊರ್ಮಿ.

ಬಿಳಿಕಣಿಗಿಲ

ಬೆಳಕಿನ ಬಸಿರಲಿ ಅರಳುವ ಹೊಂಬಣ್ಣದ ತೆರದಿ
ಬಿಳಿಕಣಿಗಿಲ ಇಗೊ ಅರಳಿವೆ ಚಳಿಯಲಿ ಇಂಚರದಿ.
ಎಲರಲರಿದೆ ಬೆರಳಿನ ತುದಿ ಹೂ ಹಿಡಿ ಹಿಡಿವಂತೆ
ಕೋಕಿಲ ಕಂಠದ ಪಂಚಮ ವರ್ಣದಿ ಮಿಡಿವಂತೆ.

ಶಿವಮುಗ್ಗಿಯ ಬನದೊಳಗದೊ ಕೋಗಿಲ ಕೂ ಎಂದು
ಈಗಳೆ ಕೂಗಿದೆ, ಸುಗ್ಗಿಗೆ ಚಳಿ ಬೆನ್ ಬಿರಿವಂದು.
ಚಳಿ ಸೋಂಕಿಗೆ ಬಿಳಿಕಣಿಗಿಲ ಹೂತೋಲು ಕೊನೆಕೊನೆಗೆ
ಅಯ್ದೆಸಳಲಿ ಮನವಲರಲಿ ಕನ್ನಡ ಮನೆಮನೆಗೆ.

ಚಿಟ್ಟಗುಬ್ಬಿ ಚಿಂವು ಚಿಂವು

ಚಿಟ್ಟಗುಬ್ಬಿ ಚಿಂವು ಚಿಂವು.
ಅದೇ ಬೆಳಗು ಅದೇ ಗಾಳಿ
ಕೂಗುವದೂ ಅದೇ ಕೋಳಿ
ಆದರು ನವ ಮುದವ ತಾಳಿ
ಏನ ಹಾರುವೆ ?
ಏನ ಕೋರುವೆ ?
ಚಿಟ್ಟಗುಬ್ಬಿ ಚಿಂವು ಚಿಂವು.

ಎಲ್ಲ ಗುಬ್ಬಿ ಒಂದೆ ಮಾಟ
ಅದೇ ಆಟ ಅದೇ ಸಾಟ
ಬೇರೆ ಸೊಗಸು ಬೇರೆ ನೋಟ
ಆದರೂ ಇದೇ !
ಇರಲಿ ಯಾವುದೇ.
ಚಿಟ್ಟಗುಬ್ಬಿ ಚಿಂವು ಚಿಂವು.

ಹಿಟ್ಲರನೂ ಸತ್ತರೇನು,
ಪೋಲ್ಯಾಂಡು ಕತ್ತರೇನು,
ಸ್ವಾತಂತ್ರ್ಯವನಿತ್ತರೇನು
ಯಾವ ದೇಶಕೆ
ವಿಜಯ ಘೋಷಕೆ ?
ಚಿಟ್ಟಗುಬ್ಬಿ ಚಿಂವು ಚಿಂವು.

ಸಾಕು ನಾಕು ಹೂವು ಅರಳಿ
ಅದೆ ನಿನಾದ ಮರುಮರುಳೀ
ಕರೆಯುತ್ತಿದೆ ಹಿರಿ ಅರುಳೀ·
ಬಾರ ಬಾರ ಬಾ
ಹಾ ಹಾ ಹಾ !
ಚಿಟ್ಟಗುಬ್ಬಿ ಚಿಂವು ಚಿಂವು.

ಚಂದ್ರ

ಬಿದಿಗೆ ಚಂದ್ರ ಬಂದ ನೋಡು
ದೀಪ ಹಚ್ಚಿದಂತೆ ಜೋಡು
ಯಾರ ಮನೆಯು ಅಲ್ಲಿ ಇಹುದೊ
ಯಾರು ಬಲ್ಲರು?
ನೋಡಲೇನು, ಒಬ್ಬರೇನು
ಹೇಳಲೊಲ್ಲರು.

ಅಗೋ ಚವತಿ ಚಂದ್ರ ನೋಡು
ಮೂಡಿದಂತೆ ಎರಡು ಕೋಡು
ಮೃಗವು ಎಲ್ಲಿ ಇಹುದೊ ಏನೊ
ನಾನು ಕಾಣೆನು.
ಇಂಥ ಚಿತ್ರ ಬರೆದನಿಲ್ಲಿ
ಯಾವ ಜಾಣನು?

ಅಷ್ಟಮಿ ಚಂದಿರನು ಬಂದ
ಅರ್ಧ ಬಿಟ್ಟು ಅರ್ಧ ತಿಂದ
ಉಂಡಿ ಚೆಲ್ಲಿಕೊಟ್ಟನಿಲ್ಲಿ
ಹುಡುಗನಾವನು?
ಕಾಣೆ ಅತ್ತ ಇತ್ತ ಎತ್ತ
ಅವನ ಠಾವನು.

ಬಂದನು ಹುಣ್ಣಿ ಮೆಯ ಚಂದ್ರ
ಬೆಳುದಿಂಗಳು ಸಿಂಡ ಸಾಂದ್ರ
ಅಲ್ಲ ಅಲ್ಲ ಮುಗಿಲು ತುಂಬ
ಇಹುದು ಮಜ್ಜಿಗೆ.
ಬೆಣ್ಣೆಮುದ್ದೆ ಮೇಲಿಯೊಂದು—
ಹೇಳು ಅಜ್ಜಿಗೆ.

ದೇವವೀಣೆ

ದೇಹವೊಂದು ದೇವವೀಣೆ,
ನರನರವೂ ತಂತಿ ತಾನೆ,
ಹಗಲಿರಳೂ ನುಡಿಯುತ್ತಿಹ ಉಸಿರಾಟವೆ ಗೀತ.
ಅದ ಬಾರಿಸೆ ನೀ ಪ್ರವೀಣೆ
ತಾಯಿ ನಿನ್ನ ಕೈಗೆ ನಾನೆ
ಒಪ್ಪಿಸಿಕೊಂಡಿಹೆಸು ಬರಲಿ ಜೀವದ ಸಂಗೀತ.

ಮನದ ಮಲೆಯು ತುದಿತುದಿಯಲಿ
ಮೌನದ ಸುಪ್ತೋದಧಿಯಲಿ
ಏಳಲಿ ಅಲೆ ನವತಾರೆಯ ಕಿರಣಾವಲಿಯಂತೆ.
ಇಗೊ ಚಿತ್ತದ ಯಾವದೊ ಸ್ಮೃತಿ
ಸುಳಿಸುತ್ತಿದೆ ವಿದ್ಯುದ್ರತಿ
ಮೈಮನವೂ ಪ್ರಾಣಪಥದಿ ನಲಿನಲಿ ನಲಿವಂತೆ.

ನೀನೆಲ್ಲೋ ಹಾಡುತ್ತಿಹೆ
ನಾನೆತ್ತೋ ನೋಡುತ್ತಿಹೆ
ಹಾಡಿದ ಒಡನಾಟಕ್ಕೆ ಒಳನಾಡಿಯು ನಡುಗುತಿದೆ.
ಸ್ಫುರಿಸುತ್ತಿದೆ ಸ್ಪಂದಿಸುತಿದೆ
ವಿವಿಧ ಸ್ವರ ಹೊಂದಿಸುತಿದೆ
ಉಳಿದಲೆದಾಟವು ಎಲ್ಲೋ ಅಲ್ಲೋ ಅಡಗುತಿದೆ.

ನನ್ನ ಪಾಡಿನ ಪಲ್ಲವಿಗಳು

ತಪ್ಪೆ ತಿದ್ದುತ ತಿದ್ದಿ ತೀಡೆ ತಪ್ಪುತ ತಿರುಗಿ
ತಿದ್ದುವೆವು ಜಗ ಅಲ್ಲಗಳೆಯಬಹುದೆ?
ಹೆಜ್ಜೆ ಹೆಜ್ಜೆಗೆ ತಪ್ಪು ಮಾಡಿದರದೇನಹುದು
ದಟ್ಟಡಿಯಸಿಡದೆ ನಡೆ ಕಲಿಯಬಹುದೆ?

ಇಂದೆ ನರಸಿದ್ಧವನು ಹಿಂದೆ ವಾನರಸಿದ್ಧ
ಮುಂದೆ ನಾರಾಯಣನು ಆಗುವವನೇ.
ತೊಡಕು ತೊಂದರೆ ಬಂದರೇನು ಹೋಳಾಗುವವು
ಅಂಥ ಇಂಥವೆಕವನು ಬಾಗುವವನೇ?

'ಅಂತವಿಲ್ಲದ ಜಗವು ಸಾತಂವಕ್ಲಿಹುದು ಸಲೆ'
ಎಂಬುದನು ಯಾರೇನು ಮರೆಯಬಹುದೆ?
ಎಲ್ಲರೆದೆಯಲ್ಲಿದ್ದ ಪುರುಷನಲ್ಲಿಲ್ಲೆಂದು
ಹೊರಗಿಂದಲವನನ್ನು ಕರೆಯಬಹುದೇ?

ಸುವ್ವಿ ಸಾವಿರ ಸರತಿ ಸುವ್ವಿ ಸುವ್ವಾಲಿ ಬಾ!
ಕತ್ತಲೆಯ ಹರೆಯುತ್ತ ಬರುವ ಅರಿವೇ!
ಕೈಲಾಗದೆಂದು ಬಿಟ್ಟಿದ್ದ ಕೆಲಸಗಳನ್ನು
ಕೈಗೂಡಿಸುತ್ತಿರುವ ನರನ ಕರವೇ!

ಕಟ್ಟಿಟ್ಟ ಹಾದಿಯಿರೆ ಚಿಕ್ಕೆಗಳ ಜನ್ಮವೂ
ಬೇಡೆನಗೆ ಆ ಅಮರ ಮಂದಿಯಲ್ಲಿ.
ಇರುವೆಯಾಗುತ ಸಣ್ಣ ಹಾದಿ ಹುಡುಕುವೆ ನಾನೆ
ಯಾವದಾದರು ಸಂದಿಗೊಂದಿಯಲ್ಲಿ.

ಮುಪ್ಪಾಗಿ ಹಳಿಸೆ ಹೊಸ ಒಪ್ಪು ಹೊಂದುವ ಜಗವು
ತಿದ್ದಿ ಬೆಳೆಸಿರುವ ಆವೃತ್ತಿಯಲ್ಲೇ?
ಹಳಿಸೆ ಅಳಿಸುತ್ತ ಹೊಸ ಚಿಗುರು ಚಿಗುರುವ ಸತತ
ರಮ್ಯ ಸೃಷ್ಟಿಯ ವಿಶ್ವವೃತ್ತಿ ಬಲ್ಲೆ.

ನಾದ ಬೇಕು

ನಾದ ಬೇಕು ನಾದ ಬೇಕು
ನಾದಾನ ನಾದ ಬೇಕು
ನಾದಕ್ಕೆ ಪ್ರತಿನಾದ ಬೇಕು
ನಾದಾಸ್ವನ ಆದ ಮ್ಯಾಲೆ ಬ್ಯಾರೆ ಯಾಕ ವಾದ ಬೇಕು?

ಜ್ವರ ಇಳಿವುದಕ್ಕ ಸ್ವೇದ ಬೇಕು
ಹಸಿದ ರುಚಿಗೆ ಸ್ವಾದ ಬೇಕು
ನೀರಡಿಕೆಗೆ ನೀರ ಸೇದಬೇಕು
ನಾದಬೇಕು ನಾದಬೇಕು ಕಣಕ ಮಿದ್ದೀ ನಾದಬೇಕು.

ರಸಪಾಕಕ್ಕೂ ನಾದಬೇಕು
ಮಂಗಳಕ್ಕ ಸುನಾದ ಬೇಕು
ಜೇರು ಏರು ಸರಿ ನಾದ ಬೇಕು
ನಾದ ಬೇಕು ನಾದ ಬೇಕು ಅಲ್ಲನ್ನುವಗ್ಗ ವಾದ ಬೇಕು.

ಗುರುಶಿಷ್ಯರ ಸಂವಾದ ಬೇಕು
ಅಭೇದಲ್ಲಾ ಭೇದ ಬೇಕು
ಭೇದಾಭೇದ ಅಭೇದ ಬೇಕು
ನಾದಬೇಕು ನಾದಬೇಕು ಕೊನೆತನಕಾನೂ ನಾದಬೇಕು.

ದೇವನ ವೇದಾ ಓದಬೇಕು
ಜೀವನ ರಸಾSಸ್ವಾದ ಬೇಕು
ಸಚ್ಚಿನ್ಮೂರ್ತಿಯು ಮೋದ ಬೇಕು
ನಾದ ಬೇಕು ನಾದ ಬೇಕು ಓಂಕಾರದ ನಾದ ಬೇಕು.

ಹೊರಗಿನ ದೇವರು ಯಾಕ ಬೇಕು?
ಒಳಗಿನ ದೇವನ ಸಾಕಬೇಕು
ಜೋಕಿಯೊಳಗ ಹೊಸ ಶ್ಲೋಕ ಬೇಕು
ಸಂತೀ ಮಂದಿನ್ನ ನೂಕಬೇಕು ಅನುರಾಗಕ್ಕ ಷೋಕ ಬೇಕು.

ಮರಣ ಜನನ ಸಾಕು ಬೇಕು
ನವದ್ವಾರಗಳ ಹಾಕಬೇಕು
ಹೃದಯ ಹೃದಯಕ ಏಕ ಬೇಕು
ಅಂತಃಕರಣಕ ತಾಕಬೇಕು—ಸಾತ್ವಿಕ ಮರ್ಮ ಸೋಕಬೇಕು.

ತನ್ನೊಳು ತನ್ನ ನೋಡಬೇಕು
ಹರಿಹರ ಗುರುವನ್ನ ಮಾಡಬೇಕು
ಆ ಉಸಿರಿಂದಲೆ ಹಾಡಬೇಕು
ಹೊಸ ತೋಡಿಗೆ ತೋಡ ಬೇಕು ಬ್ರಹ್ಮನಾಡಿಯೊಳು ಆಡಬೇಕು.

ಅಂತರಂಗದಾ ಶೋಧ ಬೇಕು
ಪರಬ್ರಹ್ಮದಾ ಬೋಧ ಬೇಕು
ಎಂದಿಗು ಶ್ರೀಗುರುಪಾದ ಬೇಕು
ನಾದ ಬೇಕು ನಾದಬೇಕು ತುದಿಮುಟ್ಟಾನು ನಾದಬೇಕು.

ನರಸಿಂಹಗೆ ಪ್ರಲ್ಹಾದ ಬೇಕು
ಹೃದಯದೀಪ್ತಿಗಾಹ್ಲಾದ ಬೇಕು
ಸ್ವಾತಂತ್ರ್ಯವು ಅಬಾಧ ಬೇಕು
ನಾದಕ್ಕೆ ಪ್ರತಿನಾದ ಬೇಕು—ಮುಖ್ಯ ಭಕ್ತಿ ಅಗಾಧ ಬೇಕು.

ವಿದ್ಯಾರಣ್ಯರಭೇದ ಬೇಕು
ಪೂರ್ಣಪ್ರಜ್ಞರ ಭೇದ ಬೇಕು
ಅರವಿಂದರ ಆಮೋದ ಬೇಕು
ದಾಸ ಶರಣ ಸಂವಾದ ಬೇಕು—ಏಕೀಕರಣಕ್ಕ ಕಾದಬೇಕು.

ಕಗ್ಗ

ಕಟ್ಟುವರೆಲ್ಲಾ ಕವಿಗಳಲ್ಲ
ಹುಟ್ಟುವರೆಲ್ಲಾ ಭವಿಗಳಲ್ಲ
ಮುಟ್ಟದ್ದೆಲ್ಲಾ ಚಿನ್ನ ಅಂತ ತಿಳಕೋಽಬ್ಯಾಡೋಽಽ
ಭಾವಾ ಅರ್ಥಾ ಹುಡುಗಾ ನೀನು ತಿಳದಾ ನೋಡೋಽ.

ಹಸೂಕೂಡಽ ಕಟ್ಟದ್ದುಂಟು
ಬಸವಣ್ಣಽನು ಹುಟ್ಟದ್ದುಂಟು
ಮುಟ್ಟದ್ದೆಲ್ಲಾ 'ಬೂದಿ' ಮಾಡಿದಾ ಭಸ್ಮಾಸೂರಾಽಽ
ಅವನ ನೀಗಿಸಿಬಿಟ್ಟತ್ತಣ್ಣಾ ಮೋಹಿಸಿ ಅವತಾರಾ.

ದುಂದುಮಿ ದುಂದುಮಿ ಫಾಲ್ಗುನಮಾಸಾ
ಚೈತ್ರ ಮುಂದದಽ ಇದು ವಿಶ್ವಾಸಾ
ಸತೀಪತೀಯ ಸಂಸಾರಕ್ಕ ಎತ್ತಿದೆ ಆರೂತಿಽ
ಸವೀ ಮುದ್ದಿನಲಿ ಮೂಡಿಬರುವದೋ ಪ್ರೀತಿಯ ಮೂರುತಿಽ.

ಲಂಡೋಽ ಬಂಡೋಽ ಆಟವಾಡಿ
ಮೂರಾಬಟ್ಟೆ ಮನಿ ಆತಂತ
ಮೈಗೆ ಬೂದಿ ಬಳಿಮಕೊಂಡು ಏನೋಽ ಕೀರೂತಿ ?
ಕತ್ತಲಿಗವಿಯು ಸೇರಿಕೊಂಡು ಬತ್ತಲೆ ಹಾರುತೀಽ

ಕುರುಬರ ದಡ್ಡಿ ಹೊಲೇರ ಮಡ್ಡಿ
ವಡ್ಡರ ದಡ್ಡಿಗೆ ಬಲಿಯನ್ನೊಡ್ಡಿ
ಹೋತಿನ್ಯಾಂಗ ಅಡ್ಡಾದಿಡ್ಡಿ ಹಾರ್ಯಾಡಬ್ಯಾಡಾಽಽಽ
ಚೆಂದ ಮಾಡಬೇಕು ಮೂರು ದಿವಸದ ಸಂತೀನೂ ಕೂಡಾ.

ಹೆಣ್ಣಿನ ಮೋಹದ ಹದಾಽನ ಕೆಡಿಸಿ
ಮಕ್ಕಳ ಹಾದಿ ಮೊದಲಽನ ಬಿಡಿಸಿ
ಕಂತ್ರಾಟ ಸಿಸ್ನದು ಹ್ಯಾಂಗಾರೆ ನಡಿಸಿ ಕುಣೇಬ್ಯಾಡೊ ಮೂಢಾ
ಬಾಳೆ ಮಾಡ್ತಾವ ಅಕ್ಕರೆ ಬರುವಂಗ ಕಾಮಿ ಬಾವುಗ ಜೋಡಾ.

ಬಿರುಕು ಬಿರುಕಿಗೂ ಗುಬ್ಬಿಯ ಮಽನಿ
ಹಾಳು ಭಾವಿಯೊಳ್ಗ ಕಿಲಿಬಿಲಿ ಧಽನಿ
ಸ್ವರ್ಗ ದೂರ ಇಲ್ಲ ಐತಿ ಸಽನಿ ಸೂಽರಽ ಕೇಳಣ್ಣಾ
ಸಂತತಿಯಲ್ಲಿ ಶಕ್ತಿಯ ಭಕ್ತಿ ಶಿವನ ಮೇಳಣ್ಣಾ.

ಮೂರ್ತಿಯ ಮೂಗು ಮುಕ್ಕುಮಾಡಿ
ಮುದ್ದಿ ಮಾಡನ್ಯಾಡ ಗೊಂಬಿಯೊ ಖೋಡಿ
ಕಲೆಯ ಕಲಿಯೋ ಸ್ವರೂಪ ನೋಡಿ ಆಚಿಗೇಳಣ್ಣಾ
ಹುಂಬಗುತ್ತಿಗಿಲೆ ಗುಮ್ಮಿಬಿಟ್ಟರಽ ಎಲ್ಲಾನೂ ಮಣ್ಣಾಽಽ

ಬೂದಿ ಬೂದಿಯೂ ವಿಭೂತಿ ಅಲ್ಲಾ
ಹಾದಿ ಹಾದಿಗೆ ಪರ್ವತವಿಲ್ಲಾ
ಬೀದಿಬೀದಿಗೆ ಬಸವೇರಿಲ್ಲ ಕಸಬೇರೋ ಅವರುಽ
ನಾಯಿ ಪಾಡಿನ ನರಕದ ಕಿಂಡಿ ಅವ್ವರ ತವರೂರು.

ಆಡಿದ್ದೆಲ್ಲಾ ವಿನೋದವಲ್ಲಾ
ಮಾಡಿದ್ದೆಲ್ಲಾ ಸೇವೆಯಲ್ಲಾ
ಕೂಡಿದ್ದೆಲ್ಲಾ ಸಭೆಯೇ ಅಲ್ಲಾ ಸಂತಿ ಇರಬಹುದು
ಗಂಟಿಚವುಡಿಗಳು ಎಲ್ಲರಕಿಂತ ಮುಂಚೆ ಬರಬಹುದು.

ಮತಾ ಕೊಡಾಕು ಬುದ್ಧಿ ಬೇಕು
ಏನು ಮಾಡಿದರು ಶುದ್ಧಿ ಬೇಕು
ಇರತs ಇರತs ತಿದ್ದಬೇಕು ಬಾಳಿನs ರೂಪಾ
ಅಂತಃಕರಣ ಬೆಳಗsಬೇಕು ಭಾವನಾ ದೀಪಾ.

ಮೂಢತನಕ್ಕs ಮರsಗಬೇಕು
ಆತ್ಮಸಾಕ್ಷಿಲೆ ಕರsಗಬೇಕು
ಈಶ್ವರಮೂರ್ತಿಗೆ ಎರsಗಬೇಕು ಶಕ್ತನಾಗಾsಕs
ಭಕ್ತಿಯು ಇಲ್ಲ ಶಕ್ತಿಯು ಇಲ್ಲ ಇಂಥ ಬದುಕು ಯಾಕ ?

ವಿಜ್ಞಾನ ಅಂತ ನೀ ಅಜ್ಞಾನ ಬೆಳಿಸಬ್ಯಾಡ
ಜಿಜ್ಞಾಸಿ ಜೀವಂತಾ !
ಮುಕ್ತ ಮುತ್ತಿನಾ ನೀರಿನ್ಯಾಗ
ನೆಲಸ್ಯಾನ ಭಗವಂತಾ.
ಗೆಳೆತನದಿಂದ ಒಗತಾನ ಮಾಡೋ
ಅದು ಅವಗ ಸನುಮಂತಾ.
ಕಣ್ಣೀರ ಕಡಲು ಅಲಕ್ಷ್ಯ ಹಾರುವಿ
ಜಿಗಿಧಾಂಗ ಹನುಮಂತಾ.

ಯಾತಕ್ಕೇನೋ ಹಾಕಿ ಗಂಟು
ಅಂಬಿಕಾತನಯ ಹೊಡಿದನೊ ಪಂಟು
ಅಂಥವ್ರಂಥವರವೆ ಇದ್ರ್ನ ಸೀಟು ಸಾಗುತಿ ಅಂಥಾಂಗ.
ಹೇಳಾವ ಸಿಕ್ಕ್ರ ಕೇಳಾವ್ರಿಗೇನೂ ಕೊರತಿ ಇಲ್ಧಾಂಗ,
ಕೆಲಸ ಇಲ್ಲದ್ವಕ್ಕ ಹೊತ್ತು ಕಳೆಯೊ ಜನ ಜಂಗುಳಿ ಗ್ಯಾಂಗ.

ಪ್ಲೇಟಿನ ಮ್ಯಾಲೆ ಪ್ಲೇಟು ತೀರಿದರೂ
ರುಚಿಯಿಲ್ಲ ಜೀವಕ್ಕ
ಯಾವ ಹೊಸ ಪ್ಲ್ಯಾನು ಹಾಕಬೇಕಣ್ಣಾ
ನಾಳಿನ ಜಾವಕ್ಕ
ವರ್ತಮಾನದಾಗ ಸುದ್ದೀನ ಇಲ್ಲಾ
ಭವಿಷ್ಯ ತಿರುವ್ಯಾರೋ
ಸಗಟ ಮಂದಿ ಎಲ್ಲಾ ಒಗಟಿನ ಪುಟಗೊಳ
ಮುಂದ ಹರವ್ಯಾರೋ.

ದೈವಪರೀಕ್ಷಾ ಕಾಂಚಾಣ ಭಿಕ್ಷಾ
ಇದೇ ಶಿಕ್ಷಣಾ ಜಿ.ಸೇ.ಶಿಕ್ಷಾ
ಸಾಲದ್ದಕ್ಕ ಬಸ್ಸೂ ರಿಕ್ಷಾ
ಹತ್ತಿ ಓಡತಾರ.
ಸಂಸಾರದಾಗ ಇಲ್ಲದಂಥಾ ಸಿನೇಮಾ ನೋಡ್ತಾರ.
ಕೂತಕೂತಲ್ಲೆ ಮಂಗಚ್ಯಾಷ್ಟಿ ಹ್ಯಾಂಗೋ ಮಾಡ್ತಾರ.

ಕತ್ತಲೆಯೊಳಗಿನ ಆಟ ಛಂದಾ
ಸುತ್ತಲಿದ್ದವ್ರೂ ಟ್ಟೇ ಧುಂದಾ
ತಮ್ಮ ತಮ್ಮಗೆ ಗನ್ನುತ ನಾಪ್ತಾ ಹೋಗ್ತಾರ ಬರ್ತಾರs
ಕುಡೀವಿದ್ದರೂ ಎಚ್ಚರಗೊಂಡು ಯಾರ ಇರ್ತಾರs?

ಪಾಪ ಇವರ ದುಃಖ ಶಿವನೆ ಬಲ್ಲ!
'ಹರ' ಅನ್ನು 'ರಿ' ಅನ್ನು ಅನಬಹುದಲ್ಲಾ.
ಅದರ ಹೊರ್ತು ತಿ ಇನ್ನು ಮುಂದಿಲ್ಲಾ.

ಬಲ್ಲವರೆ ಎಲ್ಲಾ ಸಂಹಾರಕ್ಕs ಹೊಂಚು ಹಾಕ್ಯಾರ
ದೇವರ ಅವತಾರ ಆಗದಿದ್ದರ ಎಲ್ಲೈತಿ ಉದ್ಧಾರ?
ಶಿವಧಾರ ಜನಿವಾರ ಏನs ಹಿಡೀ ನೀ ಸೂತ್ರದ ಆಧಾರ.
ಜೀವದ ಭಕ್ತಿಲೆ ದೇವನ್ನೊಲಿಸಬೇಕು ಇದು ಜೀವನಸಾರ.
ಅಪಾರ ಸಂಸಾರದಾಗ ಸಸಾರ ಅಲ್ಲೊ ತಮ್ಮ ಭವದ ಅಂತಪಾರ!

ಅಂಬಿಕಾತನಯ ಕಟ್ಟಿದ ಕಗ್ಗಾ
ಜಗ್ಗಬ್ಯಾಡ ನೀ ಹಿಗ್ಗಾ ಮುಗ್ಗಾ
ಹುರಿ ಐತಿ ಒಳಗs ಬರಿದಲ್ಲಾ ಹಗ್ಗಾ.

ತಿರುಳು ತಿಳಿಯಬೇಕು ಜೇನ್ನೊಣ ಹೂವಿನ ರಸs ಮುತ್ತಿಧಾಂಗ
ಗಾಳಿ ಸುಳಿಯಲೀ ಹೂವಿನ ಕಂಪು ಹಗುರು ಎತ್ತಿಧಾಂಗ
ನಸುಕಿನ ಗಾಳಿ ಸೆಕ್ಕರಿ ಜಂಪಿಸ ನ್ಯೆಗೆ ಹತ್ತಿಧಾಂಗ.

ಡವಡವ ಬಡಿsತದ ಡಪ್ಪs ಕುಂತs
ಟೊಂಯಿ ಟೊಂಯಿ ತಂತಿ ಎಲ್ಲೊ ಮೂಲ್ಯಾಗs ನಿಂತ
ಹಿವ್ಯ್ಯಾಳ ಯಾಕ ಹಾಡು ಮುಗೀತs ಬಂತs
ಅನಂತ ಅನಂತ ಅನಂತ ಅಂತs
ಯಾಕೋ ಅಸರಂತ?

ಕೆಲಸಿಗರ ಹಾಡು

ಅಲಸಿಗ್ರು ನಾವಲ್ಲ ಕೆಲಸಿಗ್ರು ನಾವು ಪೂರಾ
ಬುದ್ಧಽನ ತಲೆ ನಾವೆ ಶುದ್ಧ ಮಾಡಿದ್ದೆವು
ಜ್ವಾಲಾಽಮುಖೀಯ ಒಳಗ ಏನೇನದಽ ಅಂತ
ಸಗರರ ಹಾಂಗ ನಾವು ಅಗೆದು ನೋಡಿದ್ದೆವು.

ಸುಮ್ಮಽಗ ಇರೋದ ನಮ್ಮಪ್ಪಗೂಽ ಆಗಾಕಿಲ್ಲ
    ಕಿಡಿಗೇಡಿ ಕೀರ್ತಿ ನಮ್ಮ ಅಜ್ಜಾ ಗಳಿಸಿದ್ದ.
ನಮ್ಮನೀ ಮೂಲಪುರುಷ ಬ್ರಹ್ಮಽನ ಗಡ್ಡಾ ಕೆರದು
    ಅಯ್ದರಾಗ ನಾಕು ತಲಿ ಅಂತೂ ಉಳಿಸಿದ್ದ.

ನಮ್ಮೋಣಿ ಹುಡುಗೂರು ಸುಮ್ಮಽಗ ಕೂಡಾವ್ರಲ್ಲ
    ಕ್ವಾಟಿಗೀಟಿ ಕೆಡವಿಕ್ಯಾರ ತ್ವಾಟಾ ಹೂಡ್ಯಾರು.
ಗೋದಿ ತಿಂದು ಗೊಬ್ಬರ ಮಾಡಿ ಭಾವೀ ತೋಡ್ಯಾರು
    ಸತ್ತವರ ಹಲ್ಲ ತಂದು ಹಣಿಗೀ ಮಾಡ್ಯಾರು.

    ಮನೀ ಕೆಡವಿ ಮಠಾ ಕಟ್ಟಿ
    ಮಠದಾಗ ಮೂರು ಪಕ್ಷ ಹುಟ್ಟಿ
    ಊರಾಽಗ ಗೊಂದಲಿಗರ ಸಭಾ ನಡಸಾವ್ರು.

ಮೌನದವರು ಮೂರ್ಖರವರು
ಶಾಂತಿಯವರು ಭ್ರಾಂತಿಯವರು
ಕ್ರಾಂತಿ ಅಂತ ಕಂತಿ ಕಟ್ಟಿ ಹುಚ್ಚ ಹಿಡಿಸಾವ್ರು

ಕೆಲಸವಿಲ್ಲದ ಬೇಸತ್ತೇವು
ಇರೋದ್ಯಾಕ ಹೋ ಸತ್ತೇವು
ಇಲ್ಲದಿದ್ರ ಉಳ್ಳವರನ್ನ ಕೊಂದೇವು ನಾವು.

ಬೆಳೀ ಕೂಡs ಕಸಾ–ಯಾಕ
ಎಲ್ಲಾನು ಸುಡಲೇ ಬೇಕ
ಹುಟ್ಟಿಸಿದವಗs ಬುದ್ಧಿ ಬರಲಿ ಅಂದೇವು ನಾವು.

ಕಿಡಿ–ಕಿಡಿ

‘ ಉತ್ತರ ಧ್ರುವ ಭಾರತ ಮುಖವಾಗಿ
ಜ್ಞಾನಸಾಗರವ ಕುಡಿಯಲಿದೆ.
ನರಸಿಂಹನ ಭಾರತನಖವಾಗಿ
ಹಿರಣ್ಯ ದೈತ್ಯನ ಒಡೆಯಲಿದೆ. ’

* * * *

ಸೇತುವಿನಾಚೆಗೆ ಸೀತೆಯು ನವೆವಳು
ಕಾಣಲು ಹೊರಟಿದೆ ಕಪಿಸೈನ್ಯ.
ರಾವಣನೆದುರಿಸಿ ರಾಮನು ನಿಂತನು
ದೇವನಿಗೂ ಬಂದಿದೆ ದೈನ್ಯ.

* * * *

ಏಕಬ್ರಹ್ಮವು ಅನಂತ ಮುಖದಲಿ
ಅಂತರಿಕ್ಷದಲಿ ದಿಗ್ದೇಶ.
ವ್ಯಾಪಿಸಿ ಭಾಷಾವೇಷದ್ವೇಷದಲಿ
ಬಿಡಿಸೈ ಎನುತಿದೆ ಸರ್ವೇಶ.

* * * *

ಮೈಯ ಉದ್ದಕೆ ಪ್ರಾಣದಗಲಕೆ ಮನದ ಎತ್ತರಕೆ
ನಮ್ಮ ಜಗ ಹಬ್ಬಿಹುದು ಬಯಲಲಿ ಕಾಣದೆಯು ಕೂಡ
ಇರವಿನುದ್ದಕೆ, ಅರಿವಿನಗಲಕೆ, ಸುಖದ ಎತ್ತರಕೆ—
ಪಿಂಡಗೊಂಡಿದೆ ಸೃಷ್ಟಿ ಈಶ್ವರನಿಂದ ಇದ ನೋಡ!

* * * *

ಗೌರಿಹುಣ್ಣಿವೆ ಮೆರೆವುದು
ಗಂಗೆ ಗೌರಿಯ ಬೆರೆದೊಲು
ಚಂದ್ರಶಿಲೆಯಲಿ ಶಿವಸಿಭೂತಿಯ
ಅಮೃತ ಚಿತ್ರಪ ಬರೆದೊಲು.

*　　*　　*　　*

ನನ್ನ ಯಕ್ಷಿ(X)ಗೆ
ನನ್ನ ಸಾಕ್ಷಿ(Psyche)ಗೆ
ಮುತ್ತಿನೀ ಮುಡಿಪಿಡುವೆನು.
ಚಿತ್ತ ಯಕ್ಷನು
ನಿತ್ಯ ದಕ್ಷನು
ಮತ್ತಿನ್ನೇನನು ಕೊಡುವನು?

*　　*　　*　　*

ಎತ್ತಲೂ ಮುಸುಕಿರುವ ಮುಗಿಲೆ ಓಡಿಲ್ಲಿಂದ
ಹೊರಪು ಬೇಕಾಗಿಹುದು ಹೊಲದ ಬೆಳೆಗೆ.
ಜೀವನವನೇ ಸುರಿಸಿ ಜೀವವನು ಹೀರದಿರು
ದಿವ್ಯತೆಯ ಬೆಳೆ ಬರಲಿ ಜೀವಕಳೆಗೆ.

*　　*　　*　　*

ಸಂಖ್ಯೆ ಎಂಬುವುದು ಆಕೃತಿ ಭಾಷೆ
ಆಕೃತಿ ಎಂಬುವು ಸಂಖ್ಯೆಯ ಆಸೆ.
ಸಂಖ್ಯಾಕೃತಿಯಲಿ ಗುಣ ಮೈದೋರೆ
ಕ್ರಿಯಾಶೀಲವಾಯಿತು ಆ ಹೋರೆ.

ಈ ಅರ್ಥಕ್ಕೇ ಪದ ಹೊಂದಿರಲು
ಪದಾರ್ಥ ಶಬ್ದಾರ್ಥದಿ ಬಂದಿರಲು
ನಾದಧ್ವನಿಯಲಿ ಭಾವವು ತುಂಬಿ
ಹೊಳೆವುದು ಒಳಗಣ್ಣಿಗೆ ಆ ಗೊಂಬಿ!

* * * *

ಜಡದಿಂದ ನಾದಸೋಪಾನ

ಜಡವು ಚಳಿಯಡಗಿರುವದೇ
ಚಳಿಯು ಕಾವಡಗಿರುವದೇ
ಕಾವು ಬೆಳಕಡಗಿರುವದೇ
ಬೆಳಕು ಮಿಂಚಡಗಿರುವದೇ
ಚುಂಬಕವು ನಾದನಡಗಿರುವದೇ
ನಾದ ಛಂದವಡಗಿರುವದೇ
ಛಂದ ಜೀವವಡಗಿರುವದೇ
ಜೀವ ದೇವನಡಗಿರುವದೇ ? ಅದೇಽದೇಽದೇಽ.

ಹುಚ್ಚನ ಹಾಡು

ಹುಚ್ಚನ ಮಾತ ಕೇಳಿಕೊಂಡು
ರೊಚ್ಚಿಗ್ಯಾರು ಏಳುತಾರೊ
ಚುಚ್ಚತ್ತದ ಏನೋ ಮಾತು
    ತಮ್ಮದs ತಮಗs
ಕುಚ್ಚತ್ತದ ಅವರ ಮನಸು
    ಒಳಗಿಂದೊಳಗ.

ಆದರೂನು ಹೇಳಬೇಕು
ಎದಿ ಇದ್ದವ್ರು ಕೇಳಬೇಕು
ಇಲ್‌ದಾವ್ರು ಕಾಲ್ ಕೀಳಬೇಕು
    ಹಾಟೆಲ್ ಕಡಿಗಿ
ಅಲ್ಲಿ ಐತಿ ಕಾದ ಇಟ್ಟ
    ಮಿಸಲು ಅಡಿಗಿ.

ದ್ವಾಸಿ ಜೋಡಿ ಖಾರದ ರಾಡೀ
ತುಸಾ ಉಳಸದ ಹಸಾ ಮಾಡೀ
ಮಿಸಿ ಮಾತ್ರ ಒರಸಿಕೊಂಡು
    ಹೊರಗ ಬರಬೇಕು.

ಇಲ್ಲದಿದ್ರ ಹುಚ್ಚ ಅಂತ
ತಿರಗತಿರಬೇಕು.
ಬರೋವಾಗ ಎರಡು ಪುಗ್ಗಿ
ಕದ್ದು ತರಬೇಕು.

ಬಿಚ್ಚು ಮಾತು

ಬಿಚ್ಚುಮಾತು ಆಡತೇನಂತ
ಕಚ್ಚಬೇಡಿರಿ ಹಲ್ಲು ತುಟಿ,
ಮುಚ್ಚಿ ಇಟ್ಟರ ಏನು ಬಂತು ಹುಚ್ಚಪ್ಪಗಳಿರಾ?
ಸ್ವಚ್ಛ ಮನಸು ಮಾಡಿಕೊಂಡು
ಹೆಚ್ಚಿನ ನೆಲಿ ನೋಡಿಕೊಂಡು
ನೆಚ್ಚಿ ಮೆಚ್ಚಿ ಕಟ್ಟಬೇಕು ಅಚ್ಚ ಸಂಸಾರಾ.

ಒಬ್ಬರನ ಕಂಡರ ಒಬ್ಬರ ಮನಸು
ಅಬ್ಬರ ತುಬ್ಬರ ಆಗತೈತಿ
ಇಬ್ಬರ ಕೂಡಿ ಬದುಕಿನ ಹಬ್ಬ ಮಾಡಿಲ್ಲ ಭರಪೂರಾ.
ಸಭ್ಯರಾಂಗ ಕಾಣತೇವಿ
ಮಬ್ಬಿನಾಗ ಬಾಳತೇವಿ
ಉಬ್ಬಿನ್ಯಾಗ ಸೋರಿ ಹೋತು ಒಳಗಿನ ಮಜಕೂರಾ.

ಕಣಿಕೆ

ಮುದಿಸೂಳೆಗೊಬ್ಬ ಎಳೆಸೂಳೆ ಕಟುಕಿದಳು :
ಸಾಕಪ್ಪಾ ಮುದುಕು ಒಯ್ಯಾರ !
ಮೀಸೆ ಬೋಳಿಸಿದೆ, ಜೈತಲಿಕ್ಕಿದೆನು
ನಾನೆ ನನ್ನ ಕೈಯಾರ.

* * * *

ಗಣಂಗಳಿಗೆ ಗಣಗಂಟೆ ಬೇಕು
ಗಣದಲ್ಲಿ ಬೇಕು ಗಣಿಕೆ.
ಕೊರಳ ದಾವಣಿಗೆ ಕಾಣಿಕೆ ಬೇಕು
ಕವಲೆತ್ತಿಗೂನು ಕಣಿಕೆ.

* * * *

ಕಾಮವು ಸುಟ್ಟಿತು
ಪ್ರೇಮವು ಹುಟ್ಟಿತು
ವಸಂತ ಋತು ತಲೆದೋರುವದು.
ಚೈತ್ರದ ಪ್ರೇಮದ
ಜೈತ್ರಯಾತ್ರೆಯಲಿ
ದಂಪತಿಗಳ ಎದೆ ಚಿಗುರಿಹುದು.

* * * *

ಗುಣಕೇನು ಬೆಲೆಯುಂಟು
ಹಣಕೇನು ಬೆಲೆಯುಂಟು
ಬೆಲೆಯುಂಟು ಗುಣಗ್ರಾಹಿ ಮನಕೆ.

* * *

ಆನೆ ಮದವೇರಿದರೆ ಅಂಕುಶ ಉಂಟು
ಮಾವುತ ಮದವೇರಿದರೆ ಮುಂದೇನಯ್ಯಾ ?
" ಯಾರಂಕುಶಮಿಟ್ಟೊಡಂ ನೆನೆವುದೆನ್ನ ಮನಂ
ಬನವಾಸಿ ದೇಶಮಂ. "

* * *

ಗೋಮುಖದೊಳಗಿಂದ ಯಾವ ಜಲವೂ ಹರಿದು ಬರುವುದುಂಟು;
ಬಂದದ್ದೆಲ್ಲ ತೀರ್ಥವೇ ಇರಲಾರದು.
ಪ್ರಸರಣ ಮುಖದಿಂದ ಬಿರಿದುದೆಲ್ಲ ಕೇಳಿ ಬರುವದುಂಟು;
ಬಂದದ್ದೆಲ್ಲ ಶ್ರುತಿ ಪ್ರಮಾಣವಲ್ಲ, ಆಕಾಶವಾಣಿಯಾಗದು.

ಚೇತನ

ಪುರಾತನವು ಚಿರ ನೂತನ ।
ಭಾರತಮಾತೆಯ ಚೇತನ ॥ ಪಲ್ಲ ॥

ಅಸುರರಿಂದೆ ಭೂಭಾರವಾಗೆ ಸಂ-
ಹಾರಭಾವ ಸಂಚಾರಗೊಂಡು ನವ
ಧರ್ಮವನ್ನು ಸುಸ್ಥಿರವಗೊಳಿಸೆ ಅವ-
ತಾರವಾಗಿ ಶ್ರೀರಾಮಕೃಷ್ಣರೊಲು
ಇಳೆಯೊಳಗಿಳಿದದ್ದೂ
ಭಾರತಮಾತೆಯ ಚೇತನ
ಮೂರ್ತಿಯೊ ಇದು ನಿರ್ಭೀತನ!
ಪುರಾತನವು ನವ ನೂತನ.

ಹಿಂಸೆಯಿಂದ ತತ್ತರಿಸೆ ಪ್ರಾಣ ಕಾ-
ರುಣ್ಯ ಸರ್ವ ಅನವರತ ದಾನವೆಸೆ
ವರ್ಧಮಾನ ಇನು ಮಹಾವೀರರೊಲು
ಲೋಕಾಗ್ರಕೆ ಏರಿದ್ದು ಮತ್ತೆ ತಾ
ಲೋಕವ ಗೆದ್ದದ್ದು
ಭಾರತಮಾತೆಯ ಚೇತನ
ನಿಲಿಸಿತು ಶಾಂತಿಯ ಕೇತನ
ಚಿರಂತನವು ಚಿರನೂತನ.

ಕನಸು ಕಂಡು ಕಂಗೆಟ್ಟು ಕುರುಡಿನಲೆ
ಹುರುಡಿನಿಂದ ನಡೆದಿರಲು ಜಗವು ತಾ
ಸುಪ್ತಿ ತೊರೆದ ಪ್ರಜ್ಞಪ್ತಿಯಾಗಿ ನಿಜ
ಸಾಕ್ಷಿಯಂತೆ ತಾಟಸ್ಥ್ಯದಲ್ಲಿ ಘನ
ಬುದ್ಧರೊಲೆದ್ದದ್ದು
ಭಾರತಮಾತೆಯ ಚೇತನ
ಶೂನ್ಯದಾಚೆ ಸಂಭೂತನ
ಪುರಾಣವೆಂದರು ನೂತನ.

ಸಹಸ್ರಾರವಿಂದಾಕ್ಷದಲ್ಲಿ ಪ್ರ-
ತ್ಯಕ್ಷವಿದ್ದ ವಿಜ್ಞಾನವೀಕ್ಷೆ ಪಡೆ-
ದಿದ್ದ ಈ ಕ್ಷಣಕು ಸಮಾಧಿತವು
ರೂಪುಗೊಳಿಸುತಿದೆ ಮೌನಮುದ್ರೆಯಲಿ
ಮಾಡದೆ ಇದೆ ಸದ್ದು
ಭಾರತಮಾತೆಯ ಚೇತನ
ಹೃದಯಪುರುಷ ಸಂಜಾತನ
ಪುರಾತನ! ಚಿರನೂತನ.

ಸತ್ಯಪಥವ ಹಿಡಿದಿದ್ದು ತಾನು ದೀ-
ನರಿಗ ದುಡಿದು ದುಡಿದಿದ್ದು ಕೂಡ
ತಂ[illegible]ನ್ನ [illegible] ಗುಂಡಿಗೆ ಸಿಡಿದು
ರಾಮನಾಮ ಜಪಿಸುತ್ತ ಅಹಿಂಸೆಯು
ಕರುಣೆಗೆ ಮಿಡಿದದ್ದೂ.

ಭಾರತ ಭಾಗ್ಯ ವಿಧಾತನ
ಭಾರತಮಾತೆಯ ಚೇತನ
ಭವ್ಯವು ದಿವ್ಯವು ನೂತನ.

ಶಾಸ್ತ್ರಶಸ್ತ್ರಸಂಪನ್ನ ಭುವನವಾ
ಶಿವನ ಮರೆತು ಯಮಭವನವಂತೆ ಭಣ-
ಗುಟ್ಟುತಿರಲು ಸಾರುತ್ತ ಬಂತು ತಾ
ಸಹಜೀವನ ಮಂತ್ರವ ಪಠಿಸುತ ದಾ-
ರಿದ್ರ್ಯದಿ ಮುಳುಗಿದ್ದೂ
ಭಾರತಮಾತೆಯ ಚೇತನ
ಸಾರುತಿಹುದು ಸಹಜೀವನ
ಪುರಾತನದ ನವನೂತನ.

ಹಲವು ಮಾತೆ, ಜಗನ್ಮಾತೆ

ಹಲವು ಮಾತೆ! ಜಗನ್ಮಾತೆ! ಹೃದಯುದಲ್ಲಿ ಹೊಸಹದ
ಹಾಡು ಹಲವು ಆವರೇನು ಇವರದೊಂದೆ ಧ್ರುವಪದ.
ಈಶ್ವರನೀ ಸೃಷ್ಟಿಯಲ್ಲಿ ಐಶ್ವರ್ಯದ ಭಾವನೇ
ಬರುತಲಿದೇ, ಬಂತು ಬಂತು, ಬರುವ ದಿವ್ಯ ಜೀವನೇ.

ಹಳದಿ ಕೆಂಪ ಬಿಳಿಯು ಕರಿಯು ಕುರುಕ್ಷೇತ್ರ ಹೂಡಿರೆ
ಪಡುವಲಲ್ಲಿ ಧೂಮಕೇತು ಬಾಲ ಬೀಸಿ ಮೂಡಿರೆ
ಅತಲಾಂತಿಕ ಕಡಲ ತೆರೆಗಳಲ್ಲಿ ಕುಣಿಯೆ ಲೋಭವು
ಶಾಂತ ಜಲ ಅಶಾಂತವೆನೆ ನಿರಂತರದ ಕ್ಷೋಭವು.

ಧ್ರುವದ ದಿಕ್ಕಿನಿಂದ ಬಂದಿತೊಂದು ನವನಿನಾದವು.
ವಾದವೋ ವಿವಾದವೋ ಅದರೊಳಿತ್ತು ಬೋಧವು.
ಕಲಿಯುಗದಾ ಕಲಿಯು ಕಲ್ಕಿ ಬಂಪ ಕುದುರೆ ಏರುತ.
ಕೃತಯುಗದಾ ಕೃತಕೃತ್ಯತೆ ಬೀಜಮಂತ್ರ ಸಾರುತ.

ಭದ್ರವಿರಲಿ ಪ್ರಜಾರಾಜ್ಯ, ಶುಭವಕೋ ಜಗಂಗಳ
ಶಾಂತಿ ಪುಷ್ಟಿತುಷ್ಟಿಯಿಂದ ಬರಲಿ ಜನದ ಮಂಗಳ
ಕಟ್ಟಡಕ್ಕೆ ತಳಹದಿಯೋ ಮೊದಲು ಮುಂದೆ ಅಂಗಳ
ಕಾಣಬೇಕು ಎನ್ನುವವರು ತೆರೆಯಬೇಕು ಕಂಗಳ.

ಸ್ವಾವಲಂಬಿ ನಿರಾಲಂಬಿ ಅಂತರಂಗ ಸುಂದರಾ.
ಒಡವೆಯಲ್ಲ ಬಡವೆಯಲ್ಲ ತಾಯಿ ಈ ವಸುಂಧರಾ-
ಒಡೆತನದಲಿ ಬಡತನವನೆ ಬಿತ್ತಬೇಡ ಹೊಲದಲಿ.
ಕಾರ್ಪಣ್ಯಕೆ ಎಡೆಗೊಡದಿರು ನೀನು ನಿಂತ ನೆಲದಲಿ.

ವಾಸುದೇವನನ್ನು ಹಡೆದ ವಸುದೇವನ ದೇವಕಿ
ಭಗವಂತನ ಲೀಲೆಗಾಗಿ ದೇಹವೆತ್ತ ಭಾವುಕಿ
ಸರ್ವರಲ್ಲಿ ಒರ್ವನಾದ ದೇವನನ್ನು ಕಂಡಳು
ಅವಕಾಗಿಯೆ ಅವಳ ಭವಣೆ, ಬಹಳ ಬೇನೆ ಉಂಡಳು.

ಹೋಮ ಸಾಕು ಭೂಮ ಬೇಕು ಭೂದೇವಿಯ ಬೇಡಿಕೆ.
ದುಃಖವಾದ ಶೂನ್ಯವಾದ ವೈ ಉಂಡಿದೆ ವಾಡಿಕೆ.
ಉತ್ತಿ ಬಿತ್ತಬೇಕು ತಾ ಸಮೃದ್ಧಿಯಲಿ ಭೂಮಿಯು
ಎಂಟು ಎದೆಯ ಬಂಟ ನಮ್ಮ ಹೃದಯನಿಹಿತ ಸ್ವಾಮಿಯು.

ಕಣ್ಣು ತುಂಬು ಎದೆಯ ತುಂಬು ಹೊಟ್ಟೆ ತುಂಬು ಬಾಳುವೆ.
ಓ ಭಾರತ ಭಟ್ಟಾರಿಕೆ ಭೃತ್ಯಳಾಗಿ ಆಳುವೆ.
ಬ್ರಹ್ಮಕರ್ಮದೊಂದು ಭಾರ ಭಾರತಿಯೇ ತಾಳುವೆ.
ಆಡದೆಯೇ ಮಾಡಿ ಕಾರ್ಯ ಆಮೇಲೆಯೆ ಹೇಳುವೆ.

ಅಜ್ಞ ಪಿಂಡ ಭಸ್ಮವಾಯ್ತು ಪುರುಷಯಜ್ಞವಾಗಿದೆ.
ಬೃಹತ್ ಭೂಮಿ ಬೃಹತ್ ಸ್ವಾಮಿ ಜೀವ ಸಂಜ್ಞವಾಗಿದೆ.
ಸಮಸಮಾನ ಭಾವ ಬುದ್ಧಿ ಸಮಸಮಾನ ಶುದ್ಧಿಯು
ಇದೇ ಋದ್ಧಿ ಇದೇ ವೃದ್ಧಿ ಇದೆ ಸ್ವತಂತ್ರ ಸಿದ್ಧಿಯು.

ಮಾನವ್ಯದ ನವಧರ್ಮಕೆ ಭಾರತವಿದೆ ದೀಕ್ಷಿತ.
ಮಹಾಪುರುಷ ಯಜ್ಞದಿಂದ ಯುಗಯುಗದಲಿ ರಕ್ಷಿತ.
ಪಂಚಪ್ರಾಣ ಪಂಚ ಶೀಲ ಅಪರ ಶೀಲ ಧರ್ಮವು.
ಸಜ್ಞ ವಿಜ್ಞ ಭಕ್ತಿಯುಕ್ತ ಜೀವನವೇ ಕರ್ಮವು.

ದೇವಸಹೋದರನು ಎನಿಸಿ ಹಿಂದೆ ಇದ್ದ ದಾನವ
ಪಶುವಿನಣ್ಣನೆಂದು ಮುಂದೆ ಬೆಳೆದು ಬಂದ ಮಾನವ.
ಯಾವ ರಾಗ ಯಾವ ತಾಳ ಯಾವ ಧಾಟಿ ಹಾಡಿಗೆ!
ಕೊರಳ ಕಟ್ಟಬೇಡ ನೊಗಕೆ ಯಾವದೊ ಹೊಸ ಗಾಡಿಗೆ.

ಎತ್ತಿನಂತೆ ಎತ್ತೊ ಎಳೆಯಬೇಡ ಹುಸಿಯ ಬಾಡಿಗೆ.
ಧಿಗ್ಗನೆಂದು ನುಗ್ಗಬೇಡ ಕಣ್ಣು ಕಂಡ ಕಾಡಿಗೆ.
ಆಯುದೇವ ವಾಯುದೇವ ಬೀಸು ಊದು ಕಾಳಿಯ.
ಊರ್ಧ್ವಮುಖದ ಅಗ್ನಿಗಾಗಿ ತೀಡು ನಿನ್ನ ಗಾಳಿಯ.

ಯಂತ್ರ ಒಡ್ಡಿ, ತಂತ್ರ ಮಾಡಿ, ಮಹಾಮಂತ್ರ ಏತಕೆ?
ಬಿಟ್ಟಿ ಹಿಡಿಯಬೇಡ ಜನರ, ಹೊಟ್ಟೆಯ ಹೊಸಜೀತಕೆ.
ಸತ್ಯದೊಂದು ಹೆಸರಿನಲ್ಲಿ ಬಲಿಸದಿರು ದುರಾಗ್ರಹ.
ಸ್ವತಂತ್ರತೆಯ ಓಟದಲ್ಲು ಇರಲಿ ಆತ್ಮನಿಗ್ರಹ.

ವಿಷಕೆ ಬಾಯಿ ಹಾಕಬೇಡ ಅಮೃತ ನಿನ್ನ ಜೀವನ.
ಆತ್ಮಶ್ರುತಿ ಧ್ವನಿಸುತಿಹುದು 'ನಿನ್ನ ಹುಟ್ಟು ಶ್ರಾವಣ'.
ಮತ್ತೆ ಬಂತು ಮರಳಿ ಮಾಗಿ ಉದುರಿಸು ಹಳೆ ಎಲೆಗಳಾ.
ಆ ಯೋಜನೆ ಈ ಯೋಜನೆ ಹರಿದು ಹಾಕು ಬಲೆಗಳ.

ಸೂರ್ಯದೇವ, ಕೊಟ್ಟು ಕಾವ ಜ್ಞಾನನೇತ್ರ ಕರುಣಿಸು.
ಸತ್ಯದೃಷ್ಟಿ ಅದೇ ಸೃಷ್ಟಿ ಎನುವ ಭಾವ ಅರುಣಿಸು.
ನೈರ್ಮಲ್ಯಕೆ ನೋಂತವರಲಿ ಗುಡುಗಿ ಮಿಂಚಿ ವರ್ಷಿಸು.
ಮಲಮಲನೇ ಮಲರುತಿರುವ ಜೀವ ಕಂಡು ಹರ್ಷಿಸು.

ನಶ್ವರವಜ್ಞಾನ ತೊಳೆಯೆ ಐಶ್ವರ್ಯದ ಬಿಡುಗಡೆ
ವೈಯಕ್ತಿಕ ವಿರಸ ಕಳೆಯೆ ಸಾರ್ವಭೌಮ ರಸದೆಡೆ
ವಿಶ್ವ ವಿಷಮ ರಚನೆ ಸಾಕು ಸಮಕ್ರಮ ಸಮಾಜವು
ಸಮಂಜಸದ ಬಾಳ ಬದುಕಿ ಕಟ್ಟಲದರ ತಾಜವು.

ಹಾರೈಕೆ

ಊರ್ಧ್ವ ಗತಿಯಲೇ ಮನೋರಥವು ಸಹ ಅಪಾರ್ಥವೆನಿಸದೆ ನೂಗಲಿ
ಹಿರಣ್ಯಗರ್ಭನ ತೇಜಃಪುಂಜವು ಸುಂಟುವ್ವ ತಾನೆ ಕೂಗಲಿ
ನವಿರುಗಣ್ಣಿನಲಿ ನವಿಲು ಬಣ್ಣದಲಿ ಹೆಣ್ಣಿನ ನಯ ತಲೆದೂಗಲಿ
ಪೂತು ಕಾತು ಪೊಸ ಪಾಡಿಗಾಗಿ ಬಾಳ್ ತೊಂಗಲು ಬಿಂಕದಿ ಬಾಗಲಿ
ಕಾಡಿನಲ್ಲಿ ನಡುನಾಡು ನೆಲೆತು ಕೋಲ್ ಹಾಡು ಹಳ್ಳಿಗೂ ಸಾಗಲಿ
ಶೃಂಗೇರಿಯ ಶಾರದೆಯ ಕರುಣೆಯಲಿ ಕನ್ನಡಕ್ಕೆ ಜಯವಾಗಲಿ.

ತಂಬೆಳಕಾಗಲಿ ನಂಜೆಳಕೆನುವೊಲು ಹೊಂಬೆಳಕೇ ಹೊರಸೂಸಲಿ
ಸ್ವಪ್ನತರಂಗದ ಸಪ್ತರಂಗವಲಿ ಬಾಳಿನ ಹೊಸಬಗೆ ಹಾಸಲಿ
ಕೃಪಾಕಟಾಕ್ಷದ ಅಪಾಂಗವೀಕ್ಷಣ ಕ್ಷಣ–ಕಣ–ಗಣಗಳ ಮೀಸಲಿ
ಗಾಳಿಯಲ್ಲಿ ನವಕಾಳಿಯಾಗಿ ಜಲ ಕೇಳಿಯೆ ಎನೆ ತಾನೀಸಲಿ.
ಸೋಮಧೂತರಸ ವಾಯುದೂತನಲೆ ವೈಶ್ವಾನರನಲಿ ಬೀಸಲಿ.

ಸಂಬೆಳಕೊಳು ನಿಂಜೆಳಕೇ ಕೂಡಲಿ ಈಪ್ರಜ್ಞೆಯು ಮೂಡಲಿ
ಎದೆಯ ಒಲೆಯ ಉರಿ ಹೊಂಗೇದಿಗೆಯೊಲು ಪೊಗೆಹಾಸನು ಹೊರದೂಡಲಿ
ಸುಪ್ತ ಸರಸ್ವತಿ ಯಕ್ಷಿ ಹೈಮವತಿ ಲಕ್ಷ್ಮ್ಯ ಲಕ್ಷ್ಮಿ ಒಳಗೂಡಲಿ.
ವಸುಂಧರೆಯ ಸುತ ವಾಸುದೇವ ತನ್ನಾಟಕೆ ಅಟ್ಟವ ಹೂಡಲಿ.
ಕಾಂಬ ಇರವು ಓ ಸಾಂಬ ಸದಾಶಿವ ಕಾಣ್ಕೆಯ ಅರಿವನು ಊಡಲಿ.

ಉತ್ತರದ ಗಾಳಿ

ಗಾಳಿ ಬೀಸಿತೊ, ಗಾಳಿ ಬೀಸಿತು
    ಹೂವು ಹಾಸಿಗೆ ಹಾಸಿತು.
ಕನ್ನಡದ ಈ ತುದಿಯು ತಡಸಲ-
    ದಿಂದ ಜೋಗದ ಮಿಂಚಿಗೂ
    ಬೆಳೆವ ಮೈಸೂರಂಚಿಗೂ
    ಇದುವು ನಡುಗಿಸಲರಿಯದೋ
    ಇದುವು ಉಡುಗಿಸಿ ಮೆರೆಯದೋ
ತೊರೆಯ ಬಿಡುವ್ರೋಲು ಹರಿವರೂ ಸೈ
    ಯಾರನೂ ತಾ ತೊರೆಯದೋ.

ಗಾಳಿ ಬೀಸಿತೊ, ಗಾಳಿ ಬೀಸಿತು
    ಹೂವು ಹಾಸಿಗೆ ಹಾಸಿತು.
ಚಿಕ್ಕ ಮನಗಳ ನಕ್ಕು ನಲಿಸುತ
    ಚೊಕ್ಕ ಮನಗಳ ಮಾಡುತ
ಭಾಗ್ಯ ಬಂದಿದೆ ಬಾಗಿಲಡವರ
    ಎಂದು ಹರಿಕೆಯ ಹಾಡುತ
ಗಾಳಿ ಬೀಸಿತೊ, ಗಾಳಿ ಬೀಸಿತು.
    ಹೂವು ಹಾಸಿಗೆ ಹಾಸಿತು.
    ಹೊಲೆ ಮನವು ಕಡು ಹೇಸಿತು
    ಹೊಂಗೆ ತೊಂಗಿಲ ತೂಗಿತು
    ಮಾವು ಬೇವೂ ಬಾಗಿತು.

ದಿಲ್ಲಿಯಿಂದಲು ಇಲ್ಲಿಗಿಳಿದಿತು
ಎಲ್ಲೆಡೆಗು ಸುಳಿದಾಡಿತು.
ತನ್ನ ಸಂಜೀವಸದ ದೃಷ್ಟಿಯು
ಬೀರಿ ಸುತ್ತಲು ನೋಡಿತು.

ಮಿಂಚಿ ಬಂದರು ಮಿಂಚಿ ಹೋದರು
ಸಂಚಿತದಿ ನೆಲೆ ನಿಂತಿದೆ.
ಬಾಳೆಯೆನ್ನದೆ ನಾಳೆಯೆನ್ನದೆ
ಈಗಳೇ ಬರುವಂತಿದೆ.

ಉತ್ತರೋತ್ತರವಾಗಲೆನ್ನುವ
ಧ್ರುವದ ದಿಕ್ಕಿನ ಗಾಳಿಯೋ
ದೇವನೂದಿದ ಕಾಳಿಯು.

ದಿವ್ಯ–ಧ್ವನಿ

ಸುರತ್ನ ಸಿಂಹಾಸನದ ದಿವ್ಯಧ್ವನಿ
ಕೂಗಿತು ಕಹಳೆಯು ನಿರರ್ಗಳ :
　　ಕನ್ನಡ ಮೈಮೆಗೆ ಮೈ ಮೈಸೂರು
　　ಮಹಾಮನಸ್ಸಿನ ಮಹಿಮೆ ಗಡ.
　　ಈ ತುಂಬಿನಲೇ ಕೂಡಲುಬಹುದು
　　ಉಳಿದ ಕನ್ನಡದ ಚತುರ್ದಳ.

　　ಕುಡುಗರು ತುಳುವರು ತೊಡವರು ಬಡಗರು
　　ತೆಂಕಣ ಕೊಂಕಣ ಕಡಲವರ
　　ಭೂತಳ ಕುಂತಳ ಭಾಗಾಮಂಡಲ
　　ಪಶ್ಚಿಮ ವಾಹಿಸಿ ಪುರಃಸರ.
　　　　ಪುಂಡರೀಕದಲಿ ವಿಠ್ಠಲನೆದ್ದ
　　　　ಕಣ್ ನಡೆಯಲಿ ಕನ್ನಡ ಗೆದ್ದ.

　　ತಿರುಪತಿ ಕರೆವುದು ಶ್ರೀಶೈಲವನಗೊ
　　ಉಡುಪಿಗೆ ಕಿವಿಗೊಡೆ ಗೋಕರ್ಣ.
　　ಶೃಂಗೇರಿಯ ಅದ್ವೈತ ಶೃಂಗದಲಿ
　　ಧನಿಗೊಡುತಿದೆ ಪಂಚೀಕರಣ.

ಅಶೋಕಚಕ್ರದ ತ್ರೈವರ್ಣ
ಹಂಪೆಯ ಕೊಂಪೆಯ ನೋಂಪಿಯು ಫಲಿಸಲಿ
ಗುಡಿಗಟ್ಟಲಿ ಕನ್ನಡ ಹರಣ
ತಪ್ಪಲಿ ದೈನಂದಿನ ಮರಣ
ಕೂಡಲಿ ಜಿನ ಹರಿ ಹರ ಶರಣ.
ನವಧರ್ಮದ ಐಕ್ಯಾವರಣ.

ಕನ್ನಡದ ಪಾವನಪರಂಪರೆ

ಕಥಕ : ಕಡಲ ಮೇಲೆದ್ದಿತ್ತು ಕೂರ್ಮದಂತೀ ನೆಲವು
ಗೊಂಡವನ ಪ್ರಾಚೀನ ಭೂಮಿಭಾಗ.
ಧಾರ್ವಾಡ ಕಟಕಬಂಡೆಯ ಮೇಲೆ ಹಬ್ಬಿತ್ತು
ವನವಾಸಿ ಕುಂತಳದ ಭವ್ಯ ಜಾಗ.

ಹಿಂಮಲೆ ಹಿಮಾಲಯವು ನೆಲೆಯೆತ್ತಿ ನಿಂತಾಗ
ಅತ್ತ ಹರಿದವು ಪುಣ್ಯ ಯಮುನೆ ಗಂಗೆ;
ವಿಂಧ್ಯಕ್ಕೆ ಕೆಳಕಲಲಿ ಘಟ್ಟಗಳ ತೊಟ್ಟಿಲಲಿ
ಉರುಳಿದವು ಕಾವೇರಿ ಗೋದೆ ತುಂಗೆ.

ಹೆದ್ದೊರೆಯು ಕೃಷ್ಣೆ, ಅವಳಾ ಎದೆಯ ಹರವಿನಲಿ
ಎಡಬಲಕೆ ತೆರೆದಿತ್ತು ಬಯಲಸೀಮೆ.
ಮಲೆನಾಡು ಮುಂದೆ ಸಾಗರಬಿದ್ದು ಅಪ್ಪುವದು,
ತುಳು ಕೊಂಕ ಮತ್ತೆ ಗೋಕರ್ಣ ಗೋವೆ.

ತೆಂಕಣಕೆ ಕೇರಳವು ದ್ರಾವಿಡವು ಮೂಡಲಕೆ
ಆಂಧ್ರ ಬಡಗಣಕೆ ಮಹಾರಾಷ್ಟ್ರ ನಾಡು.
ಈ ಚತುರ್ವರ್ಣ ಮಧ್ಯಪೀಠ ಕರ್ನಾಟಕವು
ಧರ್ಮಗುಂಜಾರವದ ಕವಿಯ ಬೀಡು.

ಕಾವೇರಿ ತೀರದಲಿ ಪ್ರಳಯವೆರಗಿರಲಾಗಿ
ಸತ್ಯವ್ರತನಾದ ಮನು ಬದುಕಿಕೊಂಡ.
ಈ ಸ್ವಯಂಭೂಮಿಯಲ್ಲಿ ಧರ್ಮಾವತಾರಗಳು
ಉದಿಸಿರಲು ಕಟ್ಟಿತ್ತು ಭಕ್ತಿಪಿಂಡ.

“ ಣಮೋ ಸಿದ್ಧಾಣಂ ಣಮೋ ಅರಿಹಂತಾಣಂ
ಣಮೋ ಆಚಾರ್ಯಾಣಂ ಣಮೋ ಉಪಯಾಣಂ
ಣಮೋ ಸಬ್ಬ ಸಾಧೂಣಾಂ. ”

ಕೇಳಿದಿರೊ ದಿವ್ಯಧ್ವನಿ ಜೀವದ ಣಮೋಕಾರ
ಕನ್ನಡದ ಟಂಕಾರ : ಧರ್ಮಸಾರ.
ತ್ಯಾಗಭೋಗದ ಯೋಗ ಸಾಕಾರ ಪಡೆಯುತಿರೆ
ಗುರಿಯತ್ತ ನಡೆದ ಕರ್ಣಾಟವೀರ !

ಹಾಡು : “ಏಳೂ ಕನ್ನಡ ಕಂದಾ, ನೀನಾಡಿದ್ದೇ ಚೆಂದ,
ಮಾಡಿದ್ದೆಲ್ಲಾ ಮಾಟಾ, ಇನ್ನೇನು ?
ಕಟ್ಟಿದ್ದೆಲ್ಲಾ ಕವನಾ, ಇನ್ನೇನು ?

ಬಯಲೆಲ್ಲಾ ಬಾಯಾಗಿ ತಾಯ್ನುಡೀ ನುಡಿದಾಗ
ರಸಬಾಳೆ ರಸಗಬ್ಬು ತೆಂಗೇನು ?
ಸಾವಿರದ ಹೊರಸ ಸವಿಜೇನು. ”

ಎಕ್ಕಲದೇವಿ ! ಜೋಗಮಾಯಿ !
"ಉಧೋ ! ಉಧೋ ! ಉಧೋ !"
"ಏಳ್ಕೋಟಿ ಏಳ್ಕೋಟಿ ಏಳ್ಕೋಟಿ"
ಜಗದಂಬೆ ನಿನ್ನಾಲ್ದಕ್ಕ ಉಧೋ ! ಉಧೋ ! ಉಧೋ !
ಎಲ್ಲಮ್ಮ ನಿನ್ನಾಲ್ದಕ್ಕ ಉಧೋ ! ಉಧೋ ! ಉಧೋ !

ಏಳು ಮಕ್ಕಳ ತಾಯಿ ಎಕ್ಕಲೆಯು ನೆಲೆ ಮಾಡಿ
ಎಬ್ಬಿಸಿದಳೆಲ್ಲಮ್ಮ ಎಲ್ಲರನ್ನು.
ಜೀವನದ ದ್ವಂದ್ವಕ್ಕೆ ಹುರಿದುಂಬಿಸಿದಳು ತಾನು
ಗೆಲ್ಲಲಣಿ ಮಾಡಿದಳು ಎಲ್ಲರನ್ನು.

ಮೈಸೂರು ಚಾಮುಂಡಿ, ಕೊಲ್ಲೂರು ಮೂಕಾಂಬೆ,
ಬನವಾಸಿ ಗೋಕರ್ಣ ಭದ್ರಕಾಳಿ.
ಬಾದಾಮಿ ಬನಶಂಕ್ರಿ ಗುಡ್ಡದಾ ಎಲ್ಲಮ್ಮ
ಎಲ್ಲರೂ ಹರಸುವರು 'ತಾಳಿ ಬಾಳಿ.'

ಬಾಳು ಗೊಂದಲ ನೃತ್ಯ, ಉಸಿರುಸಿರು ಕೃತಕೃತ್ಯೆ
ಕನ್ನಡದ ಮನೆ ಮಾಣಿ ಪಾತ್ರಭೃತ್ಯ.
ಗುಡ್ಡ ಮಲೆತಲಗಳಲಿ ಗುಡಿಗಟ್ಟಿ ನಿಂತಿಹುದು
ಅವತಾರದುದ್ಧಾರದೇಕಕೃತ್ಯ.

'ಕೇಳಿ ನುಡಿ', 'ಕಂಡು ನಡೆ'

೧

ಕೇಳಿ ನುಡಿ ಕಂಡು ನಡೆ
ಓ ಕನ್ನಡ ಕಂದಾ.
ಮಿಡಿತದಲ್ಲಿ ಆಟವಿರಲಿ
ನುಡಿತದಲ್ಲಿ ಮಾಟವಿರಲಿ
ನಡಿಗೆಯಲ್ಲಿ ನೃತ್ಯವು
ಅದೆ ಅದ್ಭುತ ಕೃತ್ಯವು.

ನುಡಿಯು ಕಣಿಯು ಕೇಳಿಕೆ
ನಡೆಯು ಕಂಡ ಕಾಣಿಕೆ
ಬಾಳು ಚೆಂದ ಒಲವಿನಿಂದ
ಬದುಕು ಬೆಳೆಯದಿದ್ದರೆ....
ಬೇಕೆ ರಣ? ಅದೇ ಮರಣ!
ಇದುವು ತಿಳಿಯದಿದ್ದರೆ.

ಬೆಳಕು ಮಂಕು, ನಿದ್ದೆ ಸೋಂಕು
ಹಾಳು ಕನಸು, ಜೀವನೇ!
ಹಾಲು ಇಲ್ಲ ಬಟ್ಟಲಿಲ್ಲ
ಗುಟುಕರಿಸುವ ಭಾವನೆ.

ಸ್ನೇಹ ಹೀರಿ ಮಕ್ಳ ಹಿಡಿದ
ಬತ್ತಿ ಸುಟ್ಟ ದೀಪವು
ಸೀರಸುಂಡು ಮಾಳಿಗರಿವ
ಕಾಡು ಮೃತ್ಯುದ್ವೀಪವು.

ಭರತಖಂಡ ಇದು ಅಖಂಡ
ಹತ್ತು ದೇಶ ಸೇರಿಕೆ.
ಸಾಕು ತ್ವೇಷ, ಬೇಡ ದ್ವೇಷ,
ಬೇರೆ ಭಾಷೆ, ಬೇರೆ ವೇಷ
ಹೃದಯದೊಂದೆ ಹಾರಿಕೆ
ಭಾಗ್ಯದಿಳಿವು ಏರಿಕೆ.

ನಾಲ್ಕು ನಾಡ ನಡುವಿನಲ್ಲಿ
ಕನ್ನಡ ತಲೆಯೆತ್ತಿರೆ.
ಚತುರ್ಮುಖ ಪ್ರಪಂಚವೊಂದು
ತನ್ನ ಬೀಜ ಬಿತ್ತಿರೆ.

ದಾಸ–ರಾಗ–ಕಾಲದಲ್ಲಿ
ಶರಣ–ವಚನ–ತಾಲದಲ್ಲಿ
ತೀರ್ಥಂಕರ ಉದಯವು
ಅದೆ ಕನ್ನಡ ಹೃದಯವು.

ದ್ವೈತದ ಅದ್ವೈತವು
ಅ। ನೇಕದಲ್ಲಿ ಐಕ್ಯವು
ಬಾಳ ಸುಳಿಯ ಸೌಖ್ಯವು
ಅ। ಭೇದದೊಳಗೆ ಭೇದವು
ಇದೆ ನವಸಂವೇದವು
ವಿ। ಶೇಷ ಬೆಳೆವ ಶೇಷವು
ಇಲ್ಲ ಇದಕೆ ನಾಶವು.

ಗುಡ್ಡ ಕೊರೆದು ಗುಡಿಯ ಕಟ್ಟಿ
ತಂತಿ ಮಿಡಿದು ಒಳವ ಮುಟ್ಟಿ
ನುಡಿಯ ಧೂಪ ಹಾಕಿದೆ
ಈಗ ಅದೇ ಬೇಕಿದೆ.

ಹಾಡು ಬರಲಿ ರೆಕ್ಕೆಯೊಡೆದು
ರಾಗ ಬರಲಿ ಶ್ರುತಿಯ ಹಿಡಿದು
ಭಾವ ಬರಲಿ ದೇಹ ಪಡೆದು
ದಿವ್ಯವಿರಲಿ ಜೀವನ
ಅರಳುತಿರಲಿ ಜನಮನ.

ಕೇಳಿ ನುಡಿ ಶ್ರುತಿಯ ಹಿಡಿ
ಕಂಡು ನಡೆ ದರ್ಶನದೆಡೆ
ಶ್ರುತಿ ದರ್ಶನ ಸಂಮತ
ಅದು ಕನ್ನಡ ಒಂಮತ.

ಕೇಳಿದಂತೆ ನುಡಿಯ ಬೇಡ
ಕಂಡ ಹಾಗೆ ನಡೆಯಬೇಡ
ಓ ಕನ್ನಡಪಕ್ಕಿ!
ಪಂಜರದೊಳು ಸಿಕ್ಕೀ!

ಉದಯಿಸಿಹುದು ಲೋಕರಾಜ್ಯ
ಭಾಗವಿದ್ದು ಅ-ವಿಭಾಜ್ಯ.
ಆದರೋಳಿಹುದು ರಾಷ್ಟ್ರಸತ್ತ್ವ.
ಮಾನವೈಕ್ಯದೊಂದು ತತ್ತ್ವ.

ಇಲ್ಲಿ ಸಲ್ಲಬೇಕು ಮೊದಲು
ಅಲ್ಲಿ ಸಲ್ಲತಕ್ಕದು.
ಭಾವಶುದ್ಧವಿರದ ಬಾಳು
ಮಾತಿನಿಂದ ಸಿಕ್ಕದು.

ಹೃದಯಸಿದ್ಧವಿರದ ಬದುಕು
ಬರಿ ನಡತೆಗೆ ದಕ್ಕದು.
ಕಣ್ಗಾಣದ ನಡೆ ಕುರುಡು
ಕಿವಿ ಹಿಡಿಸದ ನುಡಿ ಬರಡು
ಇದೆ ಕನ್ನಡ ಧ್ರುವಪದ,
ಭಾರತದೀ ಜನಪದ.

ಕೇಳಿ ನುಡಿ, ಕಂಡು ನಡೆ,
ಓ ಕನ್ನಡ ಕಂದಾ!
ಇದೆ ಬಾಳಿನ ಅಂದಾ.

ಮ । ರಾಟರಾಕೆ ಬಡಗಣ
ತೆಲುಗರೀಕೆ ಪಡುವಣ
ಕೇರಳೆ ಇರೆ ಮೂಡಣ
ತಮಿಳರಾಕೆ ತೆಂಕಣ
ಕೊಡಗು ತುಳುವು ಕೊಂಕಣ
ಕನ್ನಡ ಸಿರಿ ಕಂಕಣ.

ಎಲ್ಲೆ ಎಲ್ಲ ಆದಾತನಿಗೆ

ಮೈಸೂರಿನ ರಥ ಹೂಡಿದೆ ಸಾರಥಿ
ಕನ್ನಡದಾರತಿ ಇಗೊ ನಿನಗೆ
ಕಾರ್ತಿಕ ಬರಲಿದೆ ಮನೆಮನೆಗೆ
ಕನ್ನಡರಥಿ ತಾ ಮುನ್ನಡೆ ಧಿಟ್ಟನು
ವೈಶ್ವಾನರನಾ ಕರೆಗೋಗೊಟ್ಟನು
ತೇಜಃಪುಂಜವ ಅರ್ಪಣವಿಟ್ಟನು.

ನಾಡಿನ ವಿಶ್ವಭ್ರಾತನಿಗೆ
ಜೀವನಾಡಿ ಮಿಡಿದಾತನಿಗೆ
ನಾಳಿನ ನಾಳಿನ ತ್ರಾತನಿಗೆ
ಆತನು ಈತನು ಸೋತೆನು ಎನದೇ
ಎಲ್ಲೆ ಎಲ್ಲ ಆದಾತನಿಗೆ.

ಸತ್ ಚಿತ್ ಆನಂದದ ಇಗೊ ಕುಂದದ
ಒಳಹೊರ ಹೊಂದಿದ ಆರತಿಯು
ಇವಳೇ ಕನ್ನಡ ಭಾರತಿಯು

ವಿಶ್ವರತಿಯ ಶೃಂಗಾರವಲ್ಲಿ
ಅಗೊ, ದೇವದೇವಿಯರ ಪ್ರಣಯವಲ್ಲಿ
ನುಡಿನುಡಿಸು ನುಡಿಸುತಿದೆ ಪ್ರಣವದಲ್ಲಿ
ಆ ಹೊಸ ಹೊಸ ಕನ್ನಡದಾರತಿಯು
ನವೋ ನವಶ್ರೀ ಭಾರತಿಯು.

ಸಂದೇಹದ ಶೃಂಖಲೆಗಳ ಕಡಿದು
ವಿದೇಹಿಯೆನುವೊಲು ದೇಹವ ಹಿಡಿದು
ದೇಹಿ ಎನದೆ ದಾಸೋಹಂ ನುಡಿದು
ಋತಚಿತ್ತದ ದಿನನಿತ್ಯದ ಗುರುಸತ್ಯದ ಬಾಳುವೆ
ಪ್ರತಿಕ್ಷಣದಲಿ ರಕ್ಷಣೆಯಲಿ ಈ ಕ್ಷಣಕೂ—ಆಳುವೆ.
ಜಗದ್ಭಾರ ಆತ್ಮವೀರ ಧೀರನಂತೆ ತಾಳುವೆ.

ಕೇಳಿಕೆಯಲಿ ನುಡಿಯುತಿರು
ಕಾಣಿಕೆಯಲಿ ನಡಿಯುತಿರು
ಪಡೆದದ್ದಕೆ ದುಡಿಯುತಿರು
ಪೂರ್ಣಬ್ರಹ್ಮ ಯುಕ್ತಿಯಲ್ಲಿ
ಸತ್‌ಪ್ರಪಂಚ ಶುಕ್ತಿಯಲ್ಲಿ
ಜಿನಮುಕ್ತಿಯ, ಶಿವಶಕ್ತಿಯ, ಹರಿಭಕ್ತಿಯ ಆರತಿ
ಈ ಕನ್ನಡ ಭಾರತಿ.

ವಿಶ್ವಂಭರಶ್ರುತಿ ಹಿಡಿ ಮಾರುತಿಯಲು ವಿರಾಟ ಮೂರುತಿ ಮೆರೆಯುತಿರೆ
ಸೊಲಗನು ಕೊಡಗನು ತುಳುವನು ಕೊಂಕಣ
ಮೂಡಲ ಪಡುವಲ ಬಡಗಣ ತೆಂಕಣ

ಕಳನೂ ಕುಳನೂ ಕನ್ನಡ ಕೊಂಕಣ
ಕಟ್ಟಿಲು ನೆರೆಯುತಿರೆ
ಅನಂತ ಸ್ವರಗಳು ಬೆರೆಯುತಿರೆ
ದಿವ್ಯ ಕರ್ಮ ರೂಪಿಸು
ದಿವ್ಯವ ಆಲಾಪಿಸು.

ಮಾನವತೆಯ ನವನರತೆಯ
ಈ ಕವಿತೆಯ ಆರತಿ
ಸಿರಿಗನ್ನಡ ಭಾರತಿ.

ರೂವಾರಿ

ಮೈಕಟ್ಟು, ಮನಕಟ್ಟು, ಮಾತು ಮಾತಿನ ಕಟ್ಟು,
ಮೇಲೆ ಭಾವದ ಪೂರ್ಣ ಕಳಶವಿಟ್ಟು,
ವಾಸ್ತು ಸೌಂದರ್ಯದಲೆ ಚಿತ್ರ ಸಂಸಾರವನು
ರಚಿಸಿರುವೆ ರೂವಾರಿ ಪಂಥ ತೊಟ್ಟು.

ತೀರ್ಥಕ್ಕೆ ಎಡೆಗೊಟ್ಟು, ಬೆಳೆಗೆ ನೆಲ–ಹೊಲ ಬಿಟ್ಟು,
ನೆಲೆವೀಡುಗಳಿಗೆ ತೆರೆವಿಂಬು ಇಟ್ಟು,
ಮಲೆ ಘಟ್ಟ ಬೆಟ್ಟಗಳು ಪೂರ್ವದ ಅಪೂರ್ವತೆಯು
ಬೆಳೆಯೆ ತವನಿಧಿಯಾಗಿ ತೊರೆಯ ಬಿಟ್ಟು.

ನೆನವು

ಆ ಊರು ಈ ಊರು ಯಾ ಊರು ಆದರೂ
ತವರೂರು ತಮತಮಗೆ ತಾನೆ ಚಂದ.
ಕಟ್ಟಿ ಕೂಡುವದಲ್ಲ ಬಿಚ್ಚಿ ಬಿಡುವದು ಅಲ್ಲ
ಹೊಕ್ಕಳಿನ ಹುರಿಯಂಥ ಭಾವಬಂಧ.

ಸೂತ್ರ ಸರಿಯಾಗಿರಲು ಪಾತ್ರವಾಡುವದು ಪಟ
ನೇತ್ರದಲ್ಲಿರಳುವದು ನವಿಲುಗರಿಯು
ಧಾರವಾಡದ ಮಾತು ಬಾಸುಲಿಯಲಾಡಿದರೆ
ಎದೆಗೂಡ ಕುಕಿಲಿಗದು ಸುಗ್ಗಿ ಕರೆಯು.

ಅರುವತ್ತು ಮುಗಿದೀತು ಅರುವುಮರವಾದೀತು
ಎಂಬ ಮುರವತ್ತಿನಲಿ ಹಾಡಲಾರೆ
ನೆನೆವು ಮುಳ್ಳಾಡಿಸಲು ಎದೆಯ ದನಿ–ತಬಕದೊಲು
ಮೈಮರೆವಿನಲಿ ಭಾವ ತೋಡಲಾರೆ.

ತೋಡಿಗಿರುವದು ತೋಡಿ, ರಾಗಕ್ಕೆ ಅನುರಾಗ
ತೋಳು ತೋಳಿಗೆ ಜೋಡಿ ಮನದ ಮೆಚ್ಚು.
ಅಕ್ಕರೆಯ ಅಕ್ಷರವು ಆಕಾಶಲಿಪಿಯಹುದು,
ಅಕ್ಕಸಾಲಿಗ ಬಲ್ಲ ದೈವವಚ್ಚು.

ಧಾರವಾಡದ ಶಿಲೆಯು ಆ ಅನಾದಿ ಬುನಾದಿ
ಆದರ ತಳಹದಿ ಯಾರು ಅಗೆದುದುಂಟು?
ಶೀಸದಲಿ ನೆಲಸಿರುವ ಶೇಷನನು ಕೆಣಕಿದರೆ
ಜೀವಕ್ಕು ಮರಣಕ್ಕು ಒಂದೆ ಗಂಟು.

ಧಾರವಾಡದ ಶಿಲೆಯು ನಮ್ಮ ಶಾಲಿಗ್ರಾಮ
ಮಾವುಮಲ್ಲಿಗೆ ಚಿಗುರು ನಮ್ಮ ತುಳಸಿ.
ಮುತ್ತುರುಳಬಹುದೆಂದು ದಿಙ್ನಾಗ ಜಡೆಯುವರೆ?
ಇಲ್ಲಿ ನಾಗರ ಖಂಡ ಸುತ್ತ ಬಳಸಿ.

ಗುಪ್ತಗಾಮಿನಿ ನಮ್ಮ ಶಾಲ್ಮಲೆಯು ಸೆಲೆ ಆಳ
ಸಂಜೆ–ನಂಜನು ತೊಳೆಯೆ ದುಮುಕುತಿಹಳು.
ಏಕಾಂಗಿ, ನಿಃಸಂಗಿ, ಗಂಗಾವಳಿಯ ಭಂಗಿ,
ಕನ್ನಡಪ ಒಪ್ಪಿಡಿಯಲುಮುಕುತಿಹಳು.

ಕಾಲಲ್ಲಿ ಕಾವೇರಿ, ತಲೆಗೆ ಗೋದೆಯ ಸೆರಗು
ಮೈಯಲ್ಲಿ ಸಂಚಾರ ತುಂಗಭದ್ರೆ
ಕೃಷ್ಣೆ ಭೀಮೆಯ ಗುಟ್ಟು ತನ್ನ ಹೃದಯದೊಳಿಟ್ಟು
ಶೃಂಗೇರಿ ಶಿಖರದಲಿ ಶಾಂತಮುದ್ರೆ.

ಧಾರವಾಡದ ಪೂರ್ವ ಬಯಲಿಗೊ ಬಯಲು ಅಪೂರ್ವ
'ಕಲ್ಯಾಣ'ದಾಚೆಗಿದೆ ಭಾಗ್ಯನಗರಿ.
ಕರಿನಾಡು ಎರಿನಾಡು, ನಡುವೆ ಅಂಪದ ಕಾಡು—
ಗಂಡೆರಳೆ ಸುತ್ತಿರುವ ಹಿಂಡು ಚಿಗರಿ.

ಪಡುವಣಕೆ ಇದೆ ಘಟ್ಟ, ಅಲ್ಲಿ ಕಾಸಿಗೆ ಪಟ್ಟ,
ಬೆಟ್ಟ ಇಳಿದರೆ ಉಳಿವೆ ಅಜಿ ಕಡಲು.
ಅಂಚು ಮಿರಿಮಿರಿ ಮಿಂಚು ಮೀನ ಮುತ್ತಿನ ಸಂಚು
ಘಟ್ಟ ತಪ್ಪಲು ಭೂಮಿತಾಯಿ-ಒಡಲು.

ತಲೆಯಲ್ಲಿ ಬೆಳಗಾವಿ, ಬಲಕೆ ಬೀಜಾಪೂರು,
ಎಡಕೆ ಕನ್ನಡ ಕರಾವಳಿಯು ತೋಳು,
ಮೈ ಎಲ್ಲ ಮೈಸೂರು ಇನ್ನೂರು ಮುನ್ನೂರು
ನೀಲಗಿರಿ ಪೀಠವಲಿ ನಮ್ಮ ಬಾಳು.

'ಮಧುರಗೀತ'ವ ಹಾಡಿ, 'ನನ್ನ ನಲ್ಲ'ನ ಒಲಿಸಿ
ಹಲಸಂಗಿ ನಾಡಿನಲಿ ನೆಲಸಿ ನಿಂತ,
ನನ್ನ 'ಚೆನ್ನ'ನಿಗೆಣೆಯ ಗೆಣೆಯರಾರಾರಿಹರು
ಅವನೆ ಅವನಿಗು ಹೆಚ್ಚು ಅವನಿಗಿಂತ.

ಉತ್ತು ನೆಲಹೊಲಗಳನು ಬಿತ್ತಿದನು ಬೀಜಗಳ
ಉತ್ತಮಿಕೆ ಬೆಳೆ ಬರಲಿ ಎಂದು ಬಯಸಿ.
ಊರಿಗೂ ಅಡವಿಗೂ ನಡುವೆ ನೆಲೆ ಮಾಡಿದನು
ಎಡತಾಕಿ ಬೆವರಟ್ಟು ಬಯಲ ತೋಯಿಸಿ.

ತೋಟ ಮೂಡಿದೆ ನೋಡು ಕಾಡಿದ್ದ ಎಡೆಯಲ್ಲಿ
ಅಲ್ಲಿ ಮೌನದ ತಂತಿ ಮಿಟುತಿಹುದು
ಶ್ರುತಿಗು ನಿಲುಕದ ನುಡಿಯು ದನಿಗುಡುವುದಾಗೀಗ–
ಯಾರು ಬಲ್ಲರು? ನಾಳೆ ಮೂಡಬಹುದು.

‘ಬರದೇಸುಂಟೊಮ್ಮೆ ಬರುವ ಕಾಲಕೆ ಬಹುದು’
ಯಾರ ಇಚ್ಛೆಗು ಅದುವು ನಡೆವುದಿಲ್ಲ.
ಈಶೇಚ್ಛೆ ಕರೆದಾಗ ಅದರ ಸುಗ್ಗಿಯ ಕಾಲ
ಸ್ವೇಚ್ಛೆಯಲಿ ತರುಬಿದರು ತಡೆವುದಲ್ಲ.

‘ಬಾಳದೇಗುಲ’ದಲ್ಲಿ ಅಗೋ ವಿನಾಯಕ ಪಕ್ಷ
ಸಾತ್ವಿಕತೆ ಮೇಲ್ಮೆಯನು ಸಾರುತಿಹುದು.
ಸತ್ಯಸೂರ್ಯನ ಇದಿರುಗೊಂಡು ಕಣ್ಣರಿಕೆಯಲಿ
ಗರುಡನೊಲು ಅಮೃತಕ್ಕೆ ಹಾರುತಿಹುದು.

ಯಾವ ದೈವದ ಕರೆಗೊ ಓಗೊಟ್ಟು ಬರುತಲಿದೆ.
 –(ಕರುವು ತುರುವಿಗೆ ಮರಳಿ ಅಂಬೆಗರೆದು
ಕರೆವಂತೆ ತೊರೆವಂತೆ ತಾಯಿ ಕೆಚ್ಚಲು ಹಾಲು)–
 ಕರಳು-ತಳಕಿನ ಹಾಡು ಚೆಲ್ಲವರಿದು.

ಅವರವರ ಕಾಲಕ್ಕೆ ಅವರವರ ಫಲವಹುದು
 ಅವರ ರುಚಿಗಿಹುದು ಆ ರಸವೆ ಹದವು.
ಇಳೆಗು ಮಳೆಗೂ ಇಹುದು ಸೋದರರವ ಸಂಬಂಧ
 ಇರುಳು ಸಿದ್ದೆಯು ಹಾಗೆ ಕಾಲ–ಮದವು.

‘ ಖರದ ’ ಹ್ಯಾಕರಿಗೆ ಅಡಗಿಹುದು ‘ ಜಯ ’ ದುಂದುಭಿಯ
 ಮೊಳಗಿನಲಿ ‘ ಮನ್ಮಥ ’ನ ತುಂಬಿವಿಂಡು.
ಕಬ್ಬುವಿಲ್ಲಿನ ಪೆದೆಯ ದಿವ್ಯಸೂತ್ರದ ಜತೆಗೆ
 ಶ್ರುತಿಯು ಮೋಹಿಸುವದು ಏನೊ ಕಂಡು !

ಕಲ್ಲೆದೆಯ ಕರಗಿಸುವ ಪುಷ್ಪಬಾಣವು ಬೇಕು
 ಮೆಲ್ಲೆದೆಯ ಮರುಗಿಸುವ ಮಾತು ಬೇಡ.
ಈ ‘ ಬೇಡ ’ ನಿರ್ಣಯವಾಗಲೇ ಬಾಯ್ದೆರೆದ
 ಮೌನಿಯಾಗಿದ್ದ ವಾಲ್ಮೀಕಿ ಕೂಡ.

ಗಂಡನೋ ಜಗಭಂಡ, ಅಪ್ಪನೆಂಬುವ ಪುಂಡ
ನಿಲಿಸಿಹನು ಮರಣಕ್ಕೆ ತರುಣ–ಹಿಂಡ.
ಸಾಹಿತ್ಯ ಸಪ್ಪಗಿದೆ, ವಿಜ್ಞಾನ ಅಜ್ಞಾನ,
ಎತ್ತಿನೊಲು ಮೆತ್ತಗಿದೆ ಬ್ರಹ್ಮದಂಡ.

ಕಡಲ ಮೊರೆ ಎಸರಾಗಿ ಮೀನ ಚಳಮಳ ಎಂದು
ಕಾರುವದು ಕಾಣದಾ ನಂಜಿನುಸಿರು.
ಮೋಡ ಮೂಢತೆಯಿಂದ ಕಣ್ಣೀರ ಸುರಿಸಿದರೆ
ಅಮೃತೌತಣ. ಇರಲಿ ಏನೆ ಹೆಸರು !

ಪಾರಿವಾಳ–ಸಿಂಹ–ಬಂಟ

(ಸ್ವಪ್ನ–ದರ್ಶನ)

ಹಾರಿ ಏರಿ ಹಾರಯಿಸುತ
ಸಾರಿ ನಿನ್ನ ಬಳಿಗೆ ಬಂದೆ
ಪಾರಿವಾಳವಾಗಿ ಇನ್ನು ಸಾಕು ನನ್ನನು ॥

ರಾಗದಿಂದ ನುಡಿಯುತ ಅನು–
ರಾಗದಲ್ಲಿ ನಡೆನಡೆದು ಸ–
ರಾಗವಾದ ಪ್ರಣಯಲಯವ ಕಲಿತು ನಿನ್ನೊಳು ॥
ನಿನ್ನ ಸಿಂಹವಾಗಿ ಬೆಳೆದು
ಎನ್ನ ಹಂದೆತನವ ಕಳೆದು
ಮುನ್ನ ನಿನ್ನ ವಾಹನವೆನುವಂತೆ ಸಾಗುವೆ ॥

ಗಿರಿ–ಗಹ್ವರ ನಡುಗಿಸುತಾ
ಸ್ಥಿರ ಚರ ಭಯ ಉಡುಗಿಸುತಾ
ನರರ ವೀರ ಕರ್ಮವಲ್ಲಿ ತೊಡಗಿಸುತಿರುವೆ ॥

ಡಿಂಗರಿಗನು ನಾನು ನಿನ್ನ
ಡಂಗುರವನೆ ಸಾರುವೆ ಕ್ಷಣ–
ಭಂಗುರದೀ ಕಾಯ ಮುಡಿಸಿ ಕಾಯಕ ಮಾಡಿ ||

ಬಂಟನೆಂದು ಮುಂದುವರಿದು
ಎಂಟೆದೆಗಳ ಮೇರೆವರಿದು
ಕಂಟಕಗಳ ಕಡೆವೆ ವೀರಭೋಜ್ಯಳೀವಸುಂಧರೆ ||

ಜ್ವಾಲೆ

ಅಗ್ನಿಯನು ಮೆಚ್ಚಿಸಲು ಮಗಳ ಪಡೆದಿಹ ಜ್ವಾಲೆ
ಪತಿಯ ಅಪಜಯಕೆ ಹೊಗೆ ಸುತ್ತಿ ಹೊತ್ತಿದ ಜ್ವಾಲೆ
ಮಗನ ಮರಣಕ್ಕೆ ಹುಚ್ಚೆದ್ದ ರೊಚ್ಚಿನ ಜ್ವಾಲೆ
ಪಂಥಕ್ಕೆ ವೈಮನಸ ಮಸೆಯು ಮರೆತಿಹ ಜ್ವಾಲೆ.

ಕ್ಷಾತ್ರತಾಮಸದ ಮಿತಿಮೀರಿ ಉರಿಯುವ ಜ್ವಾಲೆ
ತಾನು ಸತ್ತೂ ಅನ್ನಿಗರನು ಕೊಲ್ಲುವ ಜ್ವಾಲೆ
ಜನ್ಮಜನ್ಮಕೆ ಜಾತಿವೈರ ಒಯ್ಯುವ ಜ್ವಾಲೆ
ನರನ ನೆತ್ತರ ಕುಡಿದು ಸಂತಾಪ ಮಹಾಜ್ವಾಲೆ.

ನಾರಿಯರ ಹೊಲಿ ಛಲದ ಮೇರೆ ಮೀರಿದ ಜ್ವಾಲೆ
ಬಂಜೆ ಬಸಿರಿನ ಬೆಂಕಿ ಸಂಜುಕಾರುವ ಜ್ವಾಲೆ
ಗಂಗೆಯಲು ತಣಿವಾಂತು ಮುಕ್ತಿ ಪಡೆಯದ ಜ್ವಾಲೆ
ಗಂಗೆಯನೆ ಎಸರಿಡಿಸಿ ಶಾಪ ಕೊಡಿಸಿದ ಜ್ವಾಲೆ.

ಅಗ್ನಿದೇವರ ತೊಡೆಯು ಉರಿನೆನೆಂಬುವ ಜ್ವಾಲೆ
ಭಗ್ನ ಸಾಹಸದ ಆತ್ಮಘ್ನ ಘಾತಕಜ್ವಾಲೆ.

ಅಹಲ್ಯೆ

ಒಲವನು ತೋರುವ ಕಣ್ಣಲಿ ಮೂಡಿದೆ ಕೆಂಗಿಡಿಯು.
ಒಲವನು ನೀಡುವ ಎದೆಯಲಿ ಜಡಭಾವದ ಝುರಿಯು.
ಮುನಿ ನೊಂದನು ‘ ಛೀ ’ ಎಂದನು ನಂಬಿಗೆಗಿದೆ ಎಲ್ಲೆ.
ಬೆರಗಾದಳು ಬಿಲ್ಲಾದಳು ಕಲ್ಲಾದಳಹಲ್ಯೆ.

‘ ಎಲೆ ಜಾರಿಣಿ ನೀ ಜಾರಿದೆ ಜಾರಿದೆ ಝುರ್ಝುರನೆ. ’
ಎನೆ ಮನ ಮರುಗಿತು ಮಡಗಿತು ಅಲ್ಲೇ ಮರ್ಮರನೆ.
ರಾಮ ರಾಮ ರಾಮ ರಾಮ ಏನಿದು ಈ ಮಾತು !
ನಿಂತಲ್ಲಿಯೆ ಇಲ್ಲಾದಳು ನಲ್ಲೆಯು ಒಳಸೋತು.

ನೆಲ ತಿರುಗಿತು, ಋತು ಮರುಗಿತು, ಮೊರೆಯಿತು ನೀರಿನಲಿ.
ಜೀವನ ಪರಿಪಾತದ ಗತಿ ಬೆದ ಬೆದ ಕುದಿಯುತಿರೆ
ಯುಗ ತೆರಳಿತು, ಮೊಗವರಳಿತು, ರವಿಯಲಿ ಹೊಸ ನೋಟ.
ಶ್ರೀರಾಮನ ಪತ್ನೀವ್ರತ ವಿರಹದ ಮಸೆದಾಟ.

ರಾಮನ ಪಾದಸ್ಪರ್ಶಕೆ ಚಿಗುರಿತು ಒಳಜೀವ.
ನೀರಿನ ನೋಟಕೆ ತೆರೆದಿತು ಕಣ್ ನಾರೀಭಾವ.
ಭಗವತ್ಪಾದಕ್ಕೆ ಪರಿಣತಿ—ಅದ್ಭುತವಿದ್ದಲ್ಲೇ.
ಒಲೆಯಿತು ಅಲೆಯಿತು ನಲಿದಿತು ಕಲ್ಲಾಯಿತು ನಲ್ಲೆ.

ನಾಲತವಾಡದ ಶರಣರನ್ನು ಕುರಿತು

ಆಗಿದ್ದರೀಗಿಲ್ಲ ಎನಬೇಡ ಮರುಳೇ ॥ ಪಲ್ಲ ॥

ಹೇಗಿದ್ದರೂ ಕೂಡ ಈಗಿದ್ದ ಹಾಗೆಯೇ ।
ಏಗಳೂ ವೀರೇಶ ಶರಣ ನೋಡಾ ॥ ಅ. ಪ. ॥

ಚೆನ್ನಕವಿ ವೀರೇಶಚರಿತವನು ವರ್ಣಿಸಿದೆ ।
ಇನ್ನು ಬೇರೆಯ ಮಾತು ಬಣ್ಣನೆಗೆ ಬೇಕೆ ? ॥
ತನ್ನ ಅನುಭವ ತನಗೆ ಎಷ್ಟು ತುಂಬಿ ಇರುವಾಗ ।
ಇನ್ನಿತರ ಜೊಳ್ಳನ್ನು ತೂರಿಕೊಳ್ಳಲೇಕೆ ? ॥ ೧ ॥

ವರದ ವಾರದವರ ಮನೆ ಬಳ್ಳಿ ಹೂಬಿಡುತ್ತಿರಲು ।
ಪುರದ ಕಥೆಗಳು ಕೆಂಪು ಹಸಿರು ಮುರಿದು ॥
ಇರವೆ ಬೆಳೆಯುತ್ತಲಿರೆ ಫಲದ ಸಂಶಯ ಬೇಡ ।
ಹರನ ಕಾರುಣ್ಯದಲಿ ಶಿವ ಫಲಿಸದಿರದು ॥ ೨ ॥

ಸಿದ್ಧರಾಮನ ಇದಿರು ಮಲ್ಲಿಕಾರ್ಜುನನೆಡೆಗೆ ।
ಬದ್ಧ ಹಸ್ತದಿ ಸೇವೆ ಹಗಲಿರುಳು ನಡೆದು ॥
ಮುಗ್ಧ ಮಾತೆಯರ ಶರಣೆಯರ ಗಡಣವ ನಡೆಸಿ ।
ಉದ್ಧರಿಸುತಿಹುದು ನುಡಿಸತ್ತ್ವ ಪಡೆದು ॥ ೩ ॥

‘ ಅಸಿತ–ಸ್ವಪ್ನ ’

ಅಸಿತ ಕಂಡನು
ವಿಸ್ಮೃತ ಪ್ರಪಂಚ
ಹಸಿತದ ಹೂನಗೆ ಮೆರೆಯಿಸಿತು.

ಸಾಲದೋ ಸಾಲದೆಂಬಂತೆ
ಸಾಲದ ಇದಿರು ಆ ರಸಾಲವು
ಪುಷ್ಪಿಸಿತ್ತು.

ಉಂಬಿನೀ ವನದಲ್ಲಿ
ಹರ್ಷಪುಲಕಿತನಾಗಿ
ಮೈಯೆಲ್ಲ ಕಣ್ಣಾಗಿ
ಅರಳಿದವು ತಾಲವೃಕ್ಷ.

ನಿದ್ರಿಸಿದ ಜಗದಲ್ಲಿ
ಮುದ್ರಿಸಿದ ಕಣ್ತೆರೆದು
ಶಿಶುಬುದ್ಧ ಮೂಡಿದನು
ಜಗದ ಅಧ್ಯಕ್ಷ.
ಪ್ರಕೃತಿಯಧ್ಯಕ್ಷ ಹೂ–
–ತವು ಸಹಸ್ರವೃಕ್ಷ.

ಅಸಿತ ಅತ್ತನು ನಕ್ಕನು

ಅಸಿತ ಹಸಿತ ಭಸಿತದಂತೆ ಅಗ್ನಿಗರ್ಭವಾಗಿರೆ
ಅಸಿತ ನಕ್ಕ ಅಸಿತ ಅತ್ತ ದಿವ್ಯಪರ್ವವಾಗಿರೆ.

ಕಣ್ಣೀರಿನ ಕಡಲಿನಾಳದಲ್ಲಿ ಒಂದು ಚಿಪ್ಪಿದೆ.
ಅದರ ಅಂತರಂಗ ಬೆಳಗಿ ಒಂದು ಮುತ್ತು ಒಪ್ಪಿದೆ.

ಅಸಿತ ತನ್ನಗಮ್ಯಗಮ್ಯ ಜ್ಞಾನಪಥದಿ ಕಂಡನು.
ಇರುವೆ ಮರೆತು ಲೀನವಾದ ಅರಿವನರಿತುಕೊಂಡನು.

ಮುತ್ತು ಸುಲಿದರೇನು ಒಳಗೆ ಬಯಲೆ ಬಯಲು ಎತ್ತಲೂ
ಅದೇ ಬೆಳಕು ಒಳಗು ಹೊರಗು ತತ್ ಪ್ರಕಾಶ ಸುತ್ತಲೂ.

ಜರಾವ್ಯಾಧಿ ಮರಣದಿಂದ ಜೀವ ಬಿಡಿಸಬಂದವ
ಮಹಾ ಮುಕ್ತಿಪಂಥವನ್ನು ಹೊಸ್ತಿಲಕ್ಕೆ ತಂದವ.
ಬಂದ ಬುದ್ಧ ಬಂದ ಸಿದ್ಧ ತನಗೆ ತಾನೆ ಎಂದವ.

ಚಿಗುರ ಕಂಡೆ ಹೂವು ಕಂಡು ಹಣ್ಣು ಕಾಂಬದೃಷ್ಟವು
ಇಲ್ಲ ತನಗೆ ಸ್ಪಷ್ಟವು.
ಆದರೂನು ಹೃದಯ ಪುಷ್ಪ ಪುನಃ ಪುನಃ ಹೃಷ್ಟವು
ಇದೇ ಸುಖವು ಕಷ್ಟವು.
ಕಂಡೆ, ಕಾಣೆ, ನೋಡಬಂದೆ ಇದು ಯುಗಗಳ ಇಷ್ಟವು

ಬುದ್ಧನಾಗಿ ಸಿದ್ಧನಾಗಿ ತಾ ಪ್ರಸಿದ್ಧನಾಗಲು
ಒಮ್ಮೆ ಮೂಡಿ ಮುಳುಗದಂತೆ ಇರುವನೆ ಯಾವಾಗಲು.

ಭರತವಿನ್ನು ಜಗದ್ಭರಿತ ದುರಿತವಿನ್ನು ತೀರಿತು.
ಇಷ್ಟು ಹೇಳಿ ಯಾವುದೊ ಧ್ವನಿ ಗಗನದಲ್ಲಿ ಹಾರಿತು.
ದೀಪದ ಕುಡಿ ಬಯಲಿನಲ್ಲಿ ಆರುವಂತೆ ಆರಿತು.

ದರ್ಶನ

ಮುಪ್ಪು : ಹುಟ್ಟಿದುದೆಲ್ಲಾ ಬೆಳೆಯಲೆ ಬೇಕು
ಮೊಳೆತದ್ದೆಲ್ಲಾ ಹಾಗಲೆ ಬೇಕು
ದುಡಿಮೂ ದಣಿಮೂ ಬಾಗಲೆ ಬೇಕು
ಕಳಿತದ್ದೆಲ್ಲಾ ಕಳಚಲೆ ಬೇಕು
ಅಯ್ಯೋ ಕಡು ಕಷ್ಟಾ.
ಮುಪ್ಪೋ ಅತಿ ನಷ್ಟಾ.

ರೋಗ : ತಿನಿಸಿನಲ್ಲೆ ಮೈತಳೆದಿತು
ಮುನಿಸಿನಲ್ಲೆ ಉಸಿರೆಳೆದಿತು
ಕನಸಿನಲ್ಲೆ ಮನವಲೆದಿತು
ಅಂಗಾಂಗವು ಭ್ರಾಂತಿ.
ತನುವೆಂಬುದು ರೋಗಯೋಗ
ಜೀವಿತವೋ ಜೀವಭೋಗ
ಸಾವಿನೊಳಿದೆ ಶಾಂತಿ.

ಸಾವು : ಸತ್ತನೋ, ಸಾಯಲಿಹ, ಸಾಯುತಿಹನು
ಅಳುವನೋ ಅಳುಕಿದವ ನೋಯುತಿಹನು
ಸಾವು ನೋವಿಗೆ ಗಂಟು
ಬಾಳು ಬದುಕಿಗೆ ನಂಟು.

ನಿಜಸಂನ್ಯಾಸ : ಪ್ರೇಮವೆಂಬುದು ಅನುರಭದ್ರಭಾವ
ಅದಕೆ ಇಲ್ಲ ಅಭಾವ, ಇಲ್ಲ ಜಾವ
ಪ್ರೇಮವೆದೆಯಲ್ಲಿಯೇ ಪ್ರೇಮಿ ಬಾಳುವನು
ಅಲ್ಲಿ ಅರಸಾಗಿಯೇ ಇಲ್ಲಿ ಆಳುವನು.

ಅಗೊ ಇದ್ದ, ಇಗೊ ಎದ್ದ, ಓಹೋಹೋ ಗೆದ್ದಾ
ಲೋಕಾಗ್ರದ ಸಿದ್ಧ
ಶೂನ್ಯದ ಒಳಗಿದ್ದ.
ಏರಿದ್ದನು, ಇಳಿದಿದ್ದನು, ತಿಳಿದೆದ್ದನು ಬುದ್ಧಾ
ಜೀವನದುದ್ದಕು ಶುದ್ಧನು ಭೂತವ ಕೆಳಕೊದ್ದಾ
ಹಿಂಸೆಯಲ್ಲಿ ಗೆದ್ದವನೇ ಈ ಕ್ಷೇತ್ರದಿ ಬಿದ್ದ.
ಇದು ಅಪೂರ್ವ, ಲೋಕೋತ್ತರ ನೋಽಹಿಂಸಕ ಯುದ್ಧ.

ಇದು ಬುದ್ಧನ ಅವತಾರ
ಜೀವನದುದ್ಧಾರ
ಶೂನ್ಯದ ಹೊಲದಲಿ ಬೆಳೆಯುವ ಆತ್ಮದ ಶೃಂಗಾರ.

ಮರಣ ?

ಅದ್ಭುತವು ಅದ್ಭುತವು ವಿಶ್ವಕದ್ಭುತವು
ಸತ್ಯಶರಣನ ಸಂದ ಮರಣದದ್ಭುತವು.

ಮಣಿಹ ಸಂದಿತು; ದೇಹ ಕೆಳಗೆ ಇಟ್ಟ;
ಧ್ಯೇಯವನೆ ನಕ್ಷತ್ರ ಮಾಡಿ ಬಿಟ್ಟ.

ಎಂಥ ನಗು ! ಎಂಥ ಮುಗು ! ಎಂಥ ಮನುಜ
ನಮ್ಮಂತೆ ಕಂಡರೂ ದೇವತನುಜ.

ಗಾಂಧಿಯೆಂಬುದು ಹೆಸರೆ ? ಮುಪ್ಪಿನಾಕೃತಿಯೆ ?
ಗಾಂಧಿಯೆಂಬುದು ಸಿಖರ ದಿವ್ಯ ಕೃತಿಯೆ !

ಕಡ್ಡಿಯಲುಗದು ಆಕಸ್ಮಾತ್ತಿನಿಂದ
ಗುಡ್ಡ ಉರುಳೀತೇನು ಗುಂಡಿನಿಂದ ?

‘ಸಾವಿತ್ರಿ’

ಅಬ್ಬಾ ಬಾ ಬಾ ಎನ್ನುತ್ತಿದೆ ಗೋಪುರ ಶಿಖರಾ;
ಏಳೇಳೋ ಏರೇರೋ ದಸಿ ಮೌನವೆ ಮುಖರಾ.

ಗರ್ಭಿತಗೃಹ ದಿವ್ಯಸ್ಥಳ ಅವಧಾನದ ನಿಷ್ಠೆ;
ಅನುಭಾವಿಸಿ ಮಾಡಲ್ಲಿಯೆ ನವಲಿಂಗ ಪ್ರತಿಷ್ಠೆ.

ಸಪ್ತಸಪ್ತಿ ತೆರೆ ಸುಷುಪ್ತಿ ಘೋಷಿಸು ತೂರ್ಯರವ;
ಸತ್ಯವಾನ ಸಾವಿತ್ರಿಯು ಭವ ಭವ ಮಂಗಲವ.

ಸುದರ್ಶನಕೆ ಅವತರಿಸಿತು ಈ ದಿವ್ಯ ಪ್ರಬಂಧ;
ಊರ್ಧ್ವಗತಿಯ ಮಿನಾರದ ಪ್ರಾರ್ಥನೆ ಋಕ್‌ಛಂದ.

ಬಾಲ–ತಿಲಕ

ಸೃಷ್ಟಿಯೇ ಪಾತಕದ ಪಾಪಕೂಪವು ಎಂಬ
ತಾಯ ಹಾಲನು ಜರಿದು ಕೊಬಲುತ್ತಲಿರೆ ಜಂಭ!
ಕಂಬದಂತಿತ್ತು ನಿಷ್ಕಂಪ ಆದಿಸ್ತಂಭ.

ಮೂಲ ಮಣ್ಣಿನ ದ್ರೋಹ, ಮೇಲೆ ಹೆಣ್ಣಿನ ದ್ರೋಹ,
ಮತ್ತೆ ದೇಹದ ದ್ರೋಹ, ಮುಂದೆ ಗೇಹದ ದ್ರೋಹ,
ಆದಿ ಸೃಷ್ಟಿಯ ದ್ರೋಹ, ಬೀಜಸೃಷ್ಟಿಯ ದ್ರೋಹ,
ಇಂತು ಸಾಗಿತ್ತು ಅಜ್ಞಾನ ಪ್ರಳಯದ ದಾಹ
ಬ್ರಹ್ಮಾಂಡದಲ್ಲೆಲ್ಲೋ ಹೇಗೋ ಉಳಿದಿತು ಸ್ನೇಹ
ತಿಲಮಾತ್ರ. ಹುಟ್ಟಿತಗೋ ಜಮುವೆ ಬಾಲ ತಿಲಕನ ದೇಹ.

ಕರ್ಮಾಂಗ ಹೀನತೆಯಲಿರುವಸವನಾವ ಕೃತಿ?
ಹೇ ಪುರುಷ! ನಿನಗೆ ನಮಿಸುತ್ತಲಿದೆ ಪ್ರಕೃತಿ.
ನಿನಗೆ ಹೆಳವನ ಮಾಡಿ ರಮಿಸಲಿದೆಯೇ ಬರಿದು.
ಭಕ್ತಿಯಲಿ ಅವಿಭಕ್ತನಾಗಿರುವದೇ ಹಿರಿದು.
ರಜತಮಗಳಿಂದ ನಿರ್ಲಿಪ್ತನಿರುವದು ಸತ್ತ್ವ.
ತಪ್ತಕಾಂಚನದಂತೆ ಕಾಳಿಕಾನಿರ್ಮುಕ್ತ.
ನಿಃಸತ್ತ್ವವೇ ಜ್ಞಾನ? ಸಂಜ್ಞಾನಿಯೇ ಶಕ್ತ!

ಜ್ಞಾನಿ ಭಕ್ತನ ಕರ್ಮ ಸಂಯುಕ್ತ ಸಹಜತ್ವ.
ತತ್ತ್ವಕ್ಕೆ ಮುಸಿ ಬಳಿದು ಅಸ್ತಿತ್ವವನೆ ಕಳಿಯೆ
ವಸ್ತುತ್ವವನೆ ಶೂನ್ಯದಿ ಮಟ್ಟಮಾಯವೆನೆ
ನಿರ್ದೇಹ ಸುಸ್ತಿಯಲಿ ಬ್ರಹ್ಮಹತ್ಯೆಯ ತೊಳೆಯೆ
ಹುರಿದ ಬೀಜಕ್ಕೆ ಆಗೊ ಮಿಥ್ಯಾಪ್ರಪಂಚ ತೆನೆ.
ಆ ಮುಕ್ತ ಕೇಸರಿಗೆ ಬೇಕೆ ಮೌಕ್ತಿಕಮಾಲೆ?
ಆನೆಗಳ್ಗೆ ಮದ್ದಾನೆ ಅವನೆ ಮುಕ್ತಿಜ್ವಾಲೆ.

ಸತ್ತ್ವವನು ಮರೆತು ತತ್ತ್ವವ ತಿಳಿಯಲೆಳಸೆ, ಕ-
ರ್ತೃತ್ವದರಿವಿರದೆ ಈ ಕರ್ಮಲೋಕದ ಬಾಳ
ಬೆಳಸೆ, ದುರ್ಭೋಗದೊಲು ಭಾಗ್ಯಭೂಮಿಯು ಹಳಸೆ.
ಉಳಿಸಬಂದವನು ಜವವ ಬುದ್ಧಿಯೋಗಜ್ಞಾನಿ.
ನಿಷ್ಕಾಮಕರ್ಮ ಸಿದ್ಧಿಯಲಿ ಜೀವನ ಕಂಡ
ಭಾರತೀಯರ ವೀರ ಗೌರವದ ಅಭಿಮಾನಿ.
ನೈಷ್ಕರ್ಮ್ಯ ಕಾಡು ನಿಷ್ಫಲತೆಯೆಲ್ಲಿದೆ ಕಾಣ.
ಸ್ವತ್ವಕರ್ತೃತ್ವದಲಿ ತತ್ತ್ವ ತೋರಿದ ಜಾಣ!
ಅಮರ ಕೀರ್ತಿಯ ಗಳಿಸಿ ಲೋಕಮಾನ್ಯತೆ ಪಡೆದೆ!
ಕೇಸರಿಯೆ! ಹಂದಿಗಳ ಮುಂದಿಯಲಿ ಗರ್ಜಿಸಿದೆ,
ನವಜಗವ ಸ್ಫೂರ್ಜಿಸಿದೆ ಜೀರ್ಣವ ವಿಸರ್ಜಿಸಿದೆ,
ನರಲೋಕಕೆಲ್ಲ ನಾರಾಯಣನ ಗೀತವನು
ಬೋಧಿಸಿದೆ, ಶೋಧಿಸಿದೆ, ಜನವನಾರಾಧಿಸಿದೆ,
ದುರ್ಭಾವದಲಿ ಬುದ್ಧಿ ಮುಳುಗದೊಲು ನೀ ದುಡಿದೆ.

'ರವೀಂದ್ರ-ದರ್ಶನ'

ಚತುರಸ್ರತೆಯೇ ಲಂಬಿಸೆ ತಾನು,
ಗಡ್ಡಕೆ ಜೋತಿದೆ ಜ್ಞಾನಿಯ ಜೇನು.

ರವಿ ಸಂಧ್ಯೆಯೊಡ ಬಂದ ಕವಿಯ ದರ್ಶನಕೆ,
ಅಕ್ಷರವು ಇದಿರಿತ್ತು ಕವಿ ವಿಮರ್ಶನಕೆ.

ಆಟದಲಿ ಕಟ್ಟುವನು ನೋಟದೊಳಗಿನ ವಿಶ್ವ
ಇಳೆಗಿಳಿದು ಬಂದಿಹುದು ಕಲ್ಪನಾಶ್ವ.

ಕರಮುಕುಲವರಳುತಿದೆ,
ಮಕರಂದ ಸುರಿಯುತಿದೆ.

ಜೀವನವು ಪ್ರಾಣವನು ಮುದ್ದಿಸುತಿದೆ
ಭೇದವು ಅಭೇದದಲಿ ಸಿದ್ಧಿಸುತಿದೆ.

ಚಿತ್ರ ನಿರ್ಮಿಸಿತು ಅಪೂರ್ವರೂಪ
ಅನುಭಾವಿಸುವನಃ ಸಾತ್ವಿಕ ಭೂಪ.

ಕಲ್ಪನೆ ಹಾರಿತು ಪೆರೆಯನ್ನೇರಿ
ಹಿಗ್ಗು ಊದುತಿದೆ ತುತ್ತೂರಿ.

ಪರವಾಣಿಯಲಿ ಮನೋನ್ಮನೀ
ಶ್ರುತಿಗೋಚರವೇ ಅನಾಹತಧ್ವನಿ.

ಯಾವ ಧರ್ಮಮೇಘದರ್ಶನಕ್ಕೆ ಬಂತೊ ಪೂರ
ನವಿಲ ನವಿರು ನೂರು ಕಣ್ಣು ಕುಣಿಯೆ ಕವಿಮಯೂರ.

ಓ ಅಧಿಯಜ್ಞ ! ವಿಶ್ವಪ್ರಾಜ್ಞ !
ಇಗೊ ಕೋ ಕವಿಯ ಹವಿ.
ನಾ ಭವಿ ಅನುಭವಿ ನೀನೂ ಸಂಭವಿ.
ರುಚಿಸೀ ಜಗದ ಸವಿ.

ಕವಿ ಕರ್ಮಯೋಗದಲಿ ಏರಿದನು ನಂದನಕೆ
ಹಾಡಿದನು ದೇವಯಶವ.
ಎದೆ ತುಂಬಿ ಅರಳಿದನು ಜಗದತ್ತ ಹೊರಳಿದನು
ಕೈಕೊಂಡು ಶಾಂತರಸವ.

ಸಾರ್ವಭೌಮಿಕ ಕಲೆಯು ಸಾಕಾರ ರೂಪವಿದು
ವಿಗ್ರಹವು ಬೇರೆ ಏಕೆ ?
ನಿಗ್ರಹದ ಆಗ್ರಹದ ಮಾರ್ಗ ಸಹಜಕ್ಕಿಲ್ಲ
ಮೇಲೊಂದು ಬಿರುದು ಬೇಕೆ ?

ಜಪಾಕುಸುಮದೊಲು ಉಷಾರಮಣಿಯಿರೆ
ಜಪಾನವಿದೆ ರಮ್ಯ.
ಹೃದಯದುದಾರತೆಗಾವುದಗಮ್ಯ ?
ಕವಿಗೆಲ್ಲವು ಗಮ್ಯ.

ವಂದನ ನಿನಗಿದೊ ಭಾರತಮಾತೆ,
ಋಷಿಕವಿ ವಿಖ್ಯಾತೆ,
ನಿನ್ನುನ್ನತಿಯೇ ನನ್ನುನ್ನತಿಯು
ಸ್ವಯಂ ಭುವನ ಜಾತೆ.

ಸಾಧುಹೃದಯವ ಮೋಹಿಸುವುದು ಕವಿಯ ಹೃದಯ.
ಕವಿಯ ಬೆಂಬಲಿಸುವುದು ಗಾಂಧಿಯ ದಯ.

ಕವಿಗೆ ಸರಸ್ವತಿಯು ಬಾಗಿ ನಿಂತ ಹಾಗಿದೆ.
ರವಿಗೆ ತನ್ನ ಉದಯ ಉಷೆಯ ನೆನಪು ಆಗಿದೆ.

ನೆರಳಾವುದು ಬೆಳಕಾವುದು ಈ ಎರಡರ ಬಳಿಗೆ?
ಮೇಲಿಲ್ಲವು ಕೀಳಿಲ್ಲವು ಇವುಗಳ ಹೊರ–ಒಳಗೆ.

ವಿದಗ್ಧ ಬುದ್ಧಿಯ ವಿದೂಷಣ
ನಲಿದರು ನಕ್ಕರು ವಿಭೂಷಣ
ಮೂಡಲು ಪಡುವಲು ಸೊಕ್ಕಿಲ್ಲ
ಭೂಮಂಡಲಕೂ ದಿಕ್ಕಿಲ್ಲ.

ಘನಘರ್ಷಣ, ಘನವರ್ಷನ, ಘನತಾನವಿತಾನ.
ನಾಳಿನ ಆಚಿನ ಬಾಳಿನ ಬಗೆಗಿದೆ ಈ ಧ್ಯಾನ.

ಮೂರ್ತಿಯು ಕಣ್ಮರೆಗಾದರು
ಕೀರ್ತಿಯು ಕಣ್ಮರೆಯೋ?
ನೆನವಿನ ಹಿಮಗಿರಿ ಕೊರೆದಿದೆ
ಒಲವಿನ ಮೋಗೆರೆಯೋ!

ಇದು ಮರಣವು ನೀನೆಂಬೆ
        ಇದನೇ ನಾನಂಬೆ.
ಕನಸನು ಕಾಣುವ ಸಿದ್ದೆ
        ಇದು ಜೀವದ ವಿದ್ಯೆ.

ಲೀನ ಲೀನ ದೂರದಲ್ಲಿ
ಭಾವ ತೀರ ತೀರದಲ್ಲಿ
        ಅಲ್ಲಿ ಅಲ್ಲಿ–ಎಲ್ಲಿ ಎಲ್ಲಿ?
        ತೀರ-ಎಲ್ಲೆ ಇಲ್ಲದಲ್ಲಿ........

ಈತನೆ ರವೀಂದ್ರ ಇವನೆ ಕವೀಂದ್ರ ನೋಡಿದೆಯಾ ರೂಪ.
ಜ್ಞಾನದ ಜ್ಯೋತಿ ಜಗದ ತಮಸ್ಸಿಗೆ ಹಿಡಿದಂತಿದೆ ದೀಪ.

ಚಿನ್ಮಯದ ರೂಪಗಳು ಚಿತ್ರಕನ ಕಲೆಯಿಂದ
        ಮೆರೆಯುತಿವೆ ಪೊರೆಯು ಹರಿದು.
ಯಾವ ಮಾಯೆಯೊ ಏನೊ! ಕವಿಹೃದಯ ತೆರೆಯುತಿದೆ,
        ಚಿತ್ತಕ್ಕೆ ಕಣ್ಣು ಬರೆದು.

ಸಪ್ತಸ್ವರಗಳಲಿ ಇಪ್ಪತ್ತೆರಡು ಶ್ರುತಿಗಳಿವೆ
        ಆ ರಾಗಮಾಲೆಯಲ್ಲಿ.
ರವಿಯ ಕಲೆ ಕೂಡಿಹವು ಮಂಡಲಾಕಾರವೆನೆ
        ಈ ಚಿತ್ರಶಾಲೆಯಲ್ಲಿ.

ಶ್ರೀ ಶಂಕರರಾವ್ ಅಳಂದಕರ ಇವರ ಚಿತ್ರಾವಲಿಯನ್ನು ಕುರಿತು.

—ಅಂ

ಓ ಮರ

ನೆಲ ಹಾಸಲುಂಟು, ನಭ ಹೊದೆಯಲುಂಟು. ಹಗಲಿರುಳಿಗುಂಟು ಅಂಟು.
ನೀರು ಗಾಳಿ ಒಡನಾಡಿವಂತೆ ಋತುಗಳಿಗು ನನಗು ನಂಟು.
ಹೌದು ಉಂಡೆ ನಾ. ಮುಷ್ಟಿಗೆರಡು ಮುಷ್ಟಿಂದು ಎಂದೊ ಹೊರಟ
ಹಣ್ಣ ಮಾರಿ, ವ್ಯಾಪಾರವಣ್ಣ ಪಡೆಯುವನು ಯಾವ ಗೊರಟ?

ಮಾವಿತ್ತು ಬೀತು ಮಲ್ಲಿಗೆಯು ಸೋತು ಹೋಗಿತ್ತ ಆ ವಸಂತ?
ನವಗುಂಪು ಸೇರಿ ಓಲೆಗಳು ಜಾರಿ ಬಿಟ್ಟಿತ್ತು ಜೀವಗ್ರಂಥ.
ಹೂವು ಹೂವುಗಳ ದಿನವು ಅರಳಿಸಿದ ಪಿಕವು ಅಡಗಿತೆತ್ತೋ?
ಎಂದು ಬರುವದೋ ಎಲ್ಲಿ ಇರುವದೋ ಯಾರಿಗಿಹುದು ಗೊತ್ತೋ!

ಓ ರತಿಯೆ ಸತಿಯೆ, ಸೈನ್ಯವು ರಾಜ್ಯ ಹಬ್ಬಿದೆ ಪ್ರಪಂಚದಲ್ಲಿ.
ಆ ದೈವದೊಡನೆ ಒಡನಾಟವಾಡಿ ಸೇರೋಣ ಸಂಜೆಯಲ್ಲಿ.
ರಚಿಸೋಣ ಮತ್ತೆ ಒಗೆತನವ ಥಾಟಿನಲಿ ಜಗವ ಜೀವಕಾಂತೆ.
ಹೃದಯ ಛಂದದಲಿ ಬಂಧಪಡೆದ ಮಧುಭಾವ ಗೀತದಂತೆ.

ಭರತಿ ಓಹಟೆಯ, ಕ್ಷಯದ ವೃದ್ಧಿಯನ ಅರಿಯುವೆನ್ನ ಹಿಗ್ಗು.
ಕವಲಿಗುಂಟು ಚಂದಿರನಿಗುಂಟು ವಿನಾಶಕು ಏನು ತಗ್ಗು.
ಯಾರು ಇದಿರುಗೊಂಡಾರು ನಾಳೆ–ಕಲ್ಪನೆಯು ಕೂಡ ಬೇಡ.
ನನ್ನ ಕಾಣದತ್ತೀತು ಕಡಲು ಸೊರಗ್ಯಾನು ಚಂದ್ರ ಕೂಡ.

ಕೊನೆಗೊಮ್ಮೆ ನೀನು ಕಾಲವನು ದಾಟಿ ಆದೀಯೋ ಸ್ವರ್ಗವಾಸಿ.
ಅತ್ತೀತು ಹುಲ್ಲು ಆ ಬೆಳಗಿನಲ್ಲು ಇಬ್ಬನಿಯ ಮುತ್ತು ಸೂಸಿ.
ನಂದನಕೆ ನೀನು ಮುಂದಾಗು, ಬಂದೆ, ಮುಗಿಸುವೆನು ಯಾತ್ರೆಯನ್ನು.
ಕೊನೆಹನಿಯ ಕುಡಿದು, ಹಾಕುವೆನು ಬೊಕ್ಕು ಸಂಸಾರ ಪಾತ್ರೆಯನ್ನು.

ಬೆಳಕಿಗಾಗಿ ಬಾಯ್ಬಿಡುತ ಬಹುದು ಬಾನಲ್ಲಿ ಬಾಳಸಸಿಯು.
ಮೂಲೆ ಕಸವಲ್ಲೆ ಹೊರಳಲಹುದು ಹುಳು-ಸೂಳ್ಳೈ-ನೊರಜು-ನುಸಿಯು.
ಕಂಪ ಸುಳಿತಕ್ಕೆ ಉಸಿರನೆಳೆಯುವದು ಜೀವ ಆತ್ಮಗಂಧಿ
ಗಗ್ಗ ನಾತದಲೆ ಗೊರಕೆ ಹೊಡೆಯುವದು ದಿನದ ಜನದ ಮಂದಿ.

ಧಡಲ್ಬಾಜಿ ಸಪ್ಪಳವ ಜೇಡುವದು ಡೊಳ್ಳು ಡೊಂಬರಾಟ.
—ಕೊಳಲುಗಿಳಲು ಹುಸಿಹೊಳಲು ಗಾಳಿ ಸೂಳಾದಿ ಸೂಸು ಪಾಟ!
ಬಯಲು ಮಿಂಚು, ನಿರವಯಲಿಸಂಚು, ತಿರುವಚನರಚನ ಸಂಚು—
ಮಣ್ಣುಗೋಡೆಗಳ ಮಣ್ಣು ಮನೆಗಳಿಗೆ ಬೇಕು ಮಣ್ಣ ಹಂಚು.

ಸೀತೆಯಹುದು ಭೂಜಾತೆ ಆತ್ಮಾರಾಮನಲಿ ರಮಿಸುವವಳು
ಧಾರುಣಿಯ ಮಗಳು ಸ್ಪೈಸಹಿಸುವವಳು ಏನೇನೊ ಕ್ಷಮಿಸುವವಳು.
ಒಣಹುಲ್ಲಿನಾಸೆ ಉರಿಗಾಳಿ ಬೀಸೆ ನಶಿಸುವುದು ಏನಗಾಧ?
ಉಳಿದ ಬೀದಿ ಜನವೇಕೆ? ರಾಜ ರಾವಣನೆ ಬೂದಿಯಾದ!

ದೈವ-ಯೋಜನೆ

ಯಾವುದೀ ಉರಿಗಾಲ ನೆತ್ತಿಗೇರಿದ ಸೂರ್ಯ
ಕಾಲು ಇಟ್ಟಲ್ಲಲ್ಲಿ ಕಾದ ಹಂಚು.
ಗಾಳಿಯೋ ಮಟಮಾಯ, ಮಾತಾಡ ಮಳೆರಾಯ
ಒಟಕರಾಗಿದೆ ಒಣಗಿ ಸೀರ ಅಂಚು.

ಬಯಲ ಬಸಿರಿಗು ಉರಿಯು; ಎಲ್ಲಿದೆಯೊ ದಯೆ ಝರಿಯು
ಉರಿಹತ್ತಿದೊಲು ಏನೊ ಉಸಿರುತಿಹುದು.
ಉಗೆಯಿಲ್ಲ, ನಗೆಯಿಲ್ಲ, ಹೊಗೆಯಿಲ್ಲದೀ ನೀರು
ಬಿಸಿಲುಗುದುರೆಯ ಹಾಗೆ ಎಸರುತಿಹುದು.

ಕಣ್ಣೀರನೂ ಕೂಡ ಕುಡಿಯಬಾರದು ಇಲ್ಲಿ
ದುಃಖವಿದ್ದರು ಕೂಡ ದೂರ ಸಲ್ಲಿ.
ಜನರು ಕಲ್ಯಾಣದೀ ಡೊಳ್ಳು ಸಪ್ಪಳದಲ್ಲಿ
ಕೆಲಸವಿಲ್ಲದ ಕುರಿಗಳಾದರಲ್ಲ.

ಸಾವಿಗೋ ತೆರವಿಲ್ಲ, ಇದು ಅಹಿಂಸೆಯ ನಾಡು
ಕಲಿತವಗು ಕಲಿಯದವಗು ಒಂದೆ ಗೂಟ.
ತಾಳಿದವ ಬಾಳ್ಯಾನು ಬದುಕಿದವ ಉಂಡಾನು
ಸರ್ವೋದಯವ ಕೊನೆಯ ಪ್ರಸ್ತದೂಟ.

ಕಳ್ಳಕಾಕರಿಗಿಲ್ಲಿ ಸ್ವಾಸ್ಥ್ಯದ ವಿಚಾರಣೆಯು
ಸ್ವಾಸ್ಥ್ಯವಿದ್ದರೆ ಅಲ್ಲಿ ಮನೆಯ ಲೂಟಿ.
ಭಿಕ್ಷೆ ನಾಚಿಕೆಗೇಡು, ರಕ್ಷೆ ದೈವಾಧೀನ
ಶಿಕ್ಷಣದ ಸಂಭ್ರಮವು ದಿನದ ರಾಟಿ.

ಅಲ್ಲನಿಮು ಗತಭೂತ ಪ್ರತ್ಯಕ್ಷ ಯಮದೂತ
ಬದುಕುವಿರೊ ಸಾಯುವಿರೊ ಒಂದ ಹೇಳಿ.
ಹೊಟ್ಟೆಯುರಿ ಎಂಬುವದು ಮಾನಸಿಕ ಮಾಡದಿರಿ
ರುದ್ರ ಕಣ್ತೆರೆದರೂ, ಯಮನ ಕೇಳಿ !

ಹೃದಯ ಭೇದಕವಾದ ಬಡತನದ ಜಯಭೇರಿ
ಬಗ್ಗರನ್ನೇರಿ ಸಾರುವದು ಒರಲಿ.
ಪಾಕ್ಷಿಕವೊ ಮಾಸಿಕವೊ ವಾರ್ಷಿಕವೊ ಏನೇನೊ
ಬರುವ ಯೋಜನೆ ಸಕಾಲಕ್ಕೆ ಬರಲಿ.

ಅಭಯ

ಈ ಜೀವವು ಬೇಡರದು
ಅದು ಬೇಟೆಯನಾಡುವದು
ಕಂಡದ್ದನ್ನು ಬೇಡುವದು
ಕೊಂದು ತಿಂದು ಬಾಳುವದು.
—ಈ ಜೀವ.

ಜನುಮದೊಡನೆ ಹುಟ್ಟಿತಣ್ಣ ಹಸಿವೆಯಂಬ ಬೆಂಕಿಯು
ತಿಂದ ಹಾಗೆ ಬೆಳೆಯುತಿಹುದು ಅದರ ಕಸುವಿನಂಕೆಯು.
ಭೋಗ ಭೋಗ ಮಹಾರೋಗ ತಲೆಯೆತ್ತಿತು ಶಂಕೆಯು.
ತಿಂದವನನೆ ತಿನ್ನುವೆ ನಾನೆನುತಿಹುದಗೊ ಡಂಕೆಯು.

ಈ ಜೀವವು ಬೇಡರದು
ಅದರಾಟವೆ ಅದರೂಟ
ಭೀತ ಪಶುಗಳೋಟ ನೋಟ
ತಿಳಿಯದಾಯ್ತು ಯಮನಾಟ.

ಮಹಾಮಾರಿ ತಪಿಸುತಿಹಳೊ ಸರ್ವಪಶುಗಳಾಟಕೆ
ತಲೆದಂಡ! ತಲೆದಂಡ! ಏಕೆ ತಾಯಿ?
ಇರಲುವಂಡ ನಿನ್ನ ಕೃಪಾಮಂಡಲ–
ಬೇರೆ ಕಾಯಿ–ಕಪ್ಪುರ, ಸುಡದಿರು ಶಿವ ಮುಪ್ಪುರ
'ಕಾಯೆ ತಾಯಿ, ಕಾಯೆ ದೇವಿ, ತಲೆಕಾಯ್ ತಲೆಕಾಯ್'

‘ಗಿರಡಿ–ಬುರಡೀ’ ಅವರ ಸಾಮಾಜಿಕ ತತ್ತ್ವಜ್ಞಾನ

ಒಳಗೊಂದು, ಏನೋ ಶೂನ್ಯ ಛುರ್ ಭುಸ್ಸ್ಯಂತಿ.
ಹೊರಗೊಂದು–ಅಂದರಿನ್ನೊಂದು, ಠಾಕು ಠೀಕಿನ ಠೀವಿ.
ಇಂದಿನಾ ಗೆಲವಿನತ್ತಣ ಒಲವು, ಓ ನಾಳೆ ಕಂಡವರಾರು ?
ಗಾಳಿ ಬಂದಾಗಲೇ ತೂರಿಕೊಂಡವ ಜಾಣ.
ಬಂದ ಪದವಿಯ ಬಿಟ್ಟ, ಮುಂದೆ ಅವನೂ ಕಾಣ !
ಪಿಟ್ಟು ಸೆಡವಿಲ್ಲದೆಯೆ ಬಿಟ್ಟಿ ದುಡಿದವ ಕೋಣ,
ಲಗಳಿಯ ದೇ. ಭ. ಎನ್ನೋಣ.

ಕಂತ್ರಾಟ ಬೆರ್ಕಿತನ ಬೇಕು, ಚೇಷ್ಟೇಯೇ ಇಲ್ಲದಗೆ ಎಲ್ಲಿದೆ ಪ್ರತಿಷ್ಠೆ ?
ಒಬ್ಬಿಬ್ಬ ಸಂಪಾದಕರು ಬಗಲಿಗೆ ಇರಲಿ; ಕೊನೆಗೆ ಬಾತ್ಮೀದಾರ,
ಇಲ್ಲವೋ ಬಾಯ್ಬಡಕ ಸಾಯ್ಕಲ್‌ಸ್ವಾರ. ಬೆಂಬಾಲಿಗರು ಬೇಕು,
ಅನುನಾಯಿಗಳು ಬೇಕು, ಛೂ ನಾಯಿಗಳು ಬೇಕು !
ಬ್ಯಾಂಕುಗೀಂಕಿನ ದೋಸ್ತಿ, ದೀನವಲಿತರ ಓಣಿಯಲ್ಲಿ ರಾತ್ರಿ ವಸ್ತಿ,
ಇರಬಾರದದು ಹಗಲೂ ಜಾಸ್ತಿ, ಹುಃಷಾರ್ !

ಹೌದು, ಮರೆತಿದ್ದೆ, ಬೇಕು ಜ್ಯೋತಿಷಿ ಮಿತ್ರ,
ತನಗೆ ಗುರುಬಲ ಸಾರಿ,
ಇದಿರಾಳಿ ರಾಸಿಗೋ ಶನಿರಾಹುಗಳ ಹೇರಿ,
ಅಸರಂತ ಕಲಕುಸ್ಮುಲಕಾಡಿಸುತ ಕುಣಿಸುತಿರ–
ಬೇಕು, ದಂತ ಕತೆಗಳ ಕವಡಿ :

ಅರಳು ಮರಳು

ಭಾಗ್ಯವೆಂಬುದು ಕೇಳು ಚಕ್ರಬಂಧದ ಒಗಟ
ಚುನಾವಣೆಯು ಕುದುರೆ ಶರ್ಯತ್ತು.
ಲಂಚಲಂಚನ್ನುಗಳ ನೀಡುತಿರಬೇಕು
ಕೋಡಗರಿಗು ಕೋಡಂಗಿಗಳಿಗೂ.

ಖಿನ್ನತೆಯು ಕ್ಷುಬ್ಧತೆಯು ತೋರಗೊಡದಲೆ
ಸಂತತವಾಗಿ ಉದ್ಭಟನ ಅನುದಾರತೆಯ ಕುಹಕತನದಲಿ
ಮುಂಗಾಲುಪುಟಿಗೆಯಲಿ ಮುನ್ನುಗ್ಗುತಿರಬೇಕು.
ಇಲ್ಲವೇ ದೊಡ್ಡ ಹುಲಿಗಳ ಬಾಲ ಎತ್ತಿ ಹಿಡಿದಿರಬೇಕು.
ಅಂತೂ ಏನು? ಅಡ್ನಾಡಿ ಎನಿಸಿಕೊಂಡರೂ
ಅಡ್ಡೀ ಏನು? ಪೇಪರಿನ ದೊಡ್ಡ ಹೆಡ್ಡಿಂಗಿನಲಿ
ಶಾಯಿನ್ ಆಗುತಿರಬೇಕು.

ಕೃಷ್ಣಪಕ್ಷದ ಮಧ್ಯರಾತ್ರಿ

‘—ಹಿಂದೆ ಎಂದೋ ಒಮ್ಮೆ ಇಂದಿನೀ ರಾತ್ರಿ
ಕೃಷ್ಣ ಹುಟ್ಟಿಪನಂತೆ—ಕೃಷ್ಣ ಹುಟ್ಟಿದನು.
ಮುಂದೆ ಎಂದೋ ಒಮ್ಮೆ ತಾ ಬರುವ ಖಾತ್ರಿ
ಕೃಷ್ಣ ಹೇಳಿದನಂತೆ—ಪಾರ್ಥ ಕೇಳಿದನು :

“ ಬಾಡಿರಲು ಬತ್ತಿರಲು ಧರ್ಮವು; ಅಧರ್ಮ
ಮೊಳೆತಿರಲು ಚಿಗಿತಿರಲು ನಾ ಬರುವೆನೆ ”ಂದು.
ಆಡಿದನು ಮಾಡಿಲ್ಲ. ಯಾರದೀ ಕರ್ಮ ?
ಇನ್ನಾದರೂ ಅವನು ಬರುವದೆಂದು ?

ಭಾರತಕ್ಕಿಂತ ರಾಮಾಯಣಕ್ಕಿಂತ
ನನ್ನ ಕಾಲವೆ ಕಾಲು ಪಾಲು ಮೇಲು.
ಕೆಟ್ಟಿಲ್ಲ ಧರ್ಮ ಹುಟ್ಟಿಲ್ಲಧರ್ಮಂತ
ಬಂದಿಲ್ಲ ದೇವರೂ; ಇರಲಿ ಬುಡಮೇಲು !

ಹುಟ್ಟಿ ಬರುವದು ಬೇಡ, ಕೆಡುವದೂ ಬೇಡ.
ದೇವನೂ ಧರ್ಮವೂ ಇವು ಎರಡು ಜೋಡಿ. ’
‘ ಕೆಟ್ಟ ಬುದ್ಧಿಯೆ ಬಾಯಿ ಮುಚ್ಚು ಕೆಡಬೇಡ.
ಮಂಗಮನವೇ ವಾದ ಸಾಕು ಖೋಡಿ. ’

ನಮ್ಮ ಬಾಳು ತೋರಿಕೆ

“ ನಮ್ಮ ಬಾಳು ತೋರಿಕೆ
ನಮ್ಮ ಹೊಸತು ಜಾರಿಕೆ
ನಮ್ಮ ಹಾಡು ಕಾರಿಕೆ
ಮಾತು ಪುಟಗೆ ಹಾರಿಕೆ
ಬಾಳ್ವೆ ಜಾರ ಜಾರಿಕೆ.

ಕುಂಟನಡಿಗೆ ನಮಗೆ ಛಂದ
ತುಂಟ ನೆನವು ಬುದ್ಧಿಯಂದ
ಇದೇ ಹೊಸತು ಕಾವ್ಯ ಬಂಧ
ಅಹುದೊ ಅಲ್ಲೊ ಹೇಳಿರಿ
ಎಚ್ಚರಾಗಿ ಬಾಳಿರಿ. ”

“ ಬಾಯಿ ತುಂಬ ಬೆಲ್ಲ ಮಾತು,
ಹೃದಯದಲ್ಲಿ ಇಲ್ಲವೋ
ಎಳ್ಳಿನಷ್ಟು ಕೂಡ ಸ್ನೇಹ.
ಮೈಯು ಮುಳ್ಳುಮುಳ್ಳಗೆ.
ಅದೇ ನಮ್ಮ ಕುಸುರುಬಾಳು
ಉಸಿರಿಗೆಂದೆ ಹೆಸರ ಬಾಳು. ”

ಕಿರಚಬೇಡ ದಮ್ಮಯ್ಯಾ
ಓ ಪಿಶಾಚಿ ಸಂಶಯಾ
ಸುಮ್ಮನಿರು ಮಹಾಶಯಾ.
ಅದೇ ಎಳ್ಳ ನಿನಗೆ ಕೊಡುವೆ
ಅದರ ಮೇಲೆ ನೀರ ಬಿಡುವೆ
    'ಓಓ ಕವಿ ಮಹಾಶಯಾ
    ತಿಳಿದೆ ನಿನ್ನ ಆಶಯಾ.'

ಮಾಗಿ ಬಂತು ಸಾಗಿ ಬಂತು
    ತಾಗಿ ಬಂತು ಜೀವಕೆ.
ಹೊಸಬಾಳಿನ ಬೆಡಗು ಸಾಕು—
    ಬೆಳಕು ಬೇಕು ಹಾಡಿಗೆ.
    ಸ್ವಾತಂತ್ರ್ಯದ ಜೋಡಿಗೆ—
    'ಹೌದು ಹೌದು ಕೇಳಿದೆ.'

ಹೃದಯದುದಯ ಪರ್ವಕಾಲ
ಅದೇ ಬೇಕು ಸರ್ವಕಾಲ
    ನಮ್ಮ ನಾಡಿನಾಡಿಗೆ
    ಅದೆ ಪಲ್ಲವಿ ಹಾಡಿಗೆ.
ದುರ್ವಾಸನ ಶಾಪ ತೀರಿ
    ಹೃದಯ ಬರಲಿ ಪಾಡಿಗೆ
    ಹೊಸ ಬಾಳಿನ ಹಾಡಿಗೆ.
    ಹಿಗ್ಗು ತಿರಲಿ ಬಿಡುಗಡೆ
    ಹಿಗ್ಗು ತಿರಲಿ ಬಿಡುಗಡೆ.

‘ ಹೊಸ ಬಾಳು, ಹೊಸ ಬಾಳು ’
ಕೂಗದಿರು ತಾಳು.
ಲಹರಿಯೋ ಜಲಧಿಯೋ
ಅಲೆ: ಏಳು ಬೀಳು.
ಮೌನಗರ್ಭದ ಬೀಜ
ಜೀವಲೋಕದ ರಾಜ.
ಸದ್ದುಗದ್ದಲವೆಲ್ಲ ಆದರ ಹೋಳು.

ಜೀವನವು ಹೊಸ ಸುಗ್ಗಿ,
ಅನ್ನ ಹಿಗ್ಗಿನ ಹುಗ್ಗಿ.
ಬದುಕು ಒಂದಿನ ತುತ್ತು
ಬಾಳು ಅಮೃತದ ಬಿತ್ತು.
ಹಾದಿ ಬೀದಿಗು ಸೂರಿ ಕಾಳು ಕಾಳು.
ಬಿತ್ತದೇ ಬೆಳೆಯೆಲ್ಲಿ?
ತಾಳು ತಾಳು.
ಕಸುವು ಹೀರಿದ ನೆಲವು
ಕಾಡು ಹಾಳು.

ನಿನ್ನಿನದು ಕಸುಗಾಯಿ
ಇಂದಿನದು ತುಸು ಪಾಡು
ನಾಳೆ ಹಣ್ಣಾದಾಗ ಬಂದೀತು ಹಾಡು.
ಹದ ಬರುವ ಮುಂಚೆಯೇ
ಕದವ ತೆರೆದರೆ ಕೇಡು
ನಿನ್ನ ನೀನೇ ಆಳು
ಏಕೆ ಅನ್ಯರಿಗಾಳು
ಸಿಳ್ಳು ಹಾಕಿದರೇನು ಬಂತು? ಹೇಳು.

ಮುಕ್ತಿಯೋ ಅನುಭವವು
ಅಲ್ಲ ಅಭಿನಯ ಭವವು
ಶಕ್ತಿಯಿಲ್ಲದ ಶಿವವು ಹುಸಿಯ ಶ್ರವವು
ಶಿವಗರ್ಭ ಶಕ್ತಿಯೇ ತಾ ನವೋನವವು.

ಸದ್ದು

ಇಂದು. ಹದ್ದು ಮೀರಿದೆ ಸದ್ದು.
ಹದ್ದು ಪಾರಾಗಿರುವ ಸಂಗೀತ, ಎಲ್ಲಿಹೆಯೊ ನಿಃಶಬ್ದ, ಮೌನ ಗುಹೆಗಳ
ಒಳಗೆ.

ಗಿರಣಿಗಳ ಕೂಗಾಟ, ಚೀರಾಟ ಒದ್ದಾಟ, ಬಡಿದಾಟ;
ಉಗೆಬಂಡಿಗಳ ಜಗ್ಗು, ಝುಂಗು ಝುಗ್ಗು, ಘುಂಗು ಭುಗ್ಗು, ನುಗ್ಗು-
ನುಗ್ಗು;
ಕಾರುಗಳ ಓಡಾಟ, ಬಸ್ಸುಗಳ ಘರ್ಘಾಟ, ಟ್ರಕ್ಕುಗಳ ಥಿಕ್ಕಿ ತಿಕ್ಕಾಟ;
ಹಾದಿ ಎಂಜಿನ್ನುಗಳ ರೋಲರಿನ ಘನೆಯ ತಿಣುಕಾಟ, ಬರಿಕಾಟ;
ಲೌಡಸ್ಪೀಕರಿನ ಬೊಬ್ಬೆಯೊಳ ಬೊಬ್ಬೆ. ಪಟ್ಟಾಕಿಯ ಧಬಧಬ್ಬೆ,
ದಿಡುಗು, ಪಿಡುಗು, ಹುಸಿಗುಡುಗು.

ಜಾಹಿರಾತು, ಸಭೆ, ಸಾರ್ವಜನಿಕ ಶಿಕ್ಷಣ, ಚುನಾವಣೆ. ನೂರೊಂದು
ಹೆಸರಿನಲಿ ಗದ್ದಲೋ ಗದ್ದಲವು.
ಹಾವಾಡಿಗರು, ಗೊಂದಲಿಗರು, ದಾಸರು, ಮುರುಗುಮುರುಗಿಗಳು.
ಮಸಣದ ಹಲಗೆ ಕುಟ್ಟುವರು. ಎಲ್ಲರೂ ಸಂದಣಿಸಿ ಒಂದಾಗಿ
ಇರುವವರ ತಾಳ್ಮೆಯ ಪರೀಕ್ಷೆಯನು ಮಾಡುವರೋ?
ಸದ್ದಿಲ್ಲದಿರುವದೇ ಸತ್ತಂತೆ ಎನಿಸುವದೋ?

ಯುದ್ಧಯುಗದಲ್ಲಿಯೂ ಬದುಕಬೇಕೆನ್ನುವವನು
ಸದ್ದಿನಲಿ ಸಾಯದಿದ್ದರೇ ಬಾಳುವನು.
ಸದ್ದಿನಾ ಕವಚದಲಿ ಧ್ವನಿಸುತಿದೆ ಸಂಗೀತ.
ಅದರ ಲಯದಲಿ ಲೀನನಾದವನಗೆ—ಶಬ್ದವೇ ನಿಃಶಬ್ದ.

ಛಾಯಾ

(ಸಂಸ್ಕೃತ)

ಅರಸು ನಡತೆಯನುಸರಿಸಿ ಲೋಕ ಒಳಿತಾಗಿ ಆಳಬೇಕು;
ಎದೆಯ ಬೆಂಕಿಗೂ ಬೂದಿಗೊಳದೆ ಬಿರುಸಾಗಿ ಬಾಳಬೇಕು;
ತಾನೆ ಕೈಯಾರೆ ಸತಿಯ ತ್ಯಜಿಸೆ ಮರ್ದನ್ಯ್ಯ ಈಗ ಕ್ಷೋಭ;
ಬಿಟ್ಟ ನಿಟ್ಟುಸಿರೆ ಬದುಕಿಸೀತು ಅತ್ತದ್ದೆ ಜೀವಲಾಭ.

ಹೋಗಬೇಡ ಪ್ರಿಯ, ಹೋಗಲೇಜೇಕೆ? ಹೋಗು ಸಂಗಡಿರುವೆ.
ನಿನ್ನ ನೆರಳಾಗಿ ನಿನ್ನ ಕರುಳಾಗಿ ಮರಳಿ ಹುಟ್ಟಿ ಬರುವೆ.
ನಿನ್ನ ನಡೆಯಲ್ಲಿ ನಿನ್ನ ಕೊಡೆಯಲ್ಲಿ ತ್ರಾಣವನ್ನು ತರುವೆ.
ಜೀವದೊಡನಾಡಿ ಎದೆಯ ಒಳನಾಡಿ ಪ್ರಾಣವೆಂದು ಇರುವೆ.

ಹೋಗಬೇಡ ಎಂದರೂ ಹೊರಟಿ ಹೋ ಹೋಗು ಇಲ್ಲ ಹೋಗು.
ತನ್ನ ತಾನೆ ದುಂಬಾಲ ಬಿದ್ದ ಕಪನೆರಳ ದೂಗು ಸೂಗು.
ಬಿಕ್ಕಿರಲಿ ನೀನು ನಕ್ಕಿರಲಿ ಎಲ್ಲು ಕೈಕೊಳುವೆ ನಿನ್ನ ತಕ್ಕೆ
ಬೆಂಬಲದೊಳುಲಿವೆ ಮುಂಬಲದೊಳಲಿವ ನಾ ನಿನ್ನ ಕಣ್ಣ ಚುಕ್ಕೆ.

ಹೋಗು ಎಂದು ನಾ ಹೇಗೆ ಎನಲಿ ಬಾ ಎನುವುದೆನ್ನ ಬಾಯಿ.
ನಿನ್ನನೊಡಗೂಡಿತೆನ್ನ ಹೃದಯ ಒಡೆದಿ ದೊ ಎದೆಯ ಕಾಯಿ.
ಕಾಲಿ ಸಾತ ಮೂಸುತ್ತ ಬಹುವ ನಾಯಕನ ಬೆನ್ನ ನಾಯಿ.
ಮರುಳಿ ನಾಸು ಸಾನೋ ಪಿಶಾಚಿ ಇದು ಅನ್ನು ಇಲ್ಲ ಸಾಯಿ.

ಕಥೆಯಾದಳು—ಹುಡುಗಿ

ಹಸಿಯಿದ್ದಳು ಬಿಸಿಯಾದಳು
ಸಸಿಯಿದ್ದಾ ಹುಡುಗಿ
ಹುಸಿಯರಿಯದ ಹುಡುಗಿ
ಕಣ್ಣೆದಿರಲ್ಲೇ ಬೆಳೆದಳು
ಹೊಸ ದೇಸಿಯ ಬೆಡಗಿ.

ಸೊಸೆಯಿದ್ದಳು ಚಿಗುರಿಟ್ಟಳು
ಉಗುರ್ಗೆಂಪಿನ ಹುಡುಗಿ
ಉಸಿರ್ಗೆಂಪಿನ ಹುಡುಗಿ
ಆಡುತ ನೋಡುತ ಬಿಟ್ಟಳು
ಊರೆಲ್ಲವನುಡುಗಿ.

ಚಿಗುರಿದ್ದಳು ಚಿಗರೆಯ ಮರಿ
ಹೂಬಿಟ್ಟಳು ಹುಡುಗಿ
ಮೊಗ್ಗಿದ್ದಾ ಹುಡುಗಿ
ಕಣ್ಕುಣಿತಕೆ ನಗೆ ಭಣಿತಕೆ
ಮನೆ ಹೋಯಿತು ನಡುಗಿ.

ಹಾ ಹಾ ಎನ್ನುತ ಬೆಳೆದಳು
ಕೂಸೆನಿಸಿದ ಹುಡುಗಿ
ವಧುವಾದಳು ಹುಡುಗಿ
ಒಗರಳಿದಿತು ಹುಳಿಯಿಳಿದಿತು
ಬೆಡಗುಳಿದಿತು ಅಡಗಿ.

ಆ ಪಾಕವೊ ಆ ಪಾಡೋ
ತಾಯಾದಳು ಹುಡುಗಿ
ಹಾಯಾದಳು ಹುಡುಗಿ
ಪಡೆದಷ್ಟೂ ಹಿಗ್ಗವಳಿಗೆ
ಮಮತೆಯ ಕಂಪಿಡುಗಿ.

ಪಾಡಾದಳು ಹಣ್ಣಾದಳು
ಮಣ್ಣಾದಳು ಹುಡುಗಿ
ನೆನಪಾದಳು ಹುಡುಗಿ
ವ್ಯಥೆಯಾದಳು ಕಥೆಯಾದಳು
ಎದೆಯೆಲ್ಲಿಯೆ ಮಡಗಿ!

—ಗೆ

ಕದ್ದು ನೋಡುವ ಕನ್ಯೆ ಎದ್ದು ಮೂಡಿಹುದಿಲ್ಲಿ
ಮುದ್ದು ಮೂರುತಿಯು ಮನದಲ್ಲಿ.
ತಿದ್ದುತಿದೆ ರಾಗದಲಿ ಚಿತ್ತವೃತ್ತಿಗಳನ್ನು
ಆಡುವದದೆಂತು ಜನದಲ್ಲಿ ?

ಮುಗ್ಧ ಕುವರಿಯೆ ನಾನು ಗೃಹಿಯಾಗಿ ನಿನ್ನನ್ನು
ನಲ್ನೋಟ ಬೇಟಕೆಳಸಿ,
ದುಗ್ಧ ದೃಷ್ಟಿಯನಿಂದು ಕವಿಸಿದೆ ಕಣ್ಣ ತಾ-
-ರಾ ಮೈತ್ರಿಯನ್ನು ಬೆಳಸಿ.

ಪಾಪವೋ ಪುಣ್ಯವೋ ತಿಳಿಯದವರಿಗೆ, ನಿನ್ನ
ಮುಖತೀರ್ಥಕೆಂದು ಬಂದೆ.
ಶಾಪ ಕೊಡದಿರು ನನಗೆ, ತಿಳಿದ ಮೇಲ್ ಮುನಿಸಾಗಿ
ಹೇ ಕುವರಿ ಗೌರಿ ವಂದೇ !

ಸೃಷ್ಟಿಚುಂಬಕ ನಿನ್ನ ದೃಷ್ಟಿಯಿಂದಲಿ ನನ್ನ
ಸಂಚಾರಿ ಮನವ ಕರೆದೆ.
ವೃಷ್ಟಿಯಂದದಿ ಬಂದು ಪತರಿಂದೋ ಎರೆದೆ
ಜಿನುಗಾಗಿ ಜೇನುಗರೆದೆ.

ಮುಖತೀರ್ಥದಲಿ ಮಿಂದು ದೃಷ್ಟಿಪಾವನವಾಗಿ
ಬರಲೆಂದು ಹರಕೆ ಹೊತ್ತು.
ಸುಖಿಯಾಗಿ ನೋಡುತಿಹೆ, ಶುದ್ಧವಾಗುವದೆಲ್ಲ
ನಿನ್ನದದು ನಿನಗೆ ಗೊತ್ತು.

ನಿನ್ನ ಚಿತ್ತದಲಾವ ವೃತ್ತಿಗಳು ಅರಳಿಹವೊ
ಅನುಭವವ ಬಲ್ಲೆ ನೀನೆ.
ಕನ್ನೆ ಚೆನ್ನೇ ನನ್ನ ನಲ್ಲಮ್ಮನಿಂ ಬಂದ
ನೀನೊಂದು ಕಿರಣವೇನೇ ?

ಬಿಡದೆನ್ನ ನಿನ್ನೆದೆಯ ನೀರಿನಿಂದೆರೆದೆನ್ನ
ಮನದುರಿಯನಾರಿಸವ್ವ.
ಕುಡುಕು ಮನವಿತ್ತೀಚೆ ಅಡಿಗಡಿಗೆ ಎಡವುತಿದೆ
ಪತನವ ನಿವಾರಿಸವ್ವ.

ಹುರುಳು ತಿಳಿಯದೆ ಅಮ್ಮ? ಇಂತಹ ವಿಕಾರಗಳ
ಏನಾಗುದೇನು ಪಾಡು ?
ಕರುಳುವಳ್ಳಿಯು ಕುಡಿಯು ಚಿವುಟಿ ಸೊನೆಗರೆಸುತಿಹೆ
ಇಂಥ ಹಾಲುಳ್ಳ ಹಾಡು—

ಇವನೊಬ್ಬ ಬೈರಾಗಿ—

ಬಾಳ್ವೆಯಾ ಬಾಳುವೆಯು ಪೊಳ್ಳು ಬಾಳುವೆಯೇ
ಬಾಳ್ವೆಯೆಂತಿದು ತಿಳಿಯೆ ಸುಳ್ಳು ಬಾಳುವೆಯೇ.
ಬಾಳ್ವೆಯಾ ಬಾಳುವೆಯೆ? ಕಳ್ಳ ಬಾಳುವೆಯೇ
ಬಾಳ್ವೆಯೆಂತಿದು ಕಾಣೆ ಮಳ್ಳ ಬಾಳುವೆಯೇ.

ಬಾಳಲಾರದ ಬಾಳ್ವೆ ಬಾಳ್ವೆಯಹುದೇನು?
ತಾಳಲಾರದ ತಾಳ್ಮೆ ತಾಳ್ಮೆಯಹುದೇನು?
ಬಾಳು ತಾಳುಗಳಿಲ್ಲದಂಥ ಜೀವನವೇ!
ಬಾಳದೇ ತಾಳುವದದೇನು ಜೀವನವೇ?

ಹೊತ್ತು ಹಾವಿನ ಹಾಗೆ ತನ್ನ ತತ್ತಿಗಳ-
ನ್ನೆತ್ತಿ ನುಂಗುವದಯ್ಯೊ! ನಮ್ಮ ನೆತ್ತಿಗಳ-
ನ್ನೊತ್ತಿ ಹಿಚುಕುತ್ತಿರಲು ಮಾಕಾಲ ಬಂದು
ಕುತ್ತುಸುರನಾಡಿಸುವೆವಜ್ಞರೇಕೆಂದು?

ಸಾವೆಂಬ ಹಾವಿನಾ ಹೆಡೆಯ ನೆರಳೊಳಗೆ
ಜೀವಿಸುವ ಭಾವಿಸುವ ಮೂಢ ಜಗದೊಳಗೆ
ನಕ್ಕು ನಲಿದಾಡುವರು ಕೆಲರು ಸನ್ನಿಯೊಳು
ಬಿಕ್ಕಿ ದುಃಖಿಸುವವರು ಹಲವು ಸನ್ನಿಯೊಳು.

ದೆವ್ವಗಾಳಿಯು ತೂರಿದಂಥ ಹುಡಿಯಂತೆ
ಭವ್ವನೇ ನೆರೆಯುವದು ಜೀವಗಳ ಸಂತೆ
ಯಾರಿಗಾರೊ ಏನಿಗೇನೊ ಆಗುವದು
ಹಾರಿ ಹಾರದೆ ಕಣ್ಣುಕಟ್ಟು ಸಾಗುವದು.

ನಡೆಯುವದು ತಡೆಯುವದು ಮೇಲೆ ಏಳುವದು
ಹುಡಿಯು ಹಾರಾಡುವದು ಹುಡಿಯು ಬೀಳುವದು
ಹುಡಿಗೆ ಆಟವಿದಲ್ಲ ಪ್ರಾಣಸಂಕಟವು
ಹುಡಿಯಾಟವೆನ್ನುವದು ಯಾವ ಹಟವು ?

ಗಾಳಿ ಗಾಳಿಗೆ ಕೂಡಿ ಬೈಲು ಬೈಲಾಗಿ
ಗಾಳಿ ಬೈಲುಗಳಾಟ ಮುಂದಕ್ಕೆ ಸಾಗಿ
ಬಾಳು ಬದುಕಿನ ಮೊಗದಿ ಹೆಣದ ಕಳೆಯಿಹುದು
ಹಾಳು ಜಗಕೆಲ್ಲ ಸುಡುಗಾಡ ಬಳೆಯಿಹುದು.

ಬೇಡ ಈ ಸುಡುಗಾಡ ಸಿದ್ಧನಾಟ
ನೋಡೆನ್ನೈ ನಾನು ಬೇತಾಳಗಳ ಬೇಟ.

ನಿರ್ಧಾರ

ಹೊರಹೊರಡು ಹೊರಹೊರಡು ಗಡಿಪಾರು ಮಾಡಿರುವೆ
ನನ್ನ ತಿಳಿಗೇಡಿತನವೇ.
ನನ್ನ ಒಣಹೇಡಿತನವೇ.
ಹೊರಡು ಕಾಲಿಡಬೇಡ. ಒಳಗೆ ಬರಗೊಡಬೇಡ
ಹೇಳಿರುವೆ ಕೇಳು ಮನವೇ.

ಅಳಿಯುನಂದದಿದನ್ನು ಬಳಿಯಲ್ಲಿ ಬೆಳಿಸಿದೆನು
ಹಳಿಯೆ ಕೆಟ್ಟೀತು ಎಂದು,
ತಿಳಿವು ಹುಟ್ಟೀತು ಎಂದು.
ಅಳಿಯದೇ ಬೆಳೆಯುತಿದೆ. ತಿಳಿಗೇಡಿತನದ ಬೆಳೆ,
ನನಗೆ ಮುಳುವಾಯಿತಿಂದು.

ಜನರೊಳಗೆ ನಗೆಗೇಡು ಜಗದೊಳಗೆ ನಗೆಗೇಡು
ಮಾಡುವೆನಿದನ್ನು ನಾನು.
ಕಾಡುವೆನಿದನ್ನು ನಾನು.
ನನಗೇನು ? ಆಗಿ ಬೈರಾಗಿ ಅಥವಾ ಜೋಗಿ
ಹೋಗು ಸಿಕ್ಕಲ್ಲಿ ನೀನು.

ಹುಚ್ಚನೆನ್ನಲಿ ಜನರು, ಕೊಚ್ಚನೆನ್ನಲಿ ಜಗವು
ಮುಚ್ಚಿಡುವದಾಗದಿನ್ನು
ಬಚ್ಚಿಡುವದೇಕದನ್ನು ?
ಸಿಚ್ಚಳಾಗಲಿ ಜನಕು ಸಿಚ್ಚಳಾಗಲಿ ಮನಕು
ನನ್ನ ಮರವಿನ್ನು ಮುನ್ನು.

ತಿಳಿಗೇಡಿತನವ ತಲೆಯೊಡೆದು ಹೋಗಲಿ, ಸಾಕು
ಕಣ್ಣಮುಚ್ಚಣಿಕೆಯಾಟ
ಕಣ್ಣನಿಚ್ಚಣಿಕೆಯಾಟ.
ತಿಳಿಯಾಗಲೆನಗೆನ್ನ ಜಾಣತನ, ಕೋಣತನ
ಬೇಡ, ಮೂಢತೆಯ ಮಾಟ.

ವೃತ್ತ-ಲಹರಿ

ಗಂಗಾಸಂಗಾಕುಲಿತಮನವೇ ಮಾನಸೋದ್ದೀಪ್ತವಾಗಿ
ದಂಗಾದಂತೇ ಹರಿಯುತಿಹುದ್ಯೈ ತನ್ನನೇ ಕೂಡಲಾಗಿ
ಒಂದಕ್ಕೊಂದಾ ಎಳೆತ ಬಲಿತ್ತೇ ಸಂದಿತ್ತೋ ಒಂದು ನೂಲು
ಸಂಧಾನಕ್ಕೇ ಕವನ ಕಲಿತ್ತೋ ಹೊಂದಿಬಂದಂತೆ ಸಾಲು.

ನನ್ನಾ ಆಶಾ-ಸಫಲ-ಸುಫಲಾಕ್ರಾಂತ-ಸಿಭ್ರಾಂತ-ವಲ್ಲೀ,
ಹೊನ್ನಾದಂತೇ ಕುಸುಮಿಸುವದೋ ಎಂದು ಯಾವಾಗ ಎಲ್ಲಿ ?
ಕಣ್ಣಲ್ಲೇನೇ ಕುಡಿ ಕುದುರಿಸುತ್ತಿದ್ದೆ ನಾ ಎಂದಿನಿಂದೋ.
ಅಣ್ಣಾ ಕಂಡ್ಯಾ ! ಎನುತ ಬಹದ್ಯೈ ತಾನು ಸಾಕ್ಷಾತ್ತು ಎಂದೋ ?

‘ಎಂದೋ ಎಂತಾ ಕ್ಷಣ ಬರುವದೋ’ ಎಂದು ಎನ್ನುತ್ತ ನಿಂತೆ.
ನಿಂತೇ ನಿಂತೇ ದಿನ ಉರುಳಿತ್ತೋ ಪೃಥ್ವಿ ಸುತ್ತಿತ್ತು ಅಂತೆ.
ಎಂತೋ ಏನೋ ಲಯ ಘಟಿಸಿತ್ತೋ ನಾನು ಒಂದಾದೆ ಸೇರಿ
ಮಂದಾಕ್ರಾಂತಾಮನನಲಹರೀ ತಾನೆ ಹೋಗಿತ್ತು ಜಾರಿ.

ಮಳೆಗಾಲ

ಅಡಗಿದೆ ದೃಷ್ಟಿ—
ಆದರು, ಸುರಿಯುತ್ತಿದೆ ವೃಷ್ಟಿ!
ಮೋಡದ ಮೇಲ್ಮೋಡ.
ತಿಳಿಯದು ಏನಿದೆಯೋ ಗೂಢ!

ನಸುಕಿನ ಹಕ್ಕಿಯ ಚಿಲಿಪಿಲಿಯಿಲ್ಲ.
ಗೊಟಗುರ್ಡುತಿವೆ ಕಪ್ಪೆ.
ಜೀರುಂಡೆಯ ಕಿಲಕಿಲ ಇಪುಕಿಡುಗಿದೆ
ದುರ್ದಿನಕಿದು ತಪ್ಪೇ?

ಹಸಿರಿನ ಉಲ್ಲಾಸಕೆ ಮಿತಿಯಿಲ್ಲ.
ಕೆಸರಿಗಿಲ್ಲ ಕೊರತಿ.
ಪಾತರಗಿತ್ತಿಯು ಸುಳಿದಾಡುತ್ತಿದೆ.
ಮನೆ ಹಿಡಿದಳು ಗರತಿ.

ಬಾನ್ ತುಂಬಿದೆ, ಕೆರೆ ತುಂಬಿದೆ,
ಹೂ ತುಂಬಿದೆ ಬೇಲಿ.
ಸೀರಲದಲಿ ರಸ ತುಂಬಿದೆ,
ಮಿದುವಾಗಿದೆ ಜಾಲಿ.

ಕವನಗಳ ಪ್ರಥಮ ಚರಣಗಳ ಅಕ್ಷರಾನುಕ್ರಮಣಿಕೆ

ಸಂದರ್ಭ ಸೂಚಿ

ಸೂರ್ಯಪಾನ:

೧. 'ಸೂರ್ಯಪಾನ' ವಿಜ್ಞಾನದ ಜ್ಯೋತಿಗಾಗಿ ತಪಿಸುವ ಹೃದಯ ಕಮಲವನ್ನು ಪ್ರತಿಮಿಸುವದು.

೨. ಸಂಗೀತ, ಚಿತ್ರ, ನೃತ್ಯ, ನಾಟಕ, ಜೀವನ, ವಾಸ್ತು, ಸಾಹಿತ್ಯ ಇವು ಸಪ್ತಕಲೆಗಳು. ಈ ಕಲಾಲಹರಿಯಲ್ಲಿ ಮಾನವನ ಬಹುಮುಖ ವೃದ್ಧಿ ಸಪ್ತಕಲೆಯ ಗುಮ್ಮಟದಲ್ಲಿ ನಿನಾದಗೊಂಡು ಸಾಮಗಾನವಾಗಿ ಕೇಳಿಸಿದೆ.

೩. ವಿಶ್ವರೂಪದರ್ಶನಕ್ಕಾಗಿ ಹಾತೊರೆದು ಅದನ್ನು ನೋಡಿದ ಅರ್ಜುನ, ಅದರಲ್ಲಿ ಅಭಿಮನ್ಯು ವಧೆಯನ್ನು ಮೊದಲೇ ಕಂಡು ದರ್ಶನಬೇಡ, ಶ್ರದ್ಧೆಯೇ ಸದ್ಯಕ್ಕೆ ಸಾಕು ಎನ್ನುತ್ತಾನೆ. ನರನ 'ನರಮನಸು' ಸಾಯದೆ ನಿಜವನ್ನು ಕಾಣುವ ಸನ್ನೇತ್ರಗಳು ಬಾರವು.

೪-೭. ಮಹಾತ್ಮಾ ಗಾಂಧಿಯವರಿಗೆ ಶ್ರದ್ಧಾಂಜಲಿ.

೮. ಸ್ವಾತಂತ್ರ್ಯದ ದಿನದ ಗೀತ.

೯. ಬೇಂದ್ರೆಯವರಿಗೆ ಸಂಖ್ಯಾರಹಸ್ಯವನ್ನು ಭೇದಿಸುವದರಲ್ಲಿ ಆಸಕ್ತಿ ಬಹಳ. ಸಂಖ್ಯಾಧ್ಯಾನದಿಂದ ರೂಪುಗೊಂಡ ಈ ಸೂಕ್ತಿ-ಮಾಲೆಯಲ್ಲಿ ವಿಶ್ವ ರಚನೆಯ ವಿವರಣೆ ಸಂಖ್ಯಾಂಕಿತವಾಗಿ ಬಂದಿದೆ.

೧೦. 'ಮಾತು-ಮೌನದ ಪ್ರತಿಮೆ.

ಮೌನ ಮಾತಿನ ದ್ವೈಪ' ಎಂಬ ಭಾವಲಹರಿ ಈ ಕವನದಲ್ಲಿದೆ.

೧೧. ಸಾಹಿತ್ಯ-ಕಾವ್ಯ ಬರಿ ವಿಲಾಸವಲ್ಲ. ಅದು ಕಲ್ಯಾಣ ಕರೆಯುವ ಮಯೂರ ನೃತ್ಯ-ಯಜ್ಞರೂಪ. ನೃತ್ಯ ಯಜ್ಞದ ಮಯೂರನೇ 'ಕಣಸು' ಕವನದ ಬೀಜವಿರಬಹುದು.

೧೨. ದರ್ಶನದಂತೆ ಫಲಿಪಿದೆ. ರುದ್ರ ಕಂಡವರಿಗೆ ರೌದ್ರ, ಶಿವ ಕಂಡವರಿಗೆ ಸರ್ವಮಂಗಳ. ಅದು ಭವಿಷ್ಯತ್ತಿನ ಉದ್ಭವ.

೧೩-೧೫. ಪ್ರೇಮದ ಬೀಜ ಒಳಗೆ ಪಡೆದು ಹೊರಗೆ ಬಿತ್ತುವ ಜೀವ ತಪದಿಂದ ವೈಭವ ಸಮೃದ್ಧಿಯಾಗುತ್ತದೆ.

೧೬. ಸಮೀಕ್ಷೆಯ ನೆಪದಲ್ಲಿ ಅಪಾರ್ಥ ಪ್ರಪಂಚ ಬೆಳಸಿ, ವಿರಸವನ್ನೆ ಸರಸವೆಂದು ತಿಳಿವಳಿಕೆಗೀಡಾದವರ ವಾಕ್-ದುರ್ವಿಲಾಸವನ್ನು ನೋಡಿ.

೧೭. ಭಕ್ತ, ಶುಷ್ಕ ವಿರಕ್ತನಲ್ಲ-ಭಗವದನುರಕ್ತ. ಅವನದು ಮೌಲಿಕ ತ್ಯಾಗ. ಉಳಿದುದು ಕ್ಷುದ್ರ ಅಲ್ಪ.

೧೮. Civilization ಮತ್ತು Culture ಇವುಗಳ ಹೆಸರಿನಲ್ಲಿ ಸಂಶೋಧನೆ ನಡೆಸಿ ಸಪ್ರತಿಷ್ಠೆ ಬೆಳೆಸಿಕೊಳ್ಳುವ ಭೇದಬೌದ್ಧಿಕರನ್ನು ಕುರಿತು ಬರೆದ ಕವನ.

೧೯-೨೩. ಜಗನ್ನಾಥ ಪಂಡಿತರ ಭಕ್ತಿ ವಾತ್ಸಲ್ಯಗೀತವಾದ ಗಂಗಾಲಹರಿಯ ಮೊದಲ ಚರಣ 'ಸಮೃದ್ಧಂ ಸೌಭಾಗ್ಯಂ ಸಕಲ ವಸುಧಾಯಾಃ ಕಿಮಪಿತತ' ಎಂಬುದರ ಪದಪದವನ್ನು ಸ್ಮರಿಸಿ ಗಂಗೆಯ ವಿಭೂತಿಮತ್ತ್ವವನ್ನು ಬಣ್ಣಿಸಿದೆ.

೨೪. 'ಭೂ' ಧ್ಯಾನ ಜನಿತ ಭಾವ.

೨೫. ನವಯುಗವು ಅನಿವಾರ್ಯವಾಗಿ ಬಂದಂತೆ ತೋರಿದರೂ ಒಳಗೆ ಸಿದ್ಧತೆ ಇರದೆ ಹೊರಗೆ ಪಾತ್ರ ಬರಲಾರದು, ಒಳಗೆ ಬರಿಯ ಕ್ಷೋಭವಿದ್ದರೆ ಹೊರಗೂ ಅದೇ ಫಲ.

೨೬. ಬಾಯ್ಬಡಕ ರಾಜಕೀಯ ವೇದಾಂತಿಗಳಿಗೆ ಕೊರತೆ ಇಲ್ಲದ ಕಾಲವಿದು. ಚಾರ್ವಾಕ ಅವರ ಮೂಲಪುರುಷ.

೨೭. ದುಷ್ಟ ಜೀವಗಳು ಮೂಢ ಮುಗ್ಧ ಜೀವಗಳನ್ನು ಕುಣಿಸಿ ಉಪಜೀವನ ಮಾಡುತ್ತವೆ. ಸುಳ್ಳು ಸಾತ್ವಿಕತೆಯನ್ನು ಮೆರೆಸುತ್ತವೆ. ಒಂದು ಕಾರುಣ್ಯಗೀತ.

೨೮. ಅಣ್ಣ ಮಾಸ್ತಿಯವರೊಡನೆ ಚೆನ್ನಕೇಶವನ ಪ್ರಥಮ ದರ್ಶನ ವಾಯಿತು. ಮತ್ತೊಮ್ಮೆ ಬೇಲೂರ ದೇಗುಲವನ್ನು ಕಂಡಾಗ ಮೂಡಿಬಂದ ಕವನ.

೨೯. ೧೯೪೦-೪೨ರ ಕಾಲ, ಯುದ್ಧ ಧರ್ಮವಾದಾಗ ಯುದ್ಧ ಪರಾಙ್ಮುಖತೆ ಅಧರ್ಮ.

೩೦. ಧರ್ಮವಿರುದ್ಧವಾದ ಅರ್ಥಕಾಮುಗಳಲ್ಲಿ ಆಸಕ್ತರಾದವರು ಯಮ ದೇವನ ಒಕ್ಕಲು. ಅವರಿಗೆ ಮರಣದಿಂದ ಬಿಡುಗಡೆಯಿಲ್ಲ.

೩೧. ಕಣ್ಣಿಗೆ ನಾಯಿ. ಒಳಗೆ ಯಾವ ಜೀವ ತೊಳಲುವದೊ ತಪಿಸು ವದೊ. ಅದರ ಹೃದಯದ ಹೃದ್ಯ ವೇದನೆಯೇ ಗೀತ.

೩೨. ಕೋಲಹಾಡು ನರ-ನಾರಿಯರ ಹೃದಯಗೀತ. ಬೇಂದ್ರೆಯವರ "ಫಜಾರಗಟ್ಟಿ ಮುಟ್ಟೋಣ ಬಾ" ಎಂಬ ಕವನವನ್ನು ನೋಡಬಹುದು.

೩೩. ಸ್ಮಿತರಹಿತ ಗಾಂಭೀರ್ಯದಲ್ಲಿ 'ಅಸ್ಮಿ-ತಾ' ದೇವತೆ ನೆಲೆಸಿ ದ್ದಾಳೆ. ಆಕೆಯ ಗುಹೆ ಹೊಕ್ಕು ಈ ಷಟ್ ದರ್ಶನ ಪಡೆಯುವದೇ ಪಾವನತೆ.

೩೪. ಉಪಮಾ ವ್ಯಾಪಾರದಲ್ಲಿ ಕವಿ ಭೇದದಲ್ಲಿ ಅಭೇದವನ್ನು, ಅಭೇದ ದಲ್ಲಿ ಭೇದವನ್ನು ಅನುಭವಿಸುವನು. ಅದರ ಚಾರುತ್ವ ಬರಿ ಚಮತ್ಕೃತಿಯಲ್ಲ.

೩೫. ರೌದ್ರ ತೀರಿದ ಮೇಲೆ ಶಿವದ ಸರ್ವಮಂಗಲ ಬರುವದು. ಬರಿ ರೌದ್ರ ಶಕ್ತಿನಾಶ.

೩೬. ಶಕ್ತಿ ಜೀವನದ ದರ್ಶನ ಗೀತ.

೩೭. ಜೀವಗೀತ.

೩೮. ಪರರನ್ನು ಬಂಧನದಲ್ಲಿಡುವದು ಮುಕ್ತಿಯ ರೀತಿಯಲ್ಲ. ಸಂಬಂ ಧದ ಅರಿವಿನಿಂದ ಬಂಧನದ ಬಾಧಕ ಹೋಗುವದು. ಅದು ಮುಕ್ತಿಯ ಹಾದಿ.

೩೯. ತಾಯಿ ತೀರಿಕೊಂಡಮೇಲೆ ಅನುತಾಪದಿಂದ ಬಂದ ಭಾವಗೀತ.

೪೦. ಸಾಧನ ಕಾಲದ ಪ್ರಾರ್ಥನೆ.

೪೧. ಕನ್ನಡ ರಾಷ್ಟ್ರಗೀತೆ ಜಾನಪದದ ಛಂದದಲ್ಲಿ.

೪೨. ಮೌನಲೀನ ಗೆಳೆಯ ಮಧುರ ಚೆನ್ನನನ್ನು ಕುರಿತು ಬರೆದದ್ದು.

೪೩. ಗೆಳೆಯ ವಿನೀತ ರಾಮಚಂದ್ರ (ಜೋ[illegible]ವಿ) ರಾಯರ ಕರೆಗೆ ಓಗೊಟ್ಟು ಅವರ ಎಳೆತನದಲ್ಲಿ ಅವರಿಗಾಗಿ ಪ್ರಾರ್ಥನೆ.

೪೪. ಗೆಳೆಯ ದಿವಂಗತ ಮಧುರ ಚೆನ್ನನ ಗೆಳೆತನದ ಪ್ರೇಮೋನ್ಮಾದದ ಪ್ರಾಯದಲ್ಲಿ ಬರೆದುದು.

೪೫. ಒಂದು ಪ್ರಾರ್ಥನೆ. ಕೆಲವು ಸೂಕ್ತಿಗಳಿಂದ ಪ್ರೇರಿತ.

೪೬. ಸಂಕಷ್ಟದ ದರ್ಶನದಿಂದ ಅದರ ಪರಿಹಾರಕ್ಕೆ ಮಾಡಿದ ಪ್ರಾರ್ಥನೆ.

೪೭. ಬಡತನವೆಂದರೆ ಬೇಂದ್ರೆಯವರ ಹೃದಯ ಕಲಕಿ ಕಷಾಯವಾಗುವದು. ಅದರ ಕ್ಷೋಭದೊಳಗಿಂದ ಮುಂದಿನ ಹಾದಿಯನ್ನು ತೆರೆಯಲು ಅವರ ಜೀವ ಪ್ರಯತ್ನಿಸಿ ಆಗಾಗ ಉದ್ಗರಿಸುತ್ತದೆ. ಅಂಥ ಕ್ಷುಬ್ಧೋಕ್ತಿ.

೪೮. ಯುವಕರ ಕನಸು ನನಸಾಗಬೇಕಾದರೆ ಮೂರು ನೆರೆಗಳು ಬಿಡಬೇಕು. ಸೂತ್ರ ಗರ್ಭಿತ ಉಕ್ತಿ.

೪೯. ಧ್ರುವ ಸಪ್ತರ್ಷಿಗಳ ದರ್ಶನ ಧ್ಯಾನದಿಂದ ಬಂದ ಭಾವವಿಸ್ತಾರ. ಋತುಗಾನದ ಬೇರೊಂದು ಬಗೆ.

೫೦. ಅನೇಕ ಶ್ರಾವಣ ಗೀತಗಳಲ್ಲಿದೊಂದು.

೫೧. ವಿಶ್ವಗೀತ ಮಾನವೈಕ್ಯ ಭಾವಗೀತ.

೫೨. ಭಕ್ತಿ ಗರ್ಭಿತವಿರದಿದ್ದರೆ ಇಂಥ ಜೀವ ಅನಾರೋಗ್ಯಕರ-ಭೀಷಣವಾಗಿದೆ.

೫೩. ಸತ್-ಚಿತ್. ಇರುವುದರ ಅರಿವಿನ ವಿವೇಕ ಇರುವಿನ ತಕ್ಕ ಅರಿವರಳಿಲ್ಲ. ಅರಿವು ಇರುವೆಯನ್ನಿದೆ.

೫೪. ನಾದಾನು ಸಂಧಾನ 'ಅಸ್ಮಿ' ಭಾವಾನು ಸಂಧಾನ.

೫೫. ಪ್ರತಿಮಾಧ್ಯಾನಜನಿತ ಮೋಡಮಿಂಚು.

೫೬. ಕಿಡಿ-ಧ್ಯಾನಜನಿತ ಮೀನ-ನಕ್ಷತ್ರ ಕಣ್ಣು-ಜೀವ ಈಶ.

೫೭. ಕರ್ನಾಟಕ ಪಂಚಾಂಗಯುಕ್ತ ಕರ್ನಾಟಕದ ನಿರ್ಮಿತಿಯು ಕಾಲ–ಪಂಚಾಂಗ ಪೂರ್ಣವಾಗಬೇಕು.

೫೮. ಜನೆವರಿ ೨೬ ನೆಯ ದಿನದ ಅನುಸ್ಮರಣ. ಕೋರಿಯಾ ಯುದ್ಧದ ಕಾಲದಲ್ಲಿ ಬರೆದುದು.

೫೯. ಸಿಂಹದಂತೆ ಕಾಣುವ ಹೂವು ಸೂರ್ಯಪಾನದಿಂದ ಪ್ರಾರಂಭ, ನವಿಲುಗರಿಗಳಿದ್ದ ಸಿಂಹ ಮುಖದ ಕಣಸಿನಿಂದ ಕೊನೆ.

ಹೃದಯಸಮುದ್ರ :

೧. ಶ್ರೀ ಅರವಿಂದರ ಅತಿಮಾನಸ ಸಾಕ್ಷಾತ್ಕಾರದಿಂದ ಬಂದ ಸಂಸಾರೋತ್ತಾರಕ ಕರೆಯನ್ನೇ ನೆನಿಸಿ ಈ ಭಾವಲಹರಿ ಉತ್ಕಟತೆಯನ್ನು ತಾಳಿದೆ.

೨. ಶ್ರೀ ಅರವಿಂದರ ಭಾವಚಿತ್ರದ ದರ್ಶನದಿಂದ ಉದ್ದೀಪ್ತವಾದ ಚಿತ್ರ ಮತ್ತು ಭಾವ.

೩-೪-೫. ಮೊದಲನೆಯದು ನಮ್ಮ ನಮ್ಮ ಚಿತ್‌ಪ್ರಕೃತಿಯ ಪುರುಷನಿಗೂ, ಸರ್ವಕ್ಷೇತ್ರಗಳ ಕ್ಷೇತ್ರಜ್ಞನಿಗೂ ಸಂಬಂಧ ಬೆಳೆಯುವಂತೆ ಶ್ರೀ ಗುರು ಕರುಣಿಸಬೇಕೆಂಬ ಪ್ರಾರ್ಥನೆ.

ಎರಡನೆಯದು ಮಾತ್ರ ಶ್ರೀಯವರ ನೆನಪು ಜನ್ಮಜನ್ಮಾಂತರದ ಸ್ಮೃತಿಯ ಆಳದಲ್ಲಿ ಮಿಸುಕಾಡುವದೆಂಬ ಸ್ಫುರಣದಿಂದ ಬಂದುದು.

ಮೂರನೆಯದು ಒಂದು ವಿಶೇಷ ಅನುಭವ. ಅದರ ವರ್ಣನೆ ಅಲ್ಲಿಯೇ ಇದೆ.

೬. ಶ್ರೀ ಅರವಿಂದರ ತನ್ಮಯತೆಯ ಚಿತ್ರ ಇಲ್ಲಿ ಮೂರ್ತಿಸಲಾಗಿದೆ.

೭. ಶ್ರೀ ಅರವಿಂದರ ಮತ್ತು ಮದರ್ ಅವರ ದರ್ಶನಭಾವವು ಹೀಗೆ ಉದ್ದೀಪನಗೊಂಡಾಗ ಕಂಡ ದರ್ಶನವೈಚಿತ್ರ್ಯ ವರ್ಣಿತವಾಗಿದೆ.

೮. ಶ್ರೀ ಗುರುಸ್ಮರಣೆ ಗುಡಿಯ ಗಂಟೆಯ ಆಹ್ವಾನದಂತೆ ಉದ್ದೀಪಿಸಿದಾಗ ಜೀವನದಲ್ಲಿ ನರ್ತನದಂಥ ಸೊಗಸು ಮೂಡುವದು.

೯. ೫ ಡಿಸೆಂಬರ ೧೯೫೦ ರಂದು ಶ್ರೀ ಅರವಿಂದರು ದೇಹವಿಟ್ಟರು. ಅವರ ಸಮಾಧಿಯ ದರ್ಶನವನ್ನು ಮಾಡಿಕೊಂಡು ಆಶ್ರಮದಿಂದ ಮರಳುವಾಗ

ಹೃದ್ರಂಗದಲ್ಲಿ ಅನುಪಮ ಪ್ರತಿಮೆಗಳ ಒಂದು ಜಾತ್ರೆಯೇ ನೆರೆಯಿತು. ಅವುಗಳನ್ನು ಭಾವಗಮ್ಯವಾಗಿ ಮಾಡಿಕೊಳ್ಳಲು ಕಲ್ಪನಾಸೂತ್ರದಿಂದ ಪವಣಿಸಿಯೂ ಹೆಣೆಯೂ ಕೊಂಡದ್ದಾಗಿದೆ. ಅವರ ಮಹಾಪ್ರಸ್ಥಾನ ಜೀವದ ಜ್ಞಾನಾವತಾರದ ಉತ್ಥಾನ ಎಂಬ ಪ್ರಭಾವ ಇಲ್ಲಿ ಉದ್ಭವಿಸಿದೆ. ಇದನ್ನು ಸಾವಧಾನದಿಂದಲೂ ಇಲ್ಲಿಯ ಸಿಷ್ಠಿಯ ಸ್ವರೂಪವನ್ನು ಅರಿತುಕೊಳ್ಳಬೇಕೆಂಬ ಕುತೂಹಲದಿಂದಲೂ ಓದಿಕೊಳ್ಳಬೇಕು. ಈ ಓದಿನಿಂದ ಅವರವರ ಭಾವೋದ್ದೀಪನವಾದರೆ ಅದೇ ಅದರ ಫಲ. ಇದರೊಳಗಿಂದ ತಿಳಿಯುವ ಸಾಲುಗಳಿಂದ ತಿಳಿಯದ ಸಾಲುಗಳಿಗೆ ಸಂಬಂಧ ಹೊಂದಿಸಿಕೊಳ್ಳಬೇಕು. ಆ ವಿಫಲ ಪ್ರಯತ್ನದಲ್ಲಿಯೂ ಸಾಫಲ್ಯದ ಬೀಜ ಕಾಣಬಹುದೆಂಬ ನಂಬಿಗೆಯಿದೆ.

೧೦ ಒಂದು ಪ್ರಾರ್ಥನೆ.

೧೧. ಮದರ್ ಅವರ ದರ್ಶನಕ್ಕಾಗಿ ನಿರೀಕ್ಷೆಯಲ್ಲಿದ್ದಾಗ ಪ್ರದೀಪ್ತವಾದ ಭಾವಚಿತ್ರ.

೧೨. ಒಂದು ಪ್ರಾರ್ಥನಾಷ್ಟಕ. ತಾಯಿಯವರ ಪಾದಗಳಿಗೆ ಮಾಡಿದ ವಂದನೆ.

೧೩. ಒಂದನ್ನು ಹಲವೊಂದಾಗಿ ತುಂಡರಿಸಿ ಪಾಖಂಡವಾಗಿ ಚಿತ್ತರಿಸುವ ದಿತಿಯ ಭಾವ; ದೈತ್ಯ ಮಾರ್ಗ!

ಅ–ದಿತಿ ಅನಂತತೆಯ ಅಸಂಖ್ಯಾತ ಮುಖಗಳಲ್ಲಿ ಏಕಮುಖತೆಯ ಮಿಂಚು ಮೂಡಿಸುವ ಆದಿಜ್ಞಾನಶಕ್ತಿ. ಭಗವಂತನ ಆ ಭಾಗವತ ಶಕ್ತಿಯನ್ನು ಕುರಿತು. ಇಂದಿನ ಪ್ರಪಂಚದ ಏಕೀಕರಣಕ್ಕೆ ಆ ಶಕ್ತಿಯ ಅಧಿಷ್ಠಾನ ಬೇಕು.

೧೪. ಕನಸಿನ ಸಂಚಾರಗಳಲ್ಲಿ ತನ್ನ ಸ್ವಾಮಿಯೇ ಚ್ಯುತಿಗೊಳ್ಳುವದೋ ಎಂಬ ಭಯವಿಹ್ವಲ ವಾತ್ಸಲ್ಯಭಾವದಲ್ಲಿ ಬಂದ ಲಾವಣ್ಯಲಹರಿ.

೧೫. ಮನೋನ್ಮನಿಗೆ ಪ್ರಾರ್ಥನೆ. ಉಳಿದ ಮಾತು ಅಲ್ಲಿಯ ಮುನ್ನುಡಿಯಲ್ಲಿದೆ.

೧೬. ಮಹಾದರ್ಶನದ ಕಾಲಕ್ಕೆ ತುಡಿಯುವ ಭಾವ-ಭೋಧ.

೧೭. ತನ್ನಲ್ಲಿ ಉದ್ಭವಿಸುವ ಜ್ಞಾನಕ್ಕೆಂತೊ, ಹಾಗೆಯೇ ಭೂತ ದೇಹ

ಪ್ರಾಣ-ಮನಗಳಿಗೂ ಇವಳೇ ತಾಯಿ. ಜೀವರಥದಲ್ಲಿ ಮೂರ್ತವಾದವಳು ಆ ಭಗವತಿ !

೧೮. ಮದರ್ ಅವರ ಸ್ಮಿತಮುಖ ಭಾವಚಿತ್ರ ಕಂಡಾಗ ಜಗದ್ವಿಖ್ಯಾತ ಲಿಯೊನಾರ್ಡೊ ಡಾ. ವಿನ್ಸಿ ಬರೆದ ಅವರಷ್ಟೇ ಪ್ರಖ್ಯಾತಿಯ "ಮೋನಾಲಿಸ್ಸಾ" ಚಿತ್ರದ ನೆನಪೂ ಉದ್ದೀಪನ ವಿಭಾವವಾಗಿದೆ ಇಲ್ಲಿ.

೧೯. ತಾಯಿಯವರ ಅದ್ಭುತವಾದ ಉದ್ಭವ ಶಕ್ತಿಯನ್ನು ಕುರಿತು.

೨೦. ತಾಯಿಯವರ ದೃಷ್ಟಿ ಸೋಂಕಿದಾಗಿನ ಎಚ್ಚರ.

೨೧. ಜೀವನದ ನೆಲೆ ಕಟ್ಟುತ್ತಿರುವ ನಾಲ್ಕು ಮಾತೃಶಕ್ತಿಗಳನ್ನು ಸ್ವಾಗತಿಸುವ ಗೀತ.

೨೨. ಸೃಷ್ಟಿಯ ಬಂಧದಲ್ಲಿ ಮುಕ್ತಿವಿಲಾಸದ ಬೀಜವೊಂದು ಬಯ್ತು ಕೊಂಡಿರುತ್ತದೆ. ಅದನ್ನು ಮೊಳಕೆಯೊಡೆಯುವಂತೆ ಮಾಡುವವಳು ಭಗವತಿ. ಅದು ಶ್ರೀಗುರುಕಾರುಣ್ಯ ದೃಷ್ಟಿ.

೨೩. ಅಗಸ್ಟ ೧೫-೧೯೪೭ ಭಾರತದ ಸ್ವಾತಂತ್ರ್ಯದಿನ. ಅದರಂತೆಯೇ ೧೮೭೨ ಅಗಸ್ಟ ೧೫ ಶ್ರೀ ಅರವಿಂದರ ಜನ್ಮದಿನ. ಅನೇಕ ಉದ್ಧಾರಕ ಘಟನೆಗಳ ದಿನ. ಈ ದಾರಿಯಿಂದ ನಡಿಸಿಕೊಂಡು ಬರುವ ಒಂದು ಸಿಂಹಶಕ್ತಿ ಇದೆ. ಅದು ಶ್ರೀ ಅರವಿಂದರ ಹೃದಯಾರವಿಂದದಲ್ಲಿ ಮೂರ್ತಗೊಂಡದ್ದು. ಅದು ನಾಳಿನ ಜಗತ್ತನ್ನೂ ಜೀವಗಳನ್ನೂ ರೂಪಿಸುವ ಶಕ್ತಿ ಎಂಬ ಭಾವೋನ್ಮಾದದಲ್ಲಿ ಈ ಪ್ರಾರ್ಥನೆ ಅಂಕುರಿಸಿದೆ.

೨೪. ನಿಷ್ಠೆಯ ಭಾವಗೀತ.

೨೫. ಶ್ರೀ ಗುರುವಿನ ಬ್ರಹ್ಮಸಮಾಧಿಸ್ಥ ತೇಜಃಪುಂಜಕ್ಕೆ ಆಹ್ವಾನ.

೨೬. ಇಲ್ಲಿಯ ವೈರಿ ಅಧೋಮುಖವಾದ ವೈಪರೀತ್ಯದ ವಿಕೃತಭಾವ.

೨೭. ಸಹಜೀವನಕ್ಕೆ ದಿವ್ಯಸಹನೆ ಬೇಕು. ಆ ಪ್ರಾರ್ಥನೆ.

೨೮. ಹೆಳವ ಗಂಡ ಮತ್ತು ಕುರುಡಿ ಹೆಂಡತಿ ಇವರ ಭಿಕ್ಷುಕ ಸಂಸಾರದ ಆರೋಪವನ್ನು ಪ್ರಪಂಚದ ವಿಕೃತ ಜೀವಿತದ ಮೇಲೆ ಮಾಡುವದುಂಟು ಅದನ್ನು ವಿಡಂಬಿಸಿದ ನುಡಿ.

೨೯. ಶ್ರೀ ವಿವೇಕಾನಂದರು ಮಹಾಕಾಳಿಯನ್ನು ಆಹ್ವಾನಿಸಿದ ಭಾವಗೀತ ಇಲ್ಲಿ ಕನ್ನಡಿಸಲಾಗಿದೆ.

೩೦. ಶೈಲಿಯು ಉತ್ಪತ್ತಿಯಿಂದ ಶೀಲ ಕಟ್ಟುವದಕ್ಕಿಂತ, ಶೀಲದ ಸ್ವಯಂಭಾವದಿಂದ ಶೈಲಿಯು ಶೈಲಿಶಿಖರವನ್ನೇರಬೇಕು. ಒಂದು ಕೃತಕವು; ವಿಕೃತಿ. ಇನ್ನೊಂದು ಕಲಾತ್ಮಕ: ಸಂಸ್ಕೃತಿ.

೩೧ ಅರ್ಥ ಹೇಳುವಷ್ಟು ಸ್ಪಷ್ಟವಾಗಿದೆ.

೩೨. ಎದೆಯ ಡವಡವಿಕೆಯಲ್ಲಿ ಇದೆ ಇದೆ ಎಂಬ ಧ್ವನಿ ಸ್ಫುರಿಸಿದಾಗ ಬಂದ ಲಹರಿ.

೩೩. ದೇವರ ಸೂತ್ರಧಾರಿತ್ವ, ಜೀವದ ಪ್ರೇಕ್ಷಕಭಾವ ಮೇಳಗೂಡದಿದ್ದರೆ ಜಗನ್ನಾಟಕದಲ್ಲಿ ರಸವಿಲ್ಲ.

೩೪. ಪೃಥ್ವಿಯಲ್ಲಿ ಗರ್ಭಿತವಾದ ವಸುದೇವಭಾವ ತನ್ನ ಸಂಚಾರಯಾತ್ರೆಯಲ್ಲಿಯೂ ಕಳೆದುಕೊಳ್ಳದ ಒಂದು ಅವಿಭಕ್ತತೆಯನ್ನು ತೋರಿಸುವ ಭಾವವಿರುತ್ತದೆ. ಅದರ ಮಿಂಚು ಜೀವನದಲ್ಲಿಯೂ ಪ್ರತಿಬಿಂಬಿಸುವದುಂಟು.

೩೫. ಪ್ರಳಯದ ಅದ್ವೈತದಲ್ಲಿ ಸೃಷ್ಟಿಯು ದ್ವೈತ ಮೂಡಿಕೊಂಡೇ ಇರುವದಾಗಿ ಕಾಣುವದು.

೩೬. ಸ್ವ-ಸ್ಥತೆಗಾಗಿ ಪ್ರಾರ್ಥನೆ.

೩೭. ಜೀವದ ಸೋಮಮಂಡಲವೇ ದೇವಾವತಾರದ ನರ್ತನರಂಗ.

೩೮. ಅಸ್ಫುಟ ದರ್ಶನವು ಮೈವುಂಡು ವರ್ಣನಾವೈಖರಿಯಾಗಿ ಇಳಿಯಬೇಕಾದರೆ, ಆ ಧಾರಣೆಗೂ ದಿನ ತುಂಬಬೇಕಾಗುತ್ತದೆ.

೩೯. ಚಿರ-ಪ್ರಕಾಶದ ವೈಚಿತ್ರ್ಯದ ವಲ್ಲರಿಯು ಹಾಸು-ಬೀಸನ್ನು ಕಂಡಾಗ ಇಂದ್ರಜಾಲ ಒಳಗೂ ಹಬ್ಬಿವೆಯೆಂದು ತೋರುವದು. ಅದನ್ನು ದಾಟುವದು ಅಷ್ಟು ಸುಲಭವಲ್ಲ.

೪೦. ಅಣುವಿನ ಸಂಹಾರಶಕ್ತಿಯಲ್ಲಿ ಸೃಷ್ಟಿಯ ಲೀಲಾವಿಹಾರದ ರೂಪರೇಖೆಗಳು ಮಿಂಚುವದುಂಟು.

೪೧. ಪೂರ್ಣತೆಯ ಮಧುರಸವನ್ನು ಕೂಡಿಸುವ ಜೀವದ ಪುರುಷ ಪ್ರಕೃತಿಭಾವಗಳುಂಟು. ಅವರಲ್ಲಿಯು ಗಂಡು ಪರಮೆ, ಹೆಣ್ಣು ತುಂಬಿ. ಒಂದು ಸೃಷ್ಟಿಯ ಅಂಚಿಗೆ ಹೋದರೆ, ಇನ್ನೊಂದು ಸೃಷ್ಟಿಯು ಕೇಂದ್ರಕ್ಕೆ ಎಳೆಯುವದು. ಈ ಎಳೆತ-ಸೆಳೆತಗಳಲ್ಲಿ ಸೃಷ್ಟಿಯ ನವ್ಯಲೀಲೆ ತಲೆದೋರುವದು.

೪೨. ಶ್ರೀ. ಅರವಿಂದರ ಮತ್ತು ಮಾತೆಯವರ ಸು-ಪ್ರ-ಮಾನಸದ ಅಪ್ರಮೇಯ ಕಿರಣಗಳು ಸೃಷ್ಟಿಮಂಡಳವನ್ನು ಸೇರಿದಾಗ ನಾದವರ್ಣಗಳ ಇನ್ನೊಂದು ಗ್ರಾಮ ತೆರೆಯುವದು ಅವರ ಸೋಂಕಿಗೆ ಉತ್ತರಕೊಡುವ ಶಕ್ತಿ ಇಲ್ಲದವರು ಮನವ ಘನನಿದ್ರೆಯಲ್ಲಿಯೇ ಎಂದಿನಂತೆ ಹಿಂದಿನ ಕನಸು ಕಾಣುವರು. ಇದು ಮಾನವತೆಯ ಮೌಢ್ಯ.

೪೩. ಆತ್ಮಪ್ರಜ್ಞೆಯು ಸಾಂಖ್ಯ ಸ್ವರೂಪವನ್ನು ರೂಪಿಸಿಕೊಳ್ಳುವಾಗ ಭಾವದ ಸಡಗರದಲ್ಲಿ ನವೋನವ ಅಲಂಕೃತವಾದ ಪ್ರತಿಮೆ ಒಡಮೂಡುವದು

೪೪. ದೇಹ, ಪ್ರಾಣ, ಮನ, ವಿಜ್ಞಾನಗಳ ಕೋಟೆ ಭೇದಿಸಿ ಆನಂದದ ಸ್ಪರ್ಶ ಪಡೆಯಬೇಕಾಗುತ್ತದೆ.

೪೫. ಮೇಲ್ಕಾಣಿಸಿದ ಆನಂದ ಜೀವನದಲ್ಲಿಯೂ ಧ್ವನಿಸುವದು. ಆ ಎಳೆಗೆ ಈ ಎಳೆ ಕೂಡಿಸಿ ನೆಯ್ಗೆ ಮಾಡುವದು ಕಷ್ಟ, ಆದರೂ ಅದು ಬಿಟ್ಟ ಕರ್ಮವಲ್ಲ.

೪೬. ಸೃಷ್ಟಿಗೆ ಆಧಾರ ನೀರಂತೆ. ಸೃಷ್ಟಿಯಲ್ಲಿ ಹರಿದಾಡುವ ನೀರು ತನ್ನ ಲೀಲಾವಿಲಾಸದಲ್ಲಿ ಅದನ್ನು ವಿವಿಧ ವೈಚಿತ್ರ್ಯದಿಂದ ವ್ಯಂಜಿಸುತ್ತದೆ. ಆ ಸಾತ್ವಿಕ ಭಾವದಲ್ಲಿ ನವಕಂಪನವಿದೆ.

೪೭. ಜಗತ್ತಿನಲ್ಲಿ ತುಂಬಿದ ಸ್ವಾಮಿ ನಮ್ಮ ನಿಮ್ಮಲ್ಲಿಯೂ ತುಂಬಿಕೊಂಡಿದ್ದಾನೆ. ಅವ್ಯಕ್ತವನ್ನು ವ್ಯಕ್ತಗೊಳಿಸುವ ಮೂರ್ತಲೀಲೆಯಲ್ಲಿದ್ದಾನೆ. ಅದರ ದೃಶ್ಯವು ಪ್ರಕಾಶ.

೪೮-೪೯. ಅನೇಕ ಸಲ ಮಾಡಿದ ಪ್ರಾರ್ಥನಾಮುಕ್ತಕಗಳು.

೫೦-೫೫. ಶ್ರೀ ಅರವಿಂದರ ‘ ಸಾವಿತ್ರಿ ’ ಎಂಬ ಬ್ರಹ್ಮ-ಕಾವ್ಯದ ಉಕ್ತಿಗಳನ್ನು ಮೌಕ್ತಿಕಸಾಲೆಗಳಾಗಿ ಸರಗೊಳಿಸುವ ಪ್ರಯತ್ನವು ವಿಫಲವಾದಾಗ

ಒಂದು ಆಯಾಸವಾಯಿತು. ಆ ಆಯಾಸದಿಂದ ಚೇತರಿಸಿಕೊಳ್ಳುವಾಗ ಕೆಲವು ಭಾವಗೀತಗಳು ರೂಪಿಸಿಕೊಂಡವು. ೫೫ರ ವರೆಗಿನ ಭಾವಗೀತಗಳು ಆ ಮಾಲೆಯಲ್ಲಿಯವೇ.

೫೬-೫೭. ಅಲ್ಲಿಯ ಉದ್ಧೃತ ವಚನಗಳಿಂದ ಸ್ಪಷ್ಟವಾಗುವವು.

೫೮. ಗೆಳೆಯ ಶಂಕರಗೌಡ ಪಾಟೀಲ ಇವರು ಪಾಂಡಿಚೇರಿಯಲ್ಲಿ ದೇಹವಿಟ್ಟರು. ಅವರ ಸ್ನೇಹಸಂಬಂಧದಿಂದ ಉದ್ದೀಪ್ತವಾದ ವಿರಹಗೀತವಿದು.

೫೯. ಸಹಭಾವ ಮಂತ್ರದ ಪ್ರತಿಶಬ್ದ ಇಲ್ಲಿದೆ.

೬೦. ಶ್ರೀ ಅರವಿಂದರ ಆಶೀರ್ವಚನವು ಶ್ರೀ ಮಾತೆಯವರ ಕರುಣಾ ಪ್ರಸಾದದಿಂದ ವಾಸುದೇವ-ಜೀವಸವಿತೃ ಗಂಗಾವತರಣದಂತೆ ಇಳಿದುಬರುತ್ತಿದೆ ಎಂಬ ಭೂಕಂಪದ ಆಘಾತ ೨೮ ಫೆಬ್ರುವರಿ ೧೯೫೬ನೆಯ ದಿನ ಬೆಂಗಳೂರತ್ತ ಪ್ರವಾಸ ಮಾಡುವಾಗ ಎಲಹಂಕ ನಿಲ್ದಾಣದ ಬಳಿ ಮೂರ್ತಿಗೊಂಡು ಭಾವಗೀತವಾಯಿತು.

ಮುಕ್ತಕಂಠ :

೧. ರಮಣಹೃದಯಕ್ಕೆ ಶ್ರೀ ವಾಸಿಷ್ಠಗಣಪತಿ ಮುನಿಗಳ ಮತ್ತು ಶ್ರೀ. ಕಪಾಲಿ ಶಾಸ್ತ್ರಿಗಳ ಉಕ್ತಿವಿನ್ಯಾಸದ ನೆರವಾಗಿದೆ. ಮೂಲಾನುಭವ ಶ್ರೀ ರಮಣರದು.

೨. ಅಮೃತಾನುಭವವು ಶ್ರೀ ಜ್ಞಾನೇಶ್ವರರ ಅಮೃತಾನುಭವದ ಭಾಗ. ಅದರ ಪ್ರಸಾದ ಚಿನ್ಹ ಎಂದು ಇಲ್ಲಿ ಆದ್ಯಂತ ಭಾಗ ಕೊಡಲಾಗಿದೆ.

೩. “ಆನಂದಲಹರಿ” ಅಥವಾ “ಸೌಂದರ್ಯಲಹರಿ” ಶ್ರೀ ಶಂಕರಾಚಾರ್ಯರ ವಾತ್ಸಲ್ಯಭಕ್ತಿಯ ಉತ್ಕಟಕಾವ್ಯ. ಅದರ ದರ್ಶನ ಇಲ್ಲಿಯ ಕೆಲ ಶ್ಲೋಕಗಳಲ್ಲಿ ಕೊಡಲಾಗಿದೆ.

೪-೫-೬. “ಓಮರನ ಉಕ್ತಿಗಳು” ಕನ್ನಡ ವಾಚಕರಿಗೆ ಪರಿಚಿತವಿವೆ. ಆ ಉಕ್ತಿಗಳೂ, **ತತ್ಸದೃಶ** ಉಕ್ತಿಗಳಲ್ಲಿ ಕೆಲವೂ ಇಲ್ಲಿ ಕೊಡಲಾಗಿವೆ.

೭. “ ಈಶ ” “ ಈಶಾವಾಸ್ಯ ” ಮಂತ್ರದ ತುಣುಕು.

೮. ಕಾಳಿದಾಸನಲ್ಲಿ ಅವತರಿಸಿದ ಶಕ್ತಿಯನ್ನು ಕುರಿತು ಬರೆದಿದೆ.

೯. ಮೌನದ ಧಾರಣೆಯಲ್ಲಿ ಅದರ ಪಾರಣೆಯನ್ನು ಕುರಿತು ಬರೆದ ಸುನೀತ.

೧೦. ಪ್ರತಿಯೊಬ್ಬರಲ್ಲಿ ಅವರವರ ಜೀವನ ಚರಿತವನ್ನು ತಾಟಸ್ಥ್ಯದಿಂದ ನೋಡುವ ಒಂದು ತನ್ಮಯ ನಯನವಿದೆ. ಆ ನಯನದ ಸುಳುವು–ಹೊಳವಿನ ಎಚ್ಚರ ಆಗೀಗ ಮಿಂಚಿಹೋಗುವದು.

೧೧. ದೇಹ, ಪ್ರಾಣ, ಮನಗಳಲ್ಲಿ ಇಂದು ತುಂಬಿಕೊಂಡಿರುವ ನಮ್ಮ ಜೀವನ ಒಂದು ತತ್ತಿಯ ಅವಸ್ಥೆಯಲ್ಲಿದೆ. ಅದು ಪಕ್ವವಾಗಿ, ಪಕ್ಷಿ ಹೊರಬೀಳುವದೇ ನಾಳಿನ ಉದ್ಭವ.

೧೨. ದೃಶ್ಯವಿಶ್ವದ ಪಸರ ಜಗದ್ಗತಿಯಲ್ಲಿರುವ ಒಂದು ಅಶ್ವ. ಅದನ್ನೇರಿದ ನಮ್ಮ ಪ್ರಾಣ ಅಶ್ವಾರೋಹಿ. ಪ್ರಾಣವೂ ಅಶ್ವವಾದಾಗ, ಮನ ಅದನ್ನೇರುವದು. ಮನವನ್ನು ಜ್ಞಾನ ಏರುವದು. ಹೀಗೆ ಕುದುರೆಯ ಮೇಲೆ ಕುದುರೆ, ಅರೋಹಕನ ಮೇಲೆ ಅರೋಹಕ, ಹೀಗೆ ತರಗತಿಗಳಿವೆ

೧೩. ಪಂಚಮುಖ ಪ್ರಪಂಚದ ಒಳಗೊಂದು ಆತ್ಮಕೇಂದ್ರವಿದೆ. ಅವರ ಸ್ಪರ್ಶ ಭಾವಬುದ್ಧಿಗಳಿಗೆ ಆಗೀಗ ಆಗುವದುಂಟು.

೧೪. ಕನ್ನಡದ ಅಷ್ಟಾಂಗಗಳಲ್ಲಿ ಒಂದೊಂದು ಶಕ್ತಿಯ ಕುರುಹು, ದರ್ಶನ ಮಿಂಚಿದಾಗ.

೧೫. ನಮ್ಮ ಭಾವಪ್ರಪಂಚದ ಅಶೋಕವೃಕ್ಷದ ಬುಡಕಿರುವ ಸೀತೆಯಂತಿದೆ ಎಂದೆನಿಸಿದಾಗ.

೧೬. ರಮ್ಯತೆಯಲ್ಲಿ ಇರುವ ಅರಮ್ಯತೆಯೇ ಅದರ ಧ್ವನಿ.

೧೭. ಶುಕ್ರೋದಯ ಕಾಲದಲ್ಲಿ ಬಂದ ಕಲ್ಪನಾವಿಲಾಸ.

೧೮. ನನ್ನ ವಿದ್ಯಾರ್ಥಿಗಳು, ತರುಣಮಿತ್ರರೂ ಆದ ಶ್ರೀ. ಮಾಗಡಿ ಇವರ ವಿಶಿಷ್ಟವಾದ ವಿವಾಹ ಸಂದರ್ಭದಲ್ಲಿ ಬರೆದುದು.

೧೯. ಕನ್ನಡ ಸರ್ವನಾಮಗಳಲ್ಲಿ ಚಿಂತನದ ಫಲವಾಗಿ ಆಗೀಗ ಒಂದು ಅಚಿಂತ್ಯಾರ್ಥ ಹೊಳೆಯುವುದು

೨೦. ಒಂದು ವಸಂತ ವರ್ಣನೆ.

೨೧. ಸಮಕೃಷಿಕರ ಹಾಡು. ಈ ಕೃಷಿಕರ್ಮ ಅಂತರಂಗದ ಕೃಷಿ ಕರ್ಮದ ಸಂಕೇತವೂ ಅಹುದು.

೨೨. ಮಾನವೀಯ ಜೀವನದಲ್ಲಿ ತಲೆ ಎತ್ತಿದ ವಿವಿಧ ವಾದಗಳಲ್ಲಿ ಸಂವಾದ ಮೈದೋರಿದಾಗ ಸೃಷ್ಟಿ: ವಿವಾದ ತಲೆ ಎತ್ತಿದಾಗ ಪ್ರಳಯ.

೨೩. ಶ್ರೀ ವಿಠ್ಠಲ ಪುಂಡಲೀಕರ ಸಂಕೇತಾರ್ಥ.

೨೪. ಟೊಂಕದ ಮೇಲೆ ಕೈ ಇಟ್ಟುಕೊಂಡ ಈ ಮೂರ್ತಿ ವ್ಯವಹಾರ ಪ್ರಪಂಚಕ್ಕೆ ಸೇರಿದ ಎಲ್ಲರ ಪರಿಚಯದ ಆಕರ್ಷಣೆಯದು.

೨೫. "ಧಾರವಾಡ"ದ ಸಂವಾದ ಚತುರ ಮಿತ್ರರ ಸಹವಾಸದಲ್ಲಿ ಆದರೂ ಮೌನದಲ್ಲಿ ಕಳೆದಾಗ ಬರೆದುದು.

೨೬. "ಉಗಾರ" ಹಳ್ಳಿಯಲ್ಲಿ ಸಂವಾದ ಚತುರ ಮಿತ್ರರ ಸಹವಾಸ ದಲ್ಲಿ, ಆದರೂ ಮೌನದಲ್ಲಿ ದಿನ ಕಳೆದಾಗ ಬರೆದುದು.

೨೭. ಮೌನವಾರದ ಒಂದು ವಿನೋದ.

೨೮. ಕೆಲವು ರಸೋಕ್ತಿ ಸುಭಾಷಿತಗಳು.

೨೯. ಸಸ್ನೆಬ್ಬ ಮಿತ್ರ ದಂಪತಿಗಳ ಮಗಳ ಮರಣವನ್ನು ನೆನಸಿ ಬರೆದುದು.

೩೦. ವಿನೋದೋಕ್ತಿ: ವಿಡಂಬನೆಯೂ ಅಹುದು.

೩೧. "ಈಶ" "ರಮ್ಯಾಗಮ್ಯ" ಕವಿತೆಗಳ ಜಾತಿಗೆ ಸೇರಿದುದು.

೩೨. ಹೆಂಡದ ದೇವತೆಯನ್ನು ಕುರಿತು ಬರೆದ ಪ್ರಾರ್ಥನೆ.

೩೩. ಒಂದು ಭಾವಗೀತ.

೩೪, ೩೫. ಸ್ಫೂರ್ತ ಉಕ್ತಿಗಳು.

೩೬. ಜೀವನದ ಸಂಗ್ರಾಮ ಕಂಡಾಗ ಡಾರವಿನ್‌ನ ಉತ್ಕ್ರಾಂತಿ ವಾದವೇ ನಿಜವೆನಿಸಿಬಿಡುವದು. ಆಗ ಭಯವಾಗುವದು. ಆದರೆ ಮಾನವನ ಉತ್ಕ್ರಾಂತಿ ಇಲ್ಲಿಯೇ ನಿಂತಿಲ್ಲ ಎಂದು ತೋರಿದಾಗ ಹೊಸ ಅಭಯ ಮೂಡುವದು.

೩೭. ಗಣಪತಿಗೆ ಇಲಿ ವಾಹನ ಎಂಬುದು ಬಹಳ ಜನ ಬಲ್ಲರು. ಆದರೆ ಒಬ್ಬ ಮೂಷಿಕೆ ಎಲ್ಲ ದೇವತೆಗಳನ್ನು ಬಿಟ್ಟು ಒಬ್ಬ ಹೆಗ್ಗಣ-ಪತಿಗೆ ಹೇಗೆ ಮಾರುಹೋದಳು ಎಂಬ ರೂಪಕ ಕಥೆಯನ್ನು ಕ್ವಚಿತ್ ನಾಟಕೀಯ ರೂಪದಲ್ಲಿ ಮಂಡಿಸಲಾಗಿದೆ.

೩೮. ಒಂದು ಭಾವಗೀತ.

೩೯. ಸೃಷ್ಟಿಯ ಮೌನಚಿತ್ರ ಕಂಡಾಗ ಸ್ಫುರಿಸಿದ ಭಾವಲಹರಿ.

೪೦. "ಮುಕ್ತಕಂಠ" ಇಲ್ಲಿಯ ಉಕ್ತಿಗಳ ವಿಲಾಸವನ್ನು ಕುರಿತು.

೪೧, ೪೨. "ಆನಂದಲಹರಿ" ಮತ್ತು "ಅಮೃತಾನುಭವ" ದಿಂದ ಉಳಿದ ಕೆಲವು ನುಡಿಗಳು.

ಜೀವಲಹರಿ :

೧. ಜನಜೀವನದಲ್ಲಿ ಅನೇಕ ಜೀವಪ್ರವಾಹಗಳಿವೆ. ಪ್ರವಾಹ ಪ್ರವಾಹದಲ್ಲಿಯೂ ಕಾಲಕಾಲದ ಲಹರಿಗಳು ಬೇರೆ ಬೇರೆ. ಕನ್ನಡ ಜೀವನ ಲಹರಿ ಸಂತಾನಗಳಲ್ಲಿಯೂ ತನ್ನ ನಿಲುವನ್ನು ಬೆಳಸುತ್ತಿದೆ.

೨. ಹೊಸ ಕಾಲದ ಉದಯವಾಗಿದೆ. ಆದರೆ ಆ ಉದಯ ಎಚ್ಚರಾಗಿ ಕಣ್ತೆರೆದು ಆಚರಣಶೀಲರಾದವರಿಗೆ ಮಾತ್ರ.

೩. ಒಂದು ಅಲೌಕಿಕ ಲಾವಣ್ಯಕ್ಷೇತ್ರದ ದರ್ಶನ.

೪. ದೀಪದ ಮಲ್ಲಿ ಅಥವಾ ಬೊಂಬಾಳದ ಗೊಂಬೆಯನ್ನು ಯಾರು ನೋಡಿಲ್ಲ? ಇಂಥ ಒಂದು ಸರ್ವಾಂಗಸುಂದರ ಧ್ಯಾನಮೂರ್ತಿಯನ್ನು ನೋಡಿ ಎದ್ದ ಭಾವಲಹರಿ.

೫. ಒಬ್ಬ ತಪಸ್ವಿನಿಯ ಮಂಗಲಮಯ ಜೀವನ ಮುಕ್ತಾಯ. ಅದರ ಕಾರುಣ್ಯ ಪಾವನತೆ.

೬. ಶಬ್ದದಿಂದಲೇ ಹುಟ್ಟಿದ ಜಗತ್ತು ಶಬ್ದದಲ್ಲಿಯೇ ಸಾಯುತ್ತದೆ.

೭. ಸಾಧನೆಯಲ್ಲಿ ಆಳು ಅರಸು ಇದೆ. ಸಿದ್ಧಿಯಲ್ಲಿ ಅದು ಏಕಜೀವನದ ದ್ವಿಮುಖ ಮಾತ್ರ.

೮. ಅವರವರೇ ಇನ್ನೊಂದು ಲಹರಿ.

೯. ಕರ್ನಾಟಕದ ಉತ್ತರಸೀಮೆಯ ಬಾಹುಬಲಿ ವಿದ್ಯಾಲಯ ಮತ್ತು ಕ್ಷೇತ್ರವನ್ನು ಕಂಡಾಗ ಎದ್ದ ಲಹರಿ.

೧೦. ರತ್ನ ಇದ್ದಿಲಾಗಬಹುದು. ಇದ್ದಿಲು ರತ್ನವಾಗಬಹುದು. ಇದು ಆದರವರ ತಪ-ತಾಪವನ್ನು ಅವಲಂಬಿಸಿ ಇದೆ. ಅದರದರ ಒಲವು ಅದರದರ ಲಹರಿ.

೧೧. ಹೊಸ ಸೃಷ್ಟಿ ಬರಬೇಕಾದರೆ ಹೊಸ ಶಬ್ದ ಬರಬೇಕಾಗುತ್ತದೆ. ಅಂಥ ಶಬ್ದ ಶ್ರೀ ಅರವಿಂದರು ಶ್ರೀ ಜೆ. ಕೃಷ್ಣಮೂರ್ತಿಯವರು ಇವರಲ್ಲಿ ಸ್ಫುಟವಾಗಿದೆ.

೧೨. ನವೀನ ಕಾಲದ ಸ್ವಾಗತ ಚಿಂತನ.

೧೩. ಶಿವಮೊಗ್ಗೆಯ ಕಾಡಿನಲ್ಲಿ ಬಿಳಿ ಕಣಿಗಲ ಕಂಡಾಗ ಎದ್ದ ಭಾವ ಲಹರಿ.

೧೪. ಗುಬ್ಬಿ ಸಣ್ಣ ಪ್ರಾಣಿ ಅಹುದು. ಆದರೆ ಅದರ ಆನಂದದ ಅಭಿವ್ಯಕ್ತಿಗೆ ಒಂದು ವಿಶ್ವ ಸಾಲದು.

೧೫. ಚಂದ್ರನನ್ನು ಕಂಡು ಅವನ ಬೆಳವಣಿಗೆಯ ವೈಚಿತ್ರ್ಯದ ವಿಷಯದಲ್ಲಿ ತಲೆದೋರುವ ಬಾಲಕಲ್ಪನಾ ಲಹರಿ.

೧೬. ದೇಹ ಒಂದು ವೀಣೆ ಎಂದು ಕೆಲವು ಅನುಭವ ನಿಮಿಷಗಳಲ್ಲಿ ಮಿಂಚಿ ಹೋಗುತ್ತದೆ. ಅದನ್ನು ಬಾರಿಸುವವನು ಒಳಗೂ ಇರಬಹುದು, ಹೊರಗೂ ಇರಬಹುದು.

೧೭. ನನ್ನ ಶ್ರದ್ಧಾಲಹರಿಗಳಲ್ಲಿ ಕೆಲವು.

೧೮. ಸ್ಪಷ್ಟ. ಬರಿ ಲಹರಿ ಲಹರಿ.

೧೯. ಏನೋ ಕಗ್ಗ ಅನ್ನಬಹುದು. ಹೂಂ ಅನ್ನೂಬಹುದು. ಹೇಳುವವರದೂ ಒಂದು ಲಹರಿ. ಕೇಳುವವರದೂ ಒಂದು ಲಹರಿ. ಹೇಳುಕೇಳುವವರ ಹೊಂದಿಕೆಯಾದಾಗ ಕಗ್ಗ ಒಂದು ಸಗ್ಗವಾಗುತ್ತದೆ.

೨೦. ಎಲ್ಲಾ ಕೆಲಸ ಕೆಲಸವಲ್ಲ. ಕಟ್ಟೋ ಕೆಲಸ! ಕೆಡವುವ ಕೆಲಸ! ಬುದ್ಧಿ ಇದ್ದರೆ ಕೆಲಸ, ಇಲ್ಲದಿದ್ದರೆ ಹೊಲಸ.

೨೧. ಎಂಟು ಕಿಡಿಕಿಗಳು. ಮುದ್ದು ಇದ್ದರೆ ಕಿಡಿಯ ಅರ್ಥವಾಗುತ್ತದೆ.

೨೨. ಒಂದು ದರ್ಶನ ವಿಚಾರಲಹರಿ.

೨೩. ಒಂದು ಲಾವಣಿಯ ಪ್ರಾರಂಭದ ಭಾಗ.

೨೪. ಇನ್ನೊಂದು ಲಾವಣಿಯ ಪ್ರಾರಂಭ.

೨೫. ಕಿಡಿಗಳಂತೆಯೇ ಈ ಕಣಿಕೆಗಳು.

೨೬. ದಿಲ್ಲಿಯಲ್ಲಿ ನೆರೆದ ಕವಿಸಮಾರೋಹದಲ್ಲಿ ಕರ್ನಾಟಕದ ಪರವಾಗಿ ೧೯೫೬ರ ಜನೆವರಿಯಲ್ಲಿ ಹೇಳಿದ ಹಾಡು. ಭಾರತೀಯ ಸಂತಾನವಾದ ಅವತಾರ ಮಾಲೆಯ ಮಣಿಗಳು ಒಂದರಂತೆ ಒಂದಿಲ್ಲ. ಆದರೆ ಅವೆಲ್ಲಕ್ಕೂ ಸರಗೊಳಿಸುವದು **ಭಾರತಮಾತೆಯ ಚೇತನ.**

೨೭. ಅದೇ ಸಂದರ್ಭಕ್ಕಾಗಿ ಬರೆದ ಇನ್ನೊಂದು ಕವನ. ೧-೧೧-೫೬ ಕರ್ನಾಟಕ ರಾಜ್ಯೋದಯದ ದಿನ ತುಮಕೂರಲ್ಲಿ ಹೇಳಿದ್ದು.

೨೮. ಹೊಸ ಕಾಲಕ್ಕೆ ತಕ್ಕ ಹೊಸ ಹಾರೈಕೆ ಬೇಕು. ಆದಾಗದೆ ಹೊಸ ಕಾಲಕ್ಕೆ ಅರ್ಥ ಬರದು.

೨೯. ರಾಷ್ಟ್ರದ ಪ್ರಾಣದಂತಿರುವ ಜನನಾಯಕರು ನಾಡಿನಲ್ಲಿ ಹರಿದಾಡಿದಾಗ ಜೀವನದ ನಾಡಿಯಲ್ಲಿಯೂ ಹೊಸರಕ್ತ ಹರಿದಾಡುತ್ತದೆ.

೩೦. ಸ್ಥೂಲ ಏಕೀಕರಣದ ಹಿಂದೆ ಒಂದು ಸೂಕ್ಷ್ಮ ಕಾರಣ. ಇದರ ಏಕೀಕರಣವೂ ಹೊಂದಿಕೊಳ್ಳಬೇಕಾಗುತ್ತದೆ.

೩೧. ಬೆಂಗಳೂರ ಬಾನುಲಿಯ ಪ್ರಾರಂಭೋತ್ಸವದ ನಿಮಿತ್ತದಿಂದ ಬರೆದ ಈ ಪ್ರಸ್ತಾಪನೆ ಧಾರವಾಡ ಆಕಾಶವಾಣಿಯಿಂದ ಮತ್ತೊಂದು ಸಂದರ್ಭದಲ್ಲಿ ಬಿತ್ತರಿಸಲಾಯಿತು.

೩೨. ಕರ್ನಾಟಕ ವಿಶ್ವವಿದ್ಯಾಲಯದ ನಿಮಿತ್ತದಿಂದ ಅದಕ್ಕಾಗಿ ಒಂದು ಕುರುಹು, ಒಂದು ಬಿರುದು ರಚಿಸುವಾಗ ಹೊರಹೊಮ್ಮಿದ ನುಡಿ.

೩೩. ಕರ್ನಾಟಕ ರಾಜ್ಯೋದಯದ ದಿನ ಧಾರವಾಡದಲ್ಲಿ ಓದಿ ಹೇಳಿದ ಆ-ರತಿಯ ಹಾಡು.

೩೪. ಸ್ಪಷ್ಟ.

೩೫. ಅರ್ಧಕ್ಕೆ ನಿಂತ ಒಂದು ಭಾವನಾಮಾಲೆ. ಕೆಲವೇ ಲಹರಿಗಳು ಮೂಡಿಬಂದಿವೆ. ಊರ ನೆನಪು, ನಾಡ ನೆನಪು, ಗೆಳೆಯರ ನೆನಪು, ಸಾಹಿತ್ಯೋಪಸಂಹಾರ, ಸಂಸ್ಕಾರಗಳ ನೆನಪು.

೩೬. ಶಾಂತಿ, ಶೌರ್ಯ, ಸ್ಥೈರ್ಯ ಇದು ವೀರನ ಹಾದಿ.

೩೭. ಈ ಜ್ವಾಲೆ ಲಕ್ಷ್ಮೀಶನ ಜೈಮಿನಿ ಭಾರತದೊಳಗಿನ ಪಾತ್ರ. ಅದರ ಚಿತ್ರ ಇದು.

೩೮. ಅಹಲ್ಯೆ. ಸತ್ವದಲ್ಲಿ ನಲ್ಲೆ. ಗೌತಮನ ಶಾಪದಲ್ಲಿ ಕಲ್ಲಾದಳು. ರಾಮ ಪಾದಸ್ಪರ್ಶದಿಂದ ಮತ್ತೆ ನಲ್ಲೆಯಾದಳು.

೩೯. ನಾಲವತ್ತವಾಡ ಶರಣರ ಸಮಾಧಿ ಸೋಲಾಪುರದಲ್ಲಿಯದು. ಅವರನ್ನು ಕುರಿತು ಬರೆದ ಪದ.

೪೦-೪೧. "ಅಸಿತ" ಬುದ್ಧಾವತಾರದ ಸ್ವಪ್ನವನ್ನು ಮೊದಲೇ ಕಂಡ ಋಷಿ. ಸತ್ಯವನ್ನು ಕಂಡ ಕಣ್ಣು ಕಣ್ಣೀರು ಸುರಿಸಬೇಕಾಗುತ್ತದೆ. ಅದರಲ್ಲಿಯೂ ಬಾಳುವ ನೋಟವೇ ಸತ್ಯದೃಷ್ಟಿ.

೪೨. ಧಾರವಾಡದ ಆಕಾಶವಾಣಿಯಿಂದ ಬಿತ್ತರಿಸಿದ ಒಂದು ಕವನ. ಬುದ್ಧನನ್ನು ಕುರಿತು.

೪೩. ಸಾಕ್ರೇಟೀಸ್, ಜೀಸಸ್, ಮೋಹನದಾಸ ತಮ್ಮ ಮರಣದಿಂದಲೇ ತಾವು ಅಮರರು ಎಂಬುವನ್ನು ಪ್ರಕಟಗೊಳಿಸುತ್ತಾರೆ.

೪೪. ಶ್ರೀ ಅರವಿಂದರ ಸಾವಿತ್ರಿಯನ್ನು ಕುರಿತು ಬಂದ ಒಂದು ಹನಿಗವನ.

೪೫. ಬಾಲ ಗಂಗಾಧರ ತಿಲಕರವರ ಸ್ಮೃತಿದಿನ ಬರೆದುದು. ಅವರ ದರ್ಶನ ಲಹರಿ.

೪೬. ಗೆಳೆಯ ಆಳಂದಕರರ ರವೀಂದ್ರ-ಚಿತ್ರಾವಲಿಯನ್ನು ಕುರಿತು ಬರೆದ ಉಕ್ತಿ ಲಹರಿ.

೪೭. ಮತ್ತೆ ಕೆಲವು 'ಓ ಮರ' ಪ್ರವೃತ್ತಿಯ ಉಕ್ತಿಗಳು.

೪೮. ಎಲ್ಲ ಯೋಜನೆಗಳಿಗಿಂತಲೂ ದೈವಯೋಜನೆಯನ್ನು ಅರಿತು ಬಾಳುವದು ಸರಿಯಾದ ಯೋಜನೆ. ಆ ಪ್ರಜ್ಞೆ ಅಂಕುರಿಸಬೇಕು. ಅದು ಶಿಕ್ಷಣದ ಕಾರ್ಯ.

೪೯. ಭಯದ ಅನುಭವ ಬರದೆ ಅಭಯದ ಅರ್ಥವಾಗದು. ಅಭಯದ ಅರ್ಥವಿಲ್ಲದ್ದರಿಂದಲೇ ಭಯದ ಉಪಯುವೂ ಆಗುತ್ತದೆ.

೫೦. ನಮ್ಮ ಹಂಡಬಂಡ ಜೀವನದ ಒಂದು ಅಭಂಡ ಚಿತ್ರ.

೫೧. ಕೃಷ್ಣಾಷ್ಟಮಿಯನ್ನು ಎದುರಿಸಿದಾಗ ಕಳವಳದಿಂದ ಬಂದ ಒಂದು ಭಾವನಾಲಹರಿ.

೫೨. ಜೀವನದಿಂದ ಸಾಹಿತ್ಯವೂ ಸಾಹಿತ್ಯದಿಂದ ಜೀವನವೂ ನವೀನವಾಗುವದುಂಟು. ಆದರೆ ಒಂದಕ್ಕಿಂತ ಒಂದು ಉತ್ತಮವಾಗಿರಬೇಕು. ಉತ್ತಮದ ಸ್ಪರ್ಶದಿಂದಲೇ ಅಧಮತೆಯೂ ಶುದ್ಧಗೊಂಡು ಮಾಧ್ಯಮದ ಮಟ್ಟಕ್ಕೇರುವದು.

೫೩. ಇಂದಿನ ಜೀವನದಲ್ಲಿ ಸದ್ದಿನ ಜಿದ್ದಾಟ ನಡೆದಿದೆ. ಅದರಲ್ಲಿ ಗೆದ್ದವನೇ ಬಾಳುವನು.

೫೪. ಕೆಲವು ಸಂಸ್ಕೃತ ಸುಭಾಷಿತಗಳ ಛಾಯಾನುವಾದ. ವಿರಹೋದ್ಗಾರ ಲಹರಿಗಳು.

೫೫. ತಮ್ಮ ಕಣ್ಣೆದಿರಲ್ಲೇ ಹಸುಗೂಸಿನಂತೆ ಬೆಳೆದು ಕ್ರಮೇಣ ದೊಡ್ಡವರಾಗಿ ಹಡೆದು ತಾಯಾಗಿ ಮಡಿದುಹೋಗುವ ಮಡದಿ ಜೀವಗಳ ನೆನಪಾದಾಗ ಜೀವ ತಲ್ಲಣಿಸುವದು. ಅದು ನಾವು ಅದಕ್ಕೆ ಕೊಡುವ ತರ್ಪಣ.

೫೬. ಶಕ್ತಿ ಕಾಳಿಯೂ ಅಹುದು; ಲಕ್ಷ್ಮಿಯೂ ಅಹುದು. ಎರಡೂ ರೂಪಗಳನ್ನು ಕಂಡು ದಕ್ಕಿಸಿಕೊಂಡು ಬಾಳುವ ಜ್ಞಾನಶಕ್ತಿ ಈಶ್ವರೀಪ್ರಸಾದದಿಂದಲೇ ಬರಬೇಕು.

೫೭. ಒಂದು ಹಸಿಬಿಸಿ ವಿರಕ್ತಿಯ ಭಾವನಾ ಲಹರಿ. ವಿರಕ್ತಿಯ ಬಗ್ಗೆಯೂ ವಿರಕ್ತಿ.

೫೮. ಅದರದೇ ಒಂದು ಚುಂಗು.

೫೯. ಒಂದು ಸಾಹಿತ್ಯಕ್ರೀಡೆ.

೬೦. ವರ್ಷ ವರ್ಷಕ್ಕೂ ಹೊಸತನ ತರುವದು ವರ್ಷಾಕಾಲ. ಕೆಲವರು ತಮ್ಮ ವಸಂತ ಇಳಿಸುತ್ತಾರೆ. ಕೆಲವರು ಚಳಿಗಾಲದ ಲೆಕ್ಕವನ್ನು ಇಡಬಹುದು. ನನಗೆ ಶ್ರಾವಣ ಹೊಸತನವನ್ನು ತರುತ್ತದೆ.

ಕಠಿನ ಶಬ್ದಾರ್ಥ

ಅಕಲು—ಸಾಮಾನ್ಯ ಜ್ಞಾನ
ಅಗ್ನಾಯಿ—ಅಗ್ನಿಶಕ್ತಿ
ಅಟಮಟ—ಠಕ್ಕು, ಮಾಯೆ
ಅಟ್ಟ—ಬಯಲು ರಂಗಮಂಟಪ
ಅಣ್ಣಿಯ-ಗಡಲು—ಪ್ರೀತಿಯ ಕಡಲು
ಅಬುದ—ನೂರು ಕೋಟಿ
ಅಬ್ಬರತುಬ್ಬರ—ಕ್ಷುಬ್ಧ, ಮೇಲೆ ಕೆಳಗೆ
ಅಭಂಡ—ಅದ್ಭುತ
ಅಭಿಜಿತ್—ಸೂರ್ಯನನ್ನು ಆಕರ್ಷಿಸುತ್ತಿರುವ ನಕ್ಷತ್ರ
ಅರುಣಿಸು—ಅರುಣೋದಯವಾಗಿಸು
ಅರುವು—ತಿಳಿವು
ಅಲಕ್ನ—ತಟ್ಟನೆ, ಅಲಕ್ಕನೆ
ಅಸರಂತ—ಯಾವಾಗಲೂ
ಅಸ್ಸಲ್—ಚೊಕ್ಕ
ಆಕೂತಿ—ಇಚ್ಛೆ, ಒಲವು, ಪ್ರೀತಿ
ಆಕೆವಾಳ—ಶೂರ
ಆಯಾಳಿಸು—ಆಯಾಲನ್ನು ಮಾಡಿಕೊಳ್ಳು
ಆಸಮಂತಾತ್—ಸುತ್ತೂಕಡೆಗೂ
ಇನ—ಸೂರ್ಯ
ಇರೆ—ಉತ್ತೇಜಕ ರಸ
ಇಲ್ಲವೆ—ಇಲ್ಲತನ
ಉಂಬಿನೀವನ—ಬುದ್ಧನ ಜೀವನಕ್ಕೆ ಸಂಬಂಧಿಸಿದ ಒಂದು ವನ
ಉರುಳಿ—ಉಂಡೆ
ಉಶ್ಶಾಪ—ವಿಶಾಪ
ಎಕ್ಕೆಕ್ಕೆ—ಹಿಮ್ಮಡ ಎತ್ತೆತ್ತಿ, ತುದಿಗಾಲಿನಿಂದ
ಎಂಟು ಎದೆ—ಧೈರ್ಯ, ಶಿವನಂತೆ ಅಷ್ಟತನುವಿನ ಧೈರ್ಯ

ಎಲರ್—ಗಾಳಿ
ಎವ್ವ—ಏಳು ಮಕ್ಕಳ ತಾಯಿ
ಏರು ಜೇರು—ಉತ್ಕಟತೆ
ಒಗುಮಿಗು—ಹೆಚ್ಚಾಗು
ಒಳತೋಟಿ—ಒಳಗಿನ ಸಂಘರ್ಷ
ಒಳಲು—ಒಳತಿಳಲು
ಒಳವು—ರಹಸ್ಯ
ಓಜ—ಓಜಸ್ಸು
ಓಹಟಿ—ಸಮುದ್ರದ ಇಳಿತ
ಕಣಿ—ಕಂಡದ್ದು, ಭವಿಷ್ಯ
ಕದಿರು—ಕಿರಣದಂತೆ ಪ್ರಕಾಶಿಸು
ಕರುವಿಡು—ಎರಕಹಾಕು
ಕವಚಿ—ಕವಚಧಾರಿ
ಕಳ—ಹೊಲದ ಕಣದಲ್ಲಿ ದುಡಿದ ಆಳಿನ ಗುಂಪು
ಕಾಣಿ—ಚಿಕ್ಕತೂಕ, ಸಮತ್ವಕ್ಕೆ ತರುವ ತೂಕ
ಕಾಣೆ—ತಕ್ಕಡಿಯ ಏರುಪೇರು
ಕಾತು—ಕಾಯಿಬಿಟ್ಟು
ಕಾನು—ಕಾನನ
ಕಾಂಬೊಲ—ಕಾಣುವ ಹೊಲ, ಕ್ಷೇತ್ರ
ಕಾರ್ಗಾಲ—ಮಳೆಗಾಲ
ಕಾರ್ಬೊನ್—ಕಬ್ಬಿಣ
ಕಾವಣ—ಹಂದಿರ
ಕುಣಿಕೆ—ಕಣ್ಣಿ
ಕುಂಭಮಾಸ—ಮಾಘ
ಕುಹುಕಾಟ—ಅಸರಂತ ಬರುವ ಕುಹುಕ್ ಧ್ವನಿ
ಕುಳ—ಮನೆಮಾಡಿಕೊಂಡು ನೆಲಸಿದ ಒಕ್ಕಲು
ಕೂಚು—ಮುಂಬರಿವು, ಪ್ರಯಾಣ

ಕೃತ್ಸ್ನ—ಪೂರ್ಣ
ಕೆಲಸಿಗ—ಕ್ಷೌರದವ
ಗುಂಭ—ಆಳ
ಗುಮ್ಮನಿರು-ಸುಮ್ಮನಿರು
ಗುಮ್ಮು—ಗುದ್ದು
ಗಳತಿ ಎಳ್ಳು—ಮೈ ಮೇಲಿನ ಚಿಕ್ಕ ಚುಕ್ಕೆಯ ಚಿಹ್ನ
ಗೊನೆಗೊಳಿಸು – ಪೂರ್ತಿಮಾಡು ಸಫಲಮಾಡು
ಗೊಂದಲಿಗ—ಎಲ್ಲಮ್ಮನ ಕತೆ ಹಾಡುತ್ತ ಕುಣಿಯುವವ
ಚಥಾಯಿ — ಪರಿಬರುವಿಕೆ, ಹೆಚ್ಚುವಿಕೆ
ಚರ್ಪಟಿಸಲಿ — ಚಟ್‌ಪಟ್ ನುಡಿಯಲಿ
ಚವಲಂಬ - ಎಪೆ
ಚವ್ವರಿಸು—ಚೌರಬೀಸು
ಚಾರಿ—ಹೆಜ್ಜೆ ಹಾಕುವ ರೀತಿ
ಜಪಾಕುಸುಮ—ಕೆಂಪು ಹೂ, ಮೂಡಲ ದಿಕ್ಕಿನ ಸಂಕೇತದ ಹೂ
ಜಾಗು—ಮೌನದೊಳಗಿನ ಎಚ್ಚರ
ಜಾತಿ—ಜಾಜಿ
ಜೇವಣ- ಊಟ
ಜೇಷ್ಠಾದೇವಿಯ ಗಂಡ—ದಾರಿದ್ರ್ಯ
ಜೋಕೆ—ಜೋಪಾನ, ರಕ್ಷಣೆ
ಡಪ್ಪ – ಹಳ್ಳಿ ಹಾಡಿಗರ ಒಮ್ಮೇಳದ ಒಂದು ವಾದ್ಯ
ಡಿಂಗರಿಗ— ಭಕ್ತ
ಡೆಂಡಣಿಸಿ— ಕುಗ್ಗಿ
ತತ್ತಳಿ—ಅತಿಯಾಗಿ ಚಿಗುರುಬಿಡು
ತಾಜ - ತಾಜಮಹಲು
ತಿಮ್ಮನೆ— ಮಂಗ, ತಿರುಪತಿ
ತಿರಸಚ್ಚಿ—ಹಟವಾದಿ, ಮೂರ್ಖ
ತಿರುಕೋಡು—ಶ್ರೀ ಶಿಖರ, ಮಾಂಗಲ್ಯದ ಉನ್ನತ ಸ್ಥಿತಿ
ತೂಬು - ನೀರು ಹೋಗುವ ಹಾದಿ, ಕೋಡಿ
ತೊಂಗಲು—ಗೊಂಚಲು, ಟೊಂಗೆ
ತ್ರ್ವಾಟಕ—ತ್ರೋಟಕ್ಕೆ
ದಡ್ಡಿ—ಕುರಿಗಳ ಹಕ್ಕೆ
ದಾಂಗುಡಿ—ದಾಟುಕುಡಿ
ದಾವಣಿ– ಹಗ್ಗ, ದಾಮ
ದಿಮಡಿ—ಬಾರಿಸುವ ಒಂದು ವಾದ್ಯ
ದಿಂಬು - ಕಮಲದ ಬೀಜಕೋಶ
ದೀಧಿತಿ— ಬೆಳಕು
ದುರ್ದಿನ – ಮಳೆಗಾಲ
ಧ್ರುವಪದ- ಪಲ್ಲವಿ
ನಂಬೆಳಕು—ನಮ್ಮ ಬೆಳಕು, ನಮ್ರತೆ ಸೂಸುವ ಬೆಳಕು
ನವೋಢಾ—ಅದೇ ಮದುವೆಯಾದವಳು
ನಾದಾನ – ಆಸಕ್ತ
ನಿನಕಾಲ ನೂತು - ನಿನ್ನ ಕಾಲು ನೋಂದುಕೊಂಡು
ನೆರೆ, ತೆರೆ—ಪಕ್ವತೆ, ಪೂರ್ಣತೆ, ಪ್ರಕಟವಾಗು
ಪಕ್ಷತೀರ್ಥ— ಒಂದು ಪವಿತ್ರ ತೀರ್ಥ
ಪಡಸಾದ, ಪಡಿಸಾದ } ಪ್ರತಿಶಬ್ದ
ಪರೆಗುಡು—ವಾದ್ಯಧ್ವನಿ, ಮೇಲಿನ ಧ್ವನಿ
ಪಶ್ಯಂತಿಯ ವಾಣಿ— ವಾಣಿಯ ದರ್ಶನ ರೂಪ
ಪಾಂಗು— ರೂಪು
ಪಾಟ—ಹಾಡುವಿಕೆ
ಪೀಲು— ತೀರ ಚಿಕ್ಕಭಾಗ

ಪುಗ್ಗೆ—ಭಜಿ, ಬುಶುಬುರಿ
ಪುರಾತನಾಯಸ ಕವಚ—ಪುರಾತನ+ ಆಯಸ (ಕಬ್ಬಿಣ) ಕವಚ
ಪೆರೆ—ಬಾಲಚಂದ್ರ
ಪ್ರತಿಸರ್ಗೋತ್ಸುಕತಾ—ಪ್ರತಿಸೃಷ್ಟಿ ನಿರ್ಮಿಸುವ ಉತ್ಸುಕತೆ
ಫಡಕು—ಮುಂಚ್ಚಳದ ಒಂದು ಭಾಗ
ಬಯ್ತ—ಅಡಗಿರುವ
ಬರ್ಬರ—ಅನಾಗರಿಕ
ಬಸಿಗಲ್ಲು—ಚಂದ್ರಕಾಂತ ಶಿಲೆ
ಬಾನಗಣ್ಣು—ಸೂರ್ಯ
ಬಾಂದುಂಬ—ಆಕಾಶದ ತುಂಬ
ಬಾವನ್ನ—ಚಂದನ
ಬಿಸವಂದ—ವಿಸ್ಮಯ
ಬಿಸಿಲೊಡ್ಡು—ಬಿಸಿಲಿನ ಗುಂಪು
ಬೀಚು (Beach)—ಕರೆ, ತಡೆ
ಬೀತು—ವ್ಯಯವಾಗಿ, ಬೀಜಬಿದ್ದು
ಬೀಸು—ವಿಶಾಲ, ಉದ್ದ
ಬೆಚ್ಚರ—ಚೆಚ್ಚರ, ಶೀಘ್ರ
ಬೆನ್ನುಕಾಸು—ಶಿಕ್ಷೆಗೆ ಸಿದ್ಧವಾಗಿರು
ಬೇರಾಗ—ರಾಗರಾಹಿತ್ಯ, ಭಿನ್ನರಾಗ
ಬೇಳುವೆ—ಯಜ್ಞ
ಭಟ್ಟಾರಿಕೆ—ರಾಜಪುತ್ರಿ, ಒಡತಿ, ಭರ್ತೃದಾರಿಕಾ
ಭೂಮ—ಅತಿ, ವಿಪುಲ
ಮಕ್ಷಿಕಾಮಾಲೆ—ಜೋನ್ನೊಣಗಳ ಸಾಲು
ಮಜಕೂರಾ—ಹುರುಳು
ಮಡ್ಡಿ—ಮೊರಡಿ, ದಿನ್ನೆ
ಮಣಿಪ—ಕರ್ತವ್ಯ
ಮಂತಣ—ಮಂತ್ರಾಲೋಚನ
ಮರಸಂದು—ನಿಶ್ಚೇಷ್ಟವಾಗಿ
ಮಲಕು—ಗಂಟು, ತೊಡಕು
ಮಸಗಾಡು—ಕ್ರಿಯಾಶೀಲನಾಗು
ಮಾಳ—ಎತ್ತರ ಪ್ರದೇಶ
ಮುಗಿ—ಮುಚ್ಚು
ಮುರವತ್ತು—ಒತ್ತಾಯ ವರ್ಚಸ್ಸಿನ ಬಲ್ಮೆ
ಮೇರುದಂಡ—ಬೆನ್ನುಹುರಿಯೇ ಸಂವೇದನಾ ಮಾರ್ಗ
ಮೈಯ್ಸು—ದೇಹದುಂಬು, ಉಣಿಸು
ಯಲೊ (Yellow)—ಹಳದಿ
ಯಾಹೊತ್ತು—ಯಾವಾಗಲು
ರಾಣಿಗ—ರಣರಾಕ್ಷಣ
ರುತಿ—ನಾದ
ರೂವಾರಿ—ಶಿಲ್ಪಿ
ಲಗಳಿ—ಸಡಿಲು (ಅಂಗಿ)
ಲಂಚನ್ನು—ಅಲ್ಪೋಪಹಾರ, ದುಡ್ಡಿನ ತಿಂಡಿ ತಿನಿಸು
ವಿಚಿಕಿತಿಸು—ವಿಶೇಷ ಚಿಕಿತ್ಸೆ ಮಾಡು
ವಿದ್ಯುದ್ವಿದ್ಧ—ಮಿಂಚುತಾಗಿದ
ವೈತಾಳಿ—ವಂದಿಮಾಗಧ
ವ್ಹಲ್ಚರ್—ಹದ್ದು
ಶಾಯಿನಾಗು—ಪ್ರಕಾಶಿಸು
ಶೋ—ದೃಶ್ಯ
ಸಗಟ—ಎಲ್ಲ
ಸನಾದಿ—ಬಜಂತ್ರಿ
ಸನುಮಂತ—ಸಮ್ಮತ
ಸಯ್ತು—ಶಾಂತಿ, ವಿಶ್ರಾಂತಿ
ಸರಿಜೀರು—ತಂತಿಯ ಸಮಶ್ರುತಿ
ಸಾರಸ—ಸರಸಭಾವ

ಸುಟ್ಟುರೆ—ಸುಂಟರಗಾಳಿ
ಸುತ್ತಿರುವ—ಸುತ್ತ ಇರುವ
ಸೆಳಮೆ—ಎಳೆತ
ಸೇಂಟ್— ಸುಗಂಧ
ಸ್ವೇದ—ಬೆವರು
ಹಂಬು—ಬಳ್ಳಿ
ಹಮ್ಮು—ಅಹಂಕಾರ
ಹರಿಕಾರ—ಸುದ್ದಿ ತರುವವ
ಹರಹು—ವಿಸ್ತಾರ
ಹಾಕು—ಮುಚ್ಚು
ಹಾವಣ—ಹಾವು ಅಣ್ಣಾ
ಹೂತ—ಹೂಬಿಟ್ಟ
ಹೂವಣ—ಹೂವು ಅಣ್ಣಾ
ಹೇಡಿಮಣ್ಣು—ಜಿಗುಟಿಲ್ಲದ ಮಣ್ಣು
ಹೋರಟೆ—ಹೊಡೆದಾಟ
ಹೋಳಾಗು—ಪಕ್ಕಕ್ಕೆ ಸರಿದು ಹೋಗು

ಹಿನ್ನುಡಿ : ದೇವರೆ ಗತಿ

" ಲೋಕದೊಳಗೆ ಹುಟ್ಟಿದ ಬಳಿಕ ಸ್ತುತಿನಿಂದೆಗಳು ಬಂದೊಡೆ ಮನದಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು. "

'ಕೃಷ್ಣಾಕುಮಾರಿ'ಯಿಂದ 'ಶ್ರೀಮಾತಾ'ದ ವರೆಗೆ ಇಪ್ಪತ್ತೆರಡು ಕವನಸಂಗ್ರಹಗಳನ್ನು ಕೊಟ್ಟರು, ಅಂಬಿಕಾತನಯದತ್ತರು. 'ಅರಳು-ಮರಳು' ಎಂಬ ಪಂಚ ಕವನಸಂಗ್ರಹ ಗುಚ್ಛಕ್ಕೆ ಸಾಹಿತ್ಯ ಅಕಾಡಮಿಯ ಬಹುಮಾನ ದೊರಕಿತು. ಅದಾಗಿ ಒಂದು ತಪ ಮುಗಿಯಲಿದೆ. ಜನತೆ, ಸರಕಾರ, ವಿಶ್ವವಿದ್ಯಾಲಯಗಳು ಕಾಲಕಾಲಕ್ಕೆ ಕವಿಗೆ ಮನ್ನಣೆಯನ್ನಿತ್ತಿವೆ. ವಿದ್ಯಾರ್ಥಿಗಳು, ಗೆಳೆಯರು, ರಸಿಕ ಪಂಡಿತರು ಮತ್ತು ವರಕವಿ ಅಂಬಿಕಾ-ತನಯದತ್ತರ ಪಕ್ಷಪಾತಿಗಳಂತೂ ಎಡಬಿಡದೆ ಅವರ ಕವಿತಾಶಕ್ತಿಯನ್ನು ಹೊಗಳುತ್ತಲೆ ಇದ್ದಾರೆ. ಇದು ಅವರವರ ರುಚಿ.

ಆದರೆ ಕೆಲವರಿಗೆ ಅಂಬಿಕಾತನಯದತ್ತರ ಕಾವ್ಯ 'ಗೂಢಗುಂಜನ', 'ಶಬ್ದಗಳನ್ನು ದನದಂತೆ ಅಟ್ಟಿಕೊಂಡು ಹೋಗುವ ರೀತಿ' 'ಕಾವು ಆರಿದ ನಿಸ್ಸತ್ವ' 'ಅಜೀರ್ಣ ತತ್ತ್ವಜ್ಞಾನ' 'ಸೋಗಿನ ಅಧ್ಯಾತ್ಮ' ಇತ್ಯಾದಿ-ಯಾಗಿ ಕಂಡಿದೆ. ಈ ವಿಷಯವನ್ನು ಕುರಿತು ಚರ್ಚಾಕೂಟ, ವಿಚಾರ ಸಂಕಿರಣ ಹಾಗೂ ಹಿಂದಿ ಮತ್ತು ಇಂಗ್ಲಿಷ ಲೇಖನಗಳಿಂದ ಪ್ರಚಾರವೂ ನಡೆದಿದೆ. ಇದೂ ಇತಿಹಾಸವೆ.

ದ. ರಾ. ಬೇಂದ್ರೆಯವರು ಇತ್ತೀಚೆ ಆಗೀಗ ಹೇಳುವ 'ದೇವರೆ ಗತಿ' ಇದು ನಿರಾಶೆಯ ಧ್ವನಿಯೆ? ನಿರುತ್ಸಾಹದ ಸ್ಥಿತಿಯೆ? ಎರಡೂ ಅಲ್ಲ. **" ಜಗತ್ತಿಗೆ ಹೊಸದೊಂದು ಉಷಃಕಾಲ ಬಂದಿದೆ ಎಂಬ ಅವರ ಶ್ರದ್ಧೆ ಅಚಲವಾಗಿದೆ. " ಈ ಉಷಃಕಾಲದಲ್ಲಿ ಪ್ರತಿಯೊಬ್ಬನೂ ಅಂತರ್ಮುಖ**

ನಾಗಿ, 'ನಂಬಿ ಕರೆದರೆ' ದೇವರು ಗತಿ—ಮತಿ ಕೊಡುತ್ತಾನೆ ಎಂದು ಅವರ ಶ್ರದ್ಧೆ, ಅನುಭವ.

ಅಂಬಿಕಾತನಯದತ್ತರ ಕಾವ್ಯವನ್ನು ತಿಳಿದುಕೊಳ್ಳಲಿಕ್ಕೆ— ಕವನ ಸಂಗ್ರಹಕ್ಕಿದ್ದ ಮುನ್ನುಡಿ. ಭಾವಸಂದರ್ಭ ಮತ್ತು ಅವುಗಳನ್ನು ಕುರಿತು ಬರೆದ ಲೇಖನಗಳು, ಗ್ರಂಥಗಳು ಸಹಾಯಕವಾಗುವಂತೆ; ಕವನಚಿತ್ರಗಳಿಗೆ ಭಿತ್ತಿಯಾಗಿರುವ ಅವರ ವಿಮರ್ಶಾತ್ಮಕ ಬರವಣಿಗೆಯೂ ಪೋಷಕವಾಗಿರುತ್ತವೆ. ಆದುದರಿಂದ ಅವರ ಈ ವರೆಗಿನ ಬರವಣಿಗೆ, ಮುನ್ನುಡಿ, ಭಾವಸಂದರ್ಭ ಮತ್ತು ಅವರ ಕಾವ್ಯವನ್ನುದ್ದೇಶಿಸಿ ಬರೆದ ಲೇಖನಗಳಿಂದ ಕೆಲವು ಅವತರಣಿಕೆಗಳನ್ನು ರಸಿಕರ ಅವಗಾಹನೆಗಾಗಿ ನಾವು ಕೊಡಲಿಚ್ಛಿಸುತ್ತೇವೆ.

"ಓ ಶ್ರೋತ್ರಿಯನೆ, ಶ್ರೋತಾರ ಕೇಳು
ಇದು ನಭೋವಾಣಿ,
ನಾನು ಬಾಯಿ; ನೀನು ಕಿವಿ
ಬಾನ ಕಡಲಲಿ ತೇಲಿಬಿಟ್ಟೆ ಈ ನುಡಿ ದೋಣಿ.
ನಿನ್ನ ಹೃದಯದ ಬಂದರವ ಮುಟ್ಟೀತು
ನಿನ್ನ ಬುದ್ಧಿಯ ಮನೆಯ ಕಟ್ಟೀತು.
ನೀನೆಲ್ಲೆ ಇರು; ಕೇಳುವ ಸೂತ್ರ ಸರಿಯಿರಲಿ,
ಹೃದಯ ತೆರೆದಿರಲಿ.
ಕನ್ನಡದ ಹಾಗೆ ಕೇಳಿಸಬಹುದು ಈ ಮಾತು
ಆದರೂ, ಇದು ಮಾನವ್ಯ ಜೀವದಿಂ ಜೀವಕ್ಕೆ ಕಟ್ಟಿದ ಸೇತು."

"ಕನ್ನಡ ಮಾತಿನ ಕಸುವು, ಬಿಗುವು, ಆಳವು ಅಷ್ಟಿಷ್ಟಲ್ಲ ಎಂಬುದನ್ನು ವಾಚಕರು ಮರೆಯಬಾರದು; ಅದಕ್ಕೆ ಸಾವಿರ ವರ್ಷದ ಸಂಸ್ಕಾರವಿದೆ: ಸಂಸ್ಕೃತಿಯ ಸೆಲೆಯಿದೆ. ಇನ್ನು ಆಹಾರವು ಪಚನವಾಗಬೇಕಾದರೆ, ಅನ್ನದ ಪಾಕವಷ್ಟೇ ತಿನ್ನುವವರೂ ನುರಿಸಬೇಕಾದುದು ಅಗತ್ಯ—ಎಂಬ ಮಾತು ಸಾಹಿತ್ಯದಲ್ಲಿಯೂ ಸತ್ಯವಾಗಿದೆ. 'ಸುಲಿದ ಬಾಳೆಯ ಹಣ್ಣನ್ನು' ನುರಿಸದೆ ನುಂಗಿದರೆ ರಸಪಾಕ ಹೊಂದುವುದಿಲ್ಲ".

"ಅಷ್ಟಷಟ್ಪದಿಯೇ ಆಗಲಿ, ನನ್ನ ಸೀಸಪದ್ಯವೇ ಆಗಲಿ, ರನ್ನ ಬಗೆಯನ್ನು ಹೊನ್ನ ನುಡಿಯಲ್ಲಿ ಕುಂದಣಿಸುವ ಪ್ರಯತ್ನವು ಅದು. ಕಲ್ಲಿನಲ್ಲೂ ಕಲ್ಪನೆಯ ಅಂದವನ್ನು ಕಂಡರಿಸುವ ರೂವಾರಿ ಬಗೆಯ ಸಾಹಸವು ಅದು. ವಿಚಾರಸಾಂಪ್ರತೆ, ಬಂಧದ ಬಿಗುವು, ಶೈಲಿಯ ಗಾಂಭೀರ್ಯಗಳಿಂದ ಈ ರಚನೆಗೆ ಶಿಲಾಶಿಲ್ಪ ವೈಚಿತ್ರ್ಯವೂ ಬಂದಿದೆ".

"ಬೇಂದ್ರೆಯವರಿಗೆ ಅನುಭವದ ತೀವ್ರತೆಗೆ ಸಮಸಮನಾಗಿ ನಿಶಿತವಾದ ವಿಚಾರಶಕ್ತಿ ಇದೆ".

"ಈ ಕೃತಿಗಳಲ್ಲಿ ಯಾವುದರಲ್ಲಿಯಾದರೂ ವಿಷಯ ಬಹುಜನರು ಕಂಡದ್ದು; ವಿವರ ಕವಿಯ ಮನಸ್ಸಿಗೆ ಮಾತ್ರ ಕಂಡದು. ಅದನ್ನು ಹೇಳುವ ರೀತಿ ಇದರಲ್ಲಲ್ಲದೆ ಇನ್ನೆಲ್ಲಿಯೂ ಇರಲಾರದೆಂಬಷ್ಟು ವೈಯಕ್ತಿಕವಾಗಿದೆ".

"ಬೇಂದ್ರೆಯವರು ಸೂತ್ರಧಾರನಾದ ಬಾಲಕ. ಅಂಬಿಕಾತನಯದತ್ತ ಅಂತರಿಕ್ಷದಲ್ಲಿ ತೂಗಾಡುವ ಗಾಳಿಪಟ. ಬೇಂದ್ರೆಯವರು ಇಪ್ಪತ್ತನೆಯ ಶತಮಾನದ ಭಾರತದ–ಕನ್ನಡನಾಡಿನ ನಾಗರಿಕರು. ಅಂಬಿಕಾತನಯದತ್ತ ವಿಶ್ವಮಾನವ, ವಿಶ್ವದ ನಾಗರಿಕ. ಆತ ಹೇಳಿದ ಪ್ರಯೋಗಗಳನ್ನು ಬೇಂದ್ರೆಯವರು ಜೀವನದಲ್ಲಿ ನಡೆಯಿಸುತ್ತಾರೆ. ಇವರು ತಿಳಿಸಿದ ಫಲಿತಾಂಶಗಳನ್ನು ಅಂತರಿಕ್ಷದಲ್ಲಿ ನಿರ್ವಿಕಾರವಾಗಿ ಪರೀಕ್ಷಿಸಿ ಉಳಿಯಬಲ್ಲ ನನ್ನಿಗಳನ್ನು ಅಂಬಿಕಾತನಯ ಉಕ್ತಿಸುತ್ತಾನೆ, ಅಳಿಯುವಂಥವನ್ನು ತೂರಿಬಿಡುತ್ತಾನೆ. ಇಷ್ಟೇ ಅಲ್ಲ ಅಂತರಿಕ್ಷದಲ್ಲಿ ಅಲೆದ್ಮಾಡುವ ದಿವ್ಯ ಸಂದೇಶಗಳನ್ನು ಗ್ರಹಿಸಿ ಬೇಂದ್ರೆಯವರಿಗೆ ಅವುಗಳನ್ನು ಬರೆದುಕೊಳ್ಳಲು ಹೇಳುತ್ತಾನೆ".

"ವೇದ, ಉಪನಿಷತ್ತು, ವಚನಶಾಸ್ತ್ರಗಳ ಹಿಂದಿನ, ಇಂದಿನ ಅನುಭಾವಿಗಳ ಪರಂಪರೆಯ ಸಾರವನ್ನು ಹೀರಿಕೊಂಡು ಇಲ್ಲಿಯ ಕವಿವಾಣಿ ತನ್ನ ಆರ್ಷದೃಷ್ಟಿಗೆ ಹೊಸ ಮೆರಗನ್ನು ತಂದುಕೊಂಡಿದೆ".

"ಈ ಕವನಗಳಲ್ಲಿ ಪರಿಯ ಮೇಲೆ ಪರಿಯಿದ್ದು ಒಂದು ವಿಧದ

ಲಹರಿಯಿಂದ ಇನ್ನೊಂದು ಮೂಡಿನ ಲಹರಿಗೆ ಸಹಜವಾದ ಸಂಕ್ರಮಣವಾಗಿ ನವೋನವವಾದ ಒಂದು ಕಾವ್ಯಸಿದ್ಧಿ ಸಂಭವಿಸುತ್ತದೆ."

"ಸಹಜವಾಗಿ ಧ್ವನಿ ಹಬ್ಬಿದರೆ ಅದಕ್ಕಿಂತ ಉತ್ತಮವಾದ ಕಲ್ಪನೆ ಸಾಹಿತ್ಯದಲ್ಲಿ ಬೇರೊಂದಿಲ್ಲ; ಅಷ್ಟು ಅರ್ಥಸೌಂದರ್ಯ ಅಲ್ಲಿ ದೊರೆಯುತ್ತದೆ. ಕವಿಯ ಮನಸ್ಸು ಸಹಜವಾಗಿ ನುಡಿದಾಗ ಅದರಲ್ಲಿ ಲೋಕಾನುಭವದ ಸಂಪತ್ತಿ ತುಂಬಿರುವಾಗ, ಸಹಜವಾದ ಕೆಲವು ಕವಿಗಳ ಮನಸ್ಸಿನಲ್ಲಿ ಅರ್ಥದ ಹಿಂದೆ ಅರ್ಥ, ಅದರ ಹಿಂದೆ ಇನ್ನೊಂದರ್ಥ ಹೀಗೆ ಬೇರೆಬೇರೆ ಪ್ರಪಂಚಗಳು, ಸಂಕೇತಲೋಕಗಳು ಹುಟ್ಟಿ ನಿಲ್ಲುವುದುಂಟು. ಇದು ಸಹಜವಾಗಿ ನಮ್ಮ ಕಾಲವಲ್ಲಿ ಬೇಂದ್ರೆಯವರ ಕೆಲವು ಕವನಗಳಲ್ಲಿ ಕಾಣುತ್ತದೆ. ಮಾತುಗಳ, ಅವುಗಳ ಅಕ್ಷರಗಳ, ಅವುಗಳ ನಾದಗಳ ಹಿಂದೆ ಅರ್ಥಾಂತರಗಳ, ಅನುರಣನದ ಪ್ರಕಾಶ ಅವರ ಕೆಲವು ಕವಿತೆಗಳನ್ನು ಅತ್ಯುತ್ತಮ ಧ್ವನಿಕೃತಿಗಳನ್ನಾಗಿ ಮಾಡಿವೆ. ಆದರೆ ಕೆಲವು ವೇಳೆ ಕವಿಯ ಮನಸ್ಸಿನಲ್ಲಿ ಅಡಗಿರುವ ಯಾವುದೋ ತತ್ತ್ವ, ಸಿದ್ಧಾಂತ, ಅಧ್ಯಾತ್ಮಿಕ ಸಂಗತಿ, ಅನುಭಾವವೆನ್ನುವ ಅಂಶ ಹಿಂದೆ ನಿಂತು ಮಾತುಗಳ ಅರ್ಥವನ್ನು ಗಹನಗೊಳಿಸುವುದು. ಅವುಗಳ ತಂತ್ರಾರ್ಥ, ಸಮಯ ತಿಳಿದಲ್ಲದೆ ಕವಿತೆಗೆ ಅರ್ಥವಾಗದೆ ಹೋಗುವುದು. ಅದು ಪೂರ್ತಿ ಸಂಕೇತಗಳ ಪ್ರಪಂಚ."

"**ಬೇಂದ್ರೆಯವರ ಭಾವಗೀತೆಗಳು ಒಂದರ್ಥದಲ್ಲಿ ಬರಿಯ ಭಾವಗೀತೆಗಳಲ್ಲ, 'ಬುದ್ಧಿ' ಗೀತೆಗಳು.** ಯಾವ ಮಗ್ಗುಲಿನಿಂದ ನೋಡಿದರೂ ಕಣ್ಣು ಕುಕ್ಕಿಸುವ ಹೊಳಪಿರುತ್ತದೆ, ಮನಸ್ಸನ್ನು ಸೆಳೆಯುವ ಮೋಹಕತೆಯಿರುತ್ತದೆ. ಆದರೆ ಯಾವಾಗಲೂ ಕವಿಯ ಮನೋಗತ ವ್ಯಂಗ್ಯವು ವಿವರ ವಿವರದಲ್ಲಿ ಹೊಳೆಯುವುದೆಂಬ ಭರವಸೆ ಇಲ್ಲ. ಕವಿ ಭಾಷ್ಯಕಾರನಾದಾಗಲೇ ಕೃತಿ ಪೂರ್ಣವಾಗಿ ಅರ್ಥವಾಗುತ್ತದೆ.'

"ದತ್ತೋಜಿ ಸಭೆಗಳಲಿ ತಮ್ಮ ಕೃತಿಯನು ತಾವೆ ವಿವರಿಸುತ ಹಾಡುವರು. ಕಂಠ ಸಾಮಾನ್ಯ; ಆದರೆ ಗಾಯನದ ದೇಸಿ ಅವರದೇ; ಆದರ

ಮಾಯೆಗೆ ಸಿಲುಕದವರಿಲ್ಲ. ಇಷ್ಟು ಸುಲಭವೆ ಎಂದು ಅಂತೆ ಹಾಡಲು ತೊಡಗಿ ಗಾಯಕರು ಕೂಡ ಆ ವೈಖರಿಯ ಸಾಧಿಸರು."

"ನಿನ್ನ ನುಡಿ ಕುಶಲ
ಊಹೆ ಸುಂದರ, ಭಾವ ಜಗದಂತೆ ವಿಸ್ತಾರ
ನಿನ್ನೆಣಿಕೆ ಮಾನವನ ಬಾಳ್ವಿಗೇ ಪ್ರಸ್ತಾರ."

"ಅಂಬಿಕಾತನಯನ ಪದಪ್ರಯೋಗ ಶೈಲಿ ಯಾವಾಗಲೂ 'ಶ್ಲೇಷ' ಪ್ರಿಯವೆಂಬುದನ್ನು ಮರೆಯಬಾರದು. ಅದು 'ಸಭಂಗ'ವಿರಲಿ 'ಅಭಂಗ' ವಿರಲಿ, ರಸಭಂಗವಾಗದಂತೆ 'ಶ್ಲೇಷ' ಇಲ್ಲವೆ ಅನೇಕಾರ್ಥ ಪ್ರತಿಪಾದನೆ ಈ ಕವಿಯ ವೈಶಿಷ್ಟ್ಯ."

* * * *

"ತಮ್ಮ ಸ್ವಂತದ ಆನಂದಕ್ಕೆ ಮಾತ್ರ ಬರೆದಿರುತ್ತಾರೆ. ಸಾಮಾನ್ಯ ಸಹೃದಯ ಅವರಿಂದ ಏನನ್ನೂ ನಿರೀಕ್ಷಿಸುವಂತಿಲ್ಲ. ಈಚಿನ ಅವರ ಪ್ರಧಾನ ಲಕ್ಷಣ—ಅಜೀರ್ಣವಾದ ಅಧ್ಯಾತ್ಮ. ಶಬ್ದಗಳ ಧಿಮಿಕುಣಿತ. ಕವಿಪಟ್ಟಕ್ಕೆ ಎಲ್ಲಿ ಅಪೋಹ ಬಂದಿತೋ ಎಂಬ ರೊಚ್ಚಿನಿಂದ ಕವನಗಳನ್ನು ಒಂದಾದ ಮೇಲೊಂದು ರಚಿಸಿದ್ದಾರೆ."

"ತಮಗೆ ಕವಿಗಡಣದಿಂದ ಗಡೀ ಪಾರಾದರೆ ಏನು ಗತಿ ಎಂದು ಅಧೈರ್ಯದಿಂದಲೋ ಏನೋ ದ. ರಾ. ಬೇಂದ್ರೆಯವರೂ ಈ ಸಾಲಿನಲ್ಲಿ ನಿಂತರು."

"ಕನ್ನಡದ ಮನೆಗಳಲಿ
ಬೆಳೆಯುತಿಹ ಬಾಲಕವಿಗಳೆ ಹಿರಿಯ
ಕುವರರೆಂದೊಲಿದು ಹರಸಿಹನವನೆದೆ
ಹರಹ ಹಿಗ್ಗಿಂದ"

"ಜನಪ್ರಶಂಸೆ ಎಂಬುದು ಹೀಗೆ ವಿಮರ್ಶೆಯನ್ನು ದಿಕ್ಕು ತಪ್ಪಿಸ-ಬಲ್ಲುದು ಎಂಬುದನ್ನು ತೋರಿಸುವುದಕ್ಕಾಗಿ ಈ ಕವನದ ಕೆಲವು ಪಂಕ್ತಿ-ಗಳನ್ನು ಸೂಕ್ಷ್ಮವಾಗಿ ನೋಡೋಣ."

"ಇಳಿದು ಬಾ ತಾಯಿ
ಇಳಿದು ಬಾ ||
ಹರನ ಜಡೆಯಿಂದ
ಹರಿಯ ಅಡಿಯಿಂದ
ಋಷಿಯ ತೊಡೆಯಿಂದ
ನುಸುಳಿ ಬಾ"

ವಾಸ್ತವವಾಗಿ ಆಕೆ ಮೊದಲು ಹೊರಟದ್ದು ಹರಿಯ ಅಡಿಯಿಂದ, ಅನಂತರ ಹರನ ಜಡೆಯಿಂದ ಅದೂ ಆದಬಳಿಕ ಜಹ್ನುವಿನ ಕಿವಿಯಿಂದ.

ಮೊದಲೆರಡರ ವಿಪರ್ಯಾಸ ಹಾಗಿರಲಿ. ಆದರೆ ಋಷಿಯ ತೊಡೆ ಏಕೆ?* ಪುರಾಣದಲ್ಲಿ ಹೇಳಿರುವುದು ಜಹ್ನುವಿನ ಕಿವಿಯಿಂದ ಹೊರಬಂದಳು ಎಂದು. ಇಲ್ಲಾದರೋ ಆಕೆ ಪ್ರಾಸಕ್ಕಾಗಿ ಋಷಿಯ ತೊಡೆಯಿಂದ ನುಸುಳಿ ಬರಬೇಕಾಯಿತು! ಮನಸ್ಸಿಗೆ ಕಿರುಕಿರಿಯನ್ನುಂಟುಮಾಡುತ್ತದೆ ಈ ಪಂಕ್ತಿ."

"ಇಲ್ಲಿ ಬಂದು ನೋಡಿದರ ಬಾಯಿಗೆ ದೊಡ್ಡ ಬಂಡೆಗಲ್ಲು."

"'ಅರಳು ಮರಳು' ಸಂಗ್ರಹಕ್ಕಿಂತ ಹಿಂದಿನ ಬೇಂದ್ರೆಯೆ ನಿಜವಾದ ಕವಿ."

'ಹೀಗೂ ಉಂಟು ಈ ಜಗ.'

ದ. ರಾ. ಬೇಂದ್ರೆಯವರು ಕವಿ, ಕಾವ್ಯಸಂಬಂಧವಾಗಿ ವಿಚಾರ ಮಾಡುವ ರೀತಿ ಹೀಗಿದೆ:—

"ಬೆಳಕಿನ ಹತ್ತಿರದ ಒಂದು ಶುಭಧ್ವನಿ ಕೇಳಿದರೆ ಸಾಕು, ಜೀವನ ಸಂಗ್ರಾಮಕ್ಕೆ ಜೀವ ಸಿದ್ಧವಾಗುತ್ತದೆ."

* "Jahnu who swallowed up the Ganga in her course down on earth and let her out through his thighs."— "The puranas" By K. Narayana Swami Aiyer. Page—154.

“ ಹೊರಗಿದ್ದಂತೆ ಒಳಗೊಂದು ಜೀವನ ಇದೆ. ಅದರ ಬೆಳಕಿನ ಮುಂದೆ ಹೊರಗಿನದು ಕತ್ತಲೆ. ಆದರೆ ಅದು ಸ್ಥಿರವಾಗಿ ನಿಲ್ಲುವುದು ಪ್ರಾರಂಭದಲ್ಲಿ ಅಪರೂಪ. ಆದರೆ, ಆ ಬೆಳಕು ಚಿಕ್ಕೆಯಾಗಿ ರೂಪುಗೊಂಡು ಧ್ರುವದಂತೆ ನಮ್ಮನ್ನು ಆಕರ್ಷಿಸುವಾಗ ನ್ಯೈಯೇ ಉರಿನಾಲಿಗೆಯಂತೆ ಊರ್ಧ್ವಮುಖವಾಗಿ ಏರುವುದು.”

“ ಅವರವರ ಎದೆಯಲ್ಲಿ ಒಕ್ಕಲಾಗಿ ನಿಂತ ಅವರವರ ಕ್ಷೇತ್ರಜ್ಞ ಒಬ್ಬನಿದ್ದಾನೆ. ಅವನಿಗೆ ನಮ್ಮ ನಮ್ಮ ಹೊಲ ನಾವು ಒಪ್ಪಿಸಲೇಬೇಕು ಅಂದರೆ ಕಾಳು ಕಾಣುತ್ತೇವೆ. ಇಲ್ಲದಿದ್ದರೆ ಜೀವನದುದ್ದ ಬರಗಾಲ.”

“ ಕವಿ ಹೃದಯವು ಅನಾದಿಕಾಲದಿಂದಲೂ ಭೌಮಜೀವನದಲ್ಲಿ ಭಾಗ್ಯದ ಚಿಹ್ನವನ್ನು ಕಂಡಿದೆ. ದುರ್ಭಾಗ್ಯದ ಭಾವನೆಗಳು ಸಂಚಾರಿಯಾಗಿ ಬಂದು ಈ ದರ್ಶನದ ಸ್ಥಾಯಿಗೆ ಪೋಷಣೆಯನ್ನೇ ಕೊಡುವವು.”

“ ಕಾವ್ಯದ ಜನ್ಮ ಒಂದು ಅದ್ಭುತ ಘಟನೆ. ಅದೊಂದು ಕಾಣಿಕೆಯ ಕುರುಹು. ಸೂರ್ಯನ ಸ್ಪರ್ಶದಿಂದ ಕುಂತಿ ಕರ್ಣನನ್ನು ಹಡೆದು ತೇಲಿ ಬಿಟ್ಟಂತೆ ಕವಿಯು ಪ್ರತಿಭೆಯ ಸ್ಪರ್ಶದಿಂದ ಕಾವ್ಯವನ್ನು ಪಡೆದು ತೇಲಿ ಬಿಡುತ್ತಾನೆ.”

“ ಸಾಹಿತ್ಯ–ಕಾವ್ಯ ಬರಿ ವಿಲಾಸವಲ್ಲ. ಅದು ಕಲ್ಯಾಣ ಕರೆಯುವ ಮಯೂರ ನೃತ್ಯ—ಯಜ್ಞರೂಪ.”

“ ಉಪಮಾ ವ್ಯಾಪಾರದಲ್ಲಿ ಕವಿ ಭೇದದಲ್ಲಿ ಅಭೇದವನ್ನು, ಅಭೇದದಲ್ಲಿ ಭೇದವನ್ನು ಅನುಭವಿಸುವನು. ಅದರ ಚಾರುತ್ವ ಬರಿ ಚಮತ್ಕೃತಿಯಲ್ಲ. ಅದು ಹೃದಯಗ್ರಂಥಿಯ ಅಂತರ್ಮುಖ ವ್ಯವಹಾರ.”

“ ಕವಿಜೀವನದಲ್ಲಿ ವಸ್ತುನಿಷ್ಠೆ, ಆತ್ಮನಿಷ್ಠೆ, ಹೃದಯನಿಷ್ಠೆಯಲ್ಲಿ ಒಗೆತನದ ಬಾಳ ನಡೆಸುವವು. ಕಾವ್ಯಾಸ್ವಾದನಕ್ಕೆ ಹೃದಯಾನುಭೂತಿ ಮೂಲ ಧನ.”

“ ಜೀವನದಿಂದ ಸಾಹಿತ್ಯ, ಸಾಹಿತ್ಯದಿಂದ ಜೀವನವೂ ನವೀನ-

ವಾಗುವುದುಂಟು. ಆದರೆ ಒಂದಕ್ಕಿಂತ ಒಂದು ಉತ್ತಮವಾಗಿರಬೇಕು. ಉತ್ತಮದ ಸ್ಪರ್ಶದಿಂದಲೇ ಅಧಮತೆಯೂ ಶುದ್ಧಿಗೊಂಡು ಮಧ್ಯಮದ ಮಟ್ಟಕ್ಕೇರುವುದು."

"ಪರಾ, ಪಶ್ಯಂತಿ, ಮಧ್ಯಮಾ ಇವುಗಳ ಸಮ್ಯಕ್ ಯೋಗದಲ್ಲಿ ಶುದ್ಧ ಕಾವ್ಯೋದ್ಭವವಾಗುತ್ತದೆ. ಆ ಶ್ರುತಿಸಂಪತ್ತಿಯನ್ನು ಸಾಮಾಜಿಕ ರಾಜಕೀಯಗಳಿಂದ ಕ್ಷಣಿಕ ಸಂಸರಣಗಳಿಂದ ದುರ್ಗಂಧಕ್ಕೆ ಒಳಪಡಿಸಬಾರದು. ಅಜ್ಞಾನ ಸಪ್ತಕದಿಂದ ವಿಜ್ಞಾನ ಸಪ್ತಕದೆಡೆಗೆ ಎಚ್ಚೆತ್ತ ಮಾನಸು ಸಾಗಬೇಕಾಗುತ್ತದೆ. ಇಲ್ಲಿ ಶಬ್ದದ ಕ್ರೀಡೆ—ಕೇಳಿಯಲ್ಲ, ಸಮಾಹಿತ ಚಿತ್ತದಿಂದ ಅಕಾಮಹತರಾಗಿ ಕೇಳಬಹುದಾದ ಧ್ವನಿ ಇದೆ."

"ಆಂತರಿಕ ಉಪಾಸನೆಗೆ ಬಾಹ್ಯಸಂದರ್ಭಗಳೂ ಕಾವ್ಯಪ್ರಚೋದನೆ ಮಾಡಿವೆ. ಸಂಖ್ಯಾಸೂತ್ರಗಳಿಂದ ನೆಯ್ಗೆಹೊಂದಿದ ಕವನದ ಸಾಲುಗಳು ಕೆಲವೊಂದು ವಿಮರ್ಶೆಗೆ 'ರಫೂ' ಹಾಕಿದಂತೆ ತೋರಬಹುದು."

"ಏನೋ ಕಗ್ಗ ಅನ್ನಬಹುದು. ಹೂಂ ಅನ್ನೂಬಹುದು. ಹೇಳುವವರದೂ ಒಂದು ಲಹರಿ; ಕೇಳುವವರದೂ ಒಂದು ಲಹರಿ. ಹೇಳು-ಕೇಳುವವರ ಹೊಂದಿಕೆಯಾದಾಗ ಕಗ್ಗ ಒಂದು ಸಗ್ಗವಾಗುತ್ತದೆ."

* * * *

ಅಂಬಿಕಾತನಯದತ್ತರು ತಮ್ಮ ಕಾವ್ಯದ ತತ್ತ್ವಜ್ಞಾನವನ್ನು ಅವರ 'ಸಾಹಿತ್ಯ ಮತ್ತು ವಿಮರ್ಶೆ', 'ಸಾಹಿತ್ಯ ಸಂಶೋಧನ', 'ವಿಚಾರಮಂಜರಿ', 'ಕವಿ ಲಕ್ಷ್ಮೀಶನ ಜೈಮಿನಿಭಾರತಕ್ಕೆ ಮುನ್ನುಡಿ' ಮತ್ತು ಹೆಚ್ಚಾಗಿ 'ಕಾವ್ಯೋದ್ಯೋಗ'ದಲ್ಲಿ ಮಂಡಿಸಿದ್ದಾರೆ. ಕವಿಗೆ ನಾಲ್ಕು ಮುಖ. ಅವನ ವ್ಯಾವಹಾರಿಕ ಮತ್ತು ಸಮೀಕ್ಷಕ ಮುಖಗಳು ದೃಶ್ಯವಾದರೆ; ಮೂಲ ಕವಿ ಹಾಗು ಅವನ ಗುರು ಅದೃಶ್ಯದಲ್ಲಿ ಇರುತ್ತಾರೆ. "ಯಾರ ಚತುರ್ಮುಖತೆಗೂ ನೆಲೆ ಭಗವದ್ವಚನ; ವಿಷಯಗಳಾಚೆ ಇಂದ್ರಿಯಗಳಿವೆ; ಇಂದ್ರಿಯಗಳಾಚೆ ಮನ; ಮನದಾಚೆ ಬುದ್ಧಿ, ಬುದ್ಧಿಯಾಚೆಗೆ 'ಸಃ'; ರಸಃ; ರಸೋವೈಸಃ! ರಸೋಽಸ್ಮಿತೆಯ ಸಾಧನೆ 'ಅಂಬಿಕಾತನಯದತ್ತನ

ಕಾವ್ಯ' ಎಂದು ಅವರು ಹೇಳಿದ ಮಾತು ಅನೇಕರಿಗೆ ಒಪ್ಪಿಗೆ, ಕೆಲವರಿಗೆ ಒಪ್ಪದು. ಕಾವ್ಯ ಇದು ಒಂದು ಉತ್‌ಯೋಗ, ಉನ್ನತಿಯ ಯೋಗ, ಸಾಧನೆ ಎಂಬುದು ಯಾರಿಗೆ ಒಪ್ಪದೋ ಅವರಿಗೆ ಅಂಬಿಕಾತನಯದತ್ತರ ಕಾವ್ಯ, ಗೂಢ, ದೂರ. ಕಾವ್ಯವೇ ಅಲ್ಲ; ಕಗ್ಗ.

ಕವಿಯು ಕ್ರಾಂತದರ್ಶಿ. ಅವನು ಆ ಲೋಕದ (ಅದೃಶ್ಯ ಲೋಕದ) ಮಾತನ್ನು, ಈ ಲೋಕಕ್ಕೆ (ವಿಷಯ ಪ್ರಪಂಚಕ್ಕೆ) ಮುಟ್ಟಿಸುವ ಮಾಧ್ಯಮು. ಆ ಲೋಕದಲ್ಲಿ ಹೊಳೆದದ್ದನ್ನು ಈ ಲೋಕದ ಕವಿಯು ತಿಳಿಯುತ್ತಾನೆ. ಹೊಳೆವು ಮತ್ತು ತಿಳಿವುಗಳಲ್ಲಿ ಒಂದು ಆಕರ್ಷಕ-ವಾದ, ಸುಂದರವಾದ ಸಾದೃಶ್ಯವನ್ನು ಕಾಣುತ್ತಾನೆ. ಆ ಆಕರ್ಷಕ ಸಾದೃಶ್ಯವನ್ನು ಈ ಲೋಕದ ಜನರು ಕಂಡು ಕುಣಿಯುವಂತೆ, ಆ ದೃಶ್ಯವನ್ನು ಒಂದು ಛಂದ ಬಂಧದಲ್ಲಿ ಪವಣಿಸಿ ಕಾವ್ಯಮಾಲೆಯನ್ನು ಕಟ್ಟುತ್ತಾನೆ ಕವಿ. ಕೆಲವರಿಗೆ ಪ್ರತಿಮೆಯ ಮೆಚ್ಚು, ಕೆಲವರಿಗೆ ಪ್ರತೀಕದ ಹುಚ್ಚು. ಪ್ರತೀಕವೇನು, ಪ್ರತಿಮೆಯೇನು, ಎರಡೂ ಕಾವ್ಯಾಲಂಕಾರ, ನಾಟ್ಯ ಲಕ್ಷಣ. ಅದರ ಬೆಂಬಡಿಗೆ ಧ್ವನಿ. ಅದು ಬರೀ ವಾಚ್ಯವಲ್ಲ.

ಅಂಬಿಕಾತನಯದತ್ತರ ಕಾವ್ಯಕ್ಕೆ ಸಪ್ತಭೌಮಿಕ ಪ್ರಜ್ಞೆಯುಂಟು, ಏಳು ನೆಲೆಗಳುಂಟು. ಶಬ್ದ, ಭಾವ, ಅರ್ಥ, ವ್ಯುತ್ಪತ್ತಿ, ಪ್ರತಿಭೆ, ಪ್ರಜ್ಞೆ ಮತ್ತು ಗುರು—ರಸೋ ವೈಸಃ ಹೀಗೆ ಇವು ಏಳು ನೆಲೆಗಳು. 'ಸಪ್ತಕಲೆ' ಕವನದಲ್ಲಿ ಇನ್ನೊಂದು ಸಪ್ತಗಳನ್ನು ಹೇಳಿದರೆ, 'ಕಾವ್ಯೋದ್ಯೋಗ'ದಲ್ಲಿ ಯೋಗದ ಸಪ್ತಭೂಮಿಗಳನ್ನು ಹೇಳಿದ್ದಾರೆ. ಅವರಿಗೆ ಛಂದಸ್ಸೂ ಕೃತಿ-ಯಿಂದ ಉತ್ಕೃತಿಯ ವರೆಗೆ ಒಂದು ಸಪ್ತದ ಸೋಪಾನ. 'ಚಂದಮಾಮಾ' ಅಂಥ ಒಂದು ಸಾಹಸ. ವೃದ್ಧ ಸೇವಾನುರಾಗದಿಂದ, ಅಭ್ಯಾಸಬಲದಿಂದ ಕವಿಯ ಕಾವ್ಯನಿರ್ಮಿತಿಯ ಪ್ರಜ್ಞೆಪುಷ್ಟಿಯನ್ನು ಪಡೆಯುತ್ತದೆ. ದ. ರಾ. ಬೇಂದ್ರೆಯವರ ಸಂಸ್ಕಾರಭೂಮಿ ಚಿಕ್ಕದಲ್ಲ. ರಾಮದಾಸ, ಇಮರ್ಸನ್, ಅರವಿಂದ, ಎ. ಈ. ಮಾರಿಸ ಮೆಟರಲಿಂಕ್, ಖಲೀಲಜಿಬ್ರಾನ್, ಜೆ. ಕೃಷ್ಣಮೂರ್ತಿ ಇತ್ಯಾದಿ ಅನೇಕರ ಪ್ರಭಾವಕ್ಕೆ ಅವರು ಒಳಗಾಗಿದ್ದಾರೆ.

ಪಂಪನ ಕಾವ್ಯಗಳು, ಶೂನ್ಯಸಂಪಾದನೆ, ಸರ್ವಜ್ಞ, ಕನಕದಾಸ ಮತ್ತು ಲಕ್ಷ್ಮೀಶರ ಕೃತಿಗಳು ಹಾಗೂ ರತ್ನಾಕರನ ಭರತೇಶವೈಭವ ಇವು ಅವರ ನಿತ್ಯ ಪಠಣಗ್ರಂಥಗಳಾಗಿವೆ. ಹೀಗಾಗಿ ಅವರ ಕಾವ್ಯದಲ್ಲಿ ಕನಕನ ಮುಂಡಿಗೆ, ಲಕ್ಷ್ಮೀಶನ ನಾದಲೀಲೆ, ಸರ್ವಜ್ಞನ ಉಕ್ತಿಗರ್ಭ ಇತ್ಯಾದಿ ಗುಣಗಳು ತಾವಾಗಿಯೆ ಸೇರಿಬಿಡುತ್ತವೆ. ಅವರು 'ಮೇಘದೂತ' 'ರಮಣ ಹೃದಯ', 'ಅಮೃತಾನುಭವ', 'ಆನಂದಲಹರಿ', 'ಓಮರ' ಇವು-ಗಳನ್ನು ಕನ್ನಡಕ್ಕೆ ತಂದುದು ತನ್ನ ಶೋಭೆಗಾಗಿ ಹಚ್ಚಿಕೊಂಡ ಬಣ್ಣದ ಪುಚ್ಚಗಳಲ್ಲ. ಇವು ಅವರ ವೃದ್ಧಸೇವಾನುರಾಗದ ಸಾಕ್ಷಿಗಳಾಗಿವೆ.

ಅಂಬಿಕಾತನಯದತ್ತರ ಕಾವ್ಯದ ವೈವಿಧ್ಯವನ್ನು— ಡಾ. ಮಾಸ್ತಿ, ಡಾ. ಗೋಕಾಕ, ಡಾ. ಮುಗಳಿ, ಶ್ರೀ ಚೆನ್ನವೀರ ಕಣವಿ, ದಿ. ತೀ. ನಂ. ಶ್ರೀ. ಪ್ರೊ. ವಿ. ಸೀತಾರಾಮಯ್ಯ, ಪ್ರೊ. ಕೀರ್ತಿನಾಥ ಕುರ್ತಕೋಟಿ, ಡಾ. ಶಂಕರ ಮೊಕಾಶಿ, ಪ್ರೊ. ಬಿ. ಎಚ್. ಶ್ರೀಧರ, ಡಾ. ಕೆ. ಕೃಷ್ಣಮೂರ್ತಿ, ಪ್ರೊ. ಎಸ್. ಕೆ. ರಾಮಚಂದ್ರರಾವ, ಶ್ರೀ ದತ್ತಮೂರ್ತಿ ದೇಸಾಯಿ, ಶ್ರೀ ಸಿಂಪೀ ಲಿಂಗಣ್ಣ, ಶ್ರೀ ಎನ್. ಕೆ. ಕುಲಕರ್ಣಿ, ಪ್ರೊ. ಆರ್. ಜಿ. ಕುಲಕರ್ಣಿ, ಪ್ರೊ. ಪ್ರಹ್ಲಾದ ನರೇಗಲ್, ಶ್ರೀ ಗೌರೀಶ ಕೈಕಿಣಿ ಇತ್ಯಾದಿ ಅನೇಕರು—ಕಾವ್ಯಸೌಂದರ್ಯವನ್ನು ವಿಂಗಡಿಸಿ, ವಿವರಿಸಿ ನಿರೂಪಿಸಿದ್ದಾರೆ. ಅವರಿಗೆಲ್ಲ ನಾವು ಋಣಿ.

ಮೊದಲಿನಿಂದ ಇಂದಿನ ವರೆಗಿನ ಅಂಬಿಕಾತನಯದತ್ತರ ಕಾವ್ಯದಲ್ಲಿ– ಸೃಷ್ಟಿಸೌಂದರ್ಯ ರಸಾಸ್ವಾದನೆಯ ಕವನಗಳು; ಪಶು–ಪಕ್ಷಿ ನಿಮಿತ್ತಕ ಕವನಗಳು; ವಿಡಂಬನೆಯ ಕವನಗಳು; ವ್ಯಕ್ತಿಸಂಬಂಧಿ ಕವನಗಳು; ಸ್ವವಿಷಯಕ ಕೌಟುಂಬಿಕ ಸುಖ-ದುಃಖದ ಕವನಗಳು; ಗೆಳೆಯರ ಸ್ನೇಹ, ಸುಖ–ದುಃಖದ ಕವನಗಳು; ಕನ್ನಡ ನಾಡು–ನುಡಿ–ಸಂಸ್ಕೃತಿಗೆ ಸಂಬಂಧಿ-ಸಿದ ಕವನಗಳು; ಎಚ್ಚರ, ನಿದ್ದೆ, ಕನಸು ಮೊದಲಾದ ಅನುಭವದ ಕವನ-ಗಳು; ಅಧ್ಯಾತ್ಮಿಕಜೀವನ, ಗುರು–ಶಿಷ್ಯ ಸಂವಾದ ಕವನಗಳು; ದೇವತಾ

ಸ್ತುತಿ ಹಾಗೂ ಪ್ರಾರ್ಥನಾ ಕವನಗಳು—ಹೀಗೂ ವಿಭಜನೆಯನ್ನು ಮಾಡಬಹುದು.

‘ನೃತ್ಯಂತಿ ಪದಾನಿ’, ‘ಅಭಿನಯಂತಿ ಭಾವಾನಿ’ ಎಂಬುದನ್ನು ಅನುಲಕ್ಷಿಸಿ, ಕಾವ್ಯದಲ್ಲಿಯ ಶಬ್ದಾರ್ಥಗಳಿಗೆ ಶಕ್ತಿ ಬರುವುದು ನಾದದಿಂದ, ಗಮಕ, ಕಾಕು, ಅಭಿನಯ, ಮುದ್ರೆ ಇತ್ಯಾದಿಗಳಿಂದ ಎಂಬುದನ್ನು ತಮ್ಮದೇ ಆದ ಶೈಲಿಯಲ್ಲಿ ಹಾಡಿ, ಕೈಮಾಡಿ ಸಂಜ್ಞಿಸಿ, ಜನರಿಗೆ ಕವನಗಳ ಭಾವವು ಮುಟ್ಟುವಂತೆ ಮಾಡುತ್ತಾರೆ ಬೇಂದ್ರೆಯವರು. ರಸಿಕರು ಅದಕ್ಕೆ ಮನಸೋತಿದ್ದಾರೆ.

ಕವಿಕಾವ್ಯ ಸಂಬಂಧವನ್ನು ಅಂಬಿಕಾತನಯರು ಕಾಣುವಂತೆ, ಒಪ್ಪುವಂತೆ ಕೆಲವರು ಕಾಣುತ್ತಿಲ್ಲ. ದ. ರಾ. ಬೇಂದ್ರೆಯವರ ಸಾಹಿತ್ಯವಿಮರ್ಶೆಯ ಹಲವು ಗ್ರಂಥ ಹಾಗೂ ಲೇಖನಗಳತ್ತ ಇತ್ತೀಚಿನ ವಿಮರ್ಶೆ ಮತ್ತು ವಿಮರ್ಶಾಗ್ರಂಥಗಳ ಬಗ್ಗೆ ಸಮಾಲೋಚನೆ ನಡೆಸಿದ ಕೆಲವು ಗ್ರಂಥಕಾರರು ತ್ರಯಸ್ಥಭಾವನೆಯಿಂದ ನೋಡಿದ್ದಾರೆ. ಅವು ಗಣನೆಗೆ ಬರತಕ್ಕ ವಿಮರ್ಶಕ ಗ್ರಂಥಗಳೇ ಅಲ್ಲ ಎಂಬ ಭಾವನೆಯೂ ಇರಬಹುದು.

ದ. ರಾ. ಬೇಂದ್ರೆಯವರು, ಕಾವ್ಯ ಇದು ಕೇವಲ ಕಲೆಯುಲ್ಲ, ಅದು ಸೃಷ್ಟಿಯೂ ಹೌದು ಎಂದು ತಿಳಿದಿದ್ದಾರೆ. ಅವರ ಕವನ ಕೇವಲ ಕೃತಿ ಅಲ್ಲ, ಕೇವಲ ಶ್ರುತಿಯೂ ಅಲ್ಲ. ಕೃತಿ ಮತ್ತು ಶ್ರುತಿಗಳ ಅಡ್ಡ ಎಳೆ, ಉದ್ದ ಎಳೆ ಸೇರಿಕೊಂಡಿವೆ ಅವರ ಕಾವ್ಯರಚನೆಯಲ್ಲಿ.

ಬೇಂದ್ರೆ ಎಂಬ ಒಂದು ಕಾವ್ಯಗುಣವಿದೆ. ಅದು ಇಲ್ಲದ್ದು ಕವಿತೆಯೆ ಅಲ್ಲ ಎಂಬ ಜಂಭ ಬೇಂದ್ರೆಯವರಿಗಿಲ್ಲ. ಆದರೆ ಬೇಂದ್ರೆಯವರಿಗೆ ಹಾಗೆ ಜಂಭವಿದೆ ಎಂಬಂತೆ ಒಂದು ರಾಕ್ಷಸ ರೂಪವನ್ನು ನಿರ್ಮಿಸಿ, ಅದನ್ನು ಹೊಡೆದುಹಾಕುವ ವೀರರಂತೆ ಅಭಿಪ್ರಾಯ ಚತುರರು ವರ್ತಿಸಿದರೆ ಅದು ಡಾನ್ ಕ್ವಿಗ್‌ಝೋಟ ಮತ್ತು ಸ್ಯಾಂಕೋಪಾಂಝಾ ಅವರನ್ನು ನೆನಪಿಗೆ ತರುತ್ತದೆ. ಅಗೌರವದಿಂದ ಮಾತನಾಡುವವರ ಜತೆ ಸುಳ್ಳುವಿನಯದಿಂದ

ಮಾತನಾಡುವ ಸಂಭಾವಿತಗಿರಿ ಬೇಂದ್ರೆಯವರಿಗೆ ಪಳಗಿಲ್ಲ. ಪಂಪ, ಹರಿಹರ, ಕುಮಾರವ್ಯಾಸ, ರತ್ನಾಕರ, ಸರ್ವಜ್ಞ, ಕನಕ, ಪುರಂದರದಾಸ, ಪ್ರಭುದೇವ ಇವರು ಒಬ್ಬರಂತೆ ಒಬ್ಬರಿಲ್ಲ. ಆದರೂ ಅವರೆಲ್ಲಾ ಮಹಾಕವಿಗಳು ಎಂದು ಒಪ್ಪಿಕೊಂಡೆ ಬಂದಿದ್ದಾರೆ ಅಂಬಿಕಾತನಯದತ್ತರು. ದೇವಡು, ಗೋವಿಂದ ಪೈ, ಮಧುರಚೆನ್ನ, ಮಾಸ್ತಿ, ವಿನಾಯಕ, ಕುವೆಂಪು, ಕವಿಶಿಷ್ಯ, ಶಾಂತಕವಿ ಇಂಥ ಹಲವು ಕವಿವಿಮರ್ಶಕರು ಬೇಂದ್ರೆಯವರ ಬಗ್ಗೆ ಸೋದರಿಕೆಯ ಪ್ರೇಮವನ್ನು ತಾಳಿದ್ದಾರೆ.

ಇಂದು ಕವಿ ಕವಿಗಳಲ್ಲಿ ಪಕ್ಷ, ವಿಮರ್ಶಕ ವಿಮರ್ಶಕರಲ್ಲಿ ಪಕ್ಷಗಳಾಗಿವೆ. ಇವರಿಬ್ಬರ ಮೋಜು ನೋಡುವವರಲ್ಲಿಯೂ ಗುಂಪುಗುಂಪುಗಳಾಗಿವೆ. ಇಂಥ ದೇಶದ ಜನ ಬೆಳೆಯುವದು ಕಷ್ಟ. ಆದರೆ ಎಲ್ಲರೂ ಬೆಳೆಯುತ್ತಿರುವುದು ದೇವರ ಕೃಪೆ—ದೇವರೆ ಗತಿ. ಕೆಲವರ ಹೃದಯದಲ್ಲಿ ಹೊಸ ಮಾನವನು ದಿನದುದಯಕ್ಕೂ ಮೂಡುತ್ತಿದ್ದಾನೆ. ಸಧ್ಯದ ಕನ್ನಡ ಕಾವ್ಯವು ಅನೇಕ ಸತ್ಕವಿಗಳಿಂದ ಸಮೃದ್ಧವಾಗಿದೆ ಎಂಬುದು ಬೇಂದ್ರೆಯವರು ಅನೇಕರ ಕವನಸಂಗ್ರಹಗಳಿಗೆ ಬರೆದ ಮುನ್ನುಡಿಗಳಿಂದ ತಾನೇ ಸಿದ್ಧವಾಗುವಂತಿದೆ.

ಅಂಬಿಕಾತನಯದತ್ತರಿಗೆ -- ಹೊಗಳಿಕೆ, ಸನ್ಮಾನ, ಗೌರವ ಸಾಕಾಗಿಲ್ಲ, ತೃಪ್ತಿಯಾಗಿಲ್ಲ ಎಂದೂ ಕೆಲವರು ಈ ಹಿನ್ನುಡಿಯ ಅರ್ಥವನ್ನು ಕಲ್ಪಿಸಿದರೆ ಆಶ್ಚರ್ಯವೇನಿಲ್ಲ. **ಹಿನ್ನುಡಿಯ ಉದ್ದೇಶ ಸಂವಾದ ಭೂಮಿಯ ಸೃಷ್ಟಿಯೇ ಹೊರತು ಅಸಂತೃಪ್ತಿಯಲ್ಲ.** ಅಂಬಿಕಾತನಯದತ್ತರು ಸ್ನೇಹಜೀವಿಗಳು, ಸಂವಾದಪ್ರಿಯರು.

“ ಹೊಸಬಗಲಿ ಅತಿ ಹೊಸಬ
ಹಳಬರಲಿ ಅತಿ ಹಳಬ
ಮಧ್ಯಸ್ಥರಲ್ಲಿ ಅತಿ ಮಧ್ಯನಾದ-
ನಾದವನು ನಾದಿ ಅರ್ಥವನು ತೆಗೆದ !
ವಾದಿ ಶರಭಾನೀಕ ಭೇರುಂಡ ರೂಪ
ಸಂವಾದ ರಸರಂಗ ಮಂಟಪದ ದೀಪ. ”

ಅವಾಸ್ತವ ಸ್ತುತಿ ಅಥವಾ ಅವಾಸ್ತವ ತೆಗಳಿಕೆಯ ಕಾಲ ಇದು ಅಲ್ಲ. "ವರ್ತಮಾನಕಾಲದ ಕೃತಿಗಳ ಮೇಲೆ ಬೇರೆ ಬಗೆಯ ಪ್ರಭಾವಗಳು ಬೀಳುವವು. ಜನ ಹತ್ತಿರದವರು; ಪರಸ್ಪರ ಪರಿಚಿತರು; ಜೀವನದ ಅನೇಕ ಸ್ನೇಹ, ದಾಕ್ಷಿಣ್ಯ, ಅಸೂಯೆ, ವೈಮನಸ್ಯಗಳ ಸಂಬಂಧ ಸಾಂಪ್ರತ ಸನ್ನಿ-ವೇಶದಲ್ಲಿ ಅವರ ನಡುವೆ ನೆಲಸಿರಬಲ್ಲದು. ಜನರ ಭಕ್ತಿಗಳು ಬಗೆಬಗೆ-ಯಾದವು. ಬಗೆಬಗೆಯ ಶಕ್ತಿ ಮತ್ತು ಸಾಧನೆಯ ಮಟ್ಟಗಳು ಕಣ್ಣೆದುರಿಗಿ-ನವರಲ್ಲಿ ಇರಬಹುದು. ಎಲ್ಲರ ಕೃತಿ ಶಕ್ತಿಯು ಇನ್ನೂ ಪರಿಣತವಾಗದೆ, ನಿರ್ಮಾಣಕಾರ್ಯ ಮುಗಿಯದೆ ಇರಬಹುದು. ಇಂಥ ಸಂದರ್ಭದಲ್ಲಿ ನಿರ್ಣಾಯಕವಾದ ವಿಮರ್ಶೆ ಸುಲಭವಲ್ಲ. ಕವಿಗಳಿಗೆ, ಕವಿತೆಗೆ, ವಿಮರ್ಶ-ಕರು ಅತಿ ಹತ್ತಿರವಿರುವುದರಿಂದ ಬೆಲೆ, ತೂಕ, ತಕ್ಕಹಾಗೆ ಪ್ರಯೋಗ ವಾಗುವುದು ಸುಲಭವಲ್ಲ." ಎಂದು ಒಂದು ಅಭಿಪ್ರಾಯವಾದರೆ; "ಕಟು ವಿಮರ್ಶೆಯನ್ನು ಅಲಕ್ಷಿಸಬೇಕು" ಎಂದು ಇನ್ನೊಂದು ಅಭಿಪ್ರಾಯ. ಅಪ್ರಿಯವಾದ ಕಾವ್ಯಗಳ ಬಗ್ಗೆ ಮೌನದಿಂದ ಇರಬೇಕೆಂಬ ತೂಕವೂ ಕೆಲವರಲ್ಲಿ ಕಾಣುತ್ತಿಲ್ಲ. ತಾವು ಮಾಡುವ ಟೀಕೆ, ತಮ್ಮ ಅಭಿಪ್ರಾಯಗಳು ಉನ್ನತಮಟ್ಟದ ವಿಮರ್ಶೆ ಎಂದೂ ಕೆಲವರಿಗೆ ಭ್ರಮೆ. ವ್ಯಕ್ತಿಯ ಬಗ್ಗೆ ಆದರವಿದ್ದು, ಅವನ ಕೃತಿಗಳ ಬಗ್ಗೆ ಅನಾದರ ಅಥವಾ ಕೃತಿಗಳ ಬಗ್ಗೆ ಆದರವಿದ್ದು ವ್ಯಕ್ತಿಯ ಬಗ್ಗೆ ಅನಾದರದಂಥ ಮಾಯೆ, ಮಾಟದ ಆಟಗಳೂ ನಡೆಯುತ್ತಿವೆ.

ಡಾ. ಬೇಂದ್ರೆಯರಿಗೆ ಬೇಕಾಗಿದ್ದು ಕುಸ್ತಿಯ ಕಣವಲ್ಲ; ಸಂವಾದಗೋಷ್ಠಿ. ಅವರ ಕಾವ್ಯದಲ್ಲಿಯ ಯಾವ ಶಬ್ದ, ಭಾವ, ಅರ್ಥ, ಅಲಂಕಾರ, ಪ್ರತಿಮೆ, ಸಂಕೇತ, ಹೊಂದಿಕೆ ಇತ್ಯಾದಿ, ರಸಿಕ ವಾಚಕರಿಗೆ ಅರ್ಥವಾಗುತ್ತಿಲ್ಲ ಎಂಬುದರ ವಿಶ್ಲೇಷಣಾತ್ಮಕ ಅಭ್ಯಾಸಗಳಿಗೆ ಅವರು ಯಾವಾಗಲೂ ಸ್ವಾಗತಿಸುತ್ತ ಬಂದಿದ್ದಾರೆ. ಈಗಲೂ ಅವರ ಇಚ್ಛೆ ಅದೇ ಇದೆ. ಇದರ ಅರ್ಥ ಯಾರು ಬೇಕಾದವರೂ ಬೇಕಾದ ಪ್ರಶ್ನೆಗಳನ್ನು ಕೇಳ-ಬಹುದು ಎಂದು ಅಲ್ಲ. ಅಡ್ಡತಿಡ್ಡ ಅಭಿಪ್ರಾಯಗಳನ್ನಿಟ್ಟುಕೊಂಡು, ಸಂದ-

ರ್ಶನನ ನೆಪದಿಂದ ಸ್ಪೈಮೇಲೆ ಏರಿಬರುವವರಿಗೆ ಉತ್ತರಕೊಡಲು ಅವರು ಬದ್ಧರಿಲ್ಲ. ಅದರಂತೆ ಬೇಂದ್ರೆಯವರ ಸಾಹಿತ್ಯ ಮತ್ತು ಕಾವ್ಯವನ್ನು ಅಭ್ಯಸಿಸದೆ ಕೇವಲ ಪ್ರಶ್ನಾವಲಿಯನ್ನು ಪತ್ರಮುಖೇನ ಕಳಿಸುವವರಿಗೆ ಉತ್ತರ ಬರೆಯುವ ಜವಾಬುದಾರಿಯೂ ಅವರ ಮೇಲಿಲ್ಲ. ಕಾವ್ಯವು ಯಾವ ರಾಜಕೀಯವಾಗಲಿ, ಸಾಮಾಜಿಕವಾಗಲಿ ರಣಾಂಗಣವಲ್ಲ. ಸಾಮಾಜಿಕ ಪ್ರಜ್ಞೆ ಯಾವ ಅಟಂಬಾಂಬು ಅಲ್ಲ ಎಂದು ಅವರ ಅಭಿಪ್ರಾಯ.

ಅಂಬಿಕಾತನಯದತ್ತರ ಯಾವುದೇ ಒಂದು ಕವನಸಂಗ್ರಹದ ಪ್ರತಿಯೊಂದು ಪದ್ಯಕ್ಕೆ ಅರ್ಥಹಚ್ಚಲು ಪರಿಶ್ರಮಪಟ್ಟು, ಅವರಿಗೆ ಬರುವ ತೊಡಕು-ತೊಂದರೆಗಳನ್ನು ಅವರ ಅಭ್ಯಾಸಗಳೊಂದಿಗೆ ಕಳುಹಿಸಿದರೆ ಡಾ. ದ. ರಾ. ಬೇಂದ್ರೆಯವರು ಸಂವಾದಕ್ಕೆ ಸಿದ್ಧ.

ಅವರವರ ಸಾಹಿತ್ಯ, ಸ್ವಂತದ ವಿಮರ್ಶೆ ಮಾಡಲಿಕ್ಕೆ ಸಮಯವಿರದಾಗ ಇನ್ನೊಬ್ಬರ ಕೃತಿ ವಿಮರ್ಶೆಗೆ ಗಮನಕೊಡಲು ಯಾರಿಗೆ ಹೊತ್ತಿದೆ? ಹೀಗಿದ್ದೂ ಕೆಲವು ಸಹೃದಯರು ಅಂಬಿಕಾತನಯದತ್ತರ ಕೃತಿಗಳಿಗೆ ಉಪಕೃತಿ ಮಾಡಿದ್ದಾರೆ. ಅವರ ಬಗ್ಗೆ ಬೇಂದ್ರೆ ಮನೆತನದವರೂ ಆಭಾರಿಗಳು.

ಸಂ. ವಾ. ದ.

ದ. ರಾ. ಬೇಂದ್ರೆಯವರ ಕೃತಿಗಳು

★

ಕವನಸಂಗ್ರಹ :

೧. ಕೃಷ್ಣಾಕುಮಾರಿ
೨. ಗರಿ
೩. ಮೂರ್ತಿ–ಕಾಮಕಸ್ತೂರಿ
೪. ಸಖೀಗೀತ
೫. ಉಯ್ಯಾಲೆ
೬. ನಾದಲೀಲೆ
೭. ಮೇಘದೂತ
೮. ಹಾಡುಪಾಡು
೯. ಗಂಗಾವತರಣ
೧೦. ಸೂರ್ಯಪಾನ
೧೧. ಹೃದಯಸಮುದ್ರ
೧೨. ಮುಕ್ತಕಂಠ
೧೩. ಚೈತ್ಯಾಲಯ
೧೪. ಜೀವಲಹರಿ
೧೫. ನಮನ
೧೬. ಸಂಚಯ
೧೭. ಉತ್ತರಾಯಣ
೧೮. ಮುಗಿಲಮಲ್ಲಿಗೆ
೧೯. ಯಕ್ಷಯಕ್ಷಿ
೨೦. ನಾಕುತಂತಿ
೨೧. ಮರ್ಯಾದೆ
೨೨. ಶ್ರೀಮಾತಾ

ವಿಮರ್ಶೆ :

೨೩. ಸಾಹಿತ್ಯ ಮತ್ತು ವಿಮರ್ಶೆ
೨೪. ಸಾಹಿತ್ಯ ಸಂಶೋಧನ
೨೫. ಕವಿ ಲಕ್ಷ್ಮೀಶನ ಜೈಮಿನಿ ಭಾರತಕ್ಕೆ ಮುನ್ನುಡಿ
೨೬. ವಿಚಾರಮಂಜರಿ
೨೭. ಮಹಾರಾಷ್ಟ್ರ ಸಾಹಿತ್ಯ
೨೮. ಕನ್ನಡ ಸಾಹಿತ್ಯದಲ್ಲಿ ನಾಲ್ಕು ನಾಯಕ ರತ್ನಗಳು
೨೯. ಕಾವ್ಯೋದ್ಯೋಗ

ನಾಟಕ :

೩೦. ಹುಚ್ಚಾಟಗಳು
೩೧. ಹೊಸ ಸಂಸಾರ ಮತ್ತು ಇತರ ನಾಟಕಗಳು

ಕಥೆ, ಹರಟೆ, ನಗೆಹಾಡು :

೩೨. ನಿರಾಭರಣಸುಂದರಿ

ಕನ್ನಡಕ್ಕೆ ಅನುವಾದ :

೩೩. ಉಪನಿಷತ್ ರಹಸ್ಯ
೩೪. ಶ್ರೀ ಅರವಿಂದರ ಯೋಗ, ಆಶ್ರಮ ಮತ್ತು ತತ್ತ್ವೋಪದೇಶ
೩೫. ಭಾರತೀಯ ನವಜನ್ಮ
೩೬. ನೂರೊಂದು ಕವನ
೩೭. ಕಬೀರ ವಚನಾವಲಿ
೩೮. ಗುರುಗೋವಿಂದಸಿಂಗ

ಮರಾಠಿಯಲ್ಲಿ ಗ್ರಂಥರಚನೆ :

೩೯. ಸಂವಾದ
೪೦. ವಿಟ್ಠಲ ಸಂಪ್ರದಾಯ